ಕುಡಿಯುವ ನೀರಿನ ಸಮಸ್ಯೆಗೆ ಸಂಪರ್ಕಿಸಿ

ಚಾಮರಾಜನಗರ: ಜಿಲ್ಲೆಯಾದ್ಯಂತ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಜಿಲ್ಲಾ ಪಂಚಾಯತ್ ಕಚೇರಿಗೆ ದೂರುಗಳು ಸ್ವೀಕೃತವಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯಿತಿ ಕಚೇರಿಗಳಲ್ಲಿ ಸಹಾಯವಾಣಿ ತೆರೆಯಲಾಗಿದೆ. ಜಿಲ್ಲಾ ಪಂಚಾಯತ್ ಸಹಾಯವಾಣಿ ಸಂ: 08226-224015, ಚಾಮರಾಜನಗರ ತಾಪಂ ಸಹಾಯವಾಣಿ ಸಂ: 08226-225392, ಗುಂಡ್ಲುಪೇಟೆ ತಾಪಂ ಸಹಾಯವಾಣಿ ಸಂ: 08229-200322, ಕೊಳ್ಳೇಗಾಲ ತಾಪಂ ಸಹಾಯವಾಣಿ ಸಂ: 08224-252505, ಹನೂರು ತಾಲೂಕು ಪಂಚಾಯಿತಿ ಸಹಾಯವಾಣಿ ಸಂ: 08224-200130 ಹಾಗೂ ಯಳಂದೂರು ತಾಪಂ ಸಹಾಯವಾಣಿ ಸಂ: 08226-295166 ಆಗಿದೆ. ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಕಂಡು ಬಂದಲ್ಲಿ ಸಾರ್ವಜನಿಕರು ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯಿತಿ ಕಚೇರಿಗಳಲ್ಲಿ ತೆರೆಯಲಾಗಿರುವ ಸಹಾಯವಾಣಿಯನ್ನು ಸಂಪರ್ಕಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ತಿಳಿಸಿದ್ದಾರೆ.

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9187412584 / 9187312582

ಪ್ರಮಾಣ ಪತ್ರ

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಕಸಬಾ ಹೋಬಳಿ, ಹೂಲೀಕುಂಟೆ ಗ್ರಾಮದ ವಾಸಿ ಶಿವಯ್ಯ ಸಿ.ವಿ ರವರ ಹೆಂಡತಿಯಾದ 45 ವರ್ಷ ವಯಸ್ಸುಳ್ಳ ಪ್ರೇಮಲತಾ. ಹೆಚ್.ಆರ್ ಆದ ನಾನು ಸತ್ಯವಾಗಿ ಪ್ರಮಾಣೀಕರಿಸುವುದೇನೆಂದರೆ.
ನಾನು ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸಿಯಾಗಿರುತೇನೆ. ನನ್ನ, ಆಧಾರ್ ಕಾರ್ಡ್ (ನಂ. 3646 4223 5131) ದಾಖಲೆಯಲ್ಲಿ ಹಾಗೂ ಶಾಲಾ ದಾಖಲಾತಿಯಲ್ಲಿ ನನ್ನ ಹೆಸರು ಪ್ರೇಮಲತಾ ಹೆಚ್.ಆರ್ ಎಂದು ನಮೂದಾಗಿರುತ್ತದೆ ಹಾಗೂ ಜನ್ಮ ದಿನಾಂಕ– 03–05–1981 ಆಗಿರುತ್ತದೆ. ಎಲ್.ಐ.ಸಿ ಪಾಲಿಸಿ ದಾಖಲೆಯಲ್ಲಿ ನನ್ನ ಹೆಸರು ಪ್ರೇಮಾ.ಹೆಚ್.ಆರ್ ಎಂದು ಇದ್ದು,ನಾನು ಶಾಹಿ ಎಕ್ಸ್ ಪೋರ್ಟ್ ಕಂಪನಿ, ಹೊಸರೋಡ್, ಬೆಂಗಳೂರು ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಅಲ್ಲಿ ನನ್ನ ಹೆಸರು ಪ್ರೇಮ.ಸಿ.ವಿ. ಎಂದು ನಮೂದಾಗಿರುತ್ತದೆ. ನಾನು ಸಹಿ ಮಾಡುವುದು ಪ್ರೇಮಲತ. ಹೆಚ್.ಆರ್ ಎಂಬುದಾಗಿರುತ್ತದೆ.
ಮೇಲ್ಕಂಡ ಈ ಮೂರೂ ಹೆಸರುಗಳು ಪ್ರೇಮಲತ.ಹೆಚ್.ಆರ್ ಹಾಗೂ ಪ್ರೇಮಾ. ಹೆಚ್.ಆರ್ ಮತ್ತು ಪ್ರೇಮ.ಸಿ.ವಿ. ಒಂದೇ ಆಗಿದ್ದು ಸದರಿ ಹೆಸರಿನ ವ್ಯಕ್ತಿ ನಾನೇ ಆಗಿರುತ್ತೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಆದ್ದರಿಂದ ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಅಧಿಕಾರಿಗಳಲ್ಲಿ ಸಲ್ಲಿಸುತ್ತಿದ್ದೇನೆ.
ಈ ಮೇಲ್ಕಂಡ ಎಲ್ಲಾ ಅಂಶಗಳು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವಾಗಿರುತ್ತವೆಂದು ಹೇಳಿ ಕೊರಟಗೆರೆಯ ನೋಟರಿಯವರಾದ ಡಿ.ಸಿ ಶಿವರಾಮಯ್ಯ (Reg.No.Law-161,LCL-2021) ಅವರ ಸಮ್ಮುಖದಲ್ಲಿ ದಿನಾಂಕ–21–02–2026 ರಂದು ನನ್ನ ಸಹಿ ಮಾಡಿರುತ್ತೇನೆ.

IN THE COURT OF THE CIVIL JUDGE & J.M.F.C. AT KORATAGERE

Cri.Mis No: 33/ 2026

Petitioners: 1. Mohankumar s/o Late Narasimhaiah, Aged about 50 years. **2. Santoshkumar s/o Late Narasimhaiah,** Aged about 40 years. **3. Hemalatha w/o Giribabu H,** Aged about 40 years. P1 to 3 of Gundanjaneya temple street, 6th waed, koratagere town, koratagere. **4. Yashoda N W/o Varadaraju R,** Aged about 38 years. **5. Pushpalatha w/o Lokeshkumar,** Aged about 50 years. **6. Varadaraju R s/o Ramakrishnaiah,** Aged about 46 years. **7. Rukkini w/o Nagaraju,** Aged about 43 years. r/o Bennenahalli village, Kasaba hobli, Tipaturu taluk, Tumakuru dist. 8. **Narasimhamurthy s/o Late Muddarangaiah,** Aged about 68 years. **9. Lokesh kumar s/o Late Muddarangaya,** Aged about 64 years.P4 to p8 and p9 are residents of muggondanahalli village, kasaba hobli, koratagere taluk, tumkuru dist.

Respondents: Deputy-Thasildar Koratagere, koratagere Taluk.

PUBLIC NOTIFICAION

Whereas the petitioners have filed the above petition to obtain the death certificate of grant father of 1 to 7 and father of the 8 and 9 petitioner i.e **muddarangaiah s/o Late Narasappa,** he died on 12-10-1984 at in his house at Muggondanahalli Village, Kasaba Hobli, Koratagere Taluk tumkuru dist, is there any other L.R.s are hereby summoned to appear in the above court in person or by pleader on; 28-03-2026 at 11 A.M. to answer to the same Failing which the petition will be disposed of exparte.

By order of the court
Sd/-,Shirastedar
Civil judge & J.M.F.C.court
Koratagere.

S.N.Hanumanthraju
Adv. For petitioner.
Koratagere.
Dated 05-08-2025.

THE COURT OF THE CIVIL JUDGE AND JMFC AT BAGEPALLI

Crim miss NO. 1382 / 2025
Petitioner Smt Kamalamma w/o Lakhsmi Reddy Aged about 80 Years Nalapareddypalli village Gulur Hobly,Bagepalli Taluk,Chikkaballapur District.
V/S Respondent : The Registrar of Births and Deaths. Office of Thasildar, Bagepalli. Bagepalli Taluk

PAPER PUBLICATION

The petitioner have filed this petition for Death certificate of the petitioner. her Aunty padmavathamma Daughter of Late Adireddy was died on 25-10-2018 at her residence Nalapareddypalli. Village, GulurHobli Bagepalli Taluk. Chikkaballapur District, The Petition is still Pending, any person who nave any right, or interest, may appear before this Honble court on 26/03/2026 at 11.00 AM in person or through any pleader to file your Objections if any. Take notice that in default of your appearance on the date mentioned before in the petition in will be heard and determined ex-parte.
Place:Bagepalli Date:10/2/2026
BY ORDER OR THE COURT
Sheristedar
Court of Covil Judge & JMFC

IN THE COURT OF THE CIVIL JUDGE AND JMFC AT BAGEPALLI

Crim miss No 1383/2025
Petitioner: Smt Kamalamma w/o Lakhsmi Reddy Aged about 80 Years Nalapareddypalli village Gulur Hobly, Bagepalli Taluk,Chikkaballapur District.
V/S Respondent: The Registrar of Births and Deaths. Office of Thasildar, Bagepalli. Bagepalli Taluk

PAPER PUBLICATION

The petitioner have filed this petition for Death certificate of the petitioner her Uncle Ramareddy son of VenkataShivareddy was died on 15-03-2010 at her residence Nalapareddypalli. Village Gulur Hobli Bagepalli Taluk. Chikkaballapur District, The Petition is still Pending, any person who have any right, or interest, may appear before this Hon'ble court on 26/03/2026 at 11.00 AM in person or through any pleader to file your Objections if any. Take notice that in default of your appearance on the date mentioned before in the petition in will be heard and determind ex-part.
Place:Bagepalli Date:10/2/2026
BY ORDER OR THE COURT
Sheristedar
Court of Covil Judge & JMFC

IN THE COURT OF THE CIVIL JUDGE & J.M.F.C. AT KORATAGERE

C.Mis No: 38/ 2026
Petitioners: Puttamma & anothers.
V/S
Respondents: The Register birth and death, Deputy Thahasildar, Koratagere Taluk, Tumkuru dist.

PUBLIC NOTIFICAION

Where as the petitioners have filed the above petition to obtain the death certificate of 1st petitioners is the Daughter-in-law and 2nd petitrioner is the son of deceased **Doddaranganayaka s/o Ranganayaka,** died on:- 09-11-1979, in her house of 1st petitioner at Maragondanaguni village, Kolala hobli, koratagere taluk, Tumkuru dist. it is hereby notify that whoever has interest or objection to obtain the death certificates of the above said person, appear in person or through your advocate on; 07-04-2026 at 11-00 am in the above case. Failing which the matter will be heard and written in your absence. Given under my hand and seal of the court on this day at koratagere 10-02-2026.

By order of the court
Sd/-,Shirastedar
Civil judge & J.M.F.C.court
Koratagere.
H.C.Vrushabendra swamy. BA,LLB.
Advocate for petitoners
Koratagere.

IN THE COURT OF THE CIVIL JUDGE AND JMFC AT BAGEPALLI

Crim miss No 1384/2025
Petitioner: Smt Kamalamma w/o Lakhsmi Reddy Aged about 80 Years Nalapareddypalli village Gulur Hobly, Bagepalli Taluk,Chikkaballapur District.
V/S Respondent: The Registrar of Births and Deaths. Office of Thasildar, Bagepalli. Bagepalli Taluk

PAPER PUBLICATION

The petitioner have filed this petition for Death certificate of the petitioner her Aunty Usha Daughter of Bayaparrddy was died on 04/09/2005 at her residence Nalapareddypalli. Village Gulur Hobli Bagepalli Taluk. Chikkaballapur District, The Petition is still Pending, any person who have any right, or interest, may appear before this Hon'ble court on 26/03/2026 at 11.00 AM in person or through any pleader to file your Objections if any. Take notice that in default of your appearance on the date mentioned before in the petition in will be heard and determined ex-parte.
Place:BagepalliDate:10/2/2025
BY ORDER OF THE COURT
Sheristedar
Court of Civil Judge & JMFC

SBI ಭಾರತೀಯ ಸ್ಟೇಟ್ ಬ್ಯಾಂಕ್

ಕೊಡಿಯಾಲ ಶಾಖೆ (08039) ಬಜಾರ್ ರಸ್ತೆ, ಕೊಡಿಯಾಲ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ–571415 E-mail: sbi.08039@sbi.co.in

ನಿಯಮ 8(1) ಸ್ವಾಧೀನದ ಸೂಚನೆ (ಸ್ಥಿರಾಸ್ತಿಗಳಿಗಾಗಿ)

ಈ ಕೆಳಗಿನ ಸಹಿದಾರರು ಭಾರತೀಯ ಸ್ಟೇಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ಪ್ರಧಾನ ಮಾಡಿದ ಅಧಿಕಾರವನ್ನು ಕಲಂ 13(12) ಆಕ್ಟ್ ಅಡಿಯಲ್ಲಿ ನಿಯಮ 9ರಂತೆ ಜೊತೆಗೆ ಸೆಕ್ಯುರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ (54ರ 2002) ಕಾಯಿದೆಯಡಿಯಲ್ಲಿ ಅಧಿಕಾರ ಚಲಾಯಿಸಿ ಆ ನೋಟೀಸ್ ತಲುಪಿದ 60 ದಿನಗಳೊಳಗಾಗಿ ಪಾವತಿಸಲು ಕೋರಲಾಗಿದೆ.
ಈ ಕೆಳಕಂಡ ಸಾಲಗಾರರು ಹಣ ಪಾವತಿ ಮಾಡಲು ವಿಫಲರಾಗಿರುವುದರಿಂದ, ನೋಟೀಸ್ ಅನ್ನು ನಿಮಗೂ ಹಾಗೂ ಸಾರ್ವಜನಿಕರಿಗೂ ನೀಡಿದ್ದು, ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಶನ್ ಕಾಯ್ದೆಯ 13(4) ಹಾಗು 9ನೇ ನಿಯಮದಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತನ್ನು ಬ್ಯಾಂಕ್ ತನ್ನ ವಶಕ್ಕೆ / ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿರುತ್ತಾರೆ. ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಸುವುದೇನೆಂದರೆ ಸ್ಥಿರಾಸ್ತಿ ಸ್ವತ್ತು ಕುರಿತಾದ ಯಾವುದೇ ವ್ಯವಹಾರವನ್ನು ಮಾಡಬಾರದಾಗಿ ಎಚ್ಚರಿಸಲಾಗುತ್ತದೆ. ಮತ್ತು ಸ್ಥಿರಾಸ್ತಿ ಸ್ವತ್ತಿನ ಮೇಲೆ ಯಾವುದೇ ವ್ಯವಹಾರವನ್ನು ಮಾಡಿದರೆ ಭಾರತೀಯ ಸ್ಟೇಟ್ ಬ್ಯಾಂಕ್ ನಿಮಿತಕ್ಕೆ ಒಳಪಡುತ್ತದೆ.
ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಈ ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಷನ್ ಕಾಯ್ದೆಯ ಉಪವಿಭಾಗ (8) ಹಾಗೂ 13ರ ಕಾಯಿದೆಯಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತನ್ನು ಸ್ವಾಧಿನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ತಿಳಿಸುತ್ತಿದ್ದಾರೆ.

- **ಡಿಮ್ಯಾಂಡ್ ನೋಟಿಸ್‌ನ ದಿನಾಂಕ:** 06.09.2025 • **ಸ್ವಾಧೀನ ಪಡೆದುಕೊಂಡ ದಿನಾಂಕ:** 17.02.2026
- **ಒಟ್ಟು ಸಾಲದ ಮೊತ್ತ:** ರೂ. 13,40,656/– (ಹದಿಮೂರು ಲಕ್ಷದ ನಲವತ್ತು ಸಾವಿರದ ಆರನೂರು ಐವತ್ತಾರು ರೂಪಾಯಿಗಳು ಮಾತ್ರ) ದಿನಾಂಕ 02–02–2026 ರವರಗೆ+ನಂತರದ ಬಡ್ಡಿ ಹಾಗೂ ಇತರೆ ಶುಲ್ಕಗಳು.
- **ಸಾಲಗಾರರ ಹೆಸರು ಮತ್ತು ವಿಳಾಸ:** ಆಶಾ ಕೆ., W/o ಪುಟ್ಟಸ್ವಾಮಿ, ಮಂಡ್ಯ–ಮೈಸೂರು ರಸ್ತೆ, ಪೀಹಳ್ಳಿ ಗ್ರಾಮ, ಕೊಡಿಯಾಲ ಗ್ರಾಮಪಂಚಾಯತಿ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ–571415.
- **ಅಡಮಾನವಿಟ್ಟ ಆಸ್ತಿಯ ವಿವರಗಳು:** ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಕೊಡಿಯಾಲ ಗ್ರಾಮಪಂಚಾಯತಿ ಖಾತಾ ಸಂಖ್ಯೆ 35 93/2, PID ಸಂಖ್ಯೆ 152100702100620113, ಪೂರ್ವದಿಂದ ಪಶ್ಚಿಮಕ್ಕೆ: 11.94 ಮೀ., ಉತ್ತರದಿಂದ ದಕ್ಷಿಣಕ್ಕೆ: 5.37 ಮೀ., ವಿಳಾಸ: ಪೀಹಳ್ಳಿ ಗ್ರಾಮ, ಕೊಡಿಯಾಲ ಗ್ರಾಮಪಂಚಾಯತಿ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಆಶಾ ಕೆ., W/o ಪುಟ್ಟಸ್ವಾಮಿರವರ ಹೆಸರಿನಲ್ಲಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪಿ.ಸಿ. ನಿಂಗೇಗೌಡರವರ ಮನೆ, ಉತ್ತರಕ್ಕೆ: ನಾಗರಾಜುರವರ ಮನೆ, ದಕ್ಷಿಣಕ್ಕೆ: ಪಿ.ಡಿ. ನಾಗರಾಜುರವರ ಮನೆ.

ದಿನಾಂಕ: 23.02.2026 ಸಹಿ/– ಅಧಿಕೃತ ಅಧಿಕಾರಿ
ಸ್ಥಳ: ಕೊಡಿಯಾಲ ಭಾರತೀಯ ಸ್ಟೇಟ್ ಬ್ಯಾಂಕ್, (SARFAESI ಕಾಯಿದೆ–2002 ಅಡಿಯಲ್ಲಿ)

ವೇಮಗಲ್ ಸರಕಾರಿ ಆಸ್ಪತ್ರೆಯಲ್ಲಿ ಜನಪ್ರತಿನಿಧಿಗಳ ಸಭೆ | ಲೋಕೇಶ್ ಮರಿಯಪ್ಪ ಸೂಚನೆ

ರೋಗಿಗಳ ಜತೆಗೆ ಸೌಜನ್ಯವಾಗಿ ನಡೆದುಕೊಳ್ಳಿ

ಕೋಲಾರ: ರೋಗಿಗಳು ಮತ್ತು ಸಾರ್ವಜನಿಕರ ಜತೆಗೆ ಆಸ್ಪತ್ರೆ ಸಿಬ್ಬಂದಿ ಸೌಜನ್ಯಯುತವಾಗಿ ನಡೆದುಕೊಳ್ಳಬೇಕೆಂದು ವೇಮಗಲ್ ಕುರುಗಲ್ ಪಟ್ಟಣ ಪಂಚಾಯತಿ ಸದಸ್ಯ ಲೋಕೇಶ್ ಮರಿಯಪ್ಪ ಹೇಳಿದರು.

ವೇಮಗಲ್ ಸರಕಾರಿ ಆಸ್ಪತ್ರೆಯಲ್ಲಿ ನಡೆದ ಜನಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿ, ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಸಿಗುವ ವಿವಿಧ ಸೇವೆಗಳ ಬಗ್ಗೆ ಬೋರ್ಡ್ ಹಾಕಬೇಕು. ರಾತ್ರಿ ವೇಳೆ ವೈದ್ಯರು ಮತ್ತು ಸಿಬ್ಬಂದಿ ಕೊಠಡಿ ಸೇರಿಕೊಂಡು ನಿದ್ದೆ ಮಾಡದೆ ಸಾರ್ವಜನಿಕರಿಗೆ ಕಾಣುವಂತೆ ಗ್ರೌಂಡ್ ಫ್ಲೋರ್‌ನಲ್ಲಿ ಕುಳಿತುಕೊಂಡು ರೋಗಿಗಳಿಗೆ ಕಾಯಬೇಕು ಎಂದರು.

ಅಧಿಕೃತ ನರ್ಸ್‌ಗಳು ಮಾತ್ರ ಚುಚ್ಚುಮದ್ದು ಕೊಡುವ ಜತೆಗೆ ಫಾರ್ಮಾಸಿಸ್ಟ್ ಮಾತ್ರವೇ ಮಾತ್ರೆ ವಿತರಿಸಬೇಕು. ಲ್ಯಾಬ್‌ನಲ್ಲಿ ರಕ್ತ ಪರೀಕ್ಷೆ ವರದಿಗಳನ್ನು ಸರಿಯಾದ ಸಮಯಕ್ಕೆ ನೀಡಬೇಕು. ಇಸಿಜಿ ಹಾಗೂ ಆಕ್ಸಿಜನ್ ವ್ಯವಸ್ಥೆಯನ್ನು ಸರಿಯಾಗಿಟ್ಟುಕೊಳ್ಳುವ ಜತೆ ಆಕ್ಸಿಜನ್‌ಗೆ ಪ್ರತ್ಯೇಕ ಲೈನ್ ಎಳೆಸಬೇಕು.

ಆಸ್ಪತ್ರೆಗೆ ಪ್ರತ್ಯೇಕವಾಗಿ ಆಂಬುಲೆನ್ಸ್ ವ್ಯವಸ್ಥೆ ಆಗಬೇಕು, ಸಿಸೇರಿಯನ್ ಆಪರೇಷನ್‌ಗೆ ಥಿಯೇಟರ್ ಸಜ್ಜುಗೊಳಿಸಬೇಕು. ಮಾತ್ರೆಗಳನ್ನು ಹೊರಗಡೆ ಮೆಡಿಕಲ್ ಸ್ಟೋರ್‌ಗೆ ಬರೆಯಬಾರದು ಎಂದು ಲೋಕೇಶ್ ಮರಿಯಪ್ಪ ಮನವಿ ಮಾಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಎ.ವಿ. ನಾರಾಯಣಸ್ವಾಮಿ ಮಾತನಾಡಿ, ಸರಕಾರಿ ಆಸ್ಪತ್ರೆಯಲ್ಲಿರುವ ಸಣ್ಣಪುಟ್ಟ ಲೋಪಗಳನ್ನು ಪರಿಪಡಿಸಲಾಗುತ್ತದೆ. ವೈದ್ಯರು ಮತ್ತು ಸಿಬ್ಬಂದಿ ತುರ್ತು ಪರಿಸ್ಥಿತಿಯಲ್ಲಿ ಚಿಕಿತ್ಸೆ ಕೊಟ್ಟು ರೋಗಿಗಳ ಪ್ರಾಣ ಉಳಿಸಿರುವ ಹತ್ತು ಹಲವಾರು ಉದಾಹರಣೆಗಳಿವೆ. ಹೀಗಾಗಿ ದೂರುಗಳ ಜತೆಗೆ ವೈದ್ಯರ ಉತ್ತಮ ಸೇವೆಯನ್ನು ಗುರುತಿಸಿ ಶ್ಲಾಘಿಸುವ ಕೆಲಸವೂ ಆಗಬೇಕೆಂದು ಸಲಹೆ ನೀಡಿದರು. ಆಪರೇಷನ್ ಮಾಡಲು ಅಗತ್ಯವಿರುವ ಪರಿಕರ ಮತ್ತು ಸಿವಿಲ್ ಕೆಲಸಗಳನ್ನು ಮುಗಿಸಲು ಎರಡು ತಿಂಗಳು ಅಗತ್ಯವಿದ್ದು ನಂತರ ಓಟಿ ಆರಂಭಿಸಲಾಗುತ್ತದೆ ಎಂದು ಟಿಎಚ್‌ಒ ಭರವಸೆ ನೀಡಿದರು.

ಪಟ್ಟಣ ಪಂಚಾಯತಿ ಅಧ್ಯಕ್ಷೆ ಅನೂಷಾ, ಉಪಾಧ್ಯಕ್ಷ ಸಿ.ಎಸ್.ವೆಂಕಟೇಶ್, ಮುಖ್ಯಾಧಿಕಾರಿ ವೆಂಕಟೇಶ್, ಡಾ. ಅಬ್ರಾರ್,ಡಾ. ವೆಂಕಟಾಚಲಪತಿ, ಡಾ.ಕೃಪಾ ಆಚಾರ್,ಡಾ. ರವಿಕಿರಣ್, ಡಾ.ಸುಪ್ರಿಯಾ ಕಾಮತ್ ಇದ್ದರು.

ವೇಮಗಲ್ ಸರಕಾರಿ ಆಸ್ಪತ್ರೆ ಸಿಬ್ಬಂದಿ ಜತೆಗೆ ಜನಪ್ರತಿನಿಧಿಗಳ ಸಭೆ ನಡೆಸಲಾಯಿತು.

> ಸರಕಾರಿ ಆಸ್ಪತ್ರೆಯಲ್ಲಿರುವ ಸಣ್ಣಪುಟ್ಟ ಲೋಪಗಳನ್ನು ಪರಿಪಡಿಸಲಾಗುತ್ತದೆ. ವೈದ್ಯರು ಮತ್ತು ಸಿಬ್ಬಂದಿ ತುರ್ತು ಪರಿಸ್ಥಿತಿಯಲ್ಲಿ ಚಿಕಿತ್ಸೆ ಕೊಟ್ಟು ರೋಗಿಗಳ ಪ್ರಾಣ ಉಳಿಸಿರುವ ಹತ್ತು ಹಲವಾರು ಉದಾಹರಣೆಗಳಿವೆ. ಹೀಗಾಗಿ ದೂರುಗಳ ಜತೆಗೆ ವೈದ್ಯರ ಉತ್ತಮ ಸೇವೆಯನ್ನು ಗುರುತಿಸಿ ಶ್ಲಾಘಿಸುವ ಕೆಲಸವೂ ಆಗಬೇಕೆಂದು.
> – ಡಾ.ಎ.ವಿ.ನಾರಾಯಣಸ್ವಾಮಿ, ತಾಲೂಕು ಆರೋಗ್ಯಾಧಿಕಾರಿ

ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ನಿರಂತರ

ಗುಡಿಬಂಡೆ: ಇಂದು ರಾಜ್ಯ ಹಾಗೂ ಕೇಂದ್ರ ಸರಕಾರಗಳೆರಡೂ ಜಾರಿ ಮಾಡುವಂತಹ ಜನವಿರೋಧಿ ನೀತಿಗಳ ವಿರುದ್ಧ ನಮ್ಮ ಹೋರಾಟ ನಿರಂತರವಾಗಿ ನಡೆಯುತ್ತಿರುತ್ತದೆ. ಅದಕ್ಕೆ ಜನರೂ ಸಹ ಬೆಂಬಲ ಕೊಟ್ಟಾಗ ಹೋರಾಟಕ್ಕೆ ಜಯ ಸಿಗುತ್ತದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಹ ಸಂಚಾಲಕ ಜಯರಾಮರೆಡ್ಡಿ ತಿಳಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಬಾಗೇಪಲ್ಲಿಯಲ್ಲಿ ಫೆ.25, 26ರಂದು ನಡೆಯಲಿರುವ ಜಿಲ್ಲಾ ರೈತ ಸಮ್ಮೇಳನದ ಅಂಗವಾಗಿ ಗುಡಿಬಂಡೆಯಲ್ಲಿ ಹಮ್ಮಿಕೊಂಡಿದ್ದ ಪ್ರಚಾರಾಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯ ಹಾಗೂ ಕೇಂದ್ರ ಸರಕಾರಗಳೆರಡೂ ಸದಾ ರೈತ, ಜನ, ಬಡವರ ವಿರೋಧಿ ಕಾಯ್ದೆಗಳನ್ನು ಜಾರಿಗೆ ಮಾಡುವ ಮೂಲಕ ಬಂಡವಾಳಶಾಹಿ, ಉಳ್ಳವರು, ಉದ್ಯಮಿಗಳ ಪರವಾಗಿ ಕೆಲಸ ಮಾಡುತ್ತವೆ. ಸರಕಾರಗಳು ಜಾರಿಗೆ ತರುವಂತಹ ಕಾಯ್ದೆಗಳಿಂದ ಇಂದು ಅನೇಕರು ಸಮಸ್ಯೆಗಳಿಗೆ ಸಿಲುಕುತ್ತಿದ್ದಾರೆ. ಇತ್ತಿಚಿಗೆ ನರೇಗಾ ಯೋಜನೆಯನ್ನು ಬದಲಿಸಿದ್ದು, ಇದರಿಂದ ನರೇಗಾ ಯೋಜನೆಯಡಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಗೆ ತುಂಬಾನೆ ಕಷ್ಟವಾಗುತ್ತದೆ. ಈ ರೀತಿಯ ಅನೇಕ ಸಮಸ್ಯೆಗಳ ಪರಿಹಾರಕ್ಕಾಗಿ ಕೆಪಿಆರ್‌ಎಸ್ ನಿರಂತರ ಹೋರಾಟ ಮಾಡುತ್ತದೆ. ಅದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ. ಬಾಗೇಪಲ್ಲಿ ನಡೆಯಲಿರುವ ಜಿಲ್ಲಾ ರೈತ ಸಮ್ಮೇಳನಕ್ಕೆ ಹೆಚ್ಚು ಸಂಖ್ಯೆಯಲ್ಲಿ ಜನರು ಆಗಮಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಬಳಿಕ ಜಿಲ್ಲಾ ಮುಖಂಡ ಚೆನ್ನರಾಯಪ್ಪ ಮಾತನಾಡಿ, ಜಿಲ್ಲೆಯ ರೈತರು ಇಂದು ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅಂತರ್ಜಲ ಕುಸಿತದಿಂದ ಕುಡಿಯುವ ನೀರಿಗೂ ಸಂಚಕಾರ ಬಂದಿದೆ.

ಸರಕಾರವು ಕೃಷ್ಣಾ ನದಿ ನೀರನ್ನು ಹಂಚಿಕೆ ಮಾಡುವ ಬದಲು ಬೆಂಗಳೂರಿನ ಕೊಳಚೆ ನೀರನ್ನು ನೀಡುತ್ತಿರುವುದು ಖಂಡನೀಯ. ಈಗಾಗಲೇ ಎಚ್.ಎನ್. ವ್ಯಾಲಿ ನೀರು ಕುಡಿಯಲು ಯೋಗ್ಯವಲ್ಲ ಎಂದು ಹೇಳಲಾಗಿತ್ತು. ಇದೀಗ ಆ ನೀರು ಬಾಗೇಪಲ್ಲಿಯ ಚಿತ್ರಾವತಿ ಡ್ಯಾಂ ಸೇರುತ್ತಿದೆ. ನಮ್ಮ ಪಾಲಿಗೆ ಸಿಗಬೇಕಾದ ಕೃಷ್ಣ ನದಿ ನೀರನ್ನು ತರವು ಬದಲು ಈ ರೀತಿಯ ಕೊಳಚೆ ನೀರನ್ನು ಪೂರೈಕೆ ಮಾಡುವುದು ಎಷ್ಟರ ಮಟ್ಟಿಗೆ ಸರಿ, ಇನ್ನೂ ದಶಕಗಳಿಂದ ಭೂಮಿ ಸಾಗುವಳಿ ಮಾಡುತ್ತಿರುವ ಬಗರ್‌ಹುಕುಂ ರೈತರಿಗೆ ಇನ್ನೂ ಹಕ್ಕುಪತ್ರ ಸಿಗದಿರುವುದು ಸರಕಾರದ ವೈಫಲ್ಯವಾಗಿದೆ. ಈ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಲು ಫೆಬ್ರವರಿಯಲ್ಲಿ ನಡೆಯುವ ಜಿಲ್ಲಾ ಸಮ್ಮೇಳನವು ನಮಗೆ ದೊಡ್ಡ ವೇದಿಕೆಯಾಗಲಿದೆ ಎಂದರು.

ಈ ವೇಳೆ ಕರ್ನಾಟಕ ಪ್ರಾಂತ ರೈತ ಸಂಘದ ಎಂ.ಎ.ಆದಿನಾರಾಯಣ, ಉಪ್ಪಾರಹಳ್ಳಿ ಶ್ರೀನಿವಾಸ್, ನರೇಗಾ ಸೀನಪ್ಪ, ಆದಿ ನಾರಾಯಣಸ್ವಾಮಿ, ರವಣ, ಪುರಷೋತ್ತಮ್, ಲಕ್ಷ್ಮೀನಾರಾಯಣ ರಾಮು ಸೇರಿದಂತೆ ಹಲವರು ಇದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಬಾಗೇಪಲ್ಲಿಯಲ್ಲಿ ಫೆ.25, 26 ರಂದು ನಡೆಯಲಿರುವ ಜಿಲ್ಲಾ ರೈತ ಸಮ್ಮೇಳನದ ಅಂಗವಾಗಿ ಗುಡಿಬಂಡೆಯಲ್ಲಿ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾಂಗ್ರೆಸ್ ಪಕ್ಷದಿಂದ ದೇಶ ಅಭಿವೃದ್ಧಿಯಾಗಿಲ್ಲ : ಜಗನ್ನಾಥ್

ರಾಮನಗರ: ಕಾಂಗ್ರೆಸ್ ದೇಶದ ಅಭಿವೃದ್ಧಿ ವಿರುದ್ಧ ಹೋದರೆ ಬಿಜೆಪಿ ಅದರ ಹತ್ತು ಪಟ್ಟು ಭಾರತ ದೇಶವನ್ನು ಸದೃಢವಾಗಿ ಕಟ್ಟುತ್ತದೆ ಎಂದು ಜಿಲ್ಲಾ ಯುವ ಬಿಜೆಪಿ ಘಟಕದ ಅಧ್ಯಕ್ಷ ಜಗನ್ನಾಥ್ ಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 'ಭಾರತ ದೇಶದಲ್ಲಿ ವಿಶ್ವಮಟ್ಟದಲ್ಲಿ ಎಐ ಇಂಪ್ಯಾಕ್ಟ್ ಸೆಮಿಟ್‌ನ್ನು ಫೆ.16ರಿಂದ 20 ತಾರೀಖಿನವರೆಗೆ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ 100 ಕ್ಕೂ ಹೆಚ್ಚು ದೇಶಗಳಿಂದ 500 ಕ್ಕೂ ಹೆಚ್ಚು ಎಐ ಸೆಮಿಟ್‌ನಿಂದ ಸಿಇಓಗಳು, 50 ಕ್ಕೂ ಹೆಚ್ಚು ಸಂಘಟನೆಗಳು, ಬೇರೆ ಬೇರೆ ದೇಶಗಳಿಂದ ಸಚಿವರು ಗಣ್ಯರು ಭಾಗವಹಿಸಿದ್ದರು.

ಇಂತಹ ಮಹತ್ತರ ಸೆಮಿಟ್‌ನಲ್ಲಿ ಕಾಂಗ್ರೆಸ್ ತೋರಿದ ದುರ್ವರ್ತನೆ ಖಂಡಿಸಬೇಕು ಎಂದರು. ಇಂದಿನ ಆಧುನಿಕ ನಾಗರೀಕತೆಗೆ ಹೊಸ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಸ್ವಯಂ ನಿರ್ಧಾರ ತೆಗೆದುಕೊಳ್ಳುತ್ತದೆ. ಸ್ವಯಂ ಚಿಂತನೆಯಿಂದ ಮನುಷ್ಯರು ಹೇಗೆ ನಿರ್ಧಾರಿಸಿಂದತೆಯೇ ಎಐ ತಂತ್ರಜ್ಞಾನ ಕೆಲಸ ಮಾಡುತ್ತದೆ. ಇದು ಪ್ರಕ್ರಿಯೆಯು ಹಿಂದೆ ಎಂದೂ ಆಗಿರದ ಬದಲಾ ವಣೆಯನ್ನು ಸಮಾಜಕ್ಕೆ ತರುತ್ತಿದೆ. ಈ ರೀತಿಯ ನಿರ್ಧಾರದಿಂದ ಮನುಷ್ಯನ ಅರ್ಧ ಕೆಲಸಗಳನ್ನು ಎಐ ತಂತ್ರಜ್ಞಾನವೇ ಮಾಡುವ ಸಾಮಾರ್ಥ್ಯ ಹೊಂದಿದೆ. ಈ ಸಮಾರಂಭವನ್ನು ಪ್ರಧಾನಿ ಮೋದಿ ಅವರು ಉದ್ಘಾಟನೆ ಮಾಡಿದ್ದರು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ರಾಮು, ಕಾರ್ಯದರ್ಶಿ ಕೃಷ್ಣ, ರಾಮನಗರ ಪ್ರಾಧಿಕಾರದ ಮಾಜಿ ನಿರ್ದೇಶಕ ಕಾಳಯ್ಯ, ಯುವ ಮುಖಂಡರಾದ ಎಚ್.ಎಸ್.ಮಂಜು ನಾಥ್, ಪ್ರತಾಪ್, ಜ್ಞಾನೇಶ್, ಸುಮಂತ್, ಚೌಕಳ್ಳಿ ಮಂಜುನಾಥ್ ಇನ್ನಿತರು ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಯುವ ಬಿಜೆಪಿ ಘಟಕದ ಅಧ್ಯಕ್ಷ ಜಗನ್ನಾಥಗೌಡ ಮಾತನಾಡಿದರು.

ಜಿಲ್ಲಾ ಸತ್ರ ನ್ಯಾಯಾಲಯ ಆರಂಭಿಸಲು ಪ್ರತಿಭಟನೆ

ಕೆ.ಆರ್.ಪೇಟೆ: ಪಟ್ಟಣದಲ್ಲಿ 6ನೇ ಅಪರ ಮತ್ತು ಜಿಲ್ಲಾ ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ಒತ್ತಾಯಿಸಿ ಕೆ.ಆರ್.ಪೇಟೆ ತಾಲೂಕು ವಕೀಲರ ಸಂಘದ ನೇತೃತ್ವದಲ್ಲಿ ನೂರಾರು ವಕೀಲರು ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಕೆ.ಆರ್.ಪೇಟೆ ತಾಲೂಕು ವ್ಯಾಪ್ತಿಯಲ್ಲಿ ಸಾವಿರಾರು ಪ್ರಕರಣಗಳಿದ್ದು ಕೆ. ಆರ್.ಪೇಟೆ ಪಟ್ಟಣದಲ್ಲಿ ಆರನೇ ಸತ್ರ ಜಿಲ್ಲಾ ನ್ಯಾಯಾಲಯ ಇಲ್ಲದೆ ಇರುವುದರಿಂದ ವಕೀಲರು ಹಾಗೂ ಕಕ್ಷಿದಾರರು ಅನಿವಾರ್ಯವಾಗಿ ಜಿಲ್ಲಾ ಕೇಂದ್ರವಾದ ಮಂಡ್ಯಕ್ಕೆ ಹೋಗುವ ಪರಿಸ್ಥಿತಿ ಎದುರಾಗಿದೆ. ಕೆ.ಆರ್ . ಪೇಟೆಯಲ್ಲಿ ಜಿಲ್ಲಾ ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ಒತ್ತಾಯಿಸಿ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಹಾಗೂ ಕಾನೂನು ಸಚಿವರಿಗೆ ಹಾಗೂ ಸರಕಾರಕ್ಕೆ ಮನವಿ ಸಲ್ಲಿಸಿದ್ದರು ಯಾವುದೇ ಪ್ರಯೋಜನವಾಗಿಲ್ಲ ಆದ್ದರಿಂದ ಅನಿವಾರ್ಯವಾಗಿ ಚಳುವಳಿ ದಾರಿ ಹಿಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಾಲೂಕು ವಕೀಲರ ಸಂಘದ ಅಧ್ಯಕ್ಷ ನಾಗೇಗೌಡ ಹೇಳಿದರು.

ಪ್ರತಿಭಟನಾ ಸ್ಥಳಕ್ಕೆ ಶಾಸಕ ಎಚ್.ಟಿ.ಮಂಜು ಭೇಟಿ ನೀಡಿ, ವಕೀಲರ ಸಂಘದ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಮಾ.6 ರಿಂದ ಬಜೆಟ್ ಅಧಿವೇಶನವು ಆರಂಭವಾಗುತ್ತಿದ್ದು ಈ ಸಂದರ್ಭದಲ್ಲಿ ಅಧಿವೇಶನದಲ್ಲಿಯೇ ಕೆ.ಆರ್. ಪೇಟೆಯ ಆರನೇ ಹೆಚ್ಚುವರಿ ಅಪರ ಜಿಲ್ಲಾ ಸತ್ರ ನ್ಯಾಯಾಲಯದ ಸಮಸ್ಯೆಯನ್ನು ಸರಕಾರದ ಗಮನಕ್ಕೆ ತಂದು ಆದಷ್ಟು ಶೀಘ್ರವೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯವನ್ನು ಮಂಜೂರು ಮಾಡುವಂತೆ ಒತ್ತಾಯಿಸುತ್ತೇನೆ ಎಂದು ಶಾಸಕರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಮಾಜಿ ಅಧ್ಯಕ್ಷ ಎನ್. ಆರ್.ರವಿಶಂಕರ್ ಪ್ರಧಾನ ಕಾರ್ಯದರ್ಶಿ , ಸಾಧುಗೋನಹಳ್ಳಿ ಮಂಜೇಗೌಡ, ಹಿರಿಯ ವಕೀಲರಾದ ರಾಜೇನಹಳ್ಳಿ ರಾಜೇಗೌಡ, ಬಿ.ಎಲ್. ದೇವರಾಜು, ಎಸ್.ಸಿ. ವಿಜಯಕುಮಾರ್,ಜಿ.ಆರ್. ಅನಂತರಾಮಯ್ಯ, ಪ್ರಸನ್ನ ಕುಮಾರ್,ಎಚ್.ರವಿ, ಬಂಡಿಹೊಳೆ ಗಣೇಶ, ಗಂಜಿಗೆರೆ ಲೋಕೇಶ್, ವಿ.ಎಸ್. ಧನಂಜಯಕುಮಾರ್, ಎಂ.ಎಲ್.ಸುರೇಶ್, ಕೆ.ಎನ್. ಪಾಂಡು, ಉಪಾಧ್ಯಕ್ಷ ಪುರುಷೋತ್ತಮ್, ಕಾರ್ಯದರ್ಶಿ ಎಸ್. ಜೆ. ಮಂಜೇಗೌಡ, ಜಂಟಿ ಕಾರ್ಯದರ್ಶಿ ದೊಡ್ಡಯ್ಯ, ಖಜಾಂಚಿ ಪ್ರಸನ್ನ ಕುಮಾರ್, ಹಿರಿಯ ವಕೀಲರುಗಳಾದ ಕೆ.ಆರ್. ಮಹೇಶ್, ಎಂ.ಆರ್. ಪ್ರಸನ್ನ ಕುಮಾರ್ ಸೇರಿದಂತೆ ನೂರಾರು ವಕೀಲರು ಭಾಗವಹಿಸಿದ್ದರು.

ಕೆ.ಆರ್.ಪೇಟೆ ತಾಲೂಕು ವಕೀಲರ ಸಂಘದ ನೇತೃತ್ವದಲ್ಲಿ ವಕೀಲರು ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಇಂದು ಅರೆಕಾಲಿಕ ಕಾನೂನು ಸ್ವಯಂ ಸೇವಕರ ತರಬೇತಿ

ಚಾಮರಾಜನಗರ: ರಾಜ್ಯ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಬೆಂಗಳೂರಿನ ಔಟ್ಲಾಡ್ ಇಂಡಿಯಾ ಫೌಂಡೇಶನ್ ಹಾಗೂ ತಾಲೂಕು ಕಾನೂನು ಸೇವೆಗಳ ಸಮಿತಿ ಸಹಯೋಗದಲ್ಲಿ 2025–26ನೇ ಸಾಲಿನ ಹೊಸ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಫೆ.23 ರಿಂದ 26ರವರೆಗೆ ಹಮ್ಮಿಕೊಂಡಿರುವ ನಾಲ್ಕು ದಿನಗಳ ತರಬೇತಿಯ ಉದ್ಘಾಟನೆ ಕಾರ್ಯಕ್ರಮವು ಫೆ.23 ರಂದು ಬೆಳಗ್ಗೆ 10 ಗಂಟೆಗೆ ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ನಡೆಯಲಿದೆ. ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷ ಜಿ. ಪ್ರಭಾವತಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಶ್ರೀರೂಪ ಅವರು ಅಧ್ಯಕ್ಷತೆ ವಹಿಸುವರು. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ, ಔಟ್ಲಾಡ್ ಇಂಡಿಯಾ ಫೌಂಡೇಶನ್ನ ಯೋಜನಾ ಸಂಯೋಜಕರಾದ ಮೀಮಾಂಸ ಸಿಂಗ್ ಅವರು ಉಪಸ್ಥಿತರಿರುವರು. ಸಂಪನ್ಮೂಲ ವ್ಯಕ್ತಿಗಳಾದ ಔಟ್ಲಾಡ್ ಇಂಡಿಯಾ ಫೌಂಡೇಶನ್‌ನ ಎಚ್. ವೆಂಕಟೇಶ್, ಜಾಮೀಜಾಯ್, ಸಿದ್ಧಾರ್ಥ್ ಪಾಟೀಲ್ ಅವರು ಕಾರ್ಯಕ್ರಮದಲ್ಲಿ ತರಬೇತಿ ನೀಡುವರು ಎಂದು ತಿಳಿಸಿದೆ.

ವಿಜಯನಗರದ ಕನ್ನಡ ಭವನದಲ್ಲಿ 'ಸಾಂಸ್ಕೃತಿಕ ಕಾವ್ಯೋತ್ಸವ' ಸಂಭ್ರಮ | ಸಾಧಕರಿಗೆ ಪ್ರಶಸ್ತಿ ಪ್ರದಾನ

ಮಕ್ಕಳಿಗೆ ಶಿಕ್ಷಣದ ಜತೆಗೆ ಸಂಸ್ಕೃತಿ, ಸಂಸ್ಕಾರ ಕಲಿಸಿ

ಮೈಸೂರು: ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕೃತಿ ಹಾಗೂ ಸಂಸ್ಕಾರವನ್ನು ಕಲಿಸಿ ಎಂದು ಮೈಸೂರು ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸಲಹೆ ಮಾಡಿದರು.

ಧಾರವಾಡ ಜಿಲ್ಲೆ ಕುಂದಗೋಳದ ಜನಸೇವಾ ಫೌಂಡೇಶನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅಲೆಯನ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಸಹಯೋಗದಲ್ಲಿ ವಿಜಯನಗರದ ಕನ್ನಡ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಸಾಂಸ್ಕೃತಿಕ ಕಾವ್ಯೋತ್ಸವ' ಸಂಭ್ರಮದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಪ್ರಸ್ತುತ ಸ್ಪರ್ಧಾತ್ಮಕ ಯುಗ. ಹೀಗಾಗಿ ಶಿಕ್ಷಣ ಬಹಳ ಮುಖ್ಯ. ಆದ್ದರಿಂದ ಪ್ರತಿಯೊಬ್ಬರೂ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಿಸಬೇಕು ಎಂದರು.

ಕೇವಲ ಶಿಕ್ಷಣ ಕಲಿಸಿದರೆ ಅಷ್ಟೇ ಸಾಲದು. ಅಲ್ಲಿಗೆ ಪೋಷಕರ ಕರ್ತವ್ಯ ಮುಗಿಯುವುದಿಲ್ಲ. ಮಕ್ಕಳು ಸರಿದಾರಿಯಲ್ಲಿ ಹೋಗುತ್ತಿದ್ದಾರೆಯೇ ಎಂಬುದನ್ನು ಗಮನಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಇತ್ತೀಚೆಗೆ ಮಕ್ಕಳು ಪುಸ್ತಕಗಳನ್ನು ಓದುವುದಿಲ್ಲ. ಸದಾ ಮೊಬೈಲ್ ನಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಮುಳುಗಿರುತ್ತಾರೆ. ಓದದೇ ಯಾವುದೇ ಸಾಧನೆ ಮಾಡಲಾಗದು. ಕೃಷಿ ಕುಟುಂಬದಿಂದ ಬಂದ ನಾನು ಬಿ.ಎಸ್ಸಿಎಜಿ, ಎಂ.ಎಸ್ಸಿ ಎಜಿ ಓದಿ ನಂತರ ಐಪಿಎಸ್ ಮಾಡಿದೆ. ನಾನು ಕಷ್ಟಪಟ್ಟು ಓದದಿದ್ದರೆ ಇಲ್ಲಿಯವರೆಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಪೋಷಕರು ಮಕ್ಕಳ ಕಡೆಗೆ ಗಮನ ನೀಡಬೇಕು. ಆಸ್ತಿ ಮಾಡುವ ಬದಲು ಮಕ್ಕಳನ್ನೇ ಆಸ್ತಿಯಾಗಿ ಮಾಡಬೇಕು. ಹೀಗಾದರೆ ಅವರು ಮುಂದೆ ದೇಶದ ಆಸ್ತಿಯಾಗುತ್ತಾರೆ ಎಂದರು.

ಪೊಲೀಸ್ ಇಲಾಖೆಯಲ್ಲಿದ್ದರೂ ಕೂಡ ನಾನು ಯಾವುದೇ ಠಾಣೆಗೆ ಭೇಟಿ ನೀಡಿದರೂ ಅಲ್ಲಿಗೆ ಬರುವ ರೈತರ ಸಮಸ್ಯೆಗಳ ಪರಿಹಾರಕ್ಕೆ ಮೊದಲು ಆದ್ಯತೆ ನೀಡುತ್ತೇನೆ ಎಂದರು.

ಬೆಳಗಾವಿಯ ಶ್ರೀ ಕಾಡಯ್ಯ ಹಿರೇಮಠ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ನಾಗರಾಜ್ ವಿ. ಬೈರಿ, ಮಂಜುನಾಥ ಎನ್. ಶಿವಕ್ಕನವರ ಅಧ್ಯಕ್ಷತೆ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರ್ ಇದ್ದರು.

ಧಾರಾವಾಡ ಜಿಲ್ಲೆ ಅಣ್ಣಿಗೇರಿ ಬಿಸ್ಮಿಲ್ಲಾಹ್ ಆಗ್ರೋ ಇಂಪ್ಲೆಮೆಂಟ್ಸ್ ಉದ್ಯಮಿ ಖಾಜಾ ಹುಸೇನ್ ಇಮಾಮಹುಸೇನ್ ಗುಳಗುಂದಿ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಟಿ. ತ್ಯಾಗರಾಜ್, ಪ್ರದೇಶ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಆರಿಫ್ ಬೀರೂರು, ಕರುನಾಡ ಕನ್ನಡ ಕಲಾಸಿರಿ ಬಳಗದ ರಾಜ್ಯಾಧ್ಯಕ್ಷ ಸಿ.ಎಂ. ಅಂಬರೀಶ್, ಹರಪನಹಳ್ಳಿಯ ಭವಿಷ್ಯ ಬೆಳಕು ಚಾರಿಟಬಲ್ ಟ್ರಸ್ಟ್‌ನಅಧ್ಯಕ್ಷ ಗಿರೀಶ ನೆಲ್ಕುದ್ರಿ, ಬೆಂಗಳೂರಿನ ರಾಷ್ಟ್ರೀಯ ಮಹಿಳಾ ವೇದಿಕೆಯ ಸಂಸ್ಥಾಪಕ ಜಯಂತಿ ಗೌಡ್, ಕೃಷಿಕ ಸಮಾಜದ ರಾಜ್ಯಾಧ್ಯಕ್ಷೆ ಮಾಣಿಕ್ಯ ಬ.ಚಿಲ್ಲೂರ, ರೈತ ಸಂಘ ಸಂಘಟನಾ ಕಾರ್ಯದರ್ಶಿ ಬಸಪ್ಪ ಸಿದ್ದಪ್ಪ ಸಂಭೋಜಿ ಮುಖ್ಯ ಅತಿಥಿಗಳಾಗಿದ್ದರು.

ಮೈಸೂರಿನ ವಿಜಯನಗರದ ಕನ್ನಡ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಸಾಂಸ್ಕೃತಿಕ ಕಾವ್ಯೋತ್ಸವ' ಸಂಭ್ರಮದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಸಮಾಚಾರ ಸಣ್ಣದಲ್ಲ

ಮೀನುಗಾರಿಕೆ ಸಲಕರಣೆ ಕಿಟ್‌ಗಾಗಿ ಅರ್ಜಿ ಆಹ್ವಾನ

ತುಮಕೂರು: ಮೀನುಗಾರಿಕೆ ಇಲಾಖೆ ವತಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವ ಅರ್ಹ ಮೀನುಗಾರರು/ಮೀನುಗಾರರ ಸಹಕಾರ ಸಂಘ/ಕೆರೆಗಳ ಮೀನು ಪಾಶುವಾರು ಹಕ್ಕನ್ನು ಪಡೆದ ಮೀನು ಶಿಕಾರಿದಾರರಿಗೆ ಮೀನುಗಾರಿಕೆ ಸಲಕರಣೆ ಕಿಟ್ಟುಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ಈ ಯೋಜನೆಯಡಿ 50 ಫಲಾನುಭವಿಗಳಿಗೆ ತಲಾ 10,000 ರೂ. ಮೌಲ್ಯದ ನೈಲಾನ್ ಬಲೆ, ತಕ್ಕಡಿ, ಪ್ಲಾಸ್ಟಿಕ್ ಕ್ರೇಟ್, ಲೈಫ್ ಜಾಕೆಟ್, ಫೈಬರ್‌ಗ್ಲಾಸ್, ಹರಿಗೋಲು, ಇನ್ಸುಲೇಟೆಡ್ ಬಾಕ್ಸ್ ಇತ್ಯಾದಿಗಳ ಖರೀದಿ/ವಿತರಣೆ ಮಾಡಲಾಗುವುದು. ಆಸಕ್ತರು ನಿಗದಿತ ಅರ್ಜಿ ನಮೂನೆಯನ್ನು ತಾಲೂಕು/ಜಿಲ್ಲಾ ಮೀನುಗಾರಿಕೆ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಫೆ.27ರೊಳಗಾಗಿ ಸಂಬಂಧ ಪಟ್ಟ ತಾಲೂಕು ಮಟ್ಟದ ಮೀನುಗಾರಿಕೆ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8277200300 ಅಥವಾ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಗುಬ್ಬಿ, ಕೊರಟಗೆರೆ-7349050051, ತುಮಕೂರು, ಪಾವಗಡ -9844665991, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು-9620512914, ಶಿರಾ-7406092921, ಕುಣಿಗಲ್-8971397718, ಮಧುಗಿರಿ- 974050 0837ನ್ನು ಸಂಪರ್ಕಿಸಬಹುದಾಗಿದೆ ಎಂದು ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೊಸೈಟಿಯಿಂದ ವಂಚನೆ: ಸಂಪರ್ಕಿಸಲು ಮನವಿ

ತುಮಕೂರು: ತುಮಕೂರು ನಗರದ ಬಿ.ಎಚ್.ರಸ್ತೆ ಸರಕಾರಿ ಜ್ಯೂನಿಯರ್ ಕಾಲೇಜು ಮುಂಭಾಗದಲ್ಲಿದ್ದ ಪಂಚವಟಿ ಮಲ್ಟಿ ಸ್ಟೇಟ್ ಕೋ-ಆಪರೇಟೀವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್ ಎಂಬ ಖಾಸಗಿ ಸೊಸೈಟಿಯು ಸಾರ್ವಜನಿಕರಿಗೆ ಹೆಚ್ಚಿನ ಲಾಭಾಂಶ ನೀಡುವುದಾಗಿ ನಂಬಿಸಿ ಠೇವಣಿ ರೂಪದಲ್ಲಿ ಹಣ ಸಂಗ್ರಹಿಸಿ ಲಾಭಾಂಶ ಮತ್ತು ಅಸಲು ಹಣವನ್ನು ನೀಡದೆ ಮೋಸ ಮಾಡಿರುತ್ತದೆ. ಈ ಬಗ್ಗೆ ತುಮಕೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪ್ರಸ್ತುತ ಸಿಐಡಿ ಘಟಕದಲ್ಲಿ ತನಿಖೆಯಲ್ಲಿದೆ. ಯಾರಾದರೂ ಈ ಸೊಸೈಟಿಯಿಂದ ವಂಚನೆಗೆ ಒಳಗಾಗಿದ್ದರೆ ಎಚ್.ಎಸ್. ವೆಂಕಟೇಶ್, ಪೊಲೀಸ್ ಇನ್‌ಸ್ಪೆಕ್ಟರ್, ವಿಶೇಷ ವಿಚಾರಣೆ ವಿಭಾಗ, ಸಿಐಡಿ, ಬೆಂಗಳೂರು, ಮೊ.ಸಂ.99726 21104ನ್ನು ಸಂಪರ್ಕಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಫೆ.25ರಂದು ನರ್ಸಿಂಗ್ ತಂಡದ ಘಟಿಕೋತ್ಸವ

ತುಮಕೂರು: ಸರಕಾರಿ ಶುಶ್ರೂಷ ಶಾಲೆ, ಶುಶ್ರೂಷ ಮಹಾವಿದ್ಯಾಲಯ ಹಾಗೂ ಜಿಲ್ಲಾ ಆಸ್ಪತ್ರೆ ಸಹಯೋಗದಲ್ಲಿ ಫೆ.25ರಂದು ಬೆಳಗ್ಗೆ 10.30 ಗಂಟೆಗೆ ನಗರದ ಬಾಲಭವನದಲ್ಲಿ 2025-26ನೇ ಸಾಲಿನ 16ನೇ ತಂಡದ ಜಿ.ಎನ್.ಎಂ. ಹಾಗೂ 7ನೇ ತಂಡದ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳ ಜ್ಯೋತಿ ಬೆಳಗಿಸುವ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ ಹಾಗೂ ಬೇಸಿಕ್ ಬಿ.ಎಸ್ಸಿ ನರ್ಸಿಂಗ್ 2 ಮತ್ತು 3ನೇ ತಂಡದ ಘಟಿಕೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ತುಮಕೂರು ತಾಲೂಕಿನ ನಾಗವಲ್ಲಿಯಲ್ಲಿ ಜನರೊಂದಿಗೆ ಜನತಾದಳ ಸಮಾವೇಶ | ಯುವ ಘಟಕ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ

ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ಚುನಾವಣೆಗೆ ಸಜ್ಜಾಗಿ

ತುಮಕೂರು: ಅಂದಿನಿಂದ ಇಂದಿನವರೆಗೂ ಜೆಡಿಎಸ್ ಕಾರ್ಯಕರ್ತರ ಪಕ್ಷವಾಗಿ ಉಳಿದು ಬೆಳೆದಿದೆ. ಇಲ್ಲಿ ಬೆಳೆದು ಉನ್ನತ ಸ್ಥಾನಕ್ಕೆ ಏರಿದವರು ಪಕ್ಷ ಬಿಟ್ಟುಹೋದರು ಕಾರ್ಯಕರ್ತರು ಪಕ್ಷದ ಶಕ್ತಿಯಾಗಿದ್ದಾರೆ. ಇಂತಹ ಕಾರ್ಯಕರ್ತರಿಗೆ ರಾಜಕೀಯ ಅಧಿಕಾರ ಸಿಗಬೇಕು. ಕಾರ್ಯಕರ್ತರು ಅಧಿಕಾರ ಪಡೆಯುವಂತಹ ಸ್ಥಳೀಯ ಸಂಸ್ಥೆಗಳ ಚುನಾವಣೆ ನಮ್ಮ ಮುಂದಿದೆ. ಪಕ್ಷವನ್ನು ಬೂತ್ ಮಟ್ಟದಿಂದ ಸಂಘಟಿಸಿ ಚುನಾವಣೆಗೆ ಸಜ್ಜಾಗಬೇಕು ಎಂದು ಜೆಡಿಎಸ್ ಯುವ ಘಟಕ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಾರ್ಯಕರ್ತರಿಗೆ ಮನವಿ ಮಾಡಿದರು.

ತಾಲೂಕಿನ ನಾಗವಲ್ಲಿಯಲ್ಲಿ ಶನಿವಾರ ನಡೆದ ತುಮಕೂರು ಗ್ರಾಮಾಂತರ ಕ್ಷೇತ್ರದ ಜನರೊಂದಿಗೆ ಜನತಾದಳ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮಾಜಿ ಪ್ರಧಾನಿ ದೇವೇಗೌಡರು, ಮಾಜಿ ಮುಖ್ಯಮಂತ್ರಿ, ಎಚ್.ಡಿ.ಕುಮಾರಸ್ವಾಮಿಯವರು ಕಾಣಿಸಿಯಿಂದ ಕಟ್ಟಿದ ಜೆಡಿಎಸ್ 25 ವರ್ಷ ಪೂರೈಸಿದೆ. ಇದರ ಯಶಸ್ಸು ಕಾರ್ಯಕರ್ತರಿಗೆ ಸಲ್ಲಬೇಕು.

ಎಂತಹ ಕಷ್ಟಕಾಲದಲ್ಲೂ ಕಾರ್ಯಕರ್ತರು ಪಕ್ಷವನ್ನು ಬಿಡದೆ ಬೆಂಬಲಿಸಿದ್ದಾರೆ. ಮುಂದಿನ ರಾಜ್ಯದಲ್ಲಿ ಜನತಾ ಸರಕಾರ ಅಧಿಕಾರಕ್ಕೆ ಬರಬೇಕು. ಈಗಿನಿಂದಲೇ ತಳಮಟ್ಟದಿಂದ ಪಕ್ಷ ಸಂಘಟಿಸಬೇಕು. ಜಿಲ್ಲೆಯಲ್ಲಿ ಈ ಹಿಂದೆ 11 ವಿಧಾನಸಭಾ ಕ್ಷೇತ್ರಗಳಲ್ಲಿ 9 ಸ್ಥಾನಗಳನ್ನು ಗೆಲ್ಲಿಸಿ ತುಮಕೂರು ಜಿಲ್ಲೆ ಕೊಡುಗೆ ನೀಡಿದೆ ಅಂತಹ ಸುವರ್ಣ ಕಾಲ 2028ಕ್ಕೆ ಮರುಕಳಿಸಬೇಕು ಎಂದು ವಿನಂತಿಸಿದರು.

ತುಮಕೂರು ತಾಲೂಕಿ ನಾಗವಲ್ಲಿಯಲ್ಲಿ ನಡೆದ ತುಮಕೂರು ಗ್ರಾಮಾಂತರ ಕ್ಷೇತ್ರದ ಜನರೊಂದಿಗೆ ಜನತಾದಳ ಸಮಾವೇಶವನ್ನು ಜೆಡಿಎಸ್ ಯುವ ಘಟಕ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಉದ್ಘಾಟಿಸಿದರು.

ಜೆಡಿಎಸ್ ನಾಯಕರನ್ನು ತಯಾರಿಸುವ ಕಾರ್ಖಾನೆಯಾಗಿದೆ. ಇಲ್ಲಿ ನಾಯಕರಾಗಿ ಬೆಳೆದು ಉನ್ನತ ಸ್ಥಾನ ಪಡೆದ ಸುಮಾರು 50ಕ್ಕೂ ಹೆಚ್ಚು ನಾಯಕರು ಜೆಡಿಎಸ್ ಬಿಟ್ಟುಹೋಗಿ ಬೇರೆ ಪಕ್ಷ ಸೇರಿದ್ದಾರೆ. ಚುನಾವಣೆಗಳಲ್ಲಿ ತಮ್ಮನ್ನು ಗೆಲ್ಲಿಸಿದ, ರಾಜಕೀಯವಾಗಿ ಬೆಳೆಸಿದ ಕಾರ್ಯಕರ್ತರನ್ನು ಬೀದಿಯಲ್ಲಿ ಬಿಟ್ಟುಹೋಗುವುದು ನಾಯಕನಾದವನಿಗೆ ಶೋಭೆತರುವುದಿಲ್ಲ. ನಾಯಕರು ಹೋದರೂ ನಾಯಕರನ್ನು ರೂಪಸುವ ಶಕ್ತಿವಂತ, ಚಿನ್ನದಂತ ಕಾರ್ಯಕರ್ತರು ನಮ್ಮ ಜೊತೆ ಇದ್ದಾರೆ, ಯಾರೇ ಕೈ ಬಿಟ್ಟರೂ ನಾವು ನಿಮ್ಮನ್ನು ಬಿಡುವುದಿಲ್ಲ, ನಿಮ್ಮ ಜೊತೆಗಿರುತ್ತೇವೆ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.

ಪಕ್ಷ ಸಂಘಟನೆ, ಸದಸ್ಯತ್ವ ನೋಂದಣಿಗಾಗಿ ತಾವು ರಾಜ್ಯಾದ್ಯಂತ ಜನರೊಂದಿಗೆ ಜನತಾದಳ ಸಮಾವೇಶ ನಡೆಸುತ್ತಿದ್ದು, ಇದುವರೆಗೆ 54 ವಿಧಾನಸಭಾ ಕ್ಷೇತ್ರಗಳಲ್ಲಿ ಸಮಾವೇಶಗಳಾಗಿವೆ. ಈ ತಿಂಗಳ 27ರಂದು ವಿಜಯಪುರದಲ್ಲಿ ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳ ಸಮಾವೇಶ ಹಾಗೂ ಪಕ್ಷದ ಬೆಳ್ಳಿ ಹಬ್ಬ ಆಚರಣೆ ಹಮ್ಮಿಕೊಳ್ಳಲಾಗಿದೆ. ತುಮಕೂರು ಜಿಲ್ಲೆಯ 11 ಕ್ಷೇತ್ರಗಳು ಒಳಗೊಂಡ ಬೆಳ್ಳಿ ಹಬ್ಬ ಸಮಾವೇಶ ಆಯೋಜಿಸಲು ಚರ್ಚೆ ನಡೆದಿದೆ ಎಂದರು.

ಜಿಲ್ಲಾ, ತಾಲೂಕು, ಗ್ರಾಮ ಪಂಚಾಯಿತಿ ಸೇರಿದಂತೆ ನಗರ, ಪಟ್ಟಣಗಳ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಗೆದ್ದು ನಾಯಕತ್ವ ಬೆಳೆಸಿಕೊಳ್ಳಬೇಕು. ಅದಕ್ಕಾಗಿ ಈಗಿನಿಂದಲೇ ಮತಗಟ್ಟೆ ಹಂತದಿಂದ ಪಕ್ಷವನ್ನು ಸದೃಢವಾಗಿ ಸಂಘಟನೆ ಮಾಡಬೇಕು ಎಂದು ಹೇಳಿದರು.

ಜಿಲ್ಲಾ ಜೆಡಿಎಸ್ ಅಧ್ಯಕ್ಷ, ಮಾಜಿ ಶಾಸಕ ಎಚ್. ನಿಂಗಪ್ಪ ಮಾತನಾಡಿ, ಹಿಂದೆ ನಾನು 10 ವರ್ಷ ಪಕ್ಷದ ಅಧ್ಯಕ್ಷನಾಗಿ ಕೆಲಸ ಮಾಡಿದ್ದೆ, ದೇವೇಗೌಡರು, ಕುಮಾರಸ್ವಾಮಿಯವರು ನನ್ನ ಮೇಲೆ ವಿಶ್ವಾಸವಿಟ್ಟು ಮತ್ತೊಮ್ಮೆ ಅಧ್ಯಕ್ಷನಾಗುವ ಅವಕಾಶ ನೀಡಿದ್ದಾರೆ. ಹಿಂದೆ ಅಧ್ಯಕ್ಷನಾಗಿದ್ದಾಗ 2006ರಲ್ಲಿ ಜಿಲ್ಲೆಯಲ್ಲಿ ಪಕ್ಷ ಹಾಗೂ ಅಭಿವೃದ್ಧಿಯಲ್ಲಿ ಸುವರ್ಣ ಕಾಲ. ಆಗ ಜಿಲ್ಲೆಯ 11 ಕ್ಷೇತ್ರಗಳಲ್ಲಿ ತಾವೂ ಸೇರಿದಂತೆ 9 ಶಾಸಕರು ಆಯ್ಕೆಯಾದರು. ಅದಕ್ಕಾಗಿ ಎಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಅಧಿಕಾರಾವಧಿಯಲ್ಲಿ ಕೂಡಲೇ ರೈತರ ಸಾಲ ಮನ್ನಾ ಮಾಡಿ ನೆರವಾಗಿದ್ದಾರೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ತಿಪ್ಪೇಸ್ವಾಮಿ, ಮಾಜಿ ಶಾಸಕ ಕೆ.ಎಂ.ತಿಮ್ಮರಾಯಪ್ಪ ಮಾತನಾಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ, ಜಿಲ್ಲಾ ಜೆಡಿಎಸ್ ಮಾಜಿ ಅಧ್ಯಕ್ಷ ಆರ್.ಸಿ.ಆಂಜನಪ್ಪ, ತಾಲೂಕು ಅಧ್ಯಕ್ಷ ರಾಮಣ್ಣ, ಮುಖಂಡರಾದ ಗುಬ್ಬಿ ನಾಗರಾಜು, ಕೆ.ಟಿ.ಶಾಂತಕುಮಾರ್, ಡಾ.ರವಿ ನಾಗರಾಜಯ್ಯ, ಉಗ್ರೇಶ್, ನರಸಿಂಹರಾಜು, ಟಿ.ಎಲ್.ಕುಂಭಯ್ಯ, ಟಿ.ಆರ್.ನಾಗರಾಜು, ಸೋಲಾರ್ ಕೃಷ್ಣಮೂರ್ತಿ, ಮೋಹನ್ ಕುಮಾರ್, ಧರಣೇಂದ್ರ ಕುಮಾರ್, ಎಚ್ ಡಿಕೆ ಮಂಜುನಾಥ್, ಗಂಗಣ್ಣ, ವಿಜಯ್ ಗೌಡ, ಬೆಳಗುಂಬ ವೆಂಕಟೇಶ್, ತಿಮ್ಮಪ್ಪ ಗೌಡರು, ಯೋಗಾನಂದ ಕುಮಾರ್, ಗೂಳೂರು ನವೀನ್, ಲೀಲಾವತಿ, ಹನುಮಂತರಾಯಪ್ಪ ಮೊದಲಾದವರು ಭಾಗವಹಿಸಿದ್ದರು.

ಸರಕಾರಕ್ಕೆ ರೈತರ ಬಗ್ಗೆ ಕಾಳಜಿಯಿಲ್ಲ

ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ರೈತರ ಬಗ್ಗೆ ಕಿಂಚಿತ್ತೂ ಕಾಳಜಿ, ಬದ್ಧತೆ ಇಲ್ಲ, ರೈತರ ಯಾವ ಸಮಸ್ಯೆಗಳಿಗೂ ಸ್ಪಂದಿಸುತ್ತಿಲ್ಲ. ಈ ಸರಕಾರದ ಅವಧಿಯಲ್ಲಿ 2800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಈ ಜಿಲ್ಲೆಯ 40ಕ್ಕೂ ಹೆಚ್ಚು ರೈತರು ಜೀವ ಕಳೆದುಕೊಂಡಿದ್ದಾರೆ. ಅತಿವೃಷ್ಟಿ, ಅನಾವೃಷ್ಟಿಯಿಂದ ಸಂಕಷ್ಟದ ರೈತರಿಗೆ ಪರಿಹಾರ ನೀಡಿ, ಅವರಿಗೆ ಸ್ಪಂದಿಸುವ ಪ್ರಯತ್ನವನ್ನು ಈ ಸರಕಾರ ಮಾಡಲಿಲ್ಲ ಎಂದು ಜೆಡಿಎಸ್ ಯುವ ಘಟಕ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕಿಸಿದರು.

ಹನೂರು ಚನ್ನಪ್ಪರ ಕೃತಿಗಳು ಅದ್ಭುತ

ಚಾಮರಾಜನಗರ: ಲೇಖಕ ಹನೂರು ಚನ್ನಪ್ಪ ಅವರ ಅನ್ನ, ಬೆಲ್ಲದದೋಣಿ, ಕಬ್ಬಿಣದ ಕುದುರೆಗಳು ಕೃತಿ ಅದ್ಭುತವಾಗಿದ್ದು, ಅವರ ಯೋಚನಾ ಲಹರಿ, ಚಿಂತನೆಗಳು ಅದ್ಭುತ ವಾಗಿದೆ ಎಂದು ಖ್ಯಾತ ಸಂಗೀತ ನಿರ್ದೇಶಕ ವಿ.ಮನೋಹರ್ ಹೇಳಿದರು.

ನಗರದ ವರನಟ ಡಾ.ರಾಜ್ ಕುಮಾರ್ ಕಲಾಮಂದಿರದಲ್ಲಿ ಚೇತನ ಕಲಾವಾಹಿನಿ, ನೆಲೆ ಹಿನ್ನಲೆ, ಜೋಳಿಗೆ ಪ್ರಕಾಶನ ಅವರ ಸಹಯೋಗದಲ್ಲಿ ನಡೆದ ಹನೂರು ಚನ್ನಪ್ಪ ಅವರ ಕಥೆ, ನಾಟಕ, ಕಾದಂಬರಿ ಕುರಿತ ವಿಚಾರಸಂಕಿರಣ ಹಾಗೂ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು. ಅತ್ಯುತ್ತಮ ಕವಿಯಾಗಬೇಕಾದರೆ ಪತ್ರಿಕೆಗಳು, ಪುಸ್ತಕಗಳನ್ನು ಓದಬೇಕು. ಏಕೆಂದರೆ ಹನೂರು ಚನ್ನಪ್ಪ ಅವರು ಚೆನ್ನಾಗಿ ಓದಿದ ಪರಿಣಾಮದಿಂದ ಅವರು ಒಬ್ಬ ಉತ್ತಮ ಕಥೆಗಾರರು, ನಾಟಕಕಾರರು, ಕಾದಂಬರಿಗಾರ ಹೊರಹೊಮ್ಮಿದ್ದಾರೆ. ಅವರಿಂದ ಮತ್ತಷ್ಟು ನಾಟಕಗಳು, ಕಾದಂಬರಿ ಬರಲಿ ಎಂದು ಆಶಿಸಿದರು.

ಹನೂರು ಚನ್ನಪ್ಪನವರ ಪುಸ್ತಕಗಳನ್ನು ಓದುತ್ತಾ ಅದ್ಭುತ ಕಾದಂಬರಿಕಾರರ, ಕವಿ, ನಾಟಕಾರರನ್ನು ಕಂಡೆ. ತುಂಬಾ ಖುಷಿಯಾಯಿತು. ಚಾಮರಾಜನಗರ ಜಿಲ್ಲೆಯಲ್ಲಿ ಎಲ್ಲ ತರದ ಸಾಹಿತಿಗಳು ಇದ್ದಾರೆ. ಆದರೆ ಇದು ರಾಜ್ಯ ಮಟ್ಟಕ್ಕೆ ತೆರೆದುಕೊಂಡಿಲ್ಲ, ಅದು ಪ್ರಚಾರದ ಕೊರತೆ ಎಂದು ಭಾವಿಸಿದ್ದೇನೆ. ಜಿಲ್ಲೆಯಲ್ಲಿ ಪ್ರತಿಭಾವಂತರು ಇದ್ದಾರೆ. ಚಾಮರಾಜನಗರ ಭಾಷೆಯ ಸೊಗಡು ಬಹಳ ಒಂದು ರೀತಿಯ ಗಟ್ಟಿಯಾದ ಭಾಷೆಯಾಗಿದೆ. ಹನೂರು ಚನ್ನಪ್ಪನವರ ಅನ್ನ, ಬೆಲ್ಲದದೋಣಿ, ಕಬ್ಬಿಣದ ಕುದುರೆಗಳು ಕೃತಿ ಅದ್ಭುತವಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಹನೂರು ಚನ್ನಪ್ಪ ಅವರ ಕಥೆ, ನಾಟಕ, ಕಾದಂಬರಿ ಕುರಿತ ವಿಚಾರಸಂಕಿರಣ ಹಾಗೂ ಕವಿಗೋಷ್ಠಿಯನ್ನು ಖ್ಯಾತ ಸಂಗೀತ ವಿ.ಮನೋಹರ್‌ಉದ್ಘಾಟಿಸಿದರು.

ಮೈಸೂರು ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಬೆಲ್ಲದದೋಣಿ ಕುರಿತು ಮಾತನಾಡಿ ಬೆಲ್ಲದ ದೋಣಿ 9 ದೃಶ್ಯಗಳಿರುವ ನಾಟಕವಾಗಿದ್ದು, ದಲಿತ ಕುಟುಂಬವೊಂದರಲ್ಲಿ ನಡೆದಿರುವ ಒಂದು ನೈಜ ಘಟನೆಯಾಗಿದೆ. ಅದೊಂದು ಅದ್ಭುತ ಕೃತಿಯಾಗಿದ್ದು, ಚಾಮರಾಜನಗರ, ಕೊಳ್ಳೇಗಾಲ ಭಾಷೆಯನ್ನೊಳಗೊಂಡಿದೆ. ಹನೂರು ಚನ್ನಪ್ಪನವರು ಅದ್ಭುತ ಕಥೆಯನ್ನು ಕಟ್ಟಿಕೊಟ್ಟಿದ್ದಾರೆ. ಅವರು ಮೂರು ಕೃತಿಗಳು ಅದ್ಭುತವಾಗಿದೆ ಎಂದರು.

ಮೈಸೂರಿನ ವಿಮರ್ಶಕಿ ಕುಸುಮ ಆಯರ ಹಳ್ಳಿ ಕಬ್ಬಿಣದ ಕುದುರೆಗಳು ನಾಟಕ ಕುರಿತು ಪ್ರತಿಕ್ರಿಯಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ.ರೇಣುಕಾದೇವಿ, ಜಿಲ್ಲಾ ವಕೀಲ ಸಂಘದ ಅಧ್ಯಕ್ಷ ಎಂ.ಪುಟ್ಟಸ್ವಾಮಿ, ಉದ್ಯಮಿ ಶ್ರೀನಿಧಿಕುದರ್, ಕವಿ ಹನೂರು ಚನ್ನಪ್ಪ, ಚೇತನ ಕಲಾವಾಹಿನಿ ಅಧ್ಯಕ್ಷ ಜಿ. ರಾಚಪ್ಪ, ಶಿಕ್ಷಕಿ ಲತಾಪುಟ್ಟಸ್ವಾಮಿ, ನೆಲೆ ಹಿನ್ನಲೆಯ ಕೆ.ಆರ್.ಗೋಪಾಲ್, ಅಂತಾರಾಷ್ಟ್ರೀಯ ಜಾನಪದ ಗಾಯಕ ಸಿ. ಎಂ.ನರಸಿಂಹಮೂರ್ತಿ, ಸಾಹಿತಿಗಳಾದ ಎಂ.ಜವರಾಜು, ಬಸವಣ್ಣ ಮೂಕಳ್ಳಿ, ನಂಜನಹಳ್ಳಿ ಮಹದೇವಪ್ಪ, ಮೂಳ್ಳೂರು ಶಿವಮಲ್ಲು, ಸಿ.ಲಿಂಗಯ್ಯ, ಎಸ್. ಜಿ. ಮಹಾಲಿಂಗಸ್ವಾಮಿ ಭಾಗವಹಿಸಿದ್ದರು.

ರಾಯಸಮುದ್ರ ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಕೆ.ಆರ್.ಪೇಟೆ: ತಾಲೂಕು ಶೀಳನೆರೆ ಹೋಬಳಿ ರಾಯಸಮುದ್ರ ಡೈರಿಯ ನೂತನ ಆಡಳಿತ ಮಂಡಳಿಗೆ ನೂತನ ಅಧ್ಯಕ್ಷರಾಗಿ ದಿನೇಶ್ ಹಾಗೂ ಉಪಾಧ್ಯಕ್ಷರಾಗಿ ನೀಲಮ್ಮ ಅವಿರೋಧವಾಗಿ ಆಯ್ಕೆಯಾದರು.

ಸಂಘದ ನೂತನ ಆಡಳಿತ ಮಂಡಳಿಯ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನ ಬಯಸಿ ದಿನೇಶ್ ಹಾಗೂ ಉಪಾಧ್ಯಕ್ಷ ಸ್ಥಾನ ಬಯಸಿ ಕ್ರಮವಾಗಿ ದಿನೇಶ್ ಹಾಗೂ ನೀಲಮ್ಮ ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಿದರೆ ಉಳಿದ ಯಾವ ಸದಸ್ಯರು ನಾಮಪತ್ರವನ್ನು ಸಲ್ಲಿಸದ ಕಾರಣ ಚುನಾವಣಾ ಅಧಿಕಾರಿ ರಾಘವೇಂದ್ರ ಘೋಷಿಸಿದರು.

ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಗ್ರಾಮದ ಹಿರಿಯ ಮುಖಂಡರು ಸನ್ಮಾನಿಸಿ ಗೌರವಿಸಿ ಅಭಿನಂದಿಸಿದರು.

ಗ್ರಾಮದ ಯುವ ಮುಖಂಡ ಮಂಜುನಾಥ್ ಮಾತನಾಡಿ ಕಳೆದ ವಾರ ನಡೆದ ಸಂಘದ ಚುನಾವಣೆಯಲ್ಲಿ ಸಂಘದ ಆಡಳಿತ ಮಂಡಳಿಯ 10 ಸ್ಥಾನಗಳಲ್ಲಿ 10 ಸ್ಥಾನಗಳು ಮನ್ಮುಲ್ ನಿರ್ದೇಶಕ ಡಾಲು ರವಿ ಹಾಗೂ ಎಂ. ಬಿ. ಹರೀಶ್ ಬಣಕ್ಕೆ ಅಭೂತಪೂರ್ವ ಗೆಲುವು ಸಾಧಿಸಿತ್ತು. ಮನ್ಮುಲ್ ನಿರ್ದೇಶಕ ಡಾಲು ರವಿ ಅವರ ಅಧ್ಯಕ್ಷತೆಯಲ್ಲಿ ಸಂಘದ ಆಡಳಿತ ಮಂಡಳಿಯ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ. ಡಾಲು ರವಿ ಹಾಗೂ ಎಂ. ಬಿ. ಹರೀಶ್ ಮಾರ್ಗದರ್ಶನದಲ್ಲಿ ನಮ್ಮ ಸಂಘವು ಇನ್ನೂ ಎತ್ತರಕ್ಕೆ ಬೆಳೆಯಲು ಸಂಘದ ನೂತನ ಆಡಳಿತ ಮಂಡಳಿಯವರು ಶ್ರಮಿಸಬೇಕು. ಸಂಘಕ್ಕೆ ಉತ್ತಮ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಸಂಘದ ಅಭಿವೃದ್ಧಿ ಹಾಗೂ ನಾವುಗಳು ವೈಯುಕ್ತಿಕವಾಗಿ ಆರ್ಥಿಕ ಪ್ರಗತಿ ಸಾಧಿಸಬೇಕು ಎಂದರು.



ಕೆ.ಆರ್.ಪೇಟೆ ತಾಲೂಕು ಶೀಳನೆರೆ ಹೋಬಳಿ ರಾಯಸಮುದ್ರ ಡೈರಿಯ ನೂತನ ಆಡಳಿತ ಮಂಡಳಿಗೆ ನೂತನ ಅಧ್ಯಕ್ಷರಾಗಿ ದಿನೇಶ್ ಹಾಗೂ ಉಪಾಧ್ಯಕ್ಷರಾಗಿ ನೀಲಮ್ಮ ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ದಿನೇಶ್ ಮಾತನಾಡಿ, ನನ್ನನ್ನು ಸರ್ವಾನುಮತದಿಂದ ಅಧ್ಯಕ್ಷನಾಗಲು ಸಹಕಾರ ಮಾಡಿದ ಮನ್ಮುಲ್ ನಿರ್ದೇಶಕ ಡಾಲು ರವಿ ಎಂ.ಬಿ. ಹರೀಶ್ ಅವರಿಗೆ ಹಾಗೂ ನಮ್ಮ ಸಂಘದ ಎಲ್ಲ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಂಘದ ಅಧ್ಯಕ್ಷರಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸೋಣ ಎಂದರು.

ಈ ಸಂದರ್ಭದಲ್ಲಿ ಆರ್. ವೈ. ಮಹೇಶ್, ಆರ್. ಎಂ. ವೆಂಕಟೇಶ್, ದಿನೇಶ್, ಮಧು, ಆರ್, ಎನ್. ರವಿ, ನಿರ್ಮಲ, ನೇತ್ರಾವತಿ, ಮಂಗಳಮ್ಮ, ಬಿ. ಆರ್. ಎ. ರವಿ ಕುಮಾರ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಂಜಣ್ಣ, ನವೀನ್, ಹರೀಶ್, ಶ್ರೀನಿವಾಸ್, ಕುಮಾರ್, ವೆಂಕಟೇಶಣ್ಣ, ಟೈಗರ್ ಪ್ರಭಾಕರ್, ಪುರುಷೋತ್ತಮ, ಶೇಖರ್,ಲೋಕೇಶ್, ಹೊಂಬಾಳೆ ಹೊನ್ನಪ್ಪ, ಪೋಸ್ಟ್ ಶಿವರಾಮು, ಡೈರಿ ಮಾಜಿ ಅಧ್ಯಕ್ಷ ಕುಮಾರ್, ಹರೀಶ್, ಪ್ರಸನ್ನ, ಕೇಬಲ್ ರಾಜು, ಮುರುಗನಕೊಪ್ಪಲು ಗ್ರಾಮದ ಸೋಮ, ನಿಂಗರಾಜು, ಶಿವರಾಮ ಗುಂಡ, ಲಕ್ಷ್ಮಣ, ಚಂದ್ರ, ಯೋಗಣ್ಣ ಸೇರಿದಂತೆ ರಾಯಸಮುದ್ರ ಗ್ರಾಮಸ್ಥರು ಹಾಜರಿದ್ದರು.

ಎಸ್ಸಿ, ಎಸ್ಟಿ ಸಹಕಾರ ಸಂಘದ ನೂತನ ಅಧ್ಯಕ್ಷರ ಆಯ್ಕೆ

ಶಿರಾ: ಜನಸಾಮಾನ್ಯರ ಆರ್ಥಿಕ ಸದೃಢತೆಗೆ ಸಹಕಾರ ಸಂಘಗಳು ಆರ್ಥಿಕ ಶಕ್ತಿ ತುಂಬುತ್ತಿವೆ. ಈ ನಿಟ್ಟಿನಲ್ಲಿ ಶಿರಾ ತಾಲೂಕು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಹಕಾರ ಸಂಘದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಶಿರಾ ತಾಲೂಕು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಕಲ್ಲುಕೋಟೆ ಬಿ.ನರಸಿಂಹಮೂರ್ತಿ ಹೇಳಿದರು.

ಅವರು ಶಿರಾ ತಾಲೂಕು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಹಕಾರ ಸಂಘ ದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಯಾಗಿ ಮಾತನಾಡಿದರು. ಬ್ಯಾಂಕು ಗಳ ಬೆಳವಣಿ ಗೆಗೆ ಷೇರದಾರರೆ ಆರ್ಥಿಕವಾಗಿ ದೊಡ್ಡ ಶಕ್ತಿ ತುಂಬಿದ್ದು, ಷೇರು ದಾರರ ಪ್ರಗತಿಗಾಗಿ ಅತ್ಯಂತ ಪ್ರಾಮಾಣಿಕತೆಯಿಂದ ಸೇವೆ ಮಾಡುತ್ತೇನೆ ಎಂದರು.

ಶಿರಾ ತಾಲೂಕು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಹಕಾರ ಸಂಘದ ಅಧ್ಯಕ್ಷರಾಗಿ ಕಲ್ಲುಕೋಟೆ ಬಿ.ನರಸಿಂಹಮೂರ್ತಿ,ಉಪಾಧ್ಯಕ್ಷರಾಗಿ ಆರ್.ಲಕ್ಷ್ಮಣ ನಾಯ್ಕ ಅವಿರೋಧವಾಗಿ ಆಯ್ಕೆಯಾದರು

ಶಿರಾ ತಾಲೂಕು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಆರ್.ಲಕ್ಷ್ಮಣ ನಾಯ್ಕ, ನಿರ್ದೇಶಕರಾಗಿ ಮಂಜಣ್ಣ ಎಸ್., ಶಿವಲಿಂಗನಾಯಕ, ಶಿವಣ್ಣ.ಡಿ., ಮೇಘ್ಯಾನಾಯ್ಕ, ಎಚ್. ಹೇಮಂತ್ ಕುಮಾರ್,ಜಗದೀಶ್. ಎಸ್, ಪಿ.ಬಿ.ನರಸಿಂಹಯ್ಯ, ಗುರುಲಿಂಗಪ್ಪ, ಓಕೇಶ್, ಮಹಿಳಾ ಮೀಸಲು ಮಂಜುಳ.ಜಿ ಅವರು ಆಯ್ಕೆಯಾದರು. ಮುಖ್ಯ ಪ್ರವರ್ತಕ ನರಸಿಂಹರಾಜು ಅವರ ನೇತೃತ್ವದಲ್ಲಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ ನಡೆಯಿತು.

ಯುವ ಜನ ಕಲೆ, ಸಂಸ್ಕೃತಿ ಮೈಗೂಡಿಸಿಕೊಳ್ಳಲಿ

ಮೈಸೂರು: ಕಲೆ ಎಲ್ಲರಿಗೂ ಒಲಿದು ಬರುವುದಿಲ್ಲ, ಕೆಲವರಿಗೆ ಮಾತ್ರ ಒಲಿದು ಬರುತ್ತದೆ. ಕಲೆ ಮತ್ತು ಸಂಸ್ಕೃತಿ ಮೈಗೂಡಿಸಿಕೊಂಡರೆ ತಮ್ಮ ಬದುಕನ್ನು ಸುಂದರವಾಗಿ ಕಟ್ಟಿಕೊಡುವ ಶಕ್ತಿ ಕಲೆಗೆ ಇದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ. ರಂಗೇಗೌಡ ಹೇಳಿದರು.

ಜಿಲ್ಲಾಡಳಿತ , ಕನ್ನಡ ಮತ್ತು ಸಂಸ್ಕೃತ ಇಲಾಖೆ, ಮೈಸೂರು ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಡಿ ವಿದ್ಯಾರ್ಥಿಗಳ ನಿಲಯಗಳ ವಿದ್ಯಾರ್ಥಿಗಳಿಗೆ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ಕಲಾ ತರಬೇತಿ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಗೀತ ನಾಟಕ, ಕ್ರೀಡೆ, ಇವುಗಳಿಗೆ ಯಾವುದೇ ಜಾತಿ ಬೇದ ಇಲ್ಲ, ಧರ್ಮಾತೀತವಾಗಿ ಎಲ್ಲವನ್ನು ಮೀರಿ ಬೆಳೆದು ಬಂದಿರುವಂತಹದ್ದು. ಈ ಕಲೆಯನ್ನು ಓದುವ ಜತೆಯಲ್ಲಿ ಕಲೆಯನ್ನು ಮೈಗೂಡಿಸಿಕೊಳ್ಳಿ. ಬಾಲ್ಯದಿಂದ ಪ್ರೌಢ ವ್ಯವಸ್ಥೆಗೆ ಬರುವ ಮಕ್ಕಳು ಮನಸ್ಸನ್ನು ಬೇರೆ ಕಡೆ ಚಂಚಲಗೊಳಿಸದೆ ಓದಿನ ಕಡೆ ಕೇಂದ್ರೀಕರಿಸಬೇಕು ಯಾವುದೇ ಆಕರ್ಷಣೆಗೆ ಒಳಗಾಗಬೇಡಿ. ಒಳ್ಳೆಯ ಸಂಸ್ಕಾರ, ಸಂಸ್ಕೃತಿಯನ್ನು ಪ್ರತಿಯೊಂದು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಕೊಳ್ಳಬೇಕು ಎಂದು ಹೇಳಿದರು.



ಜಿಲ್ಲಾಡಳಿತ , ಕನ್ನಡ ಮತ್ತು ಸಂಸ್ಕೃತ ಇಲಾಖೆ, ಮೈಸೂರು ವತಿಯಿಂದ ಕಲಾ ತರಬೇತಿ ಸಮಾರೋಪ ಸಮಾರಂಭವನ್ನು ಆಯೋಜಿಸಲಾಯಿತು.

ತರಬೇತುದಾರ ದೇವನಂದ ವರಪ್ರಸಾದ್ ಮಾತನಾಡಿ, ಜಾನಪದ ಕಲೆಯು ಒಬ್ಬರಿಂದ ಒಬ್ಬರು ಕೇಳಿ ಹಾಡುವುದರ ಮೂಲಕ ಬೆಳೆದು ಬಂದಿದೆ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕಲೆಯ ಬಗ್ಗೆ ತರಬೇತಿ ನೀಡಲು ಇಲಾಖೆಗಳು ಉತ್ತಮ ಕಾರ್ಯಕ್ರಮ ಆಯೋಜಿಸಿದ್ದು, ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಹಾಸ್ಟಲ್ ವಿದ್ಯಾರ್ಥಿಗಳಿಗೆ ಸರಿಯಾದ ತರಬೇತಿ ಸಿಕ್ಕರೆ ಮಕ್ಕಳು ಮುಂದೆ ಬೆಳೆಯುತ್ತಾರೆ. ಕಲಾ ತರಬೇತಿಯಂತಹ ಕಾರ್ಯಕ್ರಮಗಳನ್ನು ಸದುಪಯೋಗ ಮಾಡಿಕೊಂಡರೆ ಜೀವನದಲ್ಲಿ ಮುಂದೆ ಬರಲು ಸಹಾಯಕ ಆಗಲಿದೆ ಕಲೆಗಳನ್ನು ಕಲಿತಾಗ ತನ್ನಲ್ಲಿನ ಚೈತನ್ಯ ಹೊರ ಬರುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್, ನಿಲಯಪಾಲಕಿ ಮೋಹನ ಕುಮಾರಿ ಉಪಸ್ಥಿತರಿದ್ದರು.

ಕೆನರಾ ಬ್ಯಾಂಕ್ Canara Bank
ಸಿಂಡಿಕೇಟ್‌ಬ್ಯಾಂಕ್ SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 13.03.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಹೇಗಿದೆಯೋ ಹಾಗೆ", "ಏನಿದೆಯೊ ಹಾಗೆ", ಏನೇ ಇದ್ದರೂ",** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 3,64,05,902 (ರೂಪಾಯಿ ಮೂರು ಕೋಟಿ ಅರವತ್ತನಾಲ್ಕು ಲಕ್ಷದ ಐದು ಸಾವಿರದ ಒಂಭೈನೂರ ಎರಡು ಮಾತ್ರ) ದಿನಾಂಕ: 18.02.2026 ರಂತೆ** ಜೊತೆಗೆ ಹೆಚ್ಚಿನ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಮೆ॥ ದೊಡ್ಮನೆ ಪೌಲ್ಟ್ರಿ ಫಾರಂ. ಮಾಲೀಕರು: ಶ್ರೀ ರವಿ ಕುಮಾರ್ ಎಸ್.** ಸಿ. ಬಿನ್ ಲೇಟ್ ಎಸ್ ಎನ್ ಚೌಡಪ್ಪ, 72, ಶೆಟ್ಟಿಹಳ್ಳಿ ಗ್ರಾಮ, ಹೊಸಕೋಟೆ, ನಂಬಿಹಳ್ಳಿ ಅಂಚೆ, ಶ್ರೀನಿವಾಸಪುರ ತಾಲ್ಲೂಕು-563135, ಕೋಲಾರ ಜಿಲ್ಲೆ, ಕರ್ನಾಟಕ. **(2) ಮೆ॥ ದೊಡ್ಮನೆ ಪೌಲ್ಟ್ರಿ ಫಾರ್ಮ್ ಮಾಲೀಕರು: ಶ್ರೀ ರವಿ ಕುಮಾರ್ ಎಸ್.** ಸಿ, ಚಿಕ್ಕಬೊಮ್ಮನಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ-563125. **(3) ಶ್ರೀ ರವಿ ಕುಮಾರ್ ಎಸ್.**ಸಿ. ಬಿನ್ ಲೇಟ್ ಎಸ್ ಎನ್ ಚೌಡಪ್ಪ, ಶೆಟ್ಟಿಹಳ್ಳಿ ಗ್ರಾಮ, ನಂಬಿಹಳ್ಳಿ ಪೋಸ್ಟ್, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ ತಾಲ್ಲೂಕು-563135, ಕೋಲಾರ ಜಿಲ್ಲೆ, ಕರ್ನಾಟಕ. **(4) ಶ್ರೀ ನಾರಾಯಣಮೂರ್ತಿ ಎಸ್** ಸಿ ಬಿನ್ ಲೇಟ್ ಎಸ್ ಎನ್ ಚೌಡಪ್ಪ, ಶೆಟ್ಟಿಹಳ್ಳಿ ಗ್ರಾಮ, ನಂಬಿಹಳ್ಳಿ ಅಂಚೆ, ಶ್ರೀನಿವಾಸಪುರ ತಾಲ್ಲೂಕು-563135, ಕೋಲಾರ ಜಿಲ್ಲೆ. ಕರ್ನಾಟಕ. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 12.03.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಕಮರ್ಷಿಯಲ್ ಭೂಮಿ ಮತ್ತು ಕಟ್ಟಡದ (ಶ್ರೀ. ಎಸ್ ಸಿ ನಾರಾಯಣ ಮೂರ್ತಿ ಬಿನ್ ಲೇಟ್ ಚೌಡಪ್ಪ, ಶೆಟ್ಟಿಹಳ್ಳಿ ಗ್ರಾಮ, ನಂಬಿಹಳ್ಳಿ ಪೋಸ್ಟ್, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇವರ ಹೆಸರಿನಲ್ಲಿದೆ) ವಿಸ್ತೀರ್ಣ ಪಿಐಡಿ ನಂ.17-1-2-129ಸಿ, ಹೊಸ ಖಾತಾ ನಂ.404/379 ಮತ್ತು ಹಳೆ ಖಾತಾ ನಂ.74-76/57, 3335/165 ಮತ್ತು 379/351. (1) ಪೂರ್ವದಿಂದ ಪಶ್ಚಿಮಕ್ಕೆ : 5.410211 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 7.528575 ಮೀಟರ್, (2) ಪೂರ್ವದಿಂದ ಪಶ್ಚಿಮಕ್ಕೆ : 4.419609 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 6.553213 ಮೀಟರ್‌ಗಳು, (3) ಪೂರ್ವದಿಂದ ಪಶ್ಚಿಮಕ್ಕೆ : 3.627127 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.814580 ಮೀಟರ್‌ಗಳು, (4) ಪೂರ್ವದಿಂದ ಪಶ್ಚಿಮಕ್ಕೆ : 2.286005 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 6.644653 ಮೀಟರ್‌ಗಳು, (5) ಪೂರ್ವದಿಂದ ಪಶ್ಚಿಮಕ್ಕೆ : 9.601219 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : *(4.968250 + 3.657607)/2 ಮೀಟರ್‌ಗಳು, ಒಟ್ಟು ವಿಸ್ತೀರ್ಣ 161.89183880 ಚದರ ಮೀಟರ್‌ಗಳು ಇದರಲ್ಲಿ 161.837026 ಚದರ ಮೀಟರ್‌ಗಳು ಅಂದರೆ 1741.92 ಚದರ ಅಡಿ ಕಟ್ಟಡವನ್ನೊಳಗೊಂಡಿದೆ. ಸ್ಥಳ: ಪ್ರಸ್ತುತ 129ಸಿ, ಬಾಲಾಜಿ ಡಿಲಕ್ಸ್ ಲಾಡ್ಜ್ ಹತ್ತಿರ, ಎಂ ಜಿ ರಸ್ತೆ, ಬ್ಲಾಕ್ ನಂ:1, ವಾರ್ಡ್ ನಂ.17, ಚೌಡರೆಡ್ಡಿ ಪಾಳ್ಯ (ಸೊಣ್ಣಶೆಟ್ಟಿಹಳ್ಳಿ) ಚಿಂತಾಮಣಿ ಟೌನ್, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಗೋಪಾಲಯ್ಯರವರ ಆಸ್ತಿ, ಪಶ್ಚಿಮಕ್ಕೆ: 6 ಅಡಿ ಸಾಮಾನ್ಯ ಪ್ಯಾಸೇಜ್ ಮತ್ತು ಅಂಜನಪ್ಪರವರ ನಂ.1, 2, 5, 6, 7, 8, 9, 10, 11, ಉತ್ತರಕ್ಕೆ: ಶಿಗಕುಲ ನಾರಾಯಣಶೆಟ್ಟಿ ರೈಸ್ ಮಿಲ್, ದಕ್ಷಿಣಕ್ಕೆ : ಶ್ರೀನಿವಾಸಪುರ ಮುಖ್ಯರಸ್ತೆ. **Coordinates of the property Latitude- 13.400055N, Longitude- 78.057610E**	₹. 240.00	₹. 24.00	₹. 1.00	10.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **080-25310066, 9483544116, 9966397756, e-mail: cb2366@canarabank.com** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 21.02.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೊಡಿಯಾಲ ಶಾಖೆ (08039) ಬಜಾರ್ ರಸ್ತೆ, ಕೊಡಿಯಾಲ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ-571415 E-mail: sbi.08039@sbi.co.in

ನಿಯಮ 8(1) ಸ್ವಾಧೀನದ ಸೂಚನೆ (ಸ್ಥಿರಾಸ್ಥಿಗಳಿಗಾಗಿ)

ಈ ಕೆಳಗಿನ ಸಹಿದಾರರು ಭಾರತೀಯ ಸ್ಟೇಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ಪ್ರಧಾನ ಮಾಡಿದ ಅಧಿಕಾರವನ್ನು ಕಲಂ 13(12) ಆಕ್ಟ್ ಅಡಿಯಲ್ಲಿ ನಿಯಮ 9ರಂತೆ ಜೊತೆಗೆ ಸೆಕ್ಯುರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ (54ರ 2002) ಕಾಯಿದೆಯಡಿಯಲ್ಲಿ ಅಧಿಕಾರ ಚಲಾಯಿಸಿ ಆ ನೋಟೀಸ್ ತಲುಪಿದ 60 ದಿನಗಳೊಳಗಾಗಿ ಪಾವತಿಸಲು ಕೋರಲಾಗಿದೆ.
ಈ ಕೆಳಕಂಡ ಸಾಲಗಾರರು ಹಣ ಪಾವತಿ ಮಾಡಲು ವಿಫಲರಾಗಿರುವುದರಿಂದ, ನೋಟೀಸ್ ಅನ್ನು ನಿಮಗೂ ಹಾಗೂ ಸಾರ್ವಜನಿಕರಿಗೂ ನೀಡಿದ್ದು, ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಶನ್ ಕಾಯ್ದೆಯ 13(4) ಹಾಗು 9ನೇ ನಿಯಮದಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ತಿರಾಸ್ಥಿ ಸ್ವತ್ತನ್ನು ಬ್ಯಾಂಕ್ ತನ್ನ ವಶಕ್ಕೆ / ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿರುತ್ತಾರೆ. ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಸುವುದೇನೆಂದರೆ ಸ್ಥಿರಾಸ್ತಿ ಸ್ವತ್ತು ಕುರಿತಾದ ಯಾವುದೇ ವ್ಯವಹಾರವನ್ನು ಮಾಡಬಾರದಾಗಿ ಎಚ್ಚರಿಸಲಾಗುತ್ತದೆ. ಮತ್ತು ಸ್ಥಿರಾಸ್ತಿ ಸ್ವತ್ತಿನ ಮೇಲೆ ಯಾವುದೇ ವ್ಯವಹಾರವನ್ನು ಮಾಡಿದರೆ ಭಾರತೀಯ ಸ್ಟೇಟ್ ಬ್ಯಾಂಕ್ ನಿಮಿತಕ್ಕೆ ಒಳಪಡುತ್ತದೆ.
ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಈ ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಷನ್ ಕಾಯ್ದೆಯ ಉಪವಿಭಾಗ (8) ಹಾಗೂ 13ರ ಕಾಯಿದೆಯಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತನ್ನು ಸ್ವಾಧಿನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ತಿಳಿಸುತ್ತಿದ್ದಾರೆ.

- **ಡಿಮ್ಯಾಂಡ್ ನೋಟಿಸ್‌ನ ದಿನಾಂಕ:** 30.09.2025 • **ಸ್ವಾಧೀನ ಪಡೆದುಕೊಂಡ ದಿನಾಂಕ:** 17.02.2026
- **ಒಟ್ಟು ಸಾಲದ ಮೊತ್ತ:** ರೂ. 13,19,197/- (ಹದಿಮೂರು ಲಕ್ಷದ ಹತ್ತೊಂಬತ್ತು ಸಾವಿರದ ನೂರ ತೊಂಬತ್ತೇಳು ರೂಪಾಯಿಗಳು ಮಾತ್ರ) ದಿನಾಂಕ 02-02-2026 ರವರಗೆ+ನಂತರದ ಬಡ್ಡಿ ಹಾಗೂ ಇತರೆ ಶುಲ್ಕಗಳು.
- **ಸಾಲಗಾರರ ಹೆಸರು ಮತ್ತು ವಿಳಾಸ:** ವೈ.ಡಿ. ಕಾವ್ಯ W/o ಚಂದನ್ ಎಸ್., ನಂ. 195, ಬನ್ನಹಳ್ಳಿ ರಸ್ತೆ, ದೊಡ್ಡ ಹಾರೋಹಳ್ಳಿ ಗ್ರಾಮ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ-571415 ಹಾಗೂ ಖಾತಾ ಸಂಖ್ಯೆ 50/1, 50/2, 51/1, ವೈ.ಯರಹಳ್ಳಿ ಗ್ರಾಮ, ಯಲಿಯೂರು ಗ್ರಾಮ ಪಂಚಾಯತಿ, ಕೊತ್ತತ್ತಿ ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ-571402.
- **ಅಡಮಾನವಿಟ್ಟ ಆಸ್ತಿಯ ವಿವರಗಳು:** ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಯಲಿಯೂರು ಗ್ರಾಮ ಪಂಚಾಯತಿ ಖಾತಾ ಸಂಖ್ಯೆ 50/1, 50/2, 51/1, PID ಸಂಖ್ಯೆ 152100408800200067, ಒಟ್ಟು 308.90 ಚ.ಮೀ., ವಿಳಾಸ: ವೈ.ಯರಹಳ್ಳಿ ಗ್ರಾಮ, ಯಲಿಯೂರು ಗ್ರಾಮ ಪಂಚಾಯತಿ, ಕೊತ್ತತ್ತಿ ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ ವೈ.ಡಿ. ಕಾವ್ಯ W/o ಚಂದನ್ ಎಸ್.ರವರ ಹೆಸರಿನಲ್ಲಿ ಪೂರ್ವಕ್ಕೆ: ಕುಂಡಪ್ಪ ಮತ್ತು ಕಾಳೇಗೌಡರವರ ಆಸ್ತಿ, ಪಶ್ಚಿಮಕ್ಕೆ: ಚನ್ನೇಗೌಡರವರ ಆಸ್ತಿ, ಉತ್ತರಕ್ಕೆ: ದೇವೇಗೌಡರವರ ಆಸ್ತಿ, ದಕ್ಷಿಣಕ್ಕೆ: ಕಾಳೇಗೌಡರವರ ಆಸ್ತಿ ಮತ್ತು ರಸ್ತೆ.

ದಿನಾಂಕ: 22.02.2026 ಸಹಿ/- ಅಧಿಕೃತ ಅಧಿಕಾರಿ
ಸ್ಥಳ: ಕೊಡಿಯಾಲ ಭಾರತೀಯ ಸ್ಟೇಟ್ ಬ್ಯಾಂಕ್, (SARFAESI ಕಾಯಿದೆ-2002 ಅಡಿಯಲ್ಲಿ)

ಟೊಯೋಟಾಗೆ ಸಾಮಾಜಿಕ ಜವಾಬ್ದಾರಿ ಪ್ರಶಸ್ತಿ

ರಾಮನಗರ: ಟೊಯೊಟಾ ಕಿರ್ಲೋಸ್ಕರ್ ಮೋಟಾರ್(ಟಿಕೆಎಂ) ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಗಾಗಿ (ಜಿಪಿಎಸಿ ಎಸ್‌ಆರ್) ಪ್ರತಿಷ್ಠಿತ ಗೋಲ್ಡನ್ ಪೀಕಾಕ್ ಪ್ರಶಸ್ತಿ 2025 ಅನ್ನು ಪಡೆದಿದೆ.

ಮುಂಬೈನ ಹೋಟೆಲ್ ತಾಜ್ ಲ್ಯಾಂಡ್ಸ್ ಎಂಡ್‌ನಲ್ಲಿ ನಡೆದ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕುರಿತ 20 ನೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಯುಕೆಯ ಯಾರ್ಕ್ ವಿಶ್ವವಿದ್ಯಾಲಯದ ಉಪಕುಲಪತಿ ಮತ್ತು ಅಧ್ಯಕ್ಷ ಪ್ರೊ. ಚಾರ್ಲಿ ಜೆಫ್ರಿ ಅವರು ಈ ಪ್ರಶಸ್ತಿಯನ್ನು ನೀಡಿದರು.

ಪ್ರಶಸ್ತಿಯನ್ನು ಸ್ವೀಕರಿಸಿದ ಬಗ್ಗೆ ಸಂತಸ ವ್ಯಕ್ತಪಡಿಸಿದ ಟೊಯೊಟಾ ಕಿರ್ಲೋಸ್ಕರ್ ಮೋಟಾರ್‌ನ ಕಾರ್ಪೊರೇಟ್ ವ್ಯವಹಾರಗಳು ಮತ್ತು ಆಡಳಿತದ ದೇಶದ ಮುಖ್ಯಸ್ಥರು ಮತ್ತು ಕಾರ್ಯನಿರ್ವಾಹಕ ಉಪಾಧ್ಯಕ್ಷ ವಿಕ್ರಮ್ ಗುಲಾಟಿ, ನಮ್ಮ ಸುಸ್ಥಿರವಾದ ಮತ್ತು ಅರ್ಥಪೂರ್ಣವಾದ ಸಿಎಸ್‌ಆರ್‌ಸಕ್ರಿಯಗೊಳಿಸುವಿಕೆಗಾಗಿ ಗೋಲ್ಡನ್ ಪೀಕಾಕ್ ಪ್ರಶಸ್ತಿಯನ್ನು ಸ್ವೀಕರಿಸುವುದು ನಮಗೆ ಸಂದ ಗೌರವವಾಗಿದೆ. ಸಾಮಾಜಿಕ ಜವಾಬ್ದಾರಿಗೆ ಬದ್ಧತೆಯು ನಮ್ಮ ಕಾರ್ಪೊರೇಟ್ ಸಿದ್ದಾಂತದ ಅವಿಭಾಜ್ಯ ಅಂಗವಾಗಿದ್ದು, ಇದು ಸಮುದಾಯ ಉಪಕ್ರಮಗಳ ವಿನ್ಯಾಸ ಮತ್ತು ಕಾರ್ಯಗತ ಗೊಳಿಸುವಿಕೆಯನ್ನು ರೂಪಿಸುತ್ತದೆ ಎಂದರು.

ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಯುಕೆಯ ಯಾರ್ಕ್ ವಿವಿ ಉಪಕುಲಪತಿ ಮತ್ತು ಅಧ್ಯಕ್ಷ ಪ್ರೊ.ಚಾರ್ಲಿ ಜೆಫ್ರಿ ಅವರು ಟೊಯೊಟಾಗೆ ಗೋಲ್ಡನ್ ಪೀಕಾಕ್ ಪ್ರಶಸ್ತಿ ನೀಡಿದರು.

2001 ರಿಂದ, ಟಿಕೆಎಂ ಶಿಕ್ಷಣ, ಪರಿಸರ, ರಸ್ತೆ ಸುರಕ್ಷತೆ, ಕೌಶಲ್ಯ ಅಭಿವೃದ್ಧಿ, ಆರೋಗ್ಯ ಮತ್ತು ನೈರ್ಮಲ್ಯ ಮತ್ತು ವಿಪತ್ತು ನಿರ್ವಹಣೆ ಯಾದ್ಯಂತ ಸಮುದಾಯಗಳ ಬೆಳವಣಿಗೆಗೆ ಬದ್ಧವಾಗಿದೆ. ಇದರ ಸಿಎಸ್‌ಆರ್‌ನ ಸ್ಥಳೀಯ ಸವಾಲುಗಳನ್ನು ಪರಿಹರಿಸುವ ಮತ್ತು ಅರ್ಥಪೂರ್ಣ ಸಾಮಾಜಿಕ -ಆರ್ಥಿಕ ಪರಿಣಾಮಗಳನ್ನು ಸೃಷ್ಟಿಸುವ ಅಗತ್ಯ-ಆಧಾರಿತ ಉಪಕ್ರಮಗಳ ಮೇಲೆ ಬೆಳಕು ಚೆಲ್ಲುತ್ತದೆ.

ಅದರ 'ಚೈಲ್ಡ್ ಟು ಕಮ್ಯುನಿಟಿ' ವಿಧಾನದಿಂದ ಮಾರ್ಗ ದರ್ಶಿಸಲ್ಪಟ್ಟ ಕಂಪನಿಯು ಆರೋಗ್ಯ ರಕ್ಷಣೆ ಮತ್ತು ಶಿಕ್ಷಣದಲ್ಲಿ ಅಂತರ್ಗತ ಮಧ್ಯಸ್ಥಿಕೆಗಳನ್ನು ಜಾರಿಗೆ ತರುತ್ತಿದ್ದು ಅದು ಸಮುದಾಯಗಳಿಗೆ ದೀರ್ಘ ಕಾಲೀನ ಪ್ರಯೋಜನಗಳನ್ನು ನೀಡುತ್ತ ದೆ. ಸ್ಥಾಪಿತ ಉತ್ಪಾದನಾ ಸಾಮರ್ಥ್ಯ 1,32,000 ಯುನಿಟ್ ಗಳವರೆಗೆ ಟಿಕೆಎಂ 2 ನೇ ಸ್ಥಾವರದ ಅವಲೋಕನ: ಉತ್ಪಾದನೆಯ ಪ್ರಾರಂಭ ಡಿಸೆಂಬರ್ 2010 ಸ್ಥಾನ ಟೊಯೊಟಾ ಕಿರ್ಲೋಸ್ಕರ್‌ಮೋಟಾರ್ ಪ್ರೈವೇಟ್ ಲಿಮಿಟೆಡ್, ಬಿಡದಿಯ ಸೈಟ್ ನಲ್ಲಿ ಉತ್ಪನ್ನಗಳು ಕ್ಯಾಮ್ರಿ ಹೈಬ್ರಿಡ್, ಅರ್ಬನ್ ಕ್ರೂಸರ್ ಹೈರೈಡರ್, ಹಿಲಕ್ಸ್ ಸ್ಥಾಪಿತ ಉತ್ಪಾದನಾ ಸಾಮರ್ಥ್ಯ 2,10,000 ಯುನಿಟ್ ಗಳವರೆಗೆ ಹಾಗೂ ಇತರ ಟೊಯೊಟಾ ಮಾಡೆಲ್‌ಗಳು: ಗ್ಲಾಂಜಾ, ರೂಮಿಯನ್, ಅರ್ಬನ್ ಕ್ರೂಸರ್‌ಟೈಸರ್ ಸಿಬಿಯು ಆಗಿ ಆಮದು ಮಾಡಿಕೊಳ್ಳಲಾಗಿದೆ.

ಸಮಾಚಾರ ಸಣ್ಣದಲ್ಲ

ದ್ವಿತೀಯ ಪಿಯುಸಿ ಪರೀಕ್ಷೆ: ಸಹಾಯವಾಣಿ

ಚಾಮರಾಜನಗರ: ಚಾಮರಾಜನಗರ ಜಿಲ್ಲಾಡಳಿತವು 2026ರ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗಾಗಿ ಸಹಾಯವಾಣಿ ತೆರೆದಿದ್ದು, ಮಾಹಿತಿ ನೀಡುವ ಉದ್ದೇಶದಿಂದ ಪ್ರಾಂಶುಪಾಲರು ಹಾಗೂ ಉಪನ್ಯಾಸಕರನ್ನು ನಿಯೋಜಿಸಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಾಣಿಜ್ಯ, ವಿಜ್ಞಾನ ಮತ್ತು ಕಲಾ ವಿಭಾಗಗಳ ವಿದ್ಯಾರ್ಥಿಗಳಿಗೆ ಸಹಾಯವಾಣಿ ಲಭ್ಯವಿದ್ದು, ನುರಿತ ಪ್ರಾಂಶುಪಾಲರು, ಉಪನ್ಯಾಸಕರನ್ನು ನಿಯೋಜಿಸಲಾಗಿದೆ. ವಿದ್ಯಾರ್ಥಿಗಳು ಪರೀಕ್ಷೆಗೆ ಸಂಬಂಧಿಸಿದ ಯಾವುದೇ ಸಂದೇಹ ಸ್ಪಷ್ಟೀಕರಣಕ್ಕೆ ಸಂಬಂಧಿಸಿದ ವಿಷಯದ ಉಪನ್ಯಾಸಕರನ್ನು ಸಂಪರ್ಕಿಸಬಹುದು. ಉಪನ್ಯಾಸಕರು ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಮಾರ್ಗದರ್ಶನ ಮಾಡಲಿದ್ದಾರೆ. ಪ್ರಾಂಶುಪಾಲರಾದ ಮಿನಿ ಜಾರ್ಜ್, ರಸಾಯನಶಾಸ್ತ್ರ (ಮೊ.ಸಂ 94494 90034), ಉಪನ್ಯಾಸಕರಾದ ಜಿ. ಷಡಕ್ಷರಸ್ವಾಮಿ, ಭೌತಶಾಸ್ತ್ರ (ಮೊ.ಸಂ 9964797989), ಉಪನ್ಯಾಸಕರಾದ ಕೆ. ಪೂರ್ಣಿಮ, ಜೀವಶಾಸ್ತ್ರ (ಮೊ.ಸಂ 82170 84174), ಉಪನ್ಯಾಸಕರಾದ ಪಿ. ನಟರಾಜು, ರಸಾಯನಶಾಸ್ತ್ರ (ಮೊ.ಸಂ 9886591048), ಉಪನ್ಯಾಸಕರಾದ ಎಸ್. ಪ್ರಭುಸ್ವಾಮಿ ಗಣಿತಶಾಸ್ತ್ರ (ಮೊ.ಸಂ 944889 3161), ಉಪನ್ಯಾಸಕರಾದ ಪುಟ್ಟಸ್ವಾಮಿ, ಅರ್ಥಶಾಸ್ತ್ರ (ಮೊ.ಸಂ 9113599305), ಉಪನ್ಯಾಸಕರಾದ ಪ್ರಭುಸ್ವಾಮಿ ಆಂಗ್ಲಭಾಷಾ (ಮೊ.ಸಂ 8310641652), ಉಪನ್ಯಾಸಕರಾದ ಪಿ. ಶಿವಸ್ವಾಮಿ ರಾಜಕೀಯ ವಿಜ್ಞಾನ (ಮೊ.ಸಂ 7892454589), ಉಪನ್ಯಾಸಕರಾದ ಎನ್. ಮಲ್ಲರಾಜು ಇತಿಹಾಸ (ಮೊ.ಸಂ 9743652370) ಅವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದ್ದಾರೆ.

ಮನೆಗೊಂದು ಗ್ರಂಥಾಲಯ ಯೋಜನೆ ಜಾರಿ

ಚಾಮರಾಜನಗರ: ಪುಸ್ತಕ ಎಂಬುದು ಸಂಸ್ಕೃತಿಯಾಗಿ ಮನೆ ಮನೆಯ ಜ್ಞಾನದ ಸಂಪತ್ತಾಗಿ ಅಸ್ತಿತ್ವ ಕಾಪಾಡಿಕೊಳ್ಳಬೇಕೆಂಬ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಕನಿಷ್ಠ 1 ಲಕ್ಷ ಮನೆಗಳಲ್ಲಿ ಮನೆಗೊಂದು ಗ್ರಂಥಾಲಯ ಯೋಜನೆಯನ್ನು ಜಾರಿಗೆ ತಂದಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ಅವರು ತಿಳಿಸಿದರು. ನಗರದ ರೋಟರಿ ಭವನದ ಸಭಾಂಗಣದಲ್ಲಿಂದು ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ರೋಟರಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಯೋಜನೆ 'ಮನೆಗೊಂದು ಗ್ರಂಥಾಲಯ' ಕರಪತ್ರ ಬಿಡುಗಡೆ ಹಾಗೂ ಪ್ರಾಧಿಕಾರದ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರಿಗೆ ನೇಮಕಾತಿ ಪತ್ರ ವಿತರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಮನೆಗೊಂದು ಗ್ರಂಥಾಲಯವು ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಅಸ್ತಿತ್ವಕ್ಕೆ ತರುವ ಗುರಿಯೊಂದಿಗೆ ಕಾರ್ಯೋನ್ಮುಖರಾಗಿದ್ದೇವೆ ಎಂದರು. ಸಾಹಿತಿಗಳು, ದೀನಬಂಧು ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಪ್ರೊ. ಜಿ.ಎಸ್. ಜಯದೇವ ಅವರು ಮಾತನಾಡಿದರು. ಜೆ.ಎಸ್.ಎಸ್. ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ. ಎನ್. ಮಹದೇವಸ್ವಾಮಿ, ರೋಟರಿ ಸಂಸ್ಥೆ ಅಧ್ಯಕ್ಷರಾದ ಕಾಗಲವಾಡಿ ಚಂದ್ರು, ಮನೆಗೊಂದು ಗ್ರಂಥಾಲಯ ಜಾಗೃತಿ ಸಮಿತಿಯ ಸಂಚಾಲಕ ಸಿ.ಎಂ. ನರಸಿಂಹಮೂರ್ತಿ, ಸದಸ್ಯ ಮೂಕಳ್ಳಿ ಬಸವಣ್ಣ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಫ್ಲೆಕ್ಸ್ ತೆರವಿಗೆ ಮನವಿ ಸಲ್ಲಿಕೆ

ಮೈಸೂರು: ಮೈಸೂರು ನಗರದಲ್ಲಿ ಮಿತಿಮೀರಿರುವ ಫ್ಲೆಕ್ಸ್ ಹಾವಳಿ ಮತ್ತು ಅವೈಜ್ಞಾನಿಕ ಜಾಹಿರಾತು ಫಲಕಗಳನ್ನು ತೆರವುಗೊಳಿಸುವಂತೆ ಪಾಲಿಕೆ ಆಯುಕ್ತರಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು. ಬಳಿಕ ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಪ್ರತಾಪ್‌ಸಿಂಹ, ಮೈಸೂರಿನಲ್ಲಿ ಇತ್ತೀಚೆಗೆ ಫ್ಲೆಕ್ಸ್‌ಗಳ ಅಳವಡಿಕೆ ಹೆಚ್ಚಾಗಿದೆ. ಪರಿಣಾಮ, ಪ್ರಮುಖ ರಸ್ತೆಗಳಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಅಪಘಾತಗಳಿಗೂ ಕಾರಣವಾಗುತ್ತಿದೆ. ಹಾಗಾಗಿ ಫ್ಲೆಕ್ಸ್‌ಗಳ ಅಳವಡಿಕೆಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು. ಮೈಸೂರಿನಲ್ಲಿ ಬೆಟ್ಟದ ರೀತಿ ಸಂಗ್ರಹವಾಗಿದ್ದ ಸಾವಿರಾರು ಟನ್ ಕಸದ ತೆರವು ಕಾರ್ಯಾಚರಣೆ ಯಶಸ್ಸು ಪ್ರಧಾನಿ ನರೇಂದ್ರ ಮೋದಿ ಸರಕಾರಕ್ಕೆ ಸಲ್ಲಬೇಕು. ಹತ್ತಾರು ವರ್ಷಗಳ ಕಾಲ ಸಂಗ್ರಹವಾಗಿದ್ದ ಕಸ ತೆರವು ಮಾಡದ ಕಾರಣ ಆ ಭಾಗದ ಜನರು ತುಂಬಾ ತೊಂದರೆ ಅನುಭವಿಸುತ್ತಿದ್ದರು. ಪ್ರತಿಭಟನೆಗಳು ಕೂಡ ನಡೆದಿದ್ದವು. ನಾನು ಸಂಸದನಾಗಿದ್ದ ಅವಧಿಯಲ್ಲಿ ಕೇಂದ್ರ ಸರ್ಕಾರದ ಗಮನಕ್ಕೆ ತಂದ ಕಾರಣ ಅಗತ್ಯ ಅನುದಾನ ಬಿಡುಗಡೆ ಮಾಡಿತು. ಇದೀಗ ಸಾವಿರಾರು ಟನ್ ಕಸ ತೆರವು ಮಾಡುವ ಕಾರ್ಯ ಅಂತಿಮ ಹಂತಕ್ಕೆ ಬಂದಿದೆ. ಮುಂದಿನ ಕೆಲ ದಿನಗಳಲ್ಲಿ ಕಸದ ವಿಲೇವಾರಿ ಪೂರ್ಣಗೊಳ್ಳಲಿದೆ. ಇದು ಕೂಡ ನನ್ನ ಸಾಧನೆಗಳಲ್ಲಿ ಒಂದಾಗಿದೆ ಎಂದರು.

ವಿರಾಮ
ಪ್ರತಿ ಭಾನುವಾರ

{ನಿಖಿಲ್ ಕುಮಾರಸ್ವಾಮಿ} ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ

ರಾಜ್ಯಾದ್ಯಂತ ಜೆಡಿಎಸ್ ಪಕ್ಷ ಸಂಘಟನೆ ದೃಷ್ಟಿಯಿಂದ ಪ್ರವಾಸ ಹಮ್ಮಿಕೊಂಡಿದ್ದು, ತುಮಕೂರು ಜಿಲ್ಲೆ ನನ್ನ ಎರಡನೇ ಹಂತದ ಪ್ರವಾಸವಾಗಿದೆ. ಇನ್ನೂ ಸುಮಾರು ಮೂವತ್ತೆರಡು ವಿಧಾನಸಭಾ ಕ್ಷೇತ್ರಗಳು ಬಾಕಿ ಉಳಿದಿವೆ.

ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಮಾತೃಭಾಷಾ ದಿನಾಚರಣೆ | ಸಿಎನ್‌ಸಿಯಿಂದ ಕೊಡವ ಸತ್ಯಾಗ್ರಹ

ಕೊಡವ ಭಾಷೆ 8ನೇ ಶೆಡ್ಯೂಲ್‌ಗೆ ಸೇರಿಸಬೇಕು

ಮಡಿಕೇರಿ: ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಮಾತೃಭಾಷಾ ದಿನಾಚರಣೆ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಡಿಕೇರಿಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು 'ಕೊಡವ ಸತ್ಯಾಗ್ರಹ' ನಡೆಸಿತು.

ಪ್ರಖ್ಯಾತ ಭಾಷಾ ತಜ್ಞ ಪಂಡಿತ್ ಡಾ. ಸೀತಕಾಂತ್ ಮಹಾಪಾತ್ರ ಆಯೋಗದ ವರದಿಯ ಶಿಫಾರಸ್ಸಿನಂತೆ ಕೊಡವ ತಕ್ ಭಾಷೆಯನ್ನು ಸಂವಿಧಾನದ 8ನೇ ಶೆಡ್ಯೂಲ್ ಗೆ ಸೇರಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಸಿಎನ್ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಮಂಡಿಸಿದರು.

ಕೊಂಕಣಿ ಭಾಷೆಯ ಮಾದರಿಯಲ್ಲಿ ಮತ್ತು ತುಳು ಭಾಷೆಯ ಪ್ರಸ್ತಾವನೆಯಂತೆ, ಸಂವಿಧಾನದ ವಿಧಿ 345 ಮತ್ತು 347 ರ ಅಡಿಯಲ್ಲಿ ಕೊಡವ ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿ ಮಾಡಬೇಕು ಹಾಗೂ ವಿಧಿ 350 ರ ಅಡಿಯಲ್ಲಿ ಆಡಳಿತ ಮತ್ತು ಶಿಕ್ಷಣದಲ್ಲಿ ಜಾರಿಗೆ ತರಬೇಕು.

ಭೌಗೋಳಿಕ ಸ್ವಾಯತ್ತತೆ ಮತ್ತು ಬುಡಕಟ್ಟು ವರ್ಗೀಕರಣ: ಸಂವಿಧಾನದ ವಿಧಿ 244 ಮತ್ತು 371 ರ ಅಡಿಯಲ್ಲಿ 'ಕೊಡವಲ್ಯಾಂಡ್'' ಭೌಗೋಳಿಕ ರಾಜಕೀಯ ಸ್ವಾಯತ್ತತೆಯನ್ನು ನೀಡಬೇಕು. ಅತ್ಯಲ್ಪ ಸಂಖ್ಯೆಯಲ್ಲಿರುವ ಕೊಡವ ಜನಾಂಗಕ್ಕೆ ''ಪರಿಶಿಷ್ಟ ಪಂಗಡ'' ವರ್ಗೀಕರಣವಾಗಬೇಕು ಮತ್ತು ವಿಧಿ 25 ಹಾಗೂ 26ರ ಅಡಿಯಲ್ಲಿ 'ಪವಿತ್ರ ಗನ್'' ಹಕ್ಕನ್ನು ರಕ್ಷಿಸಬೇಕು.

ಕೊಡವರ ನೈಜ ಇತಿಹಾಸವನ್ನು ತಿರುಚಿ ರಾಜ್ಯದ ದಾಖಲೆಗಳಲ್ಲಿ ತಪ್ಪು ಮಾಹಿತಿ ಸೇರಿಸುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. 2027ರ ರಾಷ್ಟ್ರೀಯ ಜನಗಣತಿಯಲ್ಲಿ ಆದಿಮಸಂಜಾತ ಕೊಡವ ಜನಾಂಗಕ್ಕಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಂ ಅನ್ನು ನಿಗದಿಪಡಿಸಬೇಕು. ಕೊಡವ ಜನಾಂಗದ ಅಸ್ತಿತ್ವ ಮತ್ತು ಸ್ವಾಭಿಮಾನದ ರಕ್ಷಣೆಗೆ ಈ ಸಾಂವಿಧಾನಿಕ ಎಣಿಕೆ ಅತ್ಯಗತ್ಯವಾಗಿದೆ.

ಕೊಡವ ಪರ್ವತವಾಸಿ ಬುಡಕಟ್ಟು ಜನಾಂಗವನ್ನು ಕೊಡವ ಪ್ರಾಂತ್ಯದ ಆದಿಮ ಪಂಗಡವೆಂದು ಗುರುತಿಸಬೇಕು ಮತ್ತು ಆದಿಮಸಂಜಾತ ಕೊಡವರನ್ನು ಸಂವಿಧಾನದ ಬುಡಕಟ್ಟು ಪಟ್ಟಿಯಲ್ಲಿ ವರ್ಗೀಕರಿಸಬೇಕು. ವಿಶ್ವಸಂಸ್ಥೆಯ ವಿಶ್ವವಿದ್ಯಾಲಯಗಳಲ್ಲಿ 'ಕೊಡವ ಶಾಸ್ತ್ರ'' ಪೀಠವನ್ನು ತೆರೆಯಬೇಕು ಎಂದು ಒತ್ತಾಯಿಸಿದರು.

ಕೊಡವ ಭಾಷೆಯನ್ನು 8ನೇ ಪರಿಚ್ಛೇದಕ್ಕೆ ಸೇರಿಸುವುದರಿಂದ ಕೊಡವ ಸಮುದಾಯಕ್ಕೆ ಕಾನೂನುಬದ್ಧ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪ್ರಯೋಜನಗಳು ದೊರೆಯುತ್ತವೆ. ಕೇಂದ್ರ ಸರಕಾರದಿಂದ ಅಧಿಕೃತವಾಗಿ ಗುರುತಿಸಲ್ಪಡುವ ಮೂಲಕ ಭಾಷೆಯ ಪ್ರತಿಷ್ಠೆ ಹೆಚ್ಚುತ್ತದೆ ಮತ್ತು ಇದನ್ನು ಕೇವಲ ಒಂದು ಉಪಭಾಷೆ ಎಂದು ಪರಿಗಣಿಸುವುದನ್ನು ತಡೆಯುತ್ತದೆ. ಶಾಲಾ ಪಠ್ಯಕ್ರಮದಲ್ಲಿ ಬೋಧನಾ ಮಾಧ್ಯಮವಾಗಿ ಕೊಡವ ಭಾಷೆಯನ್ನು ಪರಿಚಯಿಸಲು ಸುಲಭವಾಗುತ್ತದೆ, ಇದರಿಂದ ಮುಂದಿನ ಪೀಳಿಗೆಗೆ ಭಾಷೆ ವರ್ಗಾವಣೆಯಾಗುತ್ತದೆ.

ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅವರು ಮಡಿಕೇರಿಯಲ್ಲಿ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

> **ಕೊಂಕಣಿ ಭಾಷೆಯ ಮಾದರಿಯಲ್ಲಿ ಮತ್ತು ತುಳು ಭಾಷೆಯ ಪ್ರಸ್ತಾವನೆಯಂತೆ, ಸಂವಿಧಾನದ ವಿಧಿ 345 ಮತ್ತು 347 ರ ಅಡಿಯಲ್ಲಿ ಕೊಡವ ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿ ಮಾಡಬೇಕು ಹಾಗೂ ವಿಧಿ 350 ರ ಅಡಿಯಲ್ಲಿ ಆಡಳಿತ ಮತ್ತು ಶಿಕ್ಷಣದಲ್ಲಿ ಜಾರಿಗೆ ತರಬೇಕು.**
> -ಎನ್.ಯು.ನಾಚಪ್ಪ, ಸಿಎನ್ಸಿ ಅಧ್ಯಕ್ಷ

ಅಧಿಕೃತ ಆಡಳಿತದಲ್ಲಿ ಮತ್ತು ಕಾನೂನು ಸಂದರ್ಭಗಳಲ್ಲಿ ಕೊಡವ ಭಾಷೆಯನ್ನು ಬಳಸಲು ಸಾಧ್ಯವಾಗುತ್ತದೆ. ಕೇಂದ್ರ ಸರ್ಕಾರದ ಧನಸಹಾಯ: ಭಾಷೆಯ ಪ್ರಚಾರ, ಅಭಿವೃದ್ಧಿ ಮತ್ತು ಸಂಶೋಧನೆಗಾಗಿ ಕೇಂದ್ರ ಸರ್ಕಾರದಿಂದ ಹಣಕಾಸಿನ ನೆರವು ದೊರೆಯುತ್ತದೆ. ಸಾಂಸ್ಕೃತಿಕ ಸಂರಕ್ಷಣೆ: ವಿಶಿಷ್ಟ ಪ್ರಾದೇಶಿಕ ಸಂಸ್ಕೃತಿ ಮತ್ತು ಉಪಭಾಷೆಗಳನ್ನು ರಕ್ಷಿಸಲು ಅಭಿವೃದ್ಧಿ ನಿಧಿಯನ್ನು ಒದಗಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ಸಿಗುತ್ತದೆ. ಸಂಸದರು ಹಾಗೂ ಶಾಸಕರು ಸಂಸತ್ತು ಮತ್ತು ವಿಧಾನಸಭೆಯಲ್ಲಿ ತಮ್ಮ ಮಾತೃಭಾಷೆಯಲ್ಲಿ ಮಾತನಾಡಬಹುದು. ಸಂಸತ್ತಿನಲ್ಲಿ ಕೊಡವ ಭಾಷೆಯಲ್ಲಿ ಮಾತನಾಡಲು ಮತ್ತು ಅದರ ಅನುವಾದಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಮಾನ್ಯತೆ ದೊರೆತು ಕೊಡವ ಸಾಹಿತ್ಯದ ಅಭಿವೃದ್ಧಿಗೆ ಪೂರಕವಾಗುತ್ತದೆ. ಯುಪಿಎಸ್ಸಿ ಪರೀಕ್ಷೆಗಳಲ್ಲಿ ಭಾರತೀಯ ಭಾಷಾ ಪತ್ರಿಕೆಯಾಗಿ ಕೊಡವ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಸಿಗಬಹುದು.

ಭಾಷಾ ಅಡೆತಡೆಗಳನ್ನು ನಿವಾರಿಸುವ ಮೂಲಕ ಸರಕಾರ ಮತ್ತು ನಾಗರಿಕರ ನಡುವಿನ ಅಂತರವನ್ನು ಕಡಿಮೆ ಮಾಡಲು ಇದು ಸಹಾಯ ಮಾಡುತ್ತದೆ ಎಂದು ಎನ್.ಯು.ನಾಚಪ್ಪ ಪ್ರತಿಪಾದಿಸಿದರು.

ಸ್ಥಳೀಯ ಕೊಡವ ಜಾನಪದ ಗ್ರಾಮಗಳ ಮತ್ತು ಹಳ್ಳಿಗಳ ಹೆಸರುಗಳನ್ನು ಎಷ್ಟು ವ್ಯವಸ್ಥಿತವಾಗಿ ಕನ್ನಡಕ್ಕೆ ಬದಲಾಯಿಸಿ ವಿರೂಪಗೊಳಿಸಲಾಗಿದೆ ಎಂದು ಆರೋಪಿಸಿದರು.

ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್‌ಅವರ ಮೂಲಕ ಸರಕಾರಕ್ಕೆ ಮನವಿ ಪತ್ರ ಸಲ್ಲಿಸುವ ಸಂದರ್ಭ ಪಟ್ಟಮಾಡ ಲಲಿತಾ ಗಣಪತಿ, ಚೋಳಪಂಡ ಜ್ಯೋತಿ ನಾಣಯ್ಯ, ಲೆಫ್ಟಿನೆಂಟ್ ಕರ್ನಲ್ ನಿವೃತ್ತ ಬಿ. ಎಂ.ಪಾರ್ವತಿ, ಮುದ್ದಿಯಡ ಲೀಲಾವತಿ, ಪಚ್ಚಾರಂಡ ಶಾಂತಿ ಪೊನ್ನಪ್ಪ, ಕಲಿಯಂಡ ಪ್ರಕಾಶ್, ಕುಕ್ಕೇರ ಜಯ ಚಿಣ್ಣಪ್ಪ, ಚಂಬಂಡ ಜನತ್, ಅರೆಯಡ ಗಿರೀಶ್, ಮಂದಪಂಡ ಮನೋಜ್ ಮಂದಣ್ಣ, ಕಿರಿಯಮಾಡ ಶೆರಿನ್, ನಂದಿನೆರವಂಡ ಅಪ್ಪಯ್ಯ, ಪುಟ್ಟಿಚಂಡ ಡಾನ್ ದೇವಯ್ಯ, ಬಡುವಂಡ ವಿಜಯ, ನಂದಿನೇರವಂಡ ವಿಜು, ಮಣವಟ್ಟಿರ ಚಿಣ್ಣಪ್ಪ, ಕೂಪದಿರ ಸಾಬು, ಚೋಳಪಂಡ ನಾಣಯ್ಯ ಹಾಗೂ ಅಜ್ಜಿಕಂಡ ಸನ್ನಿ ಮಾಚಯ್ಯ ಹಾಜರಿದ್ದರು.

ಬಿಸಿಯೂಟ ಸವಿದ ಜಿಪಂ ಸಿಇಒ ನಂದಿನಿ

ನಾಗಮಂಗಲ: ತಾಲೂಕಿನ ಹೊಣಕೆರೆ ಹೋಬಳಿಯ ಚಿಣ್ಯ ಸರಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲೆಗೆ ಭೇಟಿ ನೀಡಿದ ಮಂಡ್ಯ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಂದಿನಿ ರವರು ಮಕ್ಕಳ ಹಾಗೂ ಶಿಕ್ಷಕರ ನಡುವೆ ವಿದ್ಯಾಭ್ಯಾಸದ ಕುರಿತು ಹಾಗೂ ಶಾಲೆಯ ಬಿಸಿಯೂಟದ ವ್ಯವಸ್ಥೆ ಕುರಿತು ಮಾಹಿತಿ ಪಡೆದರು. ಶಾಲಾ ಮಕ್ಕಳೊಂದಿಗೆ ಬಿಸಿಯೂಟವನ್ನು ಸವಿದು ಅವರೊಂದಿಗೆ ಸ್ನೇಹಪೂರ್ವಕವಾಗಿ ಮಾತನಾಡಿದರು.

ಮಕ್ಕಳ ಜೊತೆ ಸಂವಾದ ನಡೆಸಿದ ಸಿ.ಇ.ಒ. ಅವರು, ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಉತ್ತಮ ಅಧ್ಯಯನ ವಾತಾವರಣ ನಿರ್ಮಿಸಿ, ವಿಶೇಷವಾಗಿ ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತರುವ ದಿಸೆಯಲ್ಲಿ ಹೆಚ್ಚಿನ ಗಮನಹರಿಸಬೇಕೆಂದು ಸೂಚಿಸಿದರು.

ಶಾಲೆಯ ಬಿಸಿಯೂಟದ ವ್ಯವಸ್ಥೆಯನ್ನು ಪರಿಶೀಲಿಸಿದ ಅವರು, ವಿದ್ಯಾರ್ಥಿಗಳಿಗೆ ಪೌಷ್ಟಿಕ ಹಾಗೂ ಸ್ವಚ್ಛ ಆಹಾರವನ್ನು ನಿಯಮಿತವಾಗಿ ನೀಡುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡಿದರು. ಶಾಲಾ ಮಕ್ಕಳ ಜೊತೆ ಕೂತು ಮಧ್ಯಾಹ್ನದ ಬಿಸಿಯೂಟ ಸವಿದು ಮಕ್ಕಳ ಖುಷಿಗೆ ಪಾತ್ರರಾದರು. ಶಾಲೆಯಲ್ಲಿ ಹೆಣ್ಣು ಮಕ್ಕಳು ಫಲಿತಾಂಶ ಶೇಕಡಾ 92.6 ರಷ್ಟಿದ್ದು, ಗಂಡು ಮಕ್ಕಳು ಸಹ ಮುಂದಿನ ಒಂದು ತಿಂಗಳೊಳಗೆ ದೀರ್ಘ ಅಭ್ಯಾಸ ನಡೆಸಿ, ಉತ್ತಮ ಅಂಕದೊಂದಿಗೆ ತೇರ್ಗಡೆಯಾಗಬೇಕೆಂದು ತಿಳಿಸಿದರು.

ಹೊಣಕೆರೆ ಹೋಬಳಿಯ ಚಿಣ್ಯ ಸರಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲೆಯಲ್ಲಿ ಮಕ್ಕಳ ಜತೆ ಬಿಸಿಯೂಟವನ್ನು ಜಿಪಂ ಸಿಇಒ ನಂದಿನಿ ಅವರು ಸವಿದರು.

ಈ ಸಂದರ್ಭದಲ್ಲಿ ರವಿಕುಮಾರ – ಶಿಕ್ಷಣಾಧಿಕಾರಿ ಅಕ್ಷರ ದಾಸೋಹ ಮಂಜೇಗೌಡ, ಉಪ ಪ್ರಾಂಶುಪಾಲರಾದ ಫಿರೋಜ್ ಪಾಷಾ, ಶಿಕ್ಷಕರಾದ ಬಸವಗೌಡ, ಶೃತಿ, ಬಸವರಾಜು, ಶ್ರೀಧರ್, ರುದ್ರೇಶ್, ರಿಯಾನ್, ಹರ್‌ಮತ್ ಉನ್ನೀಸಾ ಉಪಸ್ಥಿತರಿದ್ದರು.

ಚಂದಕವಾಡಿಯಲ್ಲಿ ಲಕ್ಷ್ಮೀದೇವಿ ರಥೋತ್ಸವ

ಚಾಮರಾಜನಗರ: ತಾಲೂಕಿನ ಚಂದಕ ವಾಡಿ ಗ್ರಾಮದಲ್ಲಿ ಲಕ್ಷ್ಮೀದೇವಿ ರಥೋತ್ಸವ ಶುಕ್ರವಾರ ಸಡಗರ, ಸಂಭ್ರಮದಿಂದ ನೆರವೇರಿತು. ಗ್ರಾಮದ ದೇವಸ್ಥಾನದ ಮುಂಭಾಗದಲ್ಲಿ ರಥವನ್ನು ತಳಿರು ತೋರಣ ಹಾಗೂ ಬಣ್ಣದ ಬಣ್ಣದ ಬಟ್ಟೆಗಳಿಂದ ಶೃಂಗರಿಸಲಾಯಿತು. ಬಾಳೆಗೊನೆ, ಎಳೆನೀರು, ಹೂವುಗಳನ್ನು ಕಟ್ಟಿದ ಸರ್ವಾಲಂಕೃತ ಲಕ್ಷ್ಮೀದೇವಿ ಉತ್ಸವ ಮೂರ್ತಿಯನ್ನು ರಥದಲ್ಲಿ ಕೂರಿಸಿ ಭಕ್ತಾದಿಗಳ ಜಯಘೋಷಣೆಗಳೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

16 ಹಳ್ಳಿಗಳಲ್ಲಿ ಸಂಭ್ರಮ: ಚಂದಕವಾಡಿ ಗ್ರಾಮವೂ ಸೇರಿದಂತೆ ಕೋಡಿಮೋಳೆ, ದಡದಹಳ್ಳಿ, ಅರಳಿಪುರ, ಬಸವನಪುರ ಕರಿಯನಕಟ್ಟೆ, ಕಣ್ಣೇಗಾಲ, ಹಂಚಿತಾಳಪುರ, ಅಯ್ಯನಪುರ, ಸರಗೂರು, ಬಸಪ್ಪನಪಾಳ್ಯ ಸೇರಿದಂತೆ 16 ಹಳ್ಳಿಗಳ ಜನರು ಶ್ರದ್ಧಾಭಕ್ತಿಯಿಂದ ಲಕ್ಷ್ಮೀದೇವಿ ಜಾತ್ರೆ ಆಚರಿಸಿದರು. ಚಂದಕವಾಗಿ ಸೇರಿದಂತೆ ಸುತ್ತಮುತ್ತಲಿನ

ಹಳ್ಳಿಗಳಿಂದ ಭಕ್ತರು ಭಾಗವಹಿಸಿದ್ದರು. ರಥಕ್ಕೆ ನವದಂಪತಿಗಳು ಹಣ್ಣು, ಧವನ ಎಸೆದು ಇಷ್ಟಾರ್ಥ ಸಿದ್ದಗಾಗಿ ಪ್ರಾರ್ಥಿಸಿದರು. ರಥೋತ್ಸವಕ್ಕೂ ಮುನ್ನಾ ಸತ್ತಿಗೆ ಸೂರಪಾನಿ, ಬಿರುದುಗಳನ್ನು ತೆಗೆದುಕೊಂಡು ಮಂಟೇಸ್ವಾಮಿ ದೇವಸ್ಥಾನಕ್ಕೆ ತಂದು ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಹುಲಿವಾಹನ ಜತೆಗೂಡಿ ಬಿರುದುಗಳನ್ನು ರಥದ ಮುಂಭಾಗ ಬರುತ್ತಿದ್ದಂತೆ ರಥೋತ್ಸವ ಆರಂಭಗೊಂಡಿತು. ಗ್ರಾಮದ ಎತ್ತ ನೋಡಿದರೂ ಜನರ ಕಲರವ ಕಂಡು ಬಂತು. ಎಲ್ಲರ ಮನೆಯಲ್ಲೂ ನೆಂಟರಿಷ್ಟರು ಸಂಭ್ರಮದಿಂದ ಅಡ್ಡಾಡುತ್ತಿದ್ದರು. ಜಾತ್ರೆ ಹಿನ್ನೆಲೆಯಲ್ಲಿ ವ್ಯಾಪಾರ, ವಹಿವಾಟು ಜೋರಾಗಿತ್ತು.

ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಲಕ್ಷ್ಮೀದೇವಿ ರಥೋತ್ಸವ ಸಡಗರ, ಸಂಭ್ರಮದಿಂದ ನೆರವೇರಿತು.

ಬಿಜಿಎಸ್ ವಿದ್ಯಾರ್ಥಿಗಳ ಸಾಧನೆ



ಮೈಸೂರು: ಮೈಸೂರಿನ ಕುವೆಂಪು ನಗರದ ಬಿಜಿಎಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳು 2026ರ ಜೆಇಇ ಮುಖ್ಯ ಪರೀಕ್ಷೆಯಲ್ಲಿ ಅತ್ಯುನ್ನತ ಸಾಧನೆ ಮಾಡಿದ್ದಾರೆ.

ಪ್ರಚೇತ್ ಜೈಶಂಕರ್‌ಮರಾಠ (ಶೇ 99.72), ಆದಿತ್ಯ ಎ.ಕುಲಕರ್ಣಿ (99.23), ಎಂ.ವರ್ಷಾ (99.2), ಎಸ್. ವಿಶ್ವಜಿತ್ (98.46), ಸಿ.ವಿ. ಪ್ರಜನ್ (96.75), ಯೋಗಿತಾ (95.87), ಎಚ್. ಹರ್ಷಿತಾ (95. 63), ಎಸ್.ಸಂಜನಾ (ಶೇ 95.35), ಎಂ.ಎಂ.ರಾಘವ್ (ಶೇ 94.42), ಒ.ಪಿ.ವಿಕಾಸ್ (ಶೇ.94.35) ಸಿದ್ದಾರ್ಥ ಎಸ್.ರಾಜ್ (ಶೇ 94.29) ಅಂಕ ಪಡೆದಿದ್ದಾರೆ.

ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು, ಸಂಸ್ಥೆಯ ಕಾರ್ಯದರ್ಶಿ ಸೋಮೇಶ್ವರನಾಥ ಸ್ವಾಮೀಜಿ, ಆಡಳಿತಾಧಿಕಾರಿ ಆರ್.ಎಸ್. ನರಸೇಗೌಡ, ಶೈಕ್ಷಣಿಕ ಸಂಯೋಜಕ ಆರ್. ರಂಗನಾ ಥ ಬಾಬು ಅಭಿನಂದಿಸಿದ್ದಾರೆ.

ಅರೆಬೆತ್ತಲೆ ಪ್ರತಿಭಟನೆ: ಬಿಜೆಪಿ ಖಂಡನೆ

ಮದ್ದೂರು: ದೆಹಲಿಯಲ್ಲಿ ನಡೆಯುತ್ತಿರುವ ಎ.ಐ. ಶೃಂಗ ಸಭೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಅರೆಬೆತ್ತಲೆ ಪ್ರತಿಭಟನೆ ನಡೆಸಿರುವ ಕ್ರಮವನ್ನು ಖಂಡಿಸಿ ಬಿ.ಜೆ.ಪಿ ಕಾರ್ಯಕರ್ತರು, ಮುಖಂಡರು ಮಳವಳ್ಳಿ–ಮದ್ದೂರು ಮಾರ್ಗದ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಬಿ.ಜೆ.ಪಿ ಕಚೇರಿ ಬಳಿ ಆಗಮಿಸಿದ ಕಾರ್ಯಕರ್ತರು, ಮುಖಂಡರು ವಿರೋಧ ಪಕ್ಷದ ನಾಯಕ ರಾಹುಲ್ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷದ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿ ಸಿದರಲ್ಲದೆ ಇಂತಹ ಪ್ರಕರಣಗಳು ಜರುಗದಂತೆ ಕಾಂಗ್ರೆಸ್ ಪಕ್ಷದ ವರಿಷ್ಠರು ಕಾರ್ಯಕರ್ತರಿಗೆ ಎಚ್ಚರಿಕೆ ನೀಡಬೇಕೆಂದು ಆಗ್ರಹಿಸಿದರು.ಎ.ಐ ಶೃಂಗ ಸಭೆ ವೇಳೆ ಕಾಂಗ್ರೆಸ್ ಕಾರ್ಯಕರ್ತರ ಗುಂಪೊಂದು ಅರೆಬೆತ್ತಲೆ ಪ್ರತಿಭಟನೆ ನಡೆಸುವ ಮೂಲಕ ದೇಶದ ಮಾನ ಹರಾಜು ಮಾಡಿದ್ದು ಪಕ್ಷದ ವರಿಷ್ಠ ರಾಹುಲ್ಗಾಂಧಿ ಯಾವುದೇ ಪ್ರತಿಕ್ರಿಯೆ ನೀಡದೆ ಮೌನಕ್ಕೆ ಶರಣಾಗಿದ್ದು ಮತ್ತು ಇಂತಹ ಕಾರ್ಯಕರ್ತರಿಗೆ ಪ್ರೋತ್ಸಾಹ ನೀಡುತ್ತಿರುವುದು ನಾಚಿಕೆಗೇಡಿನ ಸಂಗತಿಯೆಂದರು.

24ರಂದು ಶ್ರೀಬೀರೇಶ್ವರಸ್ವಾಮಿ ದೇಗುಲ ಲೋಕಾರ್ಪಣೆ

ಮದ್ದೂರು: ನೂರಾರು ವರ್ಷಗಳ ಇತಿಹಾಸವಿರುವ ಮದ್ದೂರು ತಾಲೂಕಿನ ಆಲೂರು ಗ್ರಾಮದ ತೊಪಿನಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಬೀರೇಶ್ವರಸ್ವಾಮಿಯ ದೇವಾಲಯದ ಜೀರ್ಣೋದ್ಧಾರ ಹಾಗೂ ನೂತನ ರಾಜಗೋಪುರ, ವಿಮಾನಗೋಪುರ, ಕಳಶ ಪ್ರತಿಷ್ಠಾಪನೆ, ಚಿಕ್ಕಮ್ಮತಾಯಿ, ಕಾಳಮ್ಮತಾಯಿ, ಗಣಪತಿ, ನಂದಿ, ನವಗ್ರಹಗಳ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಕಾರ್ಯಕ್ರಮವನ್ನು ಆಯೋಜಿಸಿರುವುದಾಗಿ ದೇವಾಲಯದ ವ್ಯವಸ್ಥಾಪಕ ಪೂಜಾರಿ ನಿಜಬೀರಪ್ಪ ಹೆಗ್ಗಡೆ ಪಿ.ಡಿ ಮಂಜು ತಿಳಿಸಿದ್ದಾರೆ.

ಫೆ.24ರ ಮಂಗಳವಾರದಿಂದ ಆರಂಭಗೊಳ್ಳುವ ದೇವಾಲಯ ಲೋಕಾರ್ಪಣೆ ಕಾರ್ಯಕ್ರಮ ನಾಲ್ಕು ದಿನಗಳ ಕಾಲ ಜರುಗಲಿದೆ.

ಫೆ. 24ರ ಮಂಗಳವಾರ ಸಂಜೆ ಮೂಲ ದೇವತಾ ಪ್ರಾರ್ಥನೆ, ವಾಸ್ತುಹೋಮ ಸೇರಿದಂತೆ ಸಂಜೆ 5 ಗಂಟೆಗೆ ಆಲೂರು ಮತ್ತು ಆಲೂರುದೊಡ್ಡಿ ಗ್ರಾಮಸ್ಥರಿಂದ ಮೀಸಲು ನೀರು ತರುವ ಮೂಲಕ ಪೂಜಾ ಕಾರ್ಯಕ್ರಮಕ್ಕೆ ವಿದ್ಯುಕ್ತಕವಾಗಿ ಚಾಲನೆ ನೀಡಲಾಗುವುದು.

ಫೆ. 25ರ ಗುರುವಾರ ಬೆಳಗ್ಗೆ ಪುಣ್ಯಹವಾಚನ, ಮಹಾಮಂಗಳಾರತಿ ನೆರವೇರಿದ ಬಳಿಕ ಸಂಜೆ ಧಾನ್ಯದಿವಾಸ, ಪುಷ್ಪದಿವಾಸ, ಮಹಾಮಂಗಳಾರತಿ ನೆರವೇರಲಿದೆ.

ಫೆ. 26ರ ಗುರುವಾರ ಬೆಳಿಗ್ಗೆ ಪ್ರಧಾನ ಕಳಶಾರಾಧನೆ, ಕಲಾಪೂರ್ಣ, ಪ್ರಾಣಪ್ರತಿಷ್ಠೆ, ಹೋಮ ಹವನ, ಅಭಿಷೇಕ, ಮಹಾಕುಂಭಾಭಿಷೇಕ, ಅರ್ಚನೆ, ರಾಜೋಪಚಾರ, ರಾಷ್ಟ್ರಾಶೀರ್ವಾದ ನೆರವೇರಿದ ಬಳಿಕ ಶುಭಲಗ್ನ ಪ್ರಾತಃಕಾಲ 11.10 ರಿಂದ 11.50 ಗಂಟೆಯೊಳಗೆ ಸಲ್ಲುವ ಶುಭ ವೃಷಭ ಲಗ್ನದಲ್ಲಿ ಮಹಾಕುಂಭಾಭಿಷೇಕ ಜರುಗಲಿದ್ದು ಬಳಿಕ ನೆರೆದಿದ್ದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಆಲೂರು ಗಡಿ ಯಜಮಾನರುಗಳಾದ ಚೇತನ್, ನಾಗೇಂದ್ರ, ಶ್ರೀಧರ್, ಗಡಿ ಕೂಟದ ಯಜಮಾನರುಗಳಾದ ಮಧು ಹೆಗ್ಗಡೆ, ಸೋಮಶೇಖರ್, ಬೀರೇಶ್ವ, ಎಚ್.ಬಿ.ರೇವಣ್ಣ, ಭರತ್ಕುಮಾರ್, ಕಾರ್ತಿಕ್, ಮಹದೇವು, ಪೂಜಾರಿಗಳಾದ ಶಿವಬೀರಯ್ಯ, ಬೀರೇಶ್, ಕಬ್ಬಾರೆ ಬೀರೇಶ್, ಮರುಳೆ, ಇತರರಿದ್ದರು.

ಮದ್ದೂರು ತಾಲೂಕಿನ ಆಲೂರು ಗ್ರಾಮದ ತೊಪಿನಲ್ಲಿ ನಿರ್ಮಿಸಿರುವ ಶ್ರೀ ಬೀರೇಶ್ವರಸ್ವಾಮಿಯ ದೇವಾಲಯ.

ವಕೀಲರ ಸಂಘದಿಂದ ಅನಿರ್ದಿಷ್ಟಾವಧಿ ಮುಷ್ಕರ

ಕೆ.ಆರ್.ಪೇಟೆ: ನ್ಯಾಯಾಲಯದ ಸಂಕೀರ್ಣದಲ್ಲಿ 6ನೇ ಜಿಲ್ಲಾ ಅಪರ ಮತ್ತು ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ಒತ್ತಾಯಿಸಿ ವಕೀಲರಿಂದ ನ್ಯಾಯಾಂಗ ಕಲಾಪಗಳನ್ನು ಬಹಿಷ್ಕರಿಸಿ ನ್ಯಾಯಾಲಯ ಆವರಣದಲ್ಲಿ ಪ್ರತಿಭಟನೆ ನಡೆಸಿದ ವಕೀಲರು. ಪಟ್ಟಣದಲ್ಲಿ 6ನೇ ಅಪರ ಮತ್ತು ಜಿಲ್ಲಾ ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ಒತ್ತಾಯಿಸಿ ಕೆ.ಆರ್.ಪೇಟೆ ತಾಲೂಕು ವಕೀಲರ ಸಂಘದ ನೇತೃತ್ವದಲ್ಲಿ ನೂರಾರು ವಕೀಲರು ಇಂದು ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಕೆ.ಆರ್.ಪೇಟೆ ತಾಲೂಕು ವ್ಯಾಪ್ತಿಯಲ್ಲಿ ಸಾವಿರಾರು ಪ್ರಕರಣಗಳಿದ್ದು ಕೆ. ಆರ್.ಪೇಟೆ ಪಟ್ಟಣದಲ್ಲಿ ಆರನೇ ಸತ್ರ ಜಿಲ್ಲಾ ನ್ಯಾಯಾಲಯ ಇಲ್ಲದೆ ಇರುವುದರಿಂದ ವಕೀಲರು ಹಾಗೂ ಕಕ್ಷಿದಾರರು ಅನಿವಾರ್ಯವಾಗಿ ಜಿಲ್ಲಾ ಕೇಂದ್ರವಾದ ಮಂಡ್ಯಕ್ಕೆ ಹೋಗುವ ಪರಿಸ್ಥಿತಿ ಎದುರಾಗಿದೆ. ಕೆ.ಆರ್. ಪೇಟೆಯಲ್ಲಿ ಜಿಲ್ಲಾ ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ಒತ್ತಾಯಿಸಿ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಹಾಗೂ ಕಾನೂನು ಸಚಿವರಿಗೆ ಹಾಗೂ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು ಯಾವುದೇ ಪ್ರಯೋಜನವಾಗಿಲ್ಲ ಆದ್ದರಿಂದ ಅನಿವಾರ್ಯವಾಗಿ ಚಳುವಳಿ ದಾರಿ ಹಿಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಾಲೂಕು ವಕೀಲರ ಸಂಘದ ಅಧ್ಯಕ್ಷ ನಾಗೇಗೌಡ ಹೇಳಿದರು. ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ವಕೀಲರು ಪ್ರತಿಭಟನೆ ನಡೆಸುತ್ತಿರುವ ಸುದ್ದಿ ತಿಳಿದ ಶಾಸಕ ಹೆಚ್.ಟಿ.ಮಂಜು ನ್ಯಾಯಾಲಯದ ಆವರಣದಲ್ಲಿ ನಡೆಯುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ವಕೀಲರ ಸಂಘದ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಮಾರ್ಚ್ 6 ರಿಂದ ಬಜೆಟ್ ಅಧಿವೇಶನವು ಆರಂಭವಾಗುತ್ತಿದ್ದು ಈ ಸಂದರ್ಭದಲ್ಲಿ ಅಧಿವೇಶನದಲ್ಲಿಯೇ ಕೆ.ಆರ್. ಪೇಟೆಯ ಆರನೇ ಹೆಚ್ಚುವರಿ ಅಪರ ಜಿಲ್ಲಾ ಸತ್ರ ನ್ಯಾಯಾಲಯದ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದು ಆದಷ್ಟು ಶೀಘ್ರವೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯವನ್ನು ಮಂಜೂರು ಮಾಡುವಂತೆ ಒತ್ತಾಯಿಸುತ್ತೇನೆ ಎಂದು ಶಾಸಕರು ಭರವಸೆ ನೀಡಿದರು. 6ನೇ ಹೆಚ್ಚುವರಿ ಅಪರ ಜಿಲ್ಲಾ ಸತ್ರ ನ್ಯಾಯಾಲಯವನ್ನು ಆರಂಭಿಸಲು ವಕೀಲರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ವಕೀಲರ ಸಮಸ್ಯೆಗಳನ್ನು ಆಲಿಸಿದ ಶಾಸಕ ಹೆಚ್ ಟಿ ಮಂಜು ಅವರನ್ನು ವಕೀಲರ ಸಂಘದ ಪದಾಧಿಕಾರಿಗಳು ಅಭಿನಂದಿಸಿ ಸನ್ಮಾನಿಸಿ ಗೌರವಿಸಿದರು.

ಜಿಲ್ಲಾ ಪಂಚಾಯಿತಿ ಕಾವೇರಿ ಸಭಾಂಗಣದಲ್ಲಿ ಜಿಲ್ಲಾ ಯೋಜನಾ ಸಮಿತಿ ಸಭೆ | ಸಚಿವ ಚಲುವರಾಯಸ್ವಾಮಿ ಹೇಳಿಕೆ

ಮಂಡ್ಯ ಜಿಲ್ಲೆಯ ಸಾರ್ವಜನಿಕರ ಸಮಸ್ಯೆಗಳನ್ನ ಗುರುತಿಸಿ ಪರಿಹರಿಸಿ

ಮಂಡ್ಯ: ಸರಕಾರದ ಮಾರ್ಗಸೂಚಿಯಂತೆ ಎಲ್ಲಾ ಇಲಾಖೆಗಳು ಸಾರ್ವಜನಿಕರಿಗಿರುವ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸಿ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾ ಯೋಜನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 310ರಡಿ ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳು ಹಾಗೂ ಪಟ್ಟಣ ಪಂಚಾಯತಿಗಳು, ಜಿಲ್ಲೆಯಲ್ಲಿರುವ ಪುರಸಭಾ ಮತ್ತು ನಗರ ಸಭಾ ನಿಗಮಗಳ ಯೋಜನೆಗಳನ್ನು ಕ್ರೂಢಿಕರಿಸಲು ಮತ್ತು ಒಟ್ಟಾರೆ ಜಿಲ್ಲೆಯ ಅಭಿವೃದ್ಧಿಗಾಗಿ ಯೋಜನೆಯ ಕರಡನ್ನು ಸಿದ್ಧಪಡಿಸಲು ಪ್ರತಿಯೊಂದು ಜಿಲ್ಲೆಗೂ ಒಂದೊಂದು ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲಾಗುವುದು ಎಂದರು. ಪ್ರಾದೇಶಿಕ ಯೋಜನೆ, ನೀರಿನ ಹಂಚಿಕೆ ಮತ್ತು ಇತರೆ ಭೌಗೋಳಿಕ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಹಂಚಿಕೆ, ಮೂಲಕ ಪರಿಕರಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಇವುಗಳನ್ನು ಒಳಗೊಂಡಂತೆ ಜಿಲ್ಲಾ ಪಂಚಾಯತಿಗಳು, ತಾಲೂಕು ಪಂಚಾಯತಿಗಳು, ಗ್ರಾಮ ಪಂಚಾಯತಿಗಳು, ಪಟ್ಟಣ ಪಂಚಾಯತಿಗಳು, ಜಿಲ್ಲೆಯಲ್ಲಿರುವ ಪುರಸಭಾ ನಿಗಮಗಳು ಮತ್ತು ಪುರಸಭಾ ಪರಿಷತ್ತುಗಳ ನಡುವಣ ಸಮಾನ ಹಿತಾಸಕ್ತಿಯ ವಿಷಯಗಳನ್ನು ಒಳಗೊಂಡಂತೆ, ಗ್ರಾಮೀಣ, ಪಟ್ಟಣ, ನಗರ ಸ್ಥಳೀಯ ಸಂಸ್ಥೆಗಳ ಯೋಜನೆಗಳನ್ನು ಸಿದ್ಧಿಪಡಿಸಿ ಸಮನ್ವಯಗೊಳಿಸುವುದು ಜಿಲ್ಲಾ ಯೋಜನಾ ಸಮಿತಿಯ ಉದ್ದೇಶವಾಗಿರುತ್ತದೆ ಎಂದು ತಿಳಿಸಿದರು.



ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾ ಯೋಜನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ, ವೈದ್ಯಕೀಯ ಹಾಗೂ ಜನಾರೋಗ್ಯ, ನೀರು ಪೂರೈಕೆ ಮತ್ತು ನೈರ್ಮಲ್ಯ, ವಸತಿ, ಉದ್ಯೋಗ, ಕೃಷಿ ಮತ್ತು ಸಮಾಜ ಕಲ್ಯಾಣಕ್ಕೆ ಸಂಬಂಧಿಸಿದ ವಲಯಗಳಲ್ಲಿ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ವಾರ್ಷಿಕ ದೂರದೃಷ್ಟಿ ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿ ರಚಿಸುತ್ತದೆ ಎಂದು ಹೇಳಿದರು.

ಅಭಿವೃದ್ಧಿಗಾಗಿ ನಿಗಧಿಗೊಳಿಸಲಾಗಿರುವ ಸ್ಥಳೀಯ ಸಂಪನ್ಮೂಲ, ರಾಜ್ಯ ಹಣಕಾಸು ಆಯೋಗದ ಅನುದಾನ, ಕೇಂದ್ರ ಹಣಕಾಸು ಆಯೋಗದ ಅನುದಾನ, ಅನಿರ್ಬಂಧಿತ ಅನುದಾನ, ಕೇಂದ್ರ ವಲಯದ ಯೋಜನೆಗಳ ಅನುದಾನ, ರಾಜ್ಯ ವಲಯದ ಯೋಜನೆಗಳ ಅನುದಾನ, ನಗರಾಭಿವೃದ್ಧಿ ಸಂಸ್ಥೆಗಳಿಗೆ ವರ್ಗಾಯಿಸಿರುವ ಸಂಪನ್ಮೂಲಗಳ ಮೂಲಕ ಯೋಜನಾ ತಯಾರಿಕೆಗೆ ಲಭ್ಯವಾಗುವ ಅನುದಾನವನ್ನು ಸಂಗ್ರಹಿಸಲಾಗುತ್ತದೆ ಎಂದು ತಿಳಿಸಿದರು.

> **ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ, ವೈದ್ಯಕೀಯ ಹಾಗೂ ಜನಾರೋಗ್ಯ, ನೀರು ಪೂರೈಕೆ ಮತ್ತು ನೈರ್ಮಲ್ಯ, ವಸತಿ, ಉದ್ಯೋಗ, ಕೃಷಿ ಮತ್ತು ಸಮಾಜ ಕಲ್ಯಾಣಕ್ಕೆ ಸಂಬಂಧಿಸಿದ ವಲಯಗಳಲ್ಲಿ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ವಾರ್ಷಿಕ ದೂರದೃಷ್ಟಿ ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿ ರಚಿಸುತ್ತೇವೆ.**
> -ಎನ್.ಚಲುವರಾಯಸ್ವಾಮಿ, ಸಚಿವ

ಜಿಲ್ಲೆಯಲ್ಲಿ ಜನರ ಸಮಸ್ಯೆಗಳ ಮಾಹಿತಿಯನ್ನು ಸಂಗ್ರಹಿಸಿ ವಾಸ್ತವ ಸ್ಥಿತಿಯನ್ನು ವಿಶ್ಲೇಷಿಸಿ ಯೋಜನೆಯನ್ನು ಸಿದ್ಧಪಡಿಸಿ. ಜಿಲ್ಲಾ ಯೋಜನಾ ಸಮಿತಿ ಸಭೆಯ ಪ್ರಗತಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲಿಸಿ. ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಂದ ಗ್ರಾಮ ಪಂಚಾಯಿತಿ ರೂ 5 ಸಾವಿರ, ತಾಲೂಕು ಪಂಚಾಯಿತಿ ರು. 25 ಸಾವಿರ , ಜಿಲ್ಲಾ ಪಂಚಾಯತಿ ರು. 2 ಲಕ್ಷ, ಪಟ್ಟಣ ಪಂಚಾಯಿತಿ ರು. 7,500 ಸಾವಿರ, ಪುರಸಭೆಗಳು (ಟಿ.ಎಂ.ಸಿ) ರು. 25 ಸಾವಿರ, ನಗರಸಭೆ (ಸಿ.ಎಂ.ಸಿ) ರು. 1 ಲಕ್ಷ, ಕಾರ್ಪೋರೇಷನ್ ನಿಂದ ರೂ 2 ಲಕ್ಷವನ್ನು ವಾರ್ಷಿಕ ವಂತಿಕೆಯಾಗಿ ಜಿಲ್ಲಾ ಯೋಜನಾ ಸಮಿತಿಗೆ ಪಾವತಿ ಮಾಡಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿದರು. .ಪಂ. ಸಿಇಒ ಕೆ.ಆರ್.ನಂದಿನಿ ಮಾತನಾಡಿ, ಜಿಲ್ಲಾ ಸುಸ್ಥಿರ ಅಭಿವೃದ್ಧಿ ಯೋಜನೆ–2031 ಹಾಗೂ ಜಿಲ್ಲಾ ಮಾನವ ಅಭಿವೃದ್ಧಿ ವರದಿ–2025 ಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಈಗಾಗಲೇ ತರಬೇತಿ ಕಾರ್ಯಾಗಾರವನ್ನು ನಡೆಸಲಾಗಿದೆ ಎಂದರು.

ಸಭೆಯಲ್ಲಿ ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ರಮೇಶ ಬಂಡಿಸಿದ್ದೇಗೌಡ, ಶಾಸಕ ಪಿ.ರವಿಕುಮಾರ್‌ಗಣಿಗ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಎಸ್ಪಿ ಡಾ.ವಿ.ಜೆ.ಶೋಭಾರಾಣಿ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಶಿಕ್ಷಣದಿಂದ ಉಜ್ವಲ ಭವಿಷ್ಯ ಸಾಧ್ಯ

ಕೆ.ಆರ್.ಪೇಟೆ: ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಉತ್ತಮವಾದ ವ್ಯಕ್ತಿತ್ವದಿಂದ ಬದುಕು ಸುಂದರವಾಗುತ್ತದೆ. ಮೌಲ್ಯಗಳನ್ನು ಕಲಿಯಲು ಮಹಾತ್ಮರ ಜೀವನ ಚರಿತ್ರೆಗಳನ್ನು ಓದುವುದನ್ನು ರೂಢಿಸಿಕೊಳ್ಳಬೇಕು ಎಂದು ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ತಿಳಿಸಿದರು.ಅವರು ತಾಲ್ಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಜೈನಹಳ್ಳಿಯ ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯಲ್ಲಿ ಆಯೋಜಿಸಿದ್ದ ಶಾರದಾ ಪೂಜೆ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಶ್ರೀ ಶಾರದಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.ಜೀವನದಲ್ಲಿ ಗುರಿ, ಛಲ, ಗುರುವಿನ ಆಶೀರ್ವಾದ ಇದ್ದರೆ ಮಾತ್ರವೇ ವಿದ್ಯೆ ಕಲಿತು ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಲು ಸಾಧ್ಯ. ನಾವು ಇಂದು ಏನಾದರೂ ಗಳಿಸಿದ್ದರೆ ಅದೆಲ್ಲವೂ ಉತ್ತಮ ಶಿಕ್ಷಣ ಹಾಗಾಗಿ ಈ ಸಮಾಜದಿಂದ ಪಡೆದ ಒಂದಷ್ಟನ್ನಾದರೂ ನಾವು ಮತ್ತೆ ಸಮಾಜಕ್ಕೆ ವಾಪಸ್ಸು ಮಾಡಬೇಕಾಗುತ್ತದೆ. ಆ ಮೂಲಕ ಅಕ್ಷರ ಕಲಿಸಿದ ಗುರುಗಳು, ಜನ್ಮ ಕೊಟ್ಟ ಹೆತ್ತವರು, ಆಡಿ ಬೆಳೆದ ಭೂಮಿಯ ಋಣವನ್ನು ತೀರಿಸಲು ಸಾಧ್ಯವಾಗುತ್ತದೆ ಎಂದರು.ಬಳಿಕ ಶಾಲಾ ವಿದ್ಯಾರ್ಥಿಗಳಿಂದ ನಡೆದ ವಿವಿಧ ಸಂಸ್ಕೃತಿಕ ನೃತ್ಯ ಪ್ರದರ್ಶನ ಪಾಲಕರ, ವಿದ್ಯಾರ್ಥಿಗಳ ಮನದಲ್ಲಿ ರೋಮಾಂಚನವನ್ನುಂಟು ಮಾಡಿತು.

ಗಾಂಜಾ ಮಾರಾಟಕ್ಕೆ ಯತ್ನ: ಇಬ್ಬರ ಬಂಧನ

ಮಡಿಕೇರಿ: ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳ ಸಹಿತ 1 ಕೆಜಿ 60 ಗ್ರಾಂ ಗಾಂಜಾವನ್ನು ವಿರಾಜಪೇಟೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ವಿರಾಜಪೇಟೆಯ ಸುಣ್ಣದ ಬೀದಿಯ ಅಸ್ಸೆನಾರ್‌ರಜಾಕ್ (43) ಹಾಗೂ ಬಾಳುಗೋಡು ಬಿಟ್ಟಂಗಾಲ ಗ್ರಾಮದ ಮೋಹನ ಎ.ಜಿ ಅಶೋಕ (42) ಆರೋಪಿಗಳಾಗಿದ್ದಾರೆ. ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಒಂಟಿಯಂಗಡಿ ರಸ್ತೆಯ ಪ್ರೌಢಶಾಲೆ ಮೈದಾನದ ಬಳಿಯ ಬಸ್ ತಂಗುದಾಣದಲ್ಲಿ ಇವರಿಬ್ಬರು ಗಾಂಜಾ ಮಾರಾಟಕ್ಕೆ ಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ. ವಿರಾಜಪೇಟೆ ಉಪವಿಭಾಗದ ಮಹೇಶ್ ಕುಮಾರ್ ,ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಪಿಎಸ್‌ಐಗಳಾದ ಲತಾ ಎನ್.ಜೆ. ವಾಣಿಶ್ರೀ ಬಿ.ಎಸ್, ಪ್ರಮೋದ್, ಎ.ಎಸ್.ಐ ಸೋಮಣ್ಣ ಕೆ.ಬಿ,ಎಚ್.ಸಿಗಳಾದ ನವೀನ್ ಕುಮಾರ್‌ಎಸ್.ಎಲ್, ಬಸವರಾಜು ಎಂ, ಅಬ್ದುಲ್ ಮಜೀದ್, ಹನೀಫ್ ಕೆ.ಎ, ಬೋಪಣ್ಣ ಎಂ.ಎಸ್, ರಾಧಾ, ಪಿ.ಸಿಗಳಾದ ಮಹೇಶ್ ಎಸ್, ಶಿವಪ್ರಸಾದ್, ರಾಜೇಶ್ ಎಸ್ ಹಾಗೂ ರಾಘವೇಂದ್ರ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಪೊಲೀಸ್ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಕಾರ್ಯದಕ್ಷತೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಆರ್.ಎನ್ ಶ್ಲಾಘಿಸಿದ್ದಾರೆ.

ಫೆ.24ರಿಂದ ಆಲೂರು ಬೀರೇಶ್ವರಸ್ವಾಮಿ ಜಾತ್ರೆ

ಮಂಡ್ಯ: ಮದ್ದೂರು ತಾಲೂಕಿನ ಪುರಾಣ ಪ್ರಸಿದ್ಧ ಆಲೂರು ಬೀರೇಶ್ವರಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ಫೆಬ್ರವರಿ 24ರಿಂದ 26ರವರೆಗೆ ಬೃಹತ್ ಜಾತ್ರಾ ಮಹೋತ್ಸವ ಹಾಗೂ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿವೆ. ಶ್ರೀಕ್ಷೇತ್ರದಲ್ಲಿ ನೆಲೆಸಿರುವ ಪುರಾಣ ಪ್ರಸಿದ್ಧ ಶ್ರೀಬೀರೇಶ್ವರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ, ನೂತನ ರಾಜಗೋಪುರ, ವಿಮಾನಗೋಪುರ, ಕಳಸ ಪ್ರತಿಷ್ಠಾಪನೆ, ಶ್ರೀಚಿಕ್ಕಮ್ಮ ತಾಯಿ, ಶ್ರೀಕಾಳಮ್ಮ ತಾಯಿ, ಶ್ರೀಗಣಪತಿ, ಶ್ರೀನಂದಿ, ನವಗ್ರಹಗಳ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಮಹೋತ್ಸವವನ್ನು ಆಯೋಜಿಸಲಾಗಿದೆ.

ಸರಕಾರಿ ಶಾಲೆಗಳಲ್ಲೂ ಗುಣಾತ್ಮಕ ಶಿಕ್ಷಣ

ಚಾಮರಾಜನಗರ: ಸರಕಾರಿ ಶಾಲೆಗಳಲ್ಲೂ ಗುಣಮಟ್ಟದ ಶಿಕ್ಷಣ ದೊರೆಯುತ್ತಿದ್ದು, ಪೋಷಕರು ಸರಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಬೇಕು ಎಂದು ಕಲಾವಿದ ಉಮ್ಮತ್ತೂರು ಬಸವರಾಜು ಕಿವಿಮಾತು ಹೇಳಿದರು.ತಾಲೂಕಿನ ಉಮ್ಮತ್ತೂರು ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲಾವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು,ಕಾರ್ಯಕ್ರಮದಲ್ಲಿಸರ್ಕಾರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ, ಉಚಿತ ಪುಸ್ತಕ, ಸಮವಸ್ತ್ರ ನೀಡುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜತೆಗೆ ಉಚಿತ ಸೌಲಭ್ಯಗಳು ಸಿಗುತ್ತಿದ್ದು, ಪೋಷಕರು ಇದರ ಸದುಪಯೋಗ ಪಡೆಯಬೇಕು. ಕಾನ್ವೆಂಟ್ ವ್ಯಾಮೋಹದಿಂದ ಹೊರಬರಬೇಕು. ಸರ್ಕಾರಿ ಶಾಲೆಗಳಲ್ಲಿ ಓದಿದ ಅನೇಕ ಮಹನೀಯರು ದೇಶದ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಇಲ್ಲಿ ನುರಿತ ಶಿಕ್ಷಕರಿದ್ದಾರೆ. ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸಬೇಕು' ಎಂದು ಸಲಹೆ ನೀಡಿದರು.

ತುರಗನೂರು ಶಾಖಾ ನಾಲೆ | ಸಿಎಂ ಸಿದ್ದರಾಮಯ್ಯರಿಂದ ಕಾಮಗಾರಿಗೆ ಅನುದಾನ ಮಂಜೂರು: ಉಸ್ತುವಾರಿ ಸಚಿವ ಡಾ.ಮಹದೇವಪ್ಪ

ನಾಲೆಗಳ ಅಭಿವೃದ್ಧಿಯಿಂದ 1800 ಎಕರೆಗೆ ನೀರು

ಮೈಸೂರು: ತುರಗನೂರು ಶಾಖಾ ನಾಲೆಯು ವಿಶ್ವೇಶ್ವರಯ್ಯ ನಾಲೆಯ ಅಂತಿಮ ನೆಲೆಯಾಗಿದ್ದು, ಈ ನಾಲೆಯನ್ನು 1943 ರಲ್ಲಿ ನಿರ್ಮಿಸಲಾಗಿದೆ. ಇದರ ಆಧುನೀಕರಣದಿಂದ ಸುಮಾರು 1800 ಕೃಷಿ ಭೂಮಿಗೆ ನೀರು ಸಿಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಚಿದರವಳ್ಳಿಯಲ್ಲಿ 91.33 ಕೋಟಿ ರು. ವೆಚ್ಚದ ತಿ.ನರಸಿಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುರಗನೂರು ವಿಸ್ತರಣೆ, ಉಕ್ಕಲಗೆರೆ ಹಾಗೂ ಹಲವಾರ ಶಾಖಾ ನಾಲೆಗಳ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ತುರಗನೂರು ನಾಲೆ ಅಭಿವೃದ್ಧಿಯ ಬಗ್ಗೆ ಸಮೀಕ್ಷೆ, ಅಧ್ಯಯನ ನಡೆಸಲಾಗಿದೆ. 70 ವರ್ಷಗಳ ನಂತರ ಅಭಿವೃದ್ಧಿ ಬಗ್ಗೆ ಆಸಕ್ತಿ ವಹಿಸಿ ಕಾಮಗಾರಿ ರೂಪಿಸಿ ಅನುದಾನ ನೀಡಿರುವ ಮಾನ್ಯ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.ನಂಜಾಪುರ ಏತ ನೀರಾವರಿ ಯೋಜನೆಯ ಪ್ರಾರಂಭವಾದ ದಿನದಿಂದಲೂ ಇದ್ದ ತೊಡಕನ್ನು ಪ್ರಸಕ್ತ

ಶಾಖಾ ನಾಲೆಗಳ ಅಭಿವೃದ್ಧಿಗೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಗುದ್ದಲಿ ಪೂಜೆ ನೆರವೇರಿಸಿದರು.

ಸಾಲಿನಲ್ಲಿ ಹಭಿವೃದ್ಧಿಪಡಿಸಲು ಹಾಗೂ ಎಲ್ಲಾ ಮೋಟಾರ್ಗಳನ್ನು ಹೊಸದಾಗಿ ಅಳವಡಿಸಿ ದುರಸ್ಥಿಪಡಿಸಲು ಸುಮಾರು ರು.20.00 ಕೋಟಿ ಅನುದಾನ ಒದಗಿಸಲಾಗುವುದು ಎಂದರು.

ತುರಗನೂರು ಅಭಿವೃದ್ಧಿ ಕಾಮಗಾರಿಯಿಂದ ಸುಮಾರು 100 ಕ್ಯೂಸೆಕ್‌ಸ್ಗಿಂತ ಅಧಿಕ ಪ್ರಮಾಣದ ನೀರು ಸೋಸಲೆ ಹೋಬಳಿಯ ಗ್ರಾಮಗಳಿಗೆ ಲಭಿಸುವುದರಿಂದ ಈ ಪ್ರದೇಶವು ಹಚ್ಚ ಹಸಿರಿನಿಂದ ಕಂಗೊಳಿಸುವ ದಿನಗಳು ದೂರವಿಲ್ಲ ಎಂದರು.

> ನಂಜಾಪುರ ಏತ ನೀರಾವರಿ ಯೋಜನೆಯ ಪ್ರಾರಂಭವಾದ ದಿನದಿಂದಲೂ ಇದ್ದ ತೊಡಕನ್ನು ಪ್ರಸಕ್ತ ಸಾಲಿನಲ್ಲಿ ಹಭಿವೃದ್ಧಿಪಡಿಸಲು ಹಾಗೂ ಎಲ್ಲಾ ಮೋಟಾರ್ಗಳನ್ನು ಹೊಸದಾಗಿ ಅಳವಡಿಸಿ ದುರಸ್ಥಿಪಡಿಸಲು ಸುಮಾರು ರು.20.00 ಕೋಟಿ ಅನುದಾನ ಒದಗಿಸಲಾಗುವುದು.
> -ಡಾ.ಎಚ್.ಸಿ.ಮಹದೇವಪ್ಪ, ಸಚಿವ

ನಂಜಾಪುರ, ಸಿ.ವಿ.ಕೊಪ್ಪಲು, ಹೊಸಕೊಪ್ಪಲು, ಚಿಮಿಲಿ, ಚಿಕ್ಕಕಲ್ಲೂಣಿ, ಬೊಮ್ಮನಹಳ್ಳಿ, ಎಸ್. ದೊಡ್ಡಪುರ, ಕೆಂಪನಪುರ, ಸೀಗೋಡಿಪುರ, ಬೋಳೇಗೌಡನಹುಂಡಿ, ರಾಮೇಗೌಡನಪುರ, ವಡ್ಡರಕೊಪ್ಪಲು, ಮರಿಯೂರು, ಬಿ.ಬೆಟ್ಟಹಳ್ಳಿ, ಮೇಗಲಕೊಪ್ಪಲು, ಕುಂತನಹಳ್ಳಿ, ದೇವಿನಹಳ್ಳಿ, ಎಂ.ಎಲ್.ಹುಂಡಿ, ಕಳ್ಳಪುರ, ಬೂದಹಳ್ಳಿ, ಉತ್ತಲಗೆರೆ, ಕನ್ನಾಯಕನಹಳ್ಳಿ, ತಮ್ಮಡಿಪುರ, ನಾಗಲಿಗೆರೆ, ಕೋಣಗಹಳ್ಳಿ, ಚಿಟ್ಟಗಯ್ಯನಕೊಪ್ಪಲು, ನೆರೆಗ್ಯಾತನಹಳ್ಳಿ, ಹೊರಳಹಳ್ಳಿ, ಚಿದರವಳ್ಳಿ, ಮುಡುಕನಪುರ. ಹಲವಾರ, ದೊಡ್ಡಬಾಗಿಲು, ಕೊಳತ್ತೂರು ಗ್ರಾಮಗಳಿಗೆ ಈ ಕಾಮಗಾರಿಯಿಂದ ಉಪಯುಕ್ತವಾಗಲಿದೆ ಎಂದು ತಿಳಿಸಿದರು.

ಪಂಚ ಗ್ಯಾರಂಟಿ ಯೋಜನೆಗಳು ಬಡವರ ಜೀವನ ಮಟ್ಟ ಸುಧಾರಿಸಿದೆ. ಬಡ ಮಹಿಳೆ ಹಾಗೂ ಕುಟುಂಬಕ್ಕೆ ಒಟ್ಟಾರೆ 4 ರಿಂದ 5 ಸಾವಿರ ರು. ದೊರೆಯುತ್ತಿದೆ ಎಂದರು.

ಕಾರ್ಯ ಕ್ರಮದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀ ಕಾಂತ ರೆಡ್ಡಿ ಜಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಮಾಜಿ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಸುನೀತಾ ವೀರಪ್ಪಗೌಡ ಇನ್ನಿತರರು ಉಪಸ್ಥಿತರಿದ್ದರು.

ಸರ್ವಜ್ಞರ ಆದರ್ಶ ಪಾಲನೆ ಅಗತ್ಯ

ತಾಲೂಕಿನ ಸೀಗೂರು ಗ್ರಾಮದಲ್ಲಿ ಆಯೋಜಿಸಿದ್ದ ಸರ್ವಜ್ಞರ 504 ನೇ ಜಯಂತಿಯಲ್ಲಿ ಕೊಪ್ಪ ರಾಮಚಂದ್ರ ಅವರು ಮಾತನಾಡಿದರು.

ಪಿರಿಯಾಪಟ್ಟಣ: ಸಮಾಜದಲ್ಲಿರುವ ಒಡಕನ್ನು ತೊಡೆದು ಹಾಕಲು ತ್ರಿಪದಿಗಳ ರೂಪದಲ್ಲಿ ಚಿಕಿತ್ಸೆ ನೀಡಿದ ಕೀರ್ತಿ ಸರ್ವಜ್ಞರಿಗೆ ಸಲ್ಲುತ್ತದೆ ಎಂದು ತಾಲೂಕು ಕಲಾಲಗುಂಡ ಕುಂಬಾರ ಸಂಘದ ಉಪಾಧ್ಯಕ್ಷ ಕೊಪ್ಪ ರಾಮಚಂದ್ರ ತಿಳಿಸಿದರು.

ತಾಲೂಕಿನ ಸೀಗೂರು ಗ್ರಾಮದಲ್ಲಿ ಆಯೋಜಿಸಿದ್ದ ಸರ್ವಜ್ಞರ 504 ನೇ ಜಯಂತಿಯಲ್ಲಿ ಮಾತನಾಡಿದರು. ಸಮಾಜದ ಅಂಕು ಡೊಂಕು, ಜಾತಿ ಕುಲದ ವಿಷಯ ಕುರಿತು ನಿಂತಲ್ಲೇ ತ್ರಿಪದಿ ರಚಿಸಿ ವಿಮರ್ಶಿಸುತ್ತಿದ್ದ ಸರ್ವಜ್ಞರು ಅಗಾಧ ಪಾಂಡಿತ್ಯ ಹೊಂದಿದ್ದರು. ಒಳಿತು ಮತ್ತು ಕೆಡುಕಿನ ವ್ಯತ್ಯಾಸ, ಏನು ಮಾಡಿದರೆ ಸಮಾಜ ಒಳ್ಳೆಯ ದಾರಿಯಲ್ಲಿ ನಡೆಯುತ್ತದೆ ಎಂದು ತಿಳಿಸಿಕೊಟ್ಟ ಮಹಾನ್ ತತ್ವಜ್ಞಾನಿ ಸರ್ವಜ್ಞ. ಅವರ ಮೂಲ ಹೆಸರು ಬೇರೆ ಇದ್ದರೂ ಅವರು ಎಲ್ಲಾ ಜ್ಞಾನ ಹೊಂದುವ ಮೂಲಕ ತ್ರಿಕಾಲ ಜ್ಞಾನಿ, ಸರ್ವಜ್ಞ ಎಂದು ಕರೆಸಿಕೊಂಡಿದ್ದಾರೆ ಎಂದರು.

ಶಿಕ್ಷಕ ಎಸ್.ಆರ್.ರಮೇಶ್, ಕುಂಬಾರ ಸಮಾಜದ ಯುವ ಮುಖಂಡ ಕೊಣಸೂರು ಪ್ರಭು ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ಸ್ವಾಮಿ ಶೆಟ್ಟಿ, ರೈತಸಂಘದ ರಾಜ್ಯ ಸಮಿತಿ ಸದಸ್ಯ ದ್ಯಾವಶೆಟ್ಟಿ, ಗ್ರಾಮದ ಮುಖಂಡರಾದ ಪುಟ್ಟರಾಜು, ಜಯಕೃಷ್ಣ ಶೆಟ್ಟಿ, ದೇವರಾಜ್, ವಸಂತ್, ರಂಗ ಶೆಟ್ಟಿ, ಎಸ್.ಟಿ.ರಮೇಶ್, ಜಯಣ್ಣ, ಅಶ್ವತ್, ಕೃಷ್ಣ ಮೂರ್ತಿ,ರವಿ, ಅಭಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಫಾರಿಗೆ ಒಪ್ಪಿಗೆ ನೀಡಿರುವುದು ಸಂತಸ ತಂದಿದೆ

ಚಾಮರಾಜನಗರ: ಚಾಮರಾಜನಗರ ಜಿಲ್ಲೆ ಪ್ರವಾಸಿಗಳಿಗೆ ಉತ್ತಮ ನೈಸರ್ಗಿಕವಾಗಿ ರಮಣಿಯ ಸ್ಥಳವಾಗಿದೆ. ಹೆಚ್ಚು ಅರಣ್ಯ ಪ್ರದೇಶವಿರುವ ಹಾಗೂ ಹುಲಿ ಸಂರಕ್ಷಿತ ಪ್ರದೇಶ ಇರುವ ರಮ್ಯ ಮನೋರಂಜನೆಯ ಕ್ಷೇತ್ರವಾಗಿದೆ ಎಂದು ಚಾಮರಾಜನಗರ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾದ ಎಂ.ನಂದ್ಯಪ್ಪಶೆಟ್ಟಿ ತಿಳಿಸಿದರು.

ನಗರದ ಸತ್ಯಮಂಗಲ ರಸ್ತೆಯಲ್ಲಿ ಇರುವ ಖಾಸಗಿ ಹೋಟೆಲ್ನಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು. ಹೋಟೆಲ್ ಉದ್ಯಮ ಎಂದರೇ ಒಂದು ರೀತಿಯ ಸೇವ ಕ್ಷೇತ್ರವಾಗಿದ್ದು ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಆಹಾರ ಮತ್ತು ತಂಗ್ಗುವಿಕೆ ಸೇವೆಯನ್ನು ನೀಡುತ್ತಾ ಬಂದಿದೆ. ಈ ಒಂದು ಸೇವಾ ಕ್ಷೇತ್ರವನ್ನು ಸರ್ಕಾರವು ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಸೇರಿಸಬೇಕೆಂದು ಒತ್ತಾಯಿಸಿದರು.

ಕೆಲವು ದಿನಗಳ ಹಿಂದೆ ಪ್ರವಾಸಿಗಳ ಕೊರತೆಯಿಂದ ಎಷ್ಟೋ ಹೋಟೆಲ್ಗಳು ನಷ್ಟ ಅನುಭವಿಸಿದ ಸಂಗತಿಗಳು ಇದೇ. ಹೋಟೆಲ್ ಮಾಲೀಕರ ಸಂಘದ ವತಿಯಿಂದ ರಾಜ್ಯ ಸರಕಾರಕ್ಕೆ ಮನವಿ ಮಾಡಿದ್ದೇವು ಅದರಂತೆ ಗುಂಡ್ಲುಪೇಟೆ ತಾಲ್ಲೂಕಿನ ಬಂಡಿಪುರದಲ್ಲಿ ಸಫಾರಿಗೆ ಒಪ್ಪಿಗೆ ನೀಡಿರುವುದು

ನಗರದ ಸತ್ಯಮಂಗಲ ರಸ್ತೆಯಲ್ಲಿ ಇರುವ ಖಾಸಗಿ ಹೋಟೆಲ್ನಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಎಂ.ನಂದ್ಯಪ್ಪಶೆಟ್ಟಿ ಅವರು ಮಾತನಾಡಿದರು.

ಸಂತೋಷವಾಗಿದೆ. ರಾಜ್ಯ ಸರ್ಕಾರಕ್ಕೆ ಹಾಗೂ ಮಂತ್ರಿಗಳಿಗೆ ಹೋಟೆಲ್ ಮಾಲೀಕರ ಸಂಘದಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಎಂದರು.

ಜಿಲ್ಲೆಯ ಹೋಟೆಲ್ ಉದ್ಯಮಿಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಕರೆದು ಉದ್ಯಮದಲ್ಲಿ ಎದುರಿಸುತ್ತಿರುವ ಸಂಕಷ್ಟಗಳಿಗೆ ಪರಿಹಾರ ಕಂಡುಕೊಳ್ಳುವ ವಿಚಾರವನ್ನು ಚರ್ಚಿಸಲಾಗುವುದು. ನನ್ನನು ಅಧ್ಯಕ್ಷರಾಗಿ ಅವಿರೋದವಾಗಿ ಆಯ್ಕೆ ಮಾಡಿದ ತಮಗೆ ಕೃತಜ್ಞತೆಗಳು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪೋಲಿಸ್ ಇಲಾಖೆಯವತಿಯಿಂದ ವಂಚನೆಗಳನ್ನು ತಡೆಗಟ್ಟುವ ಬಗ್ಗೆ ಮಾಹಿತಿಯನ್ನು ಪೋಲಿಸ್ ಇಲಾಖೆಯ ಭೀಮಪ್ಪ ಇಚಿಡಿ,ಎಸ್.ಎಂ ಅಬ್ದುಲ್ ಖಾದರ್‌ತಿಳಿಸಿದರು. ನೂತನ ಸದಸ್ಯರಿಗೆ ಪ್ರಮಾಣಪತ್ರವನ್ನು ಕಾರ್ಯದರ್ಶಿ ಪ್ರತಾಪ್ ವಿತರಿಸಿದರು.

ಕಾರ್ಯದರ್ಶಿ ಪ್ರತಾಪ್.ಎಸ್, ಉಪಾಧ್ಯಕ್ಷ ಶ್ರೀನಿವಾಸರಾವ್, ಸಿ.ಒ.ಪಾಪಣ್ಣ, ಜಂಟಿ ಕಾರ್ಯದರ್ಶಿ ಅಂಕಶೆಟ್ಟಿ.ಜಿ, ಖಜಾಂಚಿ ವಿಜಯ್ಕುಲಾಲ್, ರೆಸಾರ್ಟ್ ಮಾಲೀಕರಾದ ಕಾರ್ತಿಕ್, ಜಯಕುಮಾರ್‌ಹಾಗೂ ಇನ್ನು ಇತರರು ಇದ್ದರು.

ಶಿಸ್ತು, ಸಂಯಮ, ಶ್ರಮದಿಂದ ಸಾಧನೆ ಸಾಧ್ಯ

ಮಂಡ್ಯ: ಸಮಾಜದ ಉನ್ನತಿಗೆ ಶ್ರಮಿಸುವವರು ಟೀಕೆ ವಿಮರ್ಶೆಗಳಿಗೆ ತಲೆಕೆಡಿಸಿಕೊಳ್ಳದೆ ಗುರಿಯತ್ತ ಸಾಗಿದರೆ ಮಾತ್ರ ಅಂದುಕೊಂಡಿದ್ದನ್ನು ಸಾಧಿಸಬಹುದು ಎಂದು ರಾಜೀವ್ಗಾಂಧಿ ಆರೋಗ್ಯ ವಿವಿ ಕುಲಪತಿ ಡಾ. ಭಗವಾನ್ ತಿಳಿಸಿದರು.

ಪ್ರಶಾಂತಿ ಸೇವಾ ಟ್ರಸ್ಟ್ ಮತ್ತು ಮಧುರ ಮಂಡ್ಯ ರಂಗಕಲಾ ಟ್ರಸ್ಟ್ ವತಿಯಿಂದ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ನಡೆದ ಸಾಯಿ ಸಂಗೀತೋತ್ಸವ ಕರ್ಯಾಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಮಠ-ಮಾನ್ಯರಲ್ಲಿ ಕಲಿಯುವುದರಿಂದ ಶಿಸ್ತನ್ನು ಮೈಗೂಡಿಸಿಕೊಳ್ಳುತ್ತಾರೆ. ಶಿಸ್ತಿನಿಂದ ಬೆಳೆಯುತ್ತಾರೆ ಎಂಬ ನಂಬಿಕೆ ಜನರಲ್ಲಿದೆ ಎಂದರು.

ಅಂತೆಯೇ ಮಂಡ್ಯದ ಬಹುತೇಕ ಮಂದಿ ದಕ್ಷಿಣ ಕನ್ನಡದ ಆಳಿಕೆಯಲ್ಲಿ ವಿದ್ಯಾಭ್ಯಾಸ ನಡೆಸಿರುವುದು ಅವರು ನಂಬಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ. ಹಾಗಾಗಿ ಪ್ರಬುದ್ಧ ಆತ್ಮ ಹೊಂದಿರುವವರು ಯಾವುದೇ ಟೀಕೆ ಆರೋಪಗಳಿಗೆ ಗಮನ ಕೊಡುವುದಿಲ್ಲ ಎಂದು ತಿಳಿಸಿದರು.

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್‌ಕಲಾಮಂದಿರದಲ್ಲಿ ನಡೆದ ಸಾಯಿ ಸಂಗೀತೋತ್ಸವ ಕಾರ್ಯಾಕ್ರಮವನ್ನು ಡಾ. ಭಗವಾನ್ ಅವರು ಉದ್ಘಾಟಿಸಿದರು.

ಟೀಕೆಗಳು ಸಾಯುತ್ತವೆ, ಸಾಧನೆಗಳು ಬೆಳಗುತ್ತವೆ. ಒಬ್ಬ ವೈದ್ಯ ತಪ್ಪು ಮಾಡಿದರೆ ಒಬ್ಬರೋ, ಇಬ್ಬರೋ ರೋಗಿ ಸಾಯ ಬಹುದು. ಆದರೆ ಶಿಕ್ಷಕರು ತಪ್ಪು ಮಾಡಿದರೆ ಒಂದು ತಲೆಮಾರು ಸಂಕಷ್ಟಕ್ಕೀ ಡಾಗುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಿದೆ ಎಂದು ಸಲಹೆ ನೀಡಿದರು. ಶಿಸ್ತು, ಸಂಯಮ ಯಾರಲ್ಲಿರುತ್ತದೋ ಅವರು ಯಶಸ್ಸು ಸಾಧಿಸುವುದು ಖಚಿತ. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ರುವವರು ಮುಂದಿನ ಹೆಜ್ಜೆ ಇಡಬೇಕು. ಆಸ್ತಿಕನಾಗಲೀ, ನಾಸ್ತಿಕನಾಗಲೀ, ತಾವು ಆರೋಗ್ಯವಾಗಿದ್ದು, ಇತರರನ್ನೂ ಆರೋಗ್ಯ ವಾಗಿರಿಸಿಕೊಳ್ಳುವುದು ಸದ್ಧರ್ಮವಾಗಿದೆ ಎಂದು ಹೇಳಿದರು.

ಮಕ್ಕಳಿಗೆ ಕೇವಲ ಪಠ್ಯ ಪುಸ್ತಕ ಮಾತ್ರ ಶೈಕ್ಷಣಿಕ ಅಭಿವೃದ್ಧಿಗೆ ಸಾಧನವಲ್ಲ. ಜೊತೆಗೆ ಪಠ್ಯೇತರ ಚಟುವಟಿಕೆಗಳೂ ಅಷ್ಟೇ ಮುಖ್ಯವಾಗಿರುತ್ತವೆ ಎಂದು ಅಭಿಪ್ರಾಯಿಸಿದರು.

ಇದೇ ವೇಳೆ ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ಮತ್ತು ಶ್ರೀಸತ್ಯ ಸಾಯಿ ಲೋಕ ಸೇವಾ ಗುರುಕುಲಂನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಸಂಗೀತ ಮತ್ತು ಸ್ವರಮೇಳ ಕರ್ಯಾಕ್ರಮ ನಡೆಸಿಕೊಟ್ಟರು.

ಮಧುರ ಮಂಡ್ಯ ರಂಗಕಲಾ ಟ್ರಸ್ಟ್ ಅಧ್ಯಕ್ಷ ಡಾ.ಎ.ವಿ.ಉಮೇಶ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಿಮ್ಸ್ ನಿರ್ದೇಶಕ ಡಾ.ನರಸಿಂಹಸ್ವಾಮಿ, ಸತ್ಯಸಾಯಿ ಲೋಕ ಸೇವಾ ಗುರುಕುಲಂನ ಹಿರಿಯ ವಿದ್ಯಾರ್ಥಿ ಡಾ.ಕೆ.ಚಂದ್ರಶೇಖರ್ ,ನಾರಾಯಣ್, ಗೌರವ್, ಜಯರಾಮರೆಡ್ಡಿ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಇಂದು ಎಸ್ಸಿ, ಎಸ್ಟಿ ಕಾಯಿದೆ ಕುರಿತು ಕಾರ್ಯಾಗಾರ

ಮದ್ದೂರು ನಗರದ ಪ್ರವಾಸಿ ಮಂದಿರದ ಸಭೆಯಲ್ಲಿ ಎಸ್ಸಿ ಎಸ್ಟಿ ಜಾಗೃತಿ ಸಮಿತಿ ಸದಸ್ಯ ಚಿದಂಬರ ಮೂರ್ತಿ ಅವರು ಮಾತನಾಡಿದರು.

ಮದ್ದೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಕಾಯಿದೆ ಅನ್ವಯ ವಿಚಾರಗೋಷ್ಠಿ ಮತ್ತು ಕಾರ್ಯಾ ಗಾರ ಕಾರ್ಯಕ್ರಮವನ್ನು ಫೆಬ್ರವರಿ 23 ರಂದು ಬೆಳಗ್ಗೆ 10.30ಕ್ಕೆ ನಗರದ ಸರಕಾರಿ ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಎಸ್ಸಿ ಎಸ್ಟಿ ಜಾಗೃತಿ ಸಮಿತಿ ಸದಸ್ಯ ಚಿದಂಬರ ಮೂರ್ತಿ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ನಗರಸಭೆ, ತಾಲೂಕು ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯಗಾರ ಆಯೋಜಿಸಲಾಗಿದೆ ಎಂದರು.ಕಾರ್ಯಗಾರದಲ್ಲಿ ಘನ ಉಪಸ್ಥಿತಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಉದ ಘ್ಷಟನೆ ಸಚಿವ ಎನ್.ಚಲುವರಾಯಸ್ವಾಮಿ, ಅಧ್ಯಕ್ಷತೆ ಶಾಸಕ ಕೆ.ಎಂ.ಉದಯ್, ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯರಾದ ಮಧುಜಿ.ಮಾದೇಗೌಡ, ದಿನೇಶ್ಗೂಳಿಗೌಡ, ವಿವೇಕಾನಂದ ಭಾಗವಹಿಸಲಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲ್ವಿಚಾರಣೆ ಮತ್ತು ಬಲವರ್ಧನ ಸಮಿತಿ ರಾಜ್ಯ ಸಂಚಾಲಕಿ ಪಿ.ಯಶೋಧ ವಿಚಾರ ಮಂಡನೆ ಮಾಡಲಿದ್ದಾರೆಂದು ತಿಳಿಸಿದರು.

ತಾಲೂಕು ಮಟ್ಟದ ಜಾಗೃತಿ ಸಮಿತಿ ಸದಸ್ಯರು, ಸಂಘ, ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಅಂಗನವಾಡಿ, ಆಶಾ ಕಾರ್ಯಕರ್ತೆ ಯರು, ತಾಲೂಕು ಮಟ್ಟದ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.ಸಭೆಯಲ್ಲಿ ಜಾಗೃತಿ ಸಮಿತಿ ಸದಸ್ಯ ರಘು, ಕೆಡಿಪಿ ಸದಸ್ಯ ಸಿದ್ದರಾಜು, ಗ್ಯಾರಂಟಿ ಯೋಜನೆಗಳ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ, ಎಸ್ಸಿ, ಎಸ್ಟಿ ವಿಭಾಗದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹದೇವಯ್ಯ, ಶಿವಲಿಂಗಯ್ಯ, ಮುಖಂಡರಾದ ಭಾನುಪ್ರಕಾಶ್, ಸಿದ್ದರ ಾಮು, ಕುಮಾರ್ ,ಅರುವನಹಳ್ಳಿ ಸಿದ್ದರಾಜು, ಶರತ್, ಹುಲಿಗೆರೆಪುರ ಮಹದೇವು ಸೇರಿದಂತೆ ಇತರರಿದ್ದರು.

ಭವ್ಯ ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ

ಚಾಮರಾಜನಗರ : ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಒಬ್ಬ ದಕ್ಷ ಆಡಳಿತಗಾರರಾಗಿ ಭವ್ಯ ವಿಧಾನಸೌಧ ನಿರ್ಮಿಸಿದರು ಎಂದು ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ ಮಂಜೇಗೌಡ ಹೇಳಿದರು ನಗರದ ಕೊಳದ ಬೀದಿಯ ಒಕ್ಕಲಿಗ ಸಮುದಾಯ ಭವನದಲ್ಲಿ ಚಾಮರಾಜನಗರ ಟೌನ್ ಒಕ್ಕಲಿಗ ಸಂಘದ ವತಿಯಿಂದ ನಡೆದ ಕರ್ನಾಟಕ ಏಕೀಕರಣ ರೂವಾರಿ, ವಿಧಾನಸೌಧ ನಿರ್ಮಾತೃ ಮಾಜಿ ಮುಖ್ಯ ಮಂತ್ರಿ ಕೆಂಗಲ್ ಹನುಮಂತ ಯ್ಯ ಅವರ 118ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಹೇಳಿದರು.ರಷ್ಯಾದ ನಿಯೋಗವೊ ಂದರಲ್ಲಿ ವ್ಯಂಗ್ಯದ ಮಾತುಗಳಿಂದ ವಿಚಲಿತರಾದ ಅವರು, ದಕ್ಷಿಣ ಭಾರತದ ವಾಸ್ತುಶಿಲ್ಪ ಶೈಲಿಯಲ್ಲಿ ವಿಧಾನಸೌಧ ನಿರ್ಮಿಸುವ ಪಣತೊಟ್ಟು 1956ರಲ್ಲಿ ಪೂರ್ಣಗೊಳಿಸಿದರು ಎಂದರು.ಆಧುನಿಕ ಶಿಲ್ಪಿಯಾಗಿದ್ದು, ಕರ್ನಾಟಕ ಏಕೀಕರಣದ ಪ್ರಮುಖ ರೂವಾರಿಯಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ ದಕ್ಷ ಆಡಳಿತಗಾರರಾಗಿ, ಗ್ರಾಮೀಣಾಭಿವೃದ್ಧಿಯ ಹರಿಕಾರರಾಗಿ ಸೇವೆ ಸಲ್ಲಿಸಿದರು. ಕನ್ನಡನಾಡು ನಿರ್ಮಾಣದ ಕನಸು ಕಂಡಿದ್ದ ಅವರು ರೈಲ್ವೆ ಸಚಿವರಾಗುಯೂ ಉತ್ತಮ ಸೇವೆ ಸಲ್ಲಿಸಿದರು. ನಂತರ ಕಾನೂನು ಸಚಿವರಾಗಿಯೂ ದಕ್ಷ ಆಡಳಿತ ನೀಡಿದ್ದರು ಎಂದರು.

ಪೊನ್ನಂಪೇಟೆಯ ತಾಪಂ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ| ಶಾಸಕ ಎ.ಎಸ್.ಪೊನ್ನಣ್ಣ ಹೇಳಿಕೆ

ವಿರಾಜಪೇಟೆ ಕ್ಷೇತ್ರದಲ್ಲಿ 3 ಸಾವಿರ ನಿವೇಶನ ಹಕ್ಕುಪತ್ರ ನೀಡಲು ನಿರ್ಧಾರ

> {ಎ.ಎಸ್.ಪೊನ್ನಣ್ಣ} ಶಾಸಕ
> ಇದೇ ಬಜೆಟ್ ಅಧಿವೇಶನ ನಂತರ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ನೀಡಲು ನಿರ್ಧರಿಸಲಾಗಿದೆ. ನವೆಂಬರ್,ಡಿಸೆಂಬರ್‌ತಿಂಗಳಲ್ಲಿಯೇ ಮುಖ್ಯಮಂತ್ರಿ ಅವರನ್ನು ಆಹ್ವಾನಿಸಿ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿತ್ತು, ಆದರೆ ತಾಂತ್ರಿಕ ಕಾರಣಗಳಿಂದ ಈ ಆಗಿರಲಿಲ್ಲ.

ಮಡಿಕೇರಿ: ಇದೇ ಬಜೆಟ್ ಅಧಿವೇಶನ ನಂತರ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ನೀಡಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ತಿಳಿಸಿದ್ದಾರೆ.

ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ನಿವೇಶನ ರಹಿತರಿಗೆ ನಿವೇಶನ ಹಕ್ಕುಪತ್ರ ನೀಡುವ ಬಗ್ಗೆ ವಿವಿಧ ಇಲಾಖೆ ಅಧಿಕಾರಿಗಳ ಜತೆ ಪೊನ್ನಂಪೇಟೆಯ ತಾ.ಪಂ.ಸಭಾಂಗಣದಲ್ಲಿ ಶನಿವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ನವೆಂಬರ್, ಡಿಸೆಂಬರ್ ತಿಂಗಳಲ್ಲಿಯೇ ಮುಖ್ಯಮಂತ್ರಿ ಅವರನ್ನು ಆಹ್ವಾನಿಸಿ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿತ್ತು, ಆದರೆ ತಾಂತ್ರಿಕ ಕಾರಣಗಳಿಂದ ಈ ಆಗಿರಲಿಲ್ಲ ಎಂದರು.

ಸದ್ಯ ಮಾರ್ಚ್ 27 ರ ನಂತರ ಮುಖ್ಯಮಂತ್ರಿ ಅವರನ್ನು ಆಹ್ವಾನಿಸಿ ನಿವೇಶನ ಹಕ್ಕುಪತ್ರ ವಿತರಿಸಲಾಗುವುದು ಎಂದು ಎ.ಎಸ್.ಪೊನ್ನಣ್ಣ ಅವರು ವಿವರಿಸಿದರು. ಸಮಗ್ರ ಗಿರಿಜನ ಕಲ್ಯಾಣ ಇಲಾಖೆಯಿಂದ ಲೈನ್ ಮನೆಗಳಲ್ಲಿ ವಾಸಿಸುವ

ಪೊನ್ನಂಪೇಟೆಯ ತಾಪಂ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅವರು ಮಾತನಾಡಿದರು.

ಸುಮಾರು 1125 ಕುಟುಂಬಗಳಿಗೆ, ಹಾಗೆಯೇ ಬಸವ ಮತ್ತು ಅಂಬೇಡ್ಕರ್‌ವಸತಿ ಯೋಜನೆ, ಜತೆಗೆ ಸ್ಥಳೀಯ ಸಂಸ್ಥೆ ವ್ಯಾಪ್ತಿ ಸೇರಿದಂತೆ ಒಟ್ಟು ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿದೆ ಎಂದು ಶಾಸಕರು ಹೇಳಿದರು.

ನಿವೇಶನ ಹಕ್ಕುಪತ್ರ ವಿತರಣೆಗೆ ವಿಳಂಬ ಆಗಿರುವುದಕ್ಕೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ ಶಾಸಕರು, ತಾಂತ್ರಿಕ ತೊಂದರೆಗಳನ್ನು ಒಂದು ವಾರದಲ್ಲಿ ಬಗೆಹರಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಿವೇಶನ ರಹಿತರ ಫಲಾನುಭವಿಗಳ ಪಟ್ಟಿ ಮಾಡುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಜತೆ ಹಲವು ಬಾರಿ ಚರ್ಚಿಸಲಾಗಿತ್ತು, ಆದರೆ ಇದುವರೆಗೆ ನಿರೀಕ್ಷಿತ ಪ್ರಗತಿ ಸಾಧಿಸದಿರುವುದಕ್ಕೆ ಎ.ಎಸ್.ಪೊನ್ನಣ್ಣ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ನಿವೇಶನ ರಹಿತರಿಗೆ ನಿವೇಶನ ನೀಡಲೇಬೇಕು. ಆ ದಿಸೆಯಲ್ಲಿ ಅಧಿಕಾರಿಗಳು ಕಾಲಮಿತಿಯಲ್ಲಿ ಕರ್ತವ್ಯ ನಿರ್ವಹಿಸಿ, ಸಿದ್ಧತೆ ಮಾಡಿಕೊಳ್ಳಬೇಕು ಎಂದರು. ವಿವಿಧ ಗ್ರಾ.ಪಂ. ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ನಿವೇಶನ ಹಂಚಿಕೆ ಅಂಕಿ ಅಂಶಗಳ ಬಗ್ಗೆ ಶಾಸಕರು ಮಾಹಿತಿ ಪಡೆದರು.

> ಸಮಗ್ರ ಗಿರಿಜನ ಕಲ್ಯಾಣ ಇಲಾಖೆಯಿಂದ ಲೈನ್ ಮನೆಗಳಲ್ಲಿ ವಾಸಿಸುವ ಸುಮಾರು 1125 ಕುಟುಂಬಗಳಿಗೆ, ಹಾಗೆಯೇ ಬಸವ ಮತ್ತು ಅಂಬೇಡ್ಕರ್‌ವಸತಿ ಯೋಜನೆ, ಜತೆಗೆ ಸ್ಥಳೀಯ ಸಂಸ್ಥೆ ವ್ಯಾಪ್ತಿ ಸೇರಿದಂತೆ ಒಟ್ಟು ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿದೆ.
> -ಎ.ಎಸ್.ಪೊನ್ನಣ್ಣ, ಶಾಸಕ

ಈ ಸಂದರ್ಭದಲ್ಲಿ ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮೋಹನ್ ರಾಜ್ ಅವರು ವಸತಿ ಇಲಾಖೆಯಲ್ಲಿ ಅನುಮೋದನೆಗೆ ಬಾಕಿ ಇರುವ ಹಲವು ಕಡತವನ್ನು ಸ್ಥಳದಲ್ಲಿಯೇ ವಿಲೇವಾರಿ ಮಾಡಿದರು.

ಬಡವರಲ್ಲಿ ಕಡು ಬಡವರಿದ್ದು, ಅಂತಹ ಕುಟುಂಬಕ್ಕೆ ಆಧಾರ್‌ಹಾಗೂ ಚುನಾವಣಾ ಗುರುತಿನ ಚೀಟಿ ಮಾಡಿಸಬೇಕು ಎಂದು ಸಲಹೆ ನೀಡಿದರು.

ಮಡಿಕೇರಿ ತಾ.ಪಂ.ಇಒ ಶೇಖರ್‌ಮಾಹಿತಿ ನೀಡಿ ತಾಲೂಕಿನಲ್ಲಿ ನಿವೇಶನ ರಹಿತ 528 ಅರ್ಜಿಗಳಲ್ಲಿ 460 ಕುಟುಂಬಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಉಳಿದವು ತಾಂತ್ರಿಕ ಕಾರಣದಿಂದ ಬಾಕಿ ಇದೆ ಎಂದು ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರ ಗಮನಕ್ಕೆ ತಂದರು.

ವಿರಾಜಪೇಟೆ ಪುರಸಭೆ ಮುಖ್ಯಾಧಿಕಾರಿ ನಾಚಪ್ಪ ಅವರು ಪೌರಕಾರ್ಮಿಕರಿಗೆ ನಿವೇಶನ ಹಕ್ಕುಪತ್ರ ಹಾಗೂ ಮನೆ ನಿರ್ಮಾಣದ ಬಗ್ಗೆ ಮಾಹಿತಿ ನೀಡಿದರು.

ಕೆ.ಪಿ.ಮೋಹನ್ ರಾಜ್, ತಹಸೀಲ್ದಾರರಾದ ಪ್ರವೀಣ್ ಕುಮಾರ್,ಶ್ರೀಧರ, ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್,ಸಮಗ್ರ ಗಿರಿಜನ ಯೋಜನಾ ಇಲಾಖೆ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಮಾತನಾಡಿದರು.

ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕರಾದ ಬಿ.ಬಸಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ಹಲವು ಮಾಹಿತಿ ನೀಡಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಸಮಾಚಾರ ಸಣ್ಣದಲ್ಲ

ಕಾಲೇಜಿಗೆ ಉಚಿತ ಕಂಪ್ಯೂಟರ್ ವಿತರಣೆ

ತಿಪಟೂರು: ರೋಟರಿ ಬೆಂಗಳೂರು ಗುಲ್ಮಹರ್ ಸಂಸ್ಥೆಯ ವತಿಯಿಂದ ಬಡ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಲಿಂಗದಹಳ್ಳಿ ಬಳಿ ಇರುವ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಅತ್ಯಂತ ಅವಶ್ಯಕವಾಗಿದ್ದ, ಉನ್ನತ ದರ್ಜೆಯ 20 ಕಂಪ್ಯೂಟರ್‌ಗಳನ್ನು ಕೊಡುಗೆಯಾಗಿ ನೀಡಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಅತ್ಯಂತ ಕಲಿಕಾ ವಾತಾವರಣ ನಿರ್ಮಿಸಲು ಸಹಾಯವಾಗಿದೆ. ಕಂಪ್ಯೂಟರ್‌ ವಿತರಿಸುವ ಸಂದರ್ಭದಲ್ಲಿ ರೋಟರಿ ಗುಲ್ಮಹರ್‌ ಬೆಂಗಳೂರು ವತಿಯಿಂದ ಅಧ್ಯಕ್ಷ ಶ್ರೀ ಮುರಳಿಕೃಷ್ಣ, ಮಂಜುನಾಥ್ ಹಾಗೂ ಕೈವಲ್ಯ ಹಾಜರಿದ್ದರು. ಪ್ರಸ್ತುತ ಕಾಲೇಜು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಉಚಿತವಾಗಿ ಕಂಪ್ಯೂಟರ್‌ಗಳನ್ನು ಕೊಡುಗೆಯಾಗಿ ನೀಡಿದ್ದನ್ನು ಶ್ಲಾಘಿಸಿದ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪ್ರಕಾಶ್.ಟಿ. ಹೃದಯಪೂರ್ವಕವಾಗಿ ರೋಟರಿ ಸಂಸ್ಥೆಯವರನ್ನು ಅಭಿನಂದಿಸಿದರು.

ನೀರಿನಲ್ಲಿ ಮುಳುಗಿ ಬಾಲಕ ಸಾವು

ಗುಬ್ಬಿ: ಕುರಿ ಮೈ ತೊಳೆಯಲು ಹೋದ ಯುವಕ ನೀರಿನಲ್ಲಿ ಮುಳುಗಿ ಧಾರುಣ ಸಾವನ್ನಪ್ಪಿದ ಘಟನೆ

ತಾಲೂಕಿನ ಚೇಳೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಸಾರಿಗೆಪಾಳ್ಯ ಗ್ರಾಮದಲ್ಲಿ ನಡೆದಿದೆ. ಕುಮಾರ(16) ಎಂಬ ಬಾಲಕ ತಮ್ಮ ಜಮೀನಿನ ಪಕ್ಕದ ಅಂಕಸಂದ್ರ ಕಟ್ಟೆಯಲ್ಲಿ ಕುರಿಗಳ ಮೈ ತೊಳೆಯಲು ಹೋಗಿ ಕಾಲು ಜಾರಿ ಬಿದ್ದು ಹೆತ್ತ ತಾಯಿಯ ಮುಂದೆಯೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಹೃದಯವಿದ್ರಾವಕ ಘಟನೆ ನಡೆದಿದೆ. ವಿಷಯ ತಿಳಿದ ಚೇಳೂರು ಪೊಲೀಸರು ಕೂಡಲೇ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಾಳೆ ಗುರು ಭಕ್ತಿ ಉತ್ಸವ

ಚಾಮರಾಜನಗರ: ನಗರದ ಶಂಕರಪುರ ಬಡಾವಣೆಯ ವಾದಿರಾಜನಗರದಲ್ಲಿರುವ ಶ್ರೀ ಗುರುರಾಘವೇಂದ್ರ ಸ್ವಾಮಿ ಮಠದಲ್ಲಿ ಫೆ.24 ರಂದು ಗುರು ಭಕ್ತಿ ಉತ್ಸವ ನಡೆಯಲಿದೆ. ಮಂತ್ರಾಲಯ ಪ್ರಭು ಶ್ರೀ ಗುರುರಾಘವೇಂದ್ರಸ್ವಾಮಿಗಳ 431 ನೇ ಜನ್ಮದಿನದ ಪ್ರಯುಕ್ತ ಶ್ರೀ ಮಠದಲ್ಲಿ ಗುರು ಭಕ್ತಿ ಉತ್ಸವ ನಡೆಯಲಿದ್ದು ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು, ಶ್ರೀರಾಘವೇಂದ್ರಸ್ತೋತ್ರ, ಪಂಚಾಮೃತ ಅಭಿಷೇಕ, ಸಾಮೂಹಿಕ ಕನಕಾಭಿಷೇಕ ಸೇರಿದಂತೆ ರಾತ್ರಿ 8 ಕ್ಕೆ ಸಾಮೂಹಿಕ ರಥೋತ್ಸವ ಹಾಗೂ ಪ್ರಸಾದ ವಿನಿಯೋಗ ನಡೆಯಲಿದ್ದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗುರುರಾಯರ ಕೃಪೆಗೆ ಪಾತ್ರರಾಗಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಅರ್ಚಕರಾದ ಪವನ್ ಮತ್ತು ಶ್ರೀಧರ್‌ಮನವಿ ಮಾಡಿದ್ದಾರೆ.

ತೈಲೂರಮ್ಮನವರ ಜಾತ್ರಾ ಮಹೋತ್ಸವ

ಮದ್ದೂರು: ತಾಲೂಕಿನ ತೈಲೂರು ಗ್ರಾಮದ ಶಕ್ತಿದೇವತೆ ತೈಲೂರಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಪೂಜಾ ಕಾರ್ಯಕ್ರಮಗಳು ಅಪಾರ ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ತೈಲೂರಮ್ಮ ಹಬ್ಬದ ಹಿನ್ನೆಲೆಯಲ್ಲಿ ಒಂದು ವಾರಗಳ ಮುಂಚಿತವಾಗಿ ಅಮ್ಮನನ್ನು ಪಟ್ಟಕ್ಕೆ ಕೂರಿಸುವ ರೂಢಿ ಹಲವು ವರ್ಷಗಳಿಂದ ನಡೆದು ಬಂದಿದ್ದು ಅದರಂತೆಯೇ ತೈಲೂರಮ್ಮ ನವರನ್ನು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ತೈಲೂರಮ್ಮನನ್ನು ಪಟ್ಟಕ್ಕೆ ಕೂರಿಸಿ ಭಕ್ತಿಭಾವ ಮೆರೆದರು. ಪಟ್ಟಲದಮ್ಮ ಟ್ರಸ್ಟ್ ಅಧ್ಯಕ್ಷ ಡಾ. ಚಂದು, ಮಾತನಾಡಿ ಬುಡಕಟ್ಟಿನ ಜನಾಂಗದಲ್ಲಿ ಹಿರಿಯ ಮಗಳಿಗೆ ಪಟ್ಟವನ್ನು ಹಿಂದಿನ ಕಾಲದಿಂದಲೂ ಕಟ್ಟುತ್ತಿದ್ದ ಪದ್ಧತಿಯಿದ್ದು ಅದಕ್ಕಾಗಿಯೇ ಹಬ್ಬದ ಒಂದು ವಾರಗಳ ಮುಂಚಿತವಾಗಿ ತೈಲೂರಮ್ಮನನ್ನು ಪಟ್ಟಕ್ಕೆ ಕೂರಿಸುವುದು ರೂಢಿಯಾಗಿದೆ ಎಂದರು. ''ಒಳ್ಳೆಯವರೆಲ್ಲ ಒಳಗಿರಿ ಹೊರಗಿನವರೆಲ್ಲ ಹೊರಗೆ ಬನ್ನಿ'' ಹರಳನ್ನು ಅಡಬೇಡಿ ಉರುಳಿಯನ್ನು ಹುರಿಬೇಡಿ, ಮೆಣಸಿನಕಾಯಿಯನ್ನು ಸುಡಬೇಡಿ ಕಂಟುಮಟ್ಟು ಮಾಡಬೇಡಿ, ಕೊಂಬಿನ ಟಗರು ಕೊಳಗದ ತಂಬಿಟ್ಟು, ಇನ್ನಿತರ ಪದ್ಧತಿಯನ್ನು ಆಚರಿಸುವಂತೆ ಏಳೂರು ಗ್ರಾಮಗಳ ವ್ಯಾಪ್ತಿಯ ಭಕ್ತಾದಿಗಳು ಅನುಸರಿಸುವುದು ಪದ್ಧತಿಯೆಂದರು. ಪಟ್ಟಕ್ಕೆ ಕೂರಿಸುವ ಪೂಜಾ ಕಾರ್ಯಕ್ರಮದಲ್ಲಿ ವಿವಿಧ ಪೂಜಾ ವಿಧಿ ವಿಧಾನಗಳು ನೆರವೇರಿದವಲ್ಲದೆ ಅಪಾರ ಸಂಖ್ಯೆಯ ಭಕ್ತಾದಿಗಳು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ವಿರಾಮ
ಪ್ರತಿ ಭಾನುವಾರ

{ ಎಚ್.ಡಿ. ಕುಮಾರಸ್ವಾಮಿ } ಕೇಂದ್ರ ಸಚಿವ

ಸಿದ್ದರಾಮಯ್ಯನವರು ಕುರ್ಚಿಗಾಗಿ ಜಾತಿ ಎಳೆದು ತಂದಿದ್ದಾರೆ ಎಂದು ನಾನು ತಮಾಷೆಗೆ ಹೇಳಿದ್ದಲ್ಲ, ಸೀರಿಯಸ್ಸಾಗೇ ಹೇಳಿದ್ದೇನೆ. ತಮಾಷೆಗೆ ಹೇಳಿದ್ದೇನೆ ಎಂದಿಟ್ಟುಕೊಳ್ಳಿ, ನೀವು ಇಷ್ಟುದ್ದ ಉತ್ತರ ಬರೆಯುವ ಅಗತ್ಯವಿರಲಿಲ್ಲ. ಈ ಬಗ್ಗೆ ನೀವು ಸೀರಿಯಸ್ ಆಗಿದ್ದೀರಿ ಎಂಬುದನ್ನು ಬಲ್ಲೆ.

ನರೇಗಾ ಬಚಾವೋ ಬದಲು ಬಯಲು ಸೀಮೆ ಬಚಾವೋ ಆಂದೋಲನ ಮಾಡಬೇಕು: ಸಂಸದ ಸುಧಾಕರ್

ಕಾಂಗ್ರೆಸ್ ನಾಯಕರಿಂದ ಜಿಲ್ಲೆಯ ಅಭಿವೃದ್ಧಿ ಶೂನ್ಯ

ಚಿಕ್ಕಬಳ್ಳಾಪುರ: ಕಾಂಗ್ರೆಸ್ ನಾಯಕರು ಚಿಕ್ಕಬಳ್ಳಾಪುರದಲ್ಲಿ ಫೆ.23 ರಂದು ನರೇಗಾ ಬಚಾವೋ ಆಂದೋಲನ ನಡೆಸುತ್ತಿದ್ದಾರೆ. ಆದರೆ ಈಗ 'ಕಾಂಗ್ರೆಸ್ನಿಂದ ಕರ್ನಾಟಕ ಬಚಾವೋ ಎಂಬ ಆಂದೋಲನದ ಅಗತ್ಯ ಇದೆ ಎಂದು ವ್ಯಂಗ್ಯವಾಡಿದರು. ನಗರದ ಸಂಸದರ ಸ್ವಗೃಹದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮತ್ತು ಸಂಸದ ಡಾ.ಕೆ.ಸುಧಾಕರ್‌ ಅಭಿಪ್ರಾಯಪಟ್ಟರು. ಕಾಂಗ್ರೆಸ್ ನಾಯಕರು ಹಾಗೂ ಸರಕಾರ ಮಾಡುತ್ತಿರುವ ಅವಾಂತರಗಳಿಂದಾಗಿ ಕರ್ನಾಟಕ ಹಾಗೂ ವಿಶೇಷವಾಗಿ ಚಿಕ್ಕಬಳ್ಳಾಪುರ ಅಪಾಯದ ಸ್ಥಿತಿಯಲ್ಲಿದೆ. ಆದರೆ ಇಂತಹ ಸ್ಥಿತಿಯಲ್ಲಿ ನರೇಗಾ ಬಚಾವೋ ಬದಲು ಬಯಲುಸೀಮೆ ಬಚಾವೋ ಆಂದೋಲನ ಮಾಡಬೇಕು. ಆದರೆ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಸುಧಾಕರ್, ಜಿಲ್ಲೆಯ ಅಭಿವೃದ್ಧಿಗೆ ಏನೂ ಮಾಡುತ್ತಿಲ್ಲ ಎಂದು ದೂರಿದ ಅವರು ಶಾಸಕರು ಹಾಗೂ ಸಚಿವರಿಗೆ ಕಾಂಗ್ರೆಸ್ನ ಹೈಕಮಾಂಡ್ ಮೆಚ್ಚಿಸಬೇಕು. ಜನರ ಮೆಚ್ಚುಗೆ ಇವರಿಗೆ ಬೇಕಿಲ್ಲ. ಜನರು ಮೆಚ್ಚುವುದನ್ನು ಮೊದಲು ಮಾಡಿ.

ನಗರದ ಸಂಸದರ ಸ್ವಗೃಹದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಸಂಸದ, ಡಾ.ಕೆ.ಸುಧಾಕರ್‌ಮಾತನಾಡಿದರು.

ಹೈಕಮಾಂಡ್ ಮೆಚ್ಚುವುದು ಬದಿಗಿಡಿ ಎಂದು ಕಿವಿಮಾತು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಮನರೇಗಾ ಯೋಜನೆಗೆ ಹೊಸ ರೂಪ ನೀಡಿ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ ಗಾರ್‌ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ), ಇದನ್ನು ಸಂಕ್ಷಿಪ್ತವಾಗಿ ವಿಬಿ ಜಿ ರಾಮ್ ಜಿ ಎಂದು ಕರೆಯುತ್ತಾರೆ.

ಇದರಲ್ಲಿ ಮಹಾತ್ಮ ಗಾಂಧಿಜಿ ಹೆಸರು ತೆಗೆದುಹಾಕಿದ್ದಾರೆ ಎಂಬುದು ಕಾಂಗ್ರೆಸ್ ಆರೋಪ ಕಳೆದ 60 ವರ್ಷಗಳಲ್ಲಿ 400 ಕ್ಕೂ ಅಧಿಕ ಯೋಜನೆಗಳಿಗೆ, ಸಂಸ್ಥೆಗಳಿಗೆ ನೆಹರು, ರಾಜೀವ್ ಗಾಂಧಿ, ಇಂದಿರಾಗಾಂಧಿ, ಸಂಜಯಗಾಂಧಿ ಹೆಸರು ನಾಮಕರಣ ಮಾಡಿದ್ದಾರೆ. ಆಗ ಇವರಿಗೆ ಮಹಾತ್ಮ ಗಾಂಧೀಜಿಯ ನೆನಪಾಗಲೇ ಇಲ್ಲ ಎಂದು ದೂರಿದರು.

> ಗಲ್ಲಿಗೆ ಒಂದು ಬೀದಿಗೆ ಒಂದು ಬಾರ್ ತೆರೆಯಲು ಅವಕಾಶ ಮಾಡಿದ್ದಾರೆ. ಆ ಗಾಂಧೀಜಿ ನೆನಪಾಗಲಿಲ್ಲ ಗಾಂಧೀಜಿ ಪಾನ ನಿಷೇಧ ಅಂದೋಲನ ಮಾಡಿದ್ದರು. ಗೋ ಹತ್ಯೆಯನ್ನು ಕಾಂಗ್ರೆಸ್ ನಾಯುಕರು ಸಮರ್ಥನೆ ಮಾಡಿಕೊಳ್ಳುತ್ತಾರೆ. ಗಾಂಧೀಜಿ ಗೋ ಸಂರಕ್ಷಣೆ ಮಾಡಿ..
>
> -ಡಾ.ಕೆ.ಸುಧಾಕರ್, ಸಂಸದ

ಯೋಜನೆಯಲ್ಲಿ ಕೆಂದ್ರ ಸರಕಾರ ಶೇ.80 ರಾಜ್ಯ ಸರಕಾರ ಶೇ.40 ರಷ್ಟು ಅನುದಾನ ಭರಿಸುತ್ತದ. ಆದರೆ ಕಾಂಗ್ರೆಸ್ ಸರಕಾರದ ಬಳಿ ಹಣ ಇಲ್ಲ ಅದಕ್ಕೆ ಇಷ್ಟೊಂದು ವಿರೋಧ ವ್ಯಕ್ತ ಪಡಿಸುತ್ತಿದೆ.

ಜಿಪಿಎಸ್ ಬಳಕೆ ಮಾಡಿ ಫಲಾನುಭವಿಗಳಿಗೆ ನೇರ ಹಣ ಪಾವತಿಯಾಗುತ್ತದೆ ಇದು ಅಕ್ರಮ ತಡಗಟ್ಟಲಾಗುತ್ತದೆ. ಆದರೆ ಕಾಂಗ್ರೆಸ್ ಎಂಜೆಂಟರಿಗೆ ಹಣ ಲೂಟಿ ಮಾಡಲು ಅವಕಾಶ ಸಿಗುವುದಿಲ್ಲಾ ಎಂದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ, ಚಿಮುಲ್ ನಿರ್ದೇಶಕ ಕೆ.ವಿ.ನಾಗರಾಜ್, ನಗರಸಭೆ ಮಾಜಿ ಅಧ್ಯಕ್ಷ ಎ. ಗಜೇಂದ್ರ, ಮುಖಂಡರಾದ ಮರಳಕುಂಟೆ ಕೃಷ್ಣಮೂರ್ತಿ, ಅವುಲಕೊಂಡರಾಯಪ್ಪ, ಚನ್ನಪ್ಪರೆಡ್ಡಿ, ಸೀಕಲ್ ಆನಂದಗೌಡ, ಲಿಂಗಾರೆಡ್ಡಿ ಇದ್ದರು.

> **ಕೋಟ್ಯಂತರ ರು.ಲೂಟಿ**
>
> ನರೇಗಾದಲ್ಲಿ ವೇತನ ಪಾವತಿ ಮಾಡಲು ಕಾಲದ ಮಿತಿ ಇರಲಿಲ್ಲ. ಎಷ್ಟೋ ತಿಂಗಳ ನಂತರ ಸಂಬಳ ಕೊಡುತ್ತಿದ್ದರು. ಈಗ 15 ದಿನಗಳ ಒಳಗೆ ವೇತನ ಪಾವತಿಸಬೇಕು ಎಂಬ ನಿಯಮ ಇದೆ. ಇದು ಸುಧಾರಣೆ ಅಲ್ಲವೇ?. ಹಿಂದಿನ ಯೋಜನೆಯಲ್ಲಿ ಫಲಾನುಭವಿ ಅಲ್ಲದವರೂ ಹಣ ಪಡೆಯುತ್ತಿದ್ದರು, ಕೋಟ್ಯಂತರ ರೂಪಾಯಿ ಲೂಟಿ ನಡೆದಿತ್ತು. ಅದನ್ನು ತಡೆಗಟ್ಟಲು ತಂತ್ರ ಜ್ಞಾನ ಬಳಸಲಾಗುತ್ತಿದೆ ಎಂದು ಸಂಸದ, ಡಾ.ಕೆ. ಸುಧಾಕರ್‌ ತಿಳಿಸಿದರು.

ಹೆತ್ತೇನಹಳ್ಳಿ ಮಾರಮ್ಮದೇವಿಯ ತಾಳಿ ಕಳ್ಳತನವಾಗಿಲ್ಲ

ತುಮಕೂರು: ಹೆತ್ತೇನಹಳ್ಳಿ ಮಾರಮ್ಮದೇವಿಯ ತಾಳಿ ಕಳವಾಗಿದೆ ಎಂದು ಮಾಜಿ ಶಾಸಕ ಡಿ.ಸಿ.ಗೌರಿಶಂಕರ್‌ ಹಾಗೂ ಅವರ ಬಳಗದವರು ಅಪಪ್ರಚಾರ ಮಾಡಿದ್ದಾರೆ. ಆದರೆ ಮಾರಮ್ಮದೇವಿಯ ತಾಳಿ ಕಳವಾಗಿಲ್ಲ. ಕಳವಾಗಿದೆ ಎಂದು ಹೇಳಿ ಹೊಸ ತಾಳಿ ತಂದು ದೇವಿಗೆ ಸಮರ್ಪಣೆ ಮಾಡಿ ವಿವಾದ ಮಾಡಿದ್ದಾರೆ ಎಂದು ಮಾರಮ್ಮ ದೇವಸ್ಥಾನ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ತಿಮ್ಮೇಗೌಡ(ಅಣ್ಣಪ್ಪ), ಈ ಮೂಲಕ ಮಾಜಿ ಶಾಸಕರು ಧಾರ್ಮಿಕ ವಿಚಾರವನ್ನು ರಾಜಕಾರಣ ಮಾಡಿ ತಪ್ಪು ಮಾಹಿತಿ ನೀಡಿ ದೇವಿಯ ಭಕ್ತರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಅಲ್ಲದೆ ಮಾಜಿ ಶಾಸಕರ ಆಪ್ತರಾದ ಉದ್ಯಮಿ ಜಗದೀಶ್ ದೇವಸ್ಥಾನಕ್ಕೆ 30 ಲಕ್ಷ ರು. ದೇಣಿಗೆ ನೀಡಿರುವುದಾಗಿ ಹೇಳಿದ್ದಾರೆ. ಅವರ ಮಾತು ಸತ್ಯವಾಗಿದ್ದರೆ ದೇವಿಗೆ ಕರ್ಪೂರ ಬೆಳಗಿ ಸಾಬೀತು ಮಾಡಲಿ ಎಂದು ಸವಾಲು ಹಾಕಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಡಿ.ಸಿ.ಗೌರಿಶಂಕರ್‌ಮಾತನಾಡಿದರು.

ದೇವಸ್ಥಾನದಲ್ಲಿ ನಡೆದ ಕಳ್ಳತನ ಪ್ರಕರಣದಲ್ಲಿ ದೇವಿಯ ತಾಳಿ ಕಳವಾಗಿಲ್ಲ. 43 ಗ್ರಾಂ ಚಿನ್ನ ಕಳವಾಗಿದೆ, ಅದರಲ್ಲಿ 20 ಗ್ರಾಂ ಸಿಕ್ಕಿದೆ. ಆದರೆ ತಾಳಿ ಕಳವಾಗಿದೆ ಎಂದು ಮಾಜಿ ಶಾಸಕ ಗೌರಿಶಂಕರ್‌ ಹಾಗೂ ಅವರ ಆಪ್ತ ಜಗದೀಶ್ ಅವರು ಹೊಸ ತಾಳಿ ತಂದು ತಹಶೀಲ್ದಾರರ ಸಮ್ಮುಖದಲ್ಲಿ ದೇವಿಗೆ ಸಮರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ತಾಳಿ ಕಳವಾಗಿಲ್ಲ ಎಂದು ತಹಸೀಲ್ದಾರರು ಸ್ಪಷ್ಟನೆ ನೀಡಬೇಕಾಗಿತ್ತು. ಆದರೂ ಅವರು ಏಕೆ ಹೇಳಲಿಲ್ಲ ಎಂದು ಗೊತ್ತಾಗಲಿಲ್ಲ ಎಂದರು.

ದೇವರ ವಿಚಾರದಲ್ಲಿ ರಾಜಕಾರಣ ಮಾಡುವುದು ಸರಿಯಲ್ಲ, ದೇವಿಗೆ ತಾಳಿ ಸಮೇತ ಏನೇನು ಆಭರಣ ಬೇಕು ಎಂಬುದನ್ನು ಕೊಡುವ ಭಕ್ತರು ಸಾಕಷ್ಟು ಜನರಿದ್ದಾರೆ. ಜಗದೀಶ್ ಅವರು ದೇವಿಗೆ ಕೊಡುವ ದೇಣಿಗೆ ಬಗ್ಗೆ ತಮ್ಮದೇನು ತಕರಾರಿಲ್ಲ, ಆದರೆ ಸುಳ್ಳು ಸುದ್ದಿ ಹರಡಿ ದೇವರ ವಿಚಾರದಲ್ಲಿ ಅಪಚಾರ ಮಾಡಬಾರದು ಎಂದು ಹೇಳಿದರು. ಸಮಿತಿ ಸದಸ್ಯರಾದ ಹನುಂತರಾಯಪ್ಪ, ಮಾಯಣ್ಣ, ಗಿರೀಶ್, ಜಗದೀಶ್, ರವಿಕುಮಾರ್, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ನರಸಿಂಹಮೂರ್ತಿ, ವೆಂಕಟೇಶ್, ಶಂಕರಣ್ಣ, ರಾಕೇಶ್ ಇದ್ದರು.

ಕರವೇ ಕಾರ್ಯಕರ್ತರ ಕುಟುಂಬಕ್ಕೆ ಗೌಡರ ನೆರವು

ಕೋಲಾರ: ಇತ್ತೀಚೆಗೆ ಮೃತಪಟ್ಟ ಕರ್ನಾಟಕ ರಕ್ಷಣಾ ವೇದಿಕೆಯ ಇಬ್ಬರು ಕಾರ್ಯಕರ್ತರ ಮನೆಗೆ ಭೇಟಿ ಕೊಟ್ಟಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣ ಗೌಡರು ಆರ್ಥಿಕ ನೆರವು ವಿತರಿಸಿ ಧೈರ್ಯ ತುಂಬಿದರು.

ಕರವೇ ಜಿಲ್ಲಾ ಸಂಚಾಲಕರಾಗಿದ್ದ ಲೋಕೇಶ್ ಮತ್ತು ಪ್ರಧಾನ ಸಂಚಾಲಕರಾಗಿದ್ದ ಮೆಹಬೂಬ್ ಅವರ ಮನೆಗೆ ಭೇಟಿ ನೀಡಿದ್ದ ನಾರಾಯಣಗೌಡರು ಎರಡೂ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿ ವಹಿಸಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಗೌಡರು ಎರಡೂ ಕುಟುಂಬಗಳು ಬಹಳ ವರ್ಷಗಳಿಂದ ಕರವೇ ಹೋರಾಟಗಳಲ್ಲಿ ಗುರುತಿಸಿಕೊಂಡಿದ್ದು ಕನ್ನಡದ ಬಗ್ಗೆ ಇಟ್ಟುಕೊಂಡಿದ್ದ ಪ್ರೀತಿ, ಕಾಳಜಿ ಮಾದರಿಯಾಗಿದೆ. ಇಬ್ಬರೂ ಸಹಾ ಹೃದಯಾಘಾತದಿಂದ ಮೃತಪಟ್ಟಿರುವುದು ಸಂಘಟನೆಗೆ ತುಂಬಲಾರದ ನಷ್ಟ ಉಂಟಾಗಿದೆ ಎಂದರು. ಕನ್ನಡ ಚಳುವಳಿಗಳಲ್ಲಿ ಪಾಲ್ಗೊಳ್ಳುವವರು ಮಧ್ಯಮ ಅಥವಾ ಕಡುಬಡವರಾಗಿರುತ್ತಾರೆ. ಅನಾಹುತ ಸಂಭವಿಸಿದಾಗ ವೇದಿಕೆ ನುಣುಚುಕೊಳ್ಳುವುದಿಲ್ಲ. ಕೊನೆಯ ತನಕ ಅವರ ಕುಟುಂಬದ ಜತೆಯಿದ್ದು ಸಮಸ್ಯೆಗೆ ಸ್ಪಂದಿಸುವುದು ವೇದಿಕೆಯ ವಾಡಿಕೆಯಾಗಿದೆ ಎಂದು ತಿಳಿಸಿದರು.

ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡರು ಮೃತಪಟ್ಟ ಕಾರ್ಯಕರ್ತರ ಕುಟುಂಬಕ್ಕೆ ನೆರವು ನೀಡಿದರು.

ಕರವೇ ಜಿಲ್ಲಾಧ್ಯಕ್ಷ ಮೇಡಿಹಾಳ ರಾಘವೇಂದ್ರ, ಪ್ರಧಾನ ಕಾರ್ಯದರ್ಶಿ ವಿ.ಮುನಿರಾಜು, ಗೌರವಾಧ್ಯಕ್ಷ ಎನ್. ಮುನಿರಾಜು, ಉಪಾಧ್ಯಕ್ಷ ಪ್ರಭಾಕರ್‌ಗೌಡ, ತಾಲೂಕು ಅಧ್ಯಕ್ಷ ಕೋಲಾರ ಶಶಿಕುಮಾರ್, ಬಂಗಾರಪೇಟೆ ರಾಮಪ್ರಸಾದ್, ಮಾಲೂರು ಎಂ.ಎಸ್.ಶ್ರೀನಿವಾಸ್, ಕಾರ್ಮಿಕ ಘಟಕದ ಅಧ್ಯಕ್ಷ ಮಂಜುನಾಥಗೌಡ, ಶೇಖರ್‌ಇದ್ದರು.

ಸದಾಕಾಲ ಗುರುಚಿಂತನೆ ಮಾಡುವವರು ಸಹಜಯೋಗಿ

ಚಿಕ್ಕಬಳ್ಳಾಪುರ: ಗುರುವಿಗೆ ಭಕ್ತಿಯಿಂದ ಶರಣಾಗಿ, ಗುರುವಾಕ್ಯದಲ್ಲಿ ನಂಬಿಕೆ ಇಟ್ಟು, ಸದಾಕಾಲ ಗುರುಚಿಂತನೆ ಮಾಡುವವರು ಸಹಜಯೋಗಿಗಳು ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಅಭಿಪ್ರಾಯಪಟ್ಟರು.

ಶ್ರೀಕ್ಷೇತ್ರ ಕೈವಾರದ ಗವಿಯ ಬಳಿಯ ಪ್ರಕೃತಿಯ ಮಡಿಲಲ್ಲಿ ನೆಲೆಸಿರುವ ಯೋಗಾನರಸಿಂಹಸ್ವಾಮಿ ವೈಕುಂಠ ಯಾಗಶಾಲೆಯಲ್ಲಿ ಶ್ರೀರಾಮಭವತಾರಕ ಮಂತ್ರದ ಶ್ರೀರಾಮಕೋಟಿ ಜಪಯಜ್ಞವನ್ನು ಉದ್ಘಾಟಿಸಿ ಮಾತನಾಡಿದರು.

ಆಡಂಬರದಿಂದ ಮುಕ್ತಿಯನ್ನು ಸಾಧಿಸಲು ಸಾಧ್ಯವಿಲ್ಲ. ಮುಕ್ತಿಗೆ ಬೇಕಾದುದು ತತ್ವಚಿಂತನೆ, ಭಕ್ತಿಯ ಸಮರ್ಪಣೆ, ನಿರಂತರ ಸಾಧನೆ ಮಾತ್ರ. ಗುರು ಉಪದೇಶದಲ್ಲಿ ಧೃಡವಾದ ನಂಬಿಕೆಯುಳ್ಳ ಗುರುಭಕ್ತನು ಮಾತ್ರವೇ ಸಾಧನ ಮಾರ್ಗದಲ್ಲಿ ಮುಂದುವರಿದು ಮುಕ್ತಿಯನ್ನು ಪಡೆಯಬಲ್ಲ. ಪ್ರತಿನಿತ್ಯವೂ ಉಸಿರಾಟದಲ್ಲಿಯೇ ಗುರುಸ್ಮರಣೆ ಮಾಡುವಂತಹ ಸಾಧನೆ ಮಾಡಬೇಕು. ಗುರುಪಾದದ ಚಿಂತನೆ ಇರಬೇಕು. ಸಾಧನೆಗೆ ತೊಡಗುವ ಪ್ರತಿ ಸಂದರ್ಭದಲ್ಲೂ ಮೊದಲು ಗುರುವಂದನೆ ಸಲ್ಲಿಸುವುದು ಒಂದು ಬಗೆಯ ಗುರುಸೇವೆಯೇ ಆಗಿದೆ. ಗುರುವನ್ನು ಮರೆತವನ ಸಾಧನೆ ಸಿದ್ಧಿಸುವುದಿಲ್ಲ. ಗುರುಭಕ್ತನಾದ ಸಾಧಕನಿಗೆ ಗುರುಭಕ್ತಿಯೇ ಸಾಧನ ಬಲವಾಗಿ ಪರಿಣಮಿಸಿ ಶೀಘ್ರವಾಗಿ ಲಭಿಸುವ ಸಿದ್ಧಿಯಿಂದ ಮುಕ್ತಿಗೆ ಪಾತ್ರನಾಗುತ್ತಾನೆ ಎಂದರು.

ಶ್ರೀಕ್ಷೇತ್ರ ಕೈವಾರದ ಗವಿಯ ಬಳಿಯ ಪ್ರಕೃತಿಯ ಮಡಿಲಲ್ಲಿ ನೆಲೆಸಿರುವ ಯೋಗಾನರಸಿಂಹಸ್ವಾಮಿ ವೈಕುಂಠ ಯಾಗಶಾಲೆಯಲ್ಲಿ ಶ್ರೀರಾಮಭವತಾರಕ ಮಂತ್ರದ ಶ್ರೀರಾಮಕೋಟಿ ಜಪಯಜ್ಞವನ್ನು ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಮತನಾಡಿದರು.

ಕಾರ್ಯಕ್ರಮಕ್ಕೂ ಮೊದಲಿಗೆ ಘಂಟಾನಾದ, ಸುಪ್ರಭಾತ, ಗೋಪೂಜೆಯನ್ನು ಶ್ರೀಯೋಗಿನಾರೇಯಣ ಮಠದಲ್ಲಿ ನೆರವೇರಿಸಲಾಯಿತು. ನಂತರ ಗವಿಯ ಬಳಿಗೆ ಭಕ್ತರು ಬಂದರು. ಗವಿ ಯಾಗಶಾಲೆಯಲ್ಲಿರುವ ಶ್ರೀಗಣಪತಿ, ಮಹಾಲಕ, ಯೋಗಾನರಸಿಂಹಸ್ವಾಮಿ ಹಾಗೂ ಸದ್ಗುರು ಶ್ರೀಯೋಗಿನಾರೇಯಣ ತಾತಯ್ಯನವರ ವಿಗ್ರಹಗಳಿಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಶ್ರೀರಾಮಕೋಟಿ ನಡೆಯುವ ಸ್ಥಳದಲ್ಲಿ ವಿಶೇಷ ವೇದಿಕೆಯನ್ನು ಹಾಕಲಾಗಿತ್ತು. ಆ ವೇದಿಕೆಯಲ್ಲಿ ಶ್ರೀಸೀತಾರಾಮರ ವಿಗ್ರಹಗಳನ್ನು, ಕೈವಾರ ತಾತಯ್ಯನವರ ಭಾವಚಿತ್ರಗಳನ್ನು ಹಾಗೂ ಮಧ್ಯದಲ್ಲಿ ದೀಪಸ್ತಂಭವನ್ನು ಇಡಲಾಗಿತ್ತು. ಧರ್ಮಾಧಿಕಾರಿ ದಂಪತಿಗಳು ದೀಪವನ್ನು ಬೆಳಗುವುದರ ಮೂಲಕ ರಾಮಕೋಟಿ ಜಪಯಜ್ಞಕ್ಕೆ ಚಾಲನೆಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀಯೋಗಿನಾರೇಯಣ ಮಠದ ಉಪಾಧ್ಯಕ್ಷರಾದ ಜೆ.ವಿಭಾಕರರೆಡ್ಡಿ, ಖಜಾಂಚಿ ಆರ್.ಪಿ.ಎಂ.ಸತ್ಯನಾರಾಯಣ್, ಶ್ರೀಯೋಗಿನಾರೇಯಣ ಸಂಕೀರ್ತನಾ ಯೋಜನೆ ಸಂಚಾಲಕರಾದ ವಿದ್ವಾನ್ ವಾನರಾಶಿ ಬಾಲಕೃಷ್ಣ ಭಾಗವತರ್‌ಹಾಗೂ ವಿವಿಧ ಭಾಗಗಳಿಂದ ಬಂದ ಭಕ್ತರು ಭಾಗವಹಿಸಿದ್ದರು.

ವುಡೇ ಪ್ರತಿಷ್ಠಾನ ಸಹಾಯ ಮಾಡುವ ಗುಣ ಹೊಂದಿದೆ : ಕಲ್ಪನಾ ಹಾಲಪ್ಪ

ತುಮಕೂರು: ನಮ್ಮ ದೇಶದಲ್ಲಿ ಹಣವಂತರ ಸಂಖ್ಯೆ ಹೆಚ್ಚಿದೆ. ಅದರೆ ಒಳ್ಳೆಯ ಸಹಾಯ ಮಾಡುವ ಮನಸ್ಥಿತಿ ಇರುವವರು ಕೆಲವರೇ ಮಾತ್ರ. ಅಂತಹವರಲ್ಲಿ ವುಡೇ ಪ್ರತಿಷ್ಠಾನವೂ ಒಂದಾಗಿದೆ ಎಂದು ಹೇರಿಟೇಜ್ ಫೌಂಡೇಷನ್ ಸಿಇಒ ಕಲ್ಪನಾ ಮುರುಳೀಧರ ಹಾಲಪ್ಪ ತಿಳಿಸಿದರು.

ನಗರದ ಕೃಷಿಕ್ ಪೌಂಡೇಷನ್ ಸಭಾಂಗಣದಲ್ಲಿ ವುಡೇ ಪ್ರತಿಷ್ಠಾನ ಬೆಂಗಳೂರು ವತಿಯಿಂದ ನೀಡುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶಿಕ್ಷಣಕ್ಕೆ ಮಾಡುವ ಸಹಾಯ ಎಲ್ಲ ಸಹಾಯಕ್ಕಿಂತಲೂ ಶ್ರೇಷ್ಠವಾದುದ್ದು ಎಂದರು. ನಾನು ಕೂಡ ಒಂದು ಶಿಕ್ಷಣ ಸಂಸ್ಥೆಯ ಸಿಇಒ ಆಗಿ ಕೆಲಸ ಮಾಡುತ್ತೇನೆ. ಆದರೆ ಹೆಚ್ಚಿನದಾಗಿ ಶ್ರೀಸತ್ಯಸಾಯಿ ಸೇವಾಶ್ರಮದ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡು, ಬಡವರಿಗೆ, ನಿರ್ಗತಿಕರಿಗೆ ತನ್ನ ಕೈಲಾದ ಸಹಾಯ ಹಸ್ತ ಚಾಚುತ್ತಿದ್ದೇನೆ. ವುಡೇ ಪ್ರತಿಷ್ಠಾನದ ಜತೆಗೆ ಮೊದಲಿನಿಂದಲೂ ಸಂಪರ್ಕವಿದೆ. ಶಿಕ್ಷಣಕ್ಕಾಗಿ ಸಾಕಷ್ಟು ಖರ್ಚು ಮಾಡುತಿದ್ದಾರೆ. ಅವರಿಂದ ಸಾವಿರಾರು ಮಕ್ಕಳಿಗೆ, ಅದರಲ್ಲಿಯೂ ಹೆಣ್ಣು ಮಕ್ಕಳಿಗೆ ಅನುಕೂಲವಾಗುತ್ತಿದೆ. ಅವರು ಮಾಡುವ ಸೇವೆಯೂ ಸಾರ್ಥಕ ಎನಿಸುತ್ತದೆ ಎಂದು ನುಡಿದರು. ಕೌಶಲಾಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಮುರುಳೀಧರ ಹಾಲಪ್ಪ ಮಾತನಾಡಿ, ವ್ಯವಸ್ಥೆಯ ವಿರುದ್ಧ ಈಜುವುದನ್ನು ಇಂದಿನ ಮಕ್ಕಳು ಕಲಿಯಬೇಕು. ಎಂಜಿನಿಯರ್‌ಆಗಿದ್ದ ಮಹಿಳೆಯೊಬ್ಬರು ಅಪ್ಪನ ಆಸ್ತಿ ಹಂಚಿಕೆ ವೇಳೆ ಸಬ್ ರಿಜಿಸ್ಟ್ರಾರ್‌ಕಚೇರಿಯಲ್ಲಾದ ಕಹಿ ಅನುಭವವನ್ನೇ ಸವಾಲಾಗಿ ತೆಗೆದುಕೊಂಡು, ಐಎಎಸ್ ಪರೀಕ್ಷೆ ಬರೆದು ಜಿಲ್ಲಾಧಿಕಾರಿಯಾಗಿದ್ದಾರೆ. ಇಂತಹ ಹಲವಾರು ಉದಾಹರಣೆಗಳು ನಮ್ಮ ಮುಂದಿವೆ. ಮಕ್ಕಳು ಮೊಬೈಲ್ನಿಂದ ಹೊರಬಂದು ಬದುಕು ಕಟ್ಟಿಕೊಳ್ಳುವತ್ತ ಗಮನಹರಿಸಬೇಕು ಗುಣಮಟ್ಟದ ಶಿಕ್ಷಣದೊಂದಿಗೆ ಉತ್ತನ ಹುದ್ದೆ ಅಲಂಕರಿಸುವ ಕನಸು ನಿಮ್ಮದಾಗಲಿ ಎಂದರು.

ವೇದಿಕೆಯಲ್ಲಿ ವುಡೇ ಪೌಂಢೇಷನ್ನ ನಾಗರತ್ನಮ್ಮ, ಶೀಲಾ ರಾಜು, ಶುದ್ಧಿ ಚಾರಿಟಬಲ್ ಟ್ರಸ್ಟ್ ಸೌಮ್ಯ ಪ್ರದೀಪ್, ಎಚ್.ವಿ.ಸುಗುಣ, ಉಮಾದೇವಿ ಮತ್ತಿತರರು ಉಪಸ್ಥಿತರಿದ್ದರು. ಪ್ರತಿಭಾಪುರಸ್ಕಾರಕ್ಕೆ ಆಯ್ಕೆಯಾಗಿದ್ದ 32 ಮಕ್ಕಳು ಹಾಗೂ ಅವರ ಪೋಷಕರು ಮತ್ತು ಶಿಕ್ಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಗರದ ಕೃಷಿಕ್ ಪೌಂಢೇಷನ್ ಸಭಾಂಗಣದಲ್ಲಿ ವುಡೇ ಪ್ರತಿಷ್ಠಾನ ಬೆಂಗಳೂರು ವತಿಯಿಂದ ನೀಡುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪ್ರಶಸ್ತಿ ಪತ್ರ ನೀಡಲಾಯಿತು.

ರಸ್ತೆ ಸುರಕ್ಷಾ ನಿಯಮ ಎಲ್ಲರೂ ಪಾಲಿಸಿ: ನ್ಯಾ.ಶಕುಂತಲಾ

ಚಿಂತಾಮಣಿ: ಲಿಂಗ ಅಸಮಾನತೆ, ನಿರುದ್ಯೋಗ, ಮಾನವ ಹಕ್ಕುಗಳು ಮತ್ತು ಸಾಮಾಜಿಕ ರಕ್ಷಣೆಗಳಂತಹ ಸಮಸ್ಯೆಗಳನ್ನು ನಿಭಾಯಿಸಿ, ಸಾಮಾಜಿಕ ನ್ಯಾಯವನ್ನು ಉತ್ತೇಜಿಸುವ ಉದ್ದೇಶದಿಂದ ವಿಶ್ವ ಸಾಮಾಜಿಕ ನ್ಯಾಯ ದಿನವನ್ನು ಆಚರಿಸಲಾಗುತ್ತದೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಧೀಶರಾದ ಶಕುಂತಲಾ ಆರ್‌ರವರು ಹೇಳಿದರು.

ಚಿಂತಾಮಣಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಚಿಂತಾಮಣಿ ನಗರದ ತಾಲೂಕು ಪಂಚಾಯಿತಿ ಸಾಮರ್ಥ್ಯ ಸೌಧ ಸಭಾಂಗಣದಲ್ಲಿ ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ ಅಂಗವಾಗಿ ರಸ್ತೆ ಸುರಕ್ಷತಾ ಕಾರ್ಯಕ್ರಮ ವನ್ನು ಆಯೋಜಿಸಲಾಗಿತ್ತು

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದವರು ಜೀವನದಲ್ಲಿ ಪ್ರತಿಯೊಬ್ಬರಿಗೆ ಶಿಕ್ಷಣ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಇನ್ನಿತರ ಎಲ್ಲ ಕ್ಷೇತ್ರಗಳಲ್ಲಿ ಸಮಾಜಿಕ ನ್ಯಾಯದ ಪ್ರಕಾರ ಅವಕಾಶಗಳು ಸಿಗಬೇಕು. ಆಗ ವಿಶ್ವ ಸಾಮಾಜಿಕ ನ್ಯಾಯ ದಿನಕ್ಕೆ ಅರ್ಥ ಬರುತ್ತದೆ ಎಂದರು. ನಂತರ ಎ ಆರ್‌ಟಿ ಒ ಕಚೇರಿಯ ಅಧಿಕಾರಿ ಬೈರಾರೆಡ್ಡಿ ಮಾತನಾಡಿ ವಾಹನ ಚಾಲಕರು ವಾಹನ ಚಲಾಯಿಸುವಾಗ ಜವಾಬ್ದಾರಿಯಿಂದ ಚಲಾಯಿಸಬೇಕು! ಅಜಾಗರೂಕತೆ ಹಾಗೂ ನಿರ್ಲಕ್ಷದಿಂದ ಚಾಲಕರು ವಾಹನವನ್ನು ಚಲಾಯಿಸುವುದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆಗಳು ಇರುವುದರಿಂದ ರಸ್ತೆ ಸುರಕ್ಷತಾ ಹಾಗೂ ಕಾನೂನನ್ನು ಪಾಲನೆ ಮಾಡಿ ವಾಹನಗಳನ್ನು ಚಲಾಯಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಎಸ್ ಆನಂದ್, ಮೋಟಾರ್‌ವಾಹನ ನಿರೀಕ್ಷಕರಾದ ನರಸೇಗೌಡ, ಮಾತನಾಡಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷರಾದ ಶ್ರೀನಿವಾಸ್, ಡಿವೈ ಎಸ್ ಪಿ ಮುರುಳಿಧರ್, ಕೆಎಸ್‌ಆರ್‌ಟಿಸಿ ವಿಭಾಗದ ವ್ಯವಸ್ಥಾಪಕರಾದ ಸುಜಾತ, ಸೇರಿದಂತೆ ಆಟೋ ವಾಹನ ಚಾಲಕರು, ಗೂಡ್ಸ್ ವಾಹನ ಚಾಲಕರು, ಮತ್ತಿತರರು ಇದ್ದರು.

ಕೊಳಚೆ ನಿರ್ಮೂಲನಾ ಮಂಡಳಿ ಹಕ್ಕುಪತ್ರ ನೀಡಿಲ್ಲ: ಶಾಸಕ

ರಾಮನಗರ: ವಸತಿ ಸಚಿವರ ಗಮನಕ್ಕೆ ತಂದು 2016 ರಿಂದ 2026 ರವರೆಗೆ ಕೊಳಚೆ ನಿರ್ಮೂಲನ ಮಂಡಳಿಯವರು ಯಾರಿಗೂ ಹಕ್ಕುಪತ್ರ ನೀಡಿಲ್ಲ, ಸಾಕಷ್ಟು ಬಡವರಿಗೆ ಅನಾನುಕೂಲವಾಗಿತ್ತು. ಇಂದು ನಗರ ವ್ಯಾಪ್ತಿಯ 1500 ಬಡ ಜನರಿಗೆ ಹಕ್ಕುಪತ್ರ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ' ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ತಿಳಿಸಿದರು.

ನಗರದ ಶಾಸಕರ ಭವನದಲ್ಲಿ ಕರ್ನಾಟಕ ಸರಕಾರದ ವಸತಿ ಇಲಾಖೆ ಕರ್ನಾಟಕ ಕೊಲಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಗರ ವ್ಯಾಪ್ತಿಯ 1500 ಜನರಿಗೆ ಹಕ್ಕುಪತ್ರ ಕಾರ್ಯಕ್ರಮ ಉದ್ಘಾಟಿಸಿ ಮಾಧ್ಯಮದೊಂದಿಗೆ ಮಾತನಾಡಿ, ಇಂದು ಪ್ರಾಯೋಗಿಕವಾಗಿ 200 ಜನರಿಗೆ ಹಕ್ಕುಪತ್ರ ವಿತರಣೆ ಮಾಡುತ್ತಿದ್ದೇವೆ. ಖಾಸಗಿಯವರ ಹೆಸರಿನಲ್ಲಿ ಪಹಣಿ ಇದೆ. ಅದನ್ನು ಬದಲಾವಣೆ ಮಾಡಿ ತಹಸೀಲ್ದಾರ್, ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದ ನಂತರ ಅವರು ಕೂಡ ಖಾಸಗಿಯವರ ಹೆಸರಿನ ಪಹಣಿಯನು ಬದಲಾವಣೆ ಮಾಡಿ ಕೊಡಲಾಗುತ್ತದೆ. ಸುಮಾರು 1500 ಜನರಿಗೆ ಇಂದು ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಹಕ್ಕುಪತ್ರ ವಿತರಣೆ ಮಾಡುತ್ತಿದ್ದೇವೆ ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಳಿದ ಎರಡೂವರೆ ವರ್ಷಗಳಿಗೆ ಮುಖ್ಯಮಂತ್ರಿ ಆಗಬೇಕೆಂದು ಕಾಂಗ್ರೆಸ್ ಶಾಸಕರು, ಸಚಿವರ ಬೇಡಿಕೆ ಮತ್ತು ತೀರ್ಮಾನವಾಗಿದೆ. ಗೊಂದಲಕ್ಕೆ ಯಾವುದೇ ಆಸ್ಪದ ನೀಡದೇ ತೆರೆ ಎಳೆಯಿರಿ ಎಂದು ಪಕ್ಷದ ಸೂಚನೆ ನೀಡಿದೆ.

ರಾಮನಗರದ ಶಾಸಕರ ಕಚೇರಿಯಲ್ಲಿಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಗರ ವ್ಯಾಪ್ತಿಯ 1500 ಜನರಿಗೆ ಹಕ್ಕುಪತ್ರ ವಿತರಣೆ ಮಾಡಲಾಯಿತು.

ಸತೀಶ್ ಜಾರಕಿಹೋಳಿಯವರ ಕಾಂಗ್ರೆಸ್ ಪಕ್ಷದ ಹಿರಿಯ ಸಚಿವರು ಅವರೂ ಕೂಡ ಡಿ.ಕೆ. ಶಿವಕುಮಾರ್‌ಮುಖ್ಯಮಂತ್ರಿಯಾಗಬೇಕೆಂದು ಧ್ವನಿಗೂಡಿಸಿದ್ದಾರೆ. ಆದಷ್ಟು ಈ ಗೊಂದಲಗಳಿಗೆ ತೆರೆ ಬೀಳಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ಅಧಿಕಾರಿಗಳು, ನಗರಸಭೆ ಆಯುಕ್ತ ಡಾ.ಸಿ.ಜಯಣ್ಣ, ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಫೈರೋಜ್ಪಾಷ, ನಗರಸಭೆ ಸದಸ್ಯರಾದ ಆಯಿಷಾಬೇಗಂ, ಅಜ್ಮತ್, ನಿಜಾಮುದ್ದೀನ್, ಮುಖಂಡರಾದ ಶಫಿ ಅಹಮದ್, ಗುರುಪ್ರಸಾದ್, ಷಡಕ್ಷರಿ, ಸಿಎನ್‌ಆರ್‌ವೆಂಕಟೇಶ್, ನಾಗೇಶ್, ಜಗದೀಶ್ ಸೇರಿದಂತೆ ನಗರಸಭೆ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

> ಪಕ್ಷದ ಇನ್ನೂ ಹೆಚ್ಚಿನ ಸಂಘಟನೆಗೆ ಅನುಕೂಲವಾಗಬೇಕಾದರೆ ಡಿಕೆಶಿ ಮುಖ್ಯಮಂತ್ರಿಯಾದರೆ ಒಳಿತು. ಅವರು ಕೂಡ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬರಲು ಹಗಲಿರುಳು ಸಾಕಷ್ಟು ಹೋರಾಟ ಮಾಡಿದ್ದಾರೆ. ಅವರಿಗೂ ಕೂಡ ಎರಡೂವರೆ ವರ್ಷ ಅಧಿಕಾರ ಬಿಟ್ಟುಕೊಡಬೇಕೆಂದು ಎಲ್ಲರೂ ಮನವಿ ಮಾಡಿದವರಲ್ಲಿ ನಾನೂ ಒಬ್ಬ ಎಂದರು. ಕುರಿ ಕಾಯುವವರು ಮುಖ್ಯಮಂತ್ರಿಯಾಗಿದ್ದಾರೆ ಎಂದು ಹೊಟ್ಟೆಕಿಚ್ಚುಪಡುತ್ತಿದ್ದಾರೆ ಎಂಬ ಹೇಳಿಕೆಗೆ ಅವರು ಉತ್ತರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಹಳ ಗೌರವವುಳ್ಳವರು, ಒಳ್ಳೆಯ ಆಡಳಿತ ಕೊಟ್ಟಂತವರು, ಅವರದೇ ಆದ ಗೌರವ ಇಡೀ ರಾಜ್ಯದಾದ್ಯಂತ ಇದೆ.
>
> -ಎಚ್.ಎ.ಇಕ್ಬಾಲ್ ಹುಸೇನ್ ಶಾಸಕ

ಡಾ.ಅಂಬೇಡ್ಕರ್ ಆದರ್ಶ ಅಳವಡಿಸಿಕೊಳ್ಳಲು ಸಲಹೆ

ರಾಮನಗರ: ಡಾ. ಬಿ. ಆರ್. ಅಂಬೇಡ್ಕರ್‌ಅವರ ಆದರ್ಶ ಗುಣಗಳನ್ನು ಮಾದರಿಯಾಗಿ ತೆಗೆದುಕೊಂಡು ಎಲ್ಲರೂ ಜಾತಿ ಭೇದ-ಭಾವಗಳನ್ನು ಬಿಟ್ಟು ಬಾಳಬೇಕು. ಸಮಾಜದಲ್ಲಿ ಮೇಲರಿಮೆ, ಕೀಳರಿಮೆ ಎಂಬ ಭಾವನೆ ಇರಕೂಡದು, ಇದರಿಂದಾಗಿ ಸಮ ಸಮಾಜದ ನಿರ್ಮಾಣ ಅಸಾಧ್ಯ ಎಂದು ಬರಹಗಾರ ಹಾಗೂ ತಹಸೀಲ್ದಾರ್ ಹೊ.ಬ.ನಾಗ ಸಿದ್ದಾರ್ಥ್ ತಿಳಿಸಿದರು. ಜಾನಪದ ಲೋಕದಲ್ಲಿ ಕರ್ನಾಟಕ ಭೀಮ್ ಸೇನೆಯ 4ನೇ ವರ್ಷದ ವಾರ್ಷಿಕೋತ್ಸವ ಹಾಗೂ ಭೀಮ ರತ್ನ ಪ್ರಶಸ್ತಿ ಪ್ರಧಾನ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ್‌ಅವರು ಅಸ್ಪೃಶ್ಯತೆ ನಿವಾರಣೆಗಾಗಿ ಹೋರಾಡಿದ ಮಹಾನ್ ಮಾನವತಾವಾದಿ. ಸಮ ಸಮಾಜದ ಕಲ್ಪನೆ ಸಾಕಾರಗೊಳ್ಳಬೇಕಾದರೆ ನಾವೆಲ್ಲ ಅವರ ಆದರ್ಶಗಳನ್ನು ಪಾಲಿಸಬೇಕು ಎಂದರು. ಅಸ್ಪೃಶ್ಯತೆ ನೋವು ತಿಳಿಯಬೇಕಾದರೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಅವರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡುವಂತಾಗಬೇಕು. ಅಂಬೇಡ್ಕರ್‌ಶೋಷಿತ ಸಮುದಾಯದ ಧನಿಯಾಗಿದ್ದರು. ಅವರ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಅವರ ಕೆಲಸಗಳು ನಮ್ಮೆಲ್ಲರಿಗೂ ಆದರ್ಶ. ನಾವೆಲ್ಲ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಭಾವನೆಗಳನ್ನು ಎತ್ತಿಹಿಡಿಯುವ ಜೊತೆಗೆ ಅವುಗಳನ್ನು ಮೈಗೂಡಿಸಿಕೊಳ್ಳಬೇಕು. ಹಾಗಾದಾಗ ಮಾತ್ರ ಅಂಬೇಡ್ಕರ್‌ಕಂಡ ಪ್ರಜಾಪ್ರಭುತ್ವದ ಕನಸು ನನಸಾಗಿಸಲು ಸಾಧ್ಯ ಎಂದರು.

ಹ್ಯಾನ್ಲನ್ಸ್ ರೇಜರ್ ಮತ್ತು ಆಕಮ್ಸ್ ರೇಜರ್ ಎಂದರೇನು?

ಯಾವುದಾದರೂ ಒಂದು ಕೆಟ್ಟ ಘಟನೆ ನಡೆದಾಗ, ಅದು ದುರುದ್ದೇಶದಿಂದ ನಡೆದಿದೆ ಎಂದು ಭಾವಿಸುವ ಬದಲು, ಅದು ಅಜ್ಞಾನ ಅಥವಾ ಮೂರ್ಖತನದಿಂದ ನಡೆದಿದೆ ಎಂದು ಭಾವಿಸುವುದು ಲೇಸು. ಇದನ್ನು 'ರೇಜರ್' ಎಂದು ಕರೆಯಲು ಕಾರಣವಿದೆ. ತರ್ಕಶಾಸ್ತ್ರದಲ್ಲಿ 'ರೇಜರ್' ಎಂದರೆ ಅನಗತ್ಯವಾದ ಊಹೆಗಳನ್ನು ಅಥವಾ ಸಂಕೀರ್ಣವಾದ ವಿಚಾರಗಳನ್ನು ಕತ್ತರಿಸಿ ಹಾಕಿ, ಸರಳವಾದ ಸತ್ಯವನ್ನು ಕಂಡುಕೊಳ್ಳುವ ಸಾಧನ ಎಂದರ್ಥ.

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಇಂಗ್ಲಿಷಿನಲ್ಲಿ 'ಹ್ಯಾನ್ಲನ್ಸ್ ರೇಜರ್' (Hanlon's Razor) ಎಂಬ ಪದಬಳಕೆಯನ್ನು ನೀವು ಕೇಳಿರಬಹುದು. ಉದಾಹರಣೆಗೆ- My roommate leaving the dishes out isn't a plot to make me angry; it's simply Hanlon's Razor in action, where ignorance is a better explanation than malice. ಇದು ನಮ್ಮ ದೈನಂದಿನ ಸಂಬಂಧಗಳು, ಸಾಮಾಜಿಕ ವ್ಯವಹಾರ ಮತ್ತು ವೃತ್ತಿಜೀವನದಲ್ಲಿ ಎದುರಾಗುವ ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸಲು ಇರುವ ಅತ್ಯಂತ ಉಪಯುಕ್ತ 'ಮಾನಸಿಕ ಸಾಧನ' (Mental Model). 'ಇದು ಒಂದು ಪ್ರಮಾದ, ಆದರೆ ಸಂಚಲ್ಲ' ಎಂದು ಹೇಳುವಾಗ, 'ಹ್ಯಾನ್ಲನ್ಸ್ ರೇಜರ್' ಅಂತಾರೆ.

ಹ್ಯಾನ್ಲನ್ಸ್ ರೇಜರ್ ಅಂದರೇನು?

ಯಾವುದಾದರೂ ಒಂದು ಕೆಟ್ಟ ಘಟನೆ ನಡೆದಾಗ, ಅದು ದುರುದ್ದೇಶದಿಂದ ನಡೆದಿದೆ ಎಂದು ಭಾವಿಸುವ ಬದಲು, ಅದು ಅಜ್ಞಾನ ಅಥವಾ ಮೂರ್ಖತನದಿಂದ ನಡೆದಿದೆ ಎಂದು ಭಾವಿಸುವುದು ಲೇಸು.



ಇದನ್ನು 'ರೇಜರ್' ಎಂದು ಕರೆಯಲು ಕಾರಣವಿದೆ. ತರ್ಕಶಾಸ್ತ್ರದಲ್ಲಿ 'ರೇಜರ್' ಎಂದರೆ ಅನಗತ್ಯವಾದ ಊಹೆಗಳನ್ನು ಅಥವಾ ಸಂಕೀರ್ಣವಾದ ವಿಚಾರಗಳನ್ನು ಕತ್ತರಿಸಿ ಹಾಕಿ, ಸರಳವಾದ ಸತ್ಯವನ್ನು ಕಂಡುಕೊಳ್ಳುವ ಸಾಧನ ಎಂದರ್ಥ.

ಈ ಸಿದ್ಧಾಂತ ಉಗಮವಾಗಿದ್ದು ಹೇಗೆ ?

ಈ ಹೆಸರನ್ನು ರಾಬರ್ಟ್ ಜೆ. ಹ್ಯಾನ್ಲನ್ ಎಂಬುವವ ಹುಟ್ಟು ಹಾಕಿದ. ಅವರು 1980ರಲ್ಲಿ ಒಂದು ಜೋಕ್ ಪುಸ್ತಕಕ್ಕೆ ಈ ಸಾಲನ್ನು ಬರೆದಿದ್ದ. ಆದರೆ, ಇದೇ ರೀತಿಯ ಆಲೋಚನೆಯನ್ನು ನೆಪೋಲಿಯನ್ ಬೋನಪಾರ್ಟೆ, ಗಯಟೆ ಮುಂತಾದ ಮಹಾನ್ ವ್ಯಕ್ತಿಗಳು ಈ ಹಿಂದೆಯೇ ವ್ಯಕ್ತಪಡಿಸಿದ್ದರು.

ನೀವು ಕಾರು ಚಲಾಯಿಸುತ್ತಿರುವಾಗ ಯಾರೋ ಒಬ್ಬರು ಹಠಾತ್ತನೆ ನಿಮ್ಮ ಮುಂದೆ ಅಡ್ಡ ಬಂದು ಬ್ರೇಕ್ ಹಾಕುತ್ತಾರೆ ಎಂದುಕೊಳ್ಳಿ. ನಮಗೆ ತಕ್ಷಣ ಅನ್ನಿಸುವುದು 'ಇವನು ಬೇಕೆಂದೇ ನನ್ನನ್ನು ಕೆಣಕುತ್ತಿದ್ದಾನೆ' ಅಥವಾ 'ನನಗೆ ಅಪಘಾತ ಮಾಡಲು ನೋಡುತ್ತಿದ್ದಾನೆ' ಎಂದು. ಆದರೆ ಹ್ಯಾನ್ಲನ್ಸ್ ರೇಜರ್ ಪ್ರಕಾರ, ಆ ವ್ಯಕ್ತಿ ಹೊಸಬನಾಗಿರಬಹುದು, ದಾರಿ ತಪ್ಪಿರಬಹುದು ಅಥವಾ ಆ ಕ್ಷಣಕ್ಕೆ ಗಾಬರಿಯಾಗಿರಬಹುದು. ಅಲ್ಲಿ ದುರುದ್ದೇಶಕ್ಕಿಂತ ಹೆಚ್ಚಾಗಿ ಅಚಾತುರ್ಯವಿರುತ್ತದೆ.

ನಿಮ್ಮ ಬಾಸ್ ಅಥವಾ ಸಹೋದ್ಯೋಗಿ ನಿಮ್ಮ ಮಹತ್ವದ ಇಮೇಲ್‌ಗೆ ರಿಪ್ಲೈ ಮಾಡದಿದ್ದಾಗ, 'ಅವರು ನನ್ನನ್ನು ಕಡೆಗಣಿಸುತ್ತಿದ್ದಾರೆ' ಅಥವಾ 'ನನ್ನ ಮೇಲೆ ಅವರಿಗೆ ಸಿಟ್ಟಿದೆ' ಎಂದು ನಾವು ಭಾವಿಸುತ್ತೇವೆ. ಆದರೆ ಸತ್ಯ ಏನೆಂದರೆ, ಅವರು ಕೆಲಸದ ಒತ್ತಡದಲ್ಲಿ ಅದನ್ನು ಮರೆತಿರಬಹುದು ಅಥವಾ ಇನ್‌ಬಾಕ್ಸ್‌ನ ಹತ್ತಾರು ಇ-ಮೇಲ್‌ಗಳ ಮಧ್ಯೆ ಅದು ಕಾಣಿಸದೇ ಇರಬಹುದು.

ಪತ್ರಿಕೆಯಲ್ಲಿ ಯಾವುದೋ ಒಂದು ತಪ್ಪು ಮಾಹಿತಿ ಪ್ರಕಟವಾದಾಗ ಓದುಗರು 'ಇವರು ಬೇಕೆಂದೇ ಹೀಗೆ ಬರೆದಿದ್ದಾರೆ' ಎಂದು ದೂರುತ್ತಾರೆ. ಆದರೆ ಬಹುತೇಕ ಬಾರಿ ಅದು 'ಡೆಡ್‌ಲೈನ್' ಒತ್ತಡದಲ್ಲಿ ಆದ ಪ್ರೂಫ್ ಮಿಸ್ಟೇಕ್ ಆಗಿರುತ್ತದೆಯೇ ಹೊರತು ಉದ್ದೇಶಪೂರ್ವಕ ಸಂಚಲ್ಲ.

ಇದರ ಮಹತ್ವ ಮತ್ತು ಅನುಕೂಲಗಳೇನೆಂದರೆ, ಎಲ್ಲರೂ ನಮ್ಮ ವಿರುದ್ಧ ಸಂಚು ಮಾಡುತ್ತಿದ್ದಾರೆ ಎಂಬ ಭ್ರಮೆಯಿಂದ ನಮಗೆ ಮುಕ್ತಿ ಸಿಗುತ್ತದೆ. ಬೇರೆಯವರನ್ನು ತಕ್ಷಣಕ್ಕೆ ಖಳನಾಯಕ ಎಂದು ಮುದ್ರೆ ಹಾಕುವ ಬದಲು, ಅವರಿಗೆ ಒಂದು ಅವಕಾಶ ನೀಡಲು ಇದು ಸಹಾಯ ಮಾಡುತ್ತದೆ. 'ಅವರು ಯಾಕೆ ಹೀಗೆ ಮಾಡಿದರು?' ಎಂದು ಗಂಟೆಗಟ್ಟಲೆ ಯೋಚಿಸಿ ತಲೆ ಕೆಡಿಸಿಕೊಳ್ಳುವ ಬದಲು, ಅದು ಕೇವಲ ಒಂದು ಆಕಸ್ಮಿಕ ತಪ್ಪು ಎಂದು ಸಮಾಧಾನ ಮಾಡಿಕೊಳ್ಳಬಹುದು.

ಹ್ಯಾನ್ಲನ್ಸ್ ರೇಜರ್ ಎಲ್ಲದಕ್ಕೂ ಮದ್ದಲ್ಲ. ಒಬ್ಬ ವ್ಯಕ್ತಿ ಸತತವಾಗಿ ನಿಮಗೆ ತೊಂದರೆ ಕೊಡುತ್ತಿದ್ದರೆ ಅಥವಾ ಸಂಚು ಮಾಡುತ್ತಿರುವುದು ಸಾಬೀತಾದರೆ, ಆಗಲೂ ಅದನ್ನು 'ಮೂರ್ಖತನ' ಎಂದು ನಿರ್ಲಕ್ಷಿಸಬಾರದು. ಹ್ಯಾನ್ಲನ್ಸ್ ರೇಜರ್ ನಮಗೆ ಸಹಾನುಭೂತಿ ನೀಡಬೇಕೇ ಹೊರತು ನಮ್ಮನ್ನು ದಡ್ಡರನ್ನಾಗಿ ಮಾಡಬಾರದು.

ಹಾಗೆ ಇನ್ನೊಂದು ರೇಜರ್ ಇದೆ. ಅದಕ್ಕೆ 'ಆಕಮ್ಸ್ ರೇಜರ್' (Occam's Razor) ಅಂತಾರೆ. ಇದು ಕೇವಲ ತತ್ವಶಾಸ್ತ್ರದ ವಿಷಯವಲ್ಲ, ಅದು ನಮ್ಮ ದೈನಂದಿನ ಗೊಂದಲಗಳನ್ನು ಪರಿಹರಿಸುವ ಒಂದು ಅದ್ಭುತ 'ತರ್ಕದ ಕತ್ತರಿ'. ನಮಗೆ ಯಾವುದಾದರೂ ವಿಷಯದ ಬಗ್ಗೆ ಸ್ಪಷ್ಟತೆ ಇಲ್ಲದಿದ್ದಾಗ, ನಮ್ಮ ಮಿದುಳು ಸಾವಿರಾರು ಸಂಕೀರ್ಣ ಕಾರಣಗಳನ್ನು ಸೃಷ್ಟಿಸಿ ನಮ್ಮನ್ನು ಗಾಬರಿಗೊಳಿಸುತ್ತದೆ. ಅಂಥ ಸಂದರ್ಭದಲ್ಲಿ ಈ ಸಿದ್ಧಾಂತವು ಅತ್ಯಂತ ಸರಳ ಸತ್ಯದತ್ತ ನಮ್ಮನ್ನು ಕರೆದೊಯ್ಯುತ್ತದೆ.

ಇದನ್ನು ಹದಿನಾಲ್ಕನೇ ಶತಮಾನದ ಇಂಗ್ಲಿಷ್ ತತ್ವಜ್ಞಾನಿ ವಿಲಿಯಂ ಆಫ್ ಆಕಮ್ ಜನಪ್ರಿಯಗೊಳಿಸಿದ. 'ರೇಜರ್' ಎಂಬ ಪದವನ್ನು ಇಲ್ಲಿ ಕೇವಲ ರೂಪಕವಾಗಿ ಬಳಸಲಾಗಿದೆ. ಅಂದರೆ, ಅನಗತ್ಯವಾದ ಊಹೆಗಳನ್ನು ಅಥವಾ ಸಂಕೀರ್ಣವಾದ ತರ್ಕಗಳನ್ನು ಕತ್ತರಿಸಿ ಹಾಕಿ, ಸತ್ಯದ ಹತ್ತಿರವಿರುವ ಸರಳ ವಿವರಣೆಯನ್ನು ಉಳಿಸಿಕೊಳ್ಳುವುದು ಇದರ ಉದ್ದೇಶ.

ಇದರ ಮೂಲಮಂತ್ರ- 'ಸರಳತೆಯೇ ಶ್ರೇಷ್ಠ'. ಅಂದರೆ, ಒಂದು ಘಟನೆಗೆ ಎರಡು ವಿವರಣೆಗಳಿದ್ದು, ಎರಡೂ ಆ ಘಟನೆಯನ್ನು ವಿವರಿಸುವಂತಿದ್ದರೆ, ಅದರಲ್ಲಿ ಯಾವುದು ಅತಿ ಕಡಿಮೆ ಊಹೆಗಳನ್ನು (Assumptions) ಹೊಂದಿದೆಯೋ ಅದೇ ನಿಜವಾಗಿರುವ ಸಾಧ್ಯತೆ ಹೆಚ್ಚು. ಉದಾಹರಣೆಗೆ, ನೀವು ಬೆಳಗ್ಗೆ ಎದ್ದಾಗ ನಿಮ್ಮ ಮನೆಯ ಹಿತ್ತಲಿನಲ್ಲಿ ಮರವೊಂದು ಬಿದ್ದಿರುವುದನ್ನು ಕಾಣುತ್ತೀರಿ.

ವಿವರಣೆ ಒಂದು: ರಾತ್ರಿ ಜೋರಾಗಿ ಗಾಳಿ ಬಂದಿದ್ದಕ್ಕೆ ಮರ ಬಿದ್ದಿರಬಹುದು.

ವಿವರಣೆ ಎರಡು: ಅನ್ಯಗ್ರಹ ಜೀವಿಗಳು ಬಂದು ಯಾವುದೋ ಪ್ರಯೋಗ ಮಾಡಲು ಮರವನ್ನು ಕೆಡವಿರಬಹುದು.

ಇಲ್ಲಿ ಎರಡನೇ ವಿವರಣೆಗಿಂತ ಮೊದಲನೆಯ ವಿವರಣೆ ಸರಳವಾಗಿದೆ ಮತ್ತು ನಮಗೆ ತಿಳಿದಿರುವ ವಾಸ್ತವಕ್ಕೆ ಹತ್ತಿರವಾಗಿದೆ. ಆದ್ದರಿಂದ ಅದೇ ಸತ್ಯ.

ಮಾನವನ ಸಹಜ ಗುಣವೆಂದರೆ ವಿಷಯಗಳನ್ನು ಸಂಕೀರ್ಣಗೊಳಿಸುವುದು. ನೀವು ನಿಮ್ಮ ಮಿತ್ರನಿಗೆ ಮೆಸೇಜ್ ಮಾಡುತ್ತೀರಿ, ಅವರು ನೋಡಿಯೂ ರಿಪ್ಲೈ ಮಾಡುವುದಿಲ್ಲ. ಆಗ ನಿಮ್ಮ ಮಿದುಳು ಹೀಗೆ ಯೋಚಿಸುತ್ತದೆ- 'ಅವರಿಗೆ ನನ್ನ ಮೇಲೆ ಕೋಪವಿರಬೇಕು', 'ನಾನು ಮೊನ್ನೆ ಹೇಳಿದ ಮಾತು ಅವರಿಗೆ ಚುಚ್ಚಿರಬೇಕು', 'ಅವರು ಈಗ ಹೊಸ ಗೆಳೆಯರ ಜತೆ ಬ್ಯುಸಿ ಆಗಿರಬಹುದು'. ಆದರೆ ಆಕಮ್ಸ್ ರೇಜರ್ ಪ್ರಕಾರ ಇಲ್ಲಿರುವ ಸರಳ ಸತ್ಯವೇನೆಂದರೆ, 'ಅವರು ಕೆಲಸದ ಒತ್ತಡದಲ್ಲಿ ನೋಡಿ ಮರೆತಿರಬಹುದು ಅಥವಾ ರಿಪ್ಲೈ ಮಾಡಲು ಅವರಿಗೆ ಸಮಯವಿರಲಿಕ್ಕಿಲ್ಲ'. ಈ ಸರಳ ಸತ್ಯವನ್ನು ಒಪ್ಪಿಕೊಂಡರೆ ನಮ್ಮ ಅರ್ಧದಷ್ಟು ಮಾನಸಿಕ ಒತ್ತಡ ಮಾಯವಾಗುತ್ತದೆ.

ವೈದ್ಯಕೀಯ ಲೋಕದಲ್ಲಿ ಒಂದು ಮಾತಿದೆ- 'ನೀವು ಕುದುರೆಯ ಕಾಲಿನ ಖುರಪುಟದ ಸದ್ದು ಕೇಳಿದಾಗ ಅದು ಕುದುರೆಯೇ ಇರಬಹುದು ಎಂದು ಯೋಚಿಸಿ, ಜೀಬ್ರಾ ಇರಬಹುದು ಎಂದು ಕಲ್ಪಿಸಿಕೊಳ್ಳಬೇಡಿ'. ಅಂದರೆ, ರೋಗಿಯೊಬ್ಬನಿಗೆ ಸಾಮಾನ್ಯ ಲಕ್ಷಣಗಳಿದ್ದರೆ, ಅದು ಯಾವುದೋ ಅಪರೂಪದ ರೋಗವಿರಬಹುದು ಎಂದು ಯೋಚಿಸುವ ಮೊದಲು, ಸಾಮಾನ್ಯವಾಗಿ ಬರುವ ಕಾಯಿಲೆಯೇ ಎಂದು ಪರೀಕ್ಷಿಸುವುದು ಸೂಕ್ತ.

ಪತ್ರಕರ್ತರಾಗಿ ನಾವು ಹಲವು ಸುದ್ದಿಗಳನ್ನು ವಿಶ್ಲೇಷಿಸುತ್ತೇವೆ. ಯಾವುದೋ ಒಂದು ರಾಜಕೀಯ ಬೆಳವಣಿಗೆ ನಡೆದಾಗ ಅದರ ಹಿಂದೆ ಯಾವುದೋ ದೊಡ್ಡ 'ಅಂತಾರಾಷ್ಟ್ರೀಯ ಸಂಚು' ಇದೆ ಎಂದು ಊಹಿಸುವ ಬದಲು, ಅದು ಸ್ಥಳೀಯ ಕಾರಣಗಳಿಗಾಗಿ ಅಥವಾ ವ್ಯಕ್ತಿಗತ ಹಿತಾಸಕ್ತಿಗಳಿಗಾಗಿ ನಡೆದಿರಬಹುದು ಎಂದು ಯೋಚಿಸಿದರೆ ಸುದ್ದಿಯ ನಿಖರತೆ ಹೆಚ್ಚುತ್ತದೆ. ಅತಿಯಾದ ಊಹೆಗಳು ಸುದ್ದಿಯನ್ನು ದಾರಿತಪ್ಪಿಸುತ್ತವೆ.

ಆಕಮ್ಸ್ ರೇಜರ್ ಅಂದರೆ ಸರಳವಾದದ್ದು ಯಾವಾಗಲೂ ಸರಿಯೇ ಆಗಿರುತ್ತದೆ ಎಂದಲ್ಲ. ಅದರ ಅರ್ಥವೇನೆಂದರೆ, 'ಸರಿಯಾಗಿದೆ ಎಂದು ಸಾಬೀತುಪಡಿಸಲು ಸಾಕಷ್ಟು ಪುರಾವೆಗಳಿಲ್ಲದಿದ್ದಾಗ, ಸರಳವಾದದ್ದನ್ನೇ ಆಯ್ಕೆ ಮಾಡುವುದು ಸುರಕ್ಷಿತ'. ಕೆಲವೊಮ್ಮೆ ಸತ್ಯವು ಸಂಕೀರ್ಣವಾಗಿರಬಹುದು, ಆದರೆ ಪುರಾವೆಗಳು ಸಿಗುವವರೆಗೂ ಸಂಕೀರ್ಣತೆಯ ಬೆನ್ನತ್ತಿ ಸಮಯ ವ್ಯರ್ಥ ಮಾಡುವುದು ಬೇಡ ಎನ್ನುತ್ತದೆ ಈ ಸಿದ್ಧಾಂತ.

ಬದುಕು ನಾವು ಅಂದುಕೊಂಡಷ್ಟು ಸಂಕೀರ್ಣವಾಗಿಲ್ಲ, ನಮ್ಮ ಅನಗತ್ಯ ಊಹೆಗಳೇ ಅದನ್ನು ಸಂಕೀರ್ಣವಾಗಿಸಿವೆ.

ಪ್ಯಾರೆಟೋ ತತ್ವ

ಹಾಗೆಯೇ ಇನ್ನೊಂದು ಪದಬಳಕೆಯಿದೆ. ಅದು ಪ್ಯಾರೆಟೋ ತತ್ವ (Pareto Principle). ಇದನ್ನು 80/20 ಅಂತಾನೂ ಕರೆಯುತ್ತಾರೆ.

1896ರಲ್ಲಿ ಇಟಲಿಯ ಅರ್ಥಶಾಸ್ತ್ರಜ್ಞ ವಿಲ್‌ಫ್ರೆಡೋ ಪ್ಯಾರೆಟೋ ಎಂಬುವವ ತನ್ನ ತೋಟದಲ್ಲಿ ಬಟಾಣಿ ಗಿಡಗಳನ್ನು ಗಮನಿಸುತ್ತಿದ್ದ. ಆಗ ಅವನಿಗೆ ಒಂದು ವಿಚಿತ್ರ ಸತ್ಯ ಗೋಚರವಾಯಿತು- ಅವನ ತೋಟದ ಒಟ್ಟು ಬಟಾಣಿ ಇಳುವರಿಯಲ್ಲಿ ಶೇ.80ರಷ್ಟು ಪಾಲು, ಕೇವಲ ಶೇ.20ರಷ್ಟು ಗಿಡಗಳಿಂದ ಬರುತ್ತಿತ್ತು!

ಇದನ್ನೇ ಅವನು ಇಟಲಿಯ ಆರ್ಥಿಕತೆಗೆ ಅನ್ವಯಿಸಿ ನೋಡಿದಾಗ, ಅಲ್ಲಿನ ಶೇ.80ರಷ್ಟು ಭೂಮಿ ಕೇವಲ ಶೇ.20ರಷ್ಟು ಜನರ ಕೈಯಲ್ಲಿದೆ ಎಂಬುದು ತಿಳಿಯಿತು. ಮುಂದೆ ಇದು 'ಪ್ಯಾರೆಟೋ ಪ್ರಿನ್ಸಿಪಲ್' ಎಂದು ಜಗತ್ತಿನಾದ್ಯಂತ ಪ್ರಖ್ಯಾತವಾಯಿತು.

ಸರಳವಾಗಿ ಹೇಳುವುದಾದರೆ, 'ಜೀವನದ ಬಹುಪಾಲು ಫಲಿತಾಂಶಗಳು (Outputs) ಅತ್ಯಂತ ಕಡಿಮೆ ಸಂಖ್ಯೆಯ ಕಾರಣಗಳಿಂದ (Inputs) ಉಂಟಾಗುತ್ತವೆ'. ನಮ್ಮ ಶ್ರಮ ಮತ್ತು ಅದರ ಫಲಿತಾಂಶದ ನಡುವೆ ಒಂದು ಅಸಮತೋಲನವಿರುತ್ತದೆ. ನಾವು ಮಾಡುವ ಎಲ್ಲ ಕೆಲಸಗಳೂ ಸಮಾನವಾದ ಪ್ರತಿಫಲ ನೀಡುವುದಿಲ್ಲ ಇಂದು ಹೇಳುವಾಗ, ಅದನ್ನು 'ಪ್ಯಾರೆಟೋ ತತ್ವ' ಎಂದು ಹೇಳುತ್ತಾರೆ.

ಯಾವುದೇ ಕಂಪನಿಯಲ್ಲಿ ಶೇ.80ರಷ್ಟು ಲಾಭವು ಕೇವಲ ಶೇ.20ರಷ್ಟು ಪ್ರಮುಖ ಗ್ರಾಹಕರಿಂದ ಬರುತ್ತದೆ. ದಿನವಿಡೀ ನೀವು ಮಾಡುವ ನೂರಾರು ಕೆಲಸಗಳಲ್ಲಿ, ಕೇವಲ ಶೇ.20ರಷ್ಟು ಕೆಲಸಗಳು ಮಾತ್ರ ನಿಮ್ಮ ವೃತ್ತಿಜೀವನದ ಯಶಸ್ಸಿಗೆ ಶೇ.80ರಷ್ಟು ಕೊಡುಗೆ ನೀಡುತ್ತವೆ. ಉಳಿದ ಶೇ.80ರಷ್ಟು ಕೆಲಸಗಳು ಕೇವಲ 'ಅಗತ್ಯ' ಎನಿಸುವ ಸಣ್ಣಪುಟ್ಟ ಕೆಲಸಗಳಾಗಿರುತ್ತವೆ.

ನೀವು ಒಂದು ದೇಶಕ್ಕೆ ಹೋದಾಗ ಅಲ್ಲಿನ ನೂರಾರು ಪ್ರವಾಸಿ ತಾಣಗಳ ಪೈಕಿ, ಕೇವಲ ಶೇ. 20ರಷ್ಟು ತಾಣಗಳು ನಿಮಗೆ ಶೇ.80ರಷ್ಟು ಸಂತೋಷ ಮತ್ತು ನೆನಪುಗಳನ್ನು ನೀಡುತ್ತವೆ.

ಈ ತತ್ವವನ್ನು ಹೇಗೆ ಬಳಸಿಕೊಳ್ಳಬೇಕು?

ನಿಮ್ಮ ದಿನನಿತ್ಯದ ಕೆಲಸಗಳ ಪಟ್ಟಿಯಲ್ಲಿ (To-do list) ಯಾವ ಎರಡು ಕೆಲಸಗಳು ನಿಮ್ಮ ದಿನದ ಯಶಸ್ಸನ್ನು ನಿರ್ಧರಿಸುತ್ತವೆ ಎಂದು ನೋಡಿ. ಆ ಶೇ.20ಕ್ಕೆ ಹೆಚ್ಚು ಶಕ್ತಿ ವ್ಯಯಿಸಿ. ಫಲಿತಾಂಶ ನೀಡದ ಶೇ.80ರಷ್ಟು ಕೆಲಸಗಳನ್ನು ಬೇರೆಯವರಿಗೆ ವಹಿಸಿ (Delegate) ಅಥವಾ ಅವುಗಳಿಗೆ ಕಡಿಮೆ ಸಮಯ ನೀಡಿ. ಕೆಲವೊಮ್ಮೆ ಕೆಲಸವನ್ನು ಶೇ. 80ರಷ್ಟು ಉತ್ತಮವಾಗಿ ಮಾಡಲು ಶೇ.20ರಷ್ಟು ಸಮಯ ಸಾಕಾಗುತ್ತದೆ. ಉಳಿದ ಶೇ.20ರಷ್ಟು ಸಣ್ಣಪುಟ್ಟ ತಪ್ಪುಗಳನ್ನು ಸರಿಪಡಿಸಲು ನಾವು ಶೇ.80ರಷ್ಟು ಸಮಯ ವ್ಯರ್ಥ ಮಾಡುತ್ತೇವೆ. ಇದನ್ನು ತಪ್ಪಿಸಬೇಕು.

ಪ್ಯಾರೆಟೋ ತತ್ವ ಎಂದರೆ ಶೇ.80ರಷ್ಟು ಕೆಲಸ ಮಾಡಬಾರದು ಎಂದಲ್ಲ. ಬದಲಿಗೆ, ಯಾವ ಕೆಲಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ನಿರ್ಧರಿಸುವ ದಿಕ್ಸೂಚಿ ಇದು. ಸಂಖ್ಯೆಗಳು ಯಾವಾಗಲೂ 80 ಮತ್ತು 20 ಆಗಿರಬೇಕಿಲ್ಲ. ಅದು 70/30 ಅಥವಾ 90/10 ಕೂಡ ಆಗಿರಬಹುದು. ಸಾರಾಂಶವೆಂದರೆ, 'ಇನ್‌ಪುಟ್' ಮತ್ತು 'ಔಟ್‌ಪುಟ್' ನಡುವಿನ ಅಸಮಾನತೆಯನ್ನು ಅರಿಯುವುದು.

ನೀವು ನಿಮ್ಮ ಕಪಾಟಿನಲ್ಲಿರುವ ಶೇ.80ರಷ್ಟು ಬಟ್ಟೆಗಳನ್ನು ಕೇವಲ ಶೇ.20ರಷ್ಟು ಸಂದರ್ಭಗಳಲ್ಲಿ ಮಾತ್ರ ಧರಿಸುತ್ತೀರಿ! ಇದು 'ಪ್ಯಾರೆಟೋ ತತ್ವ'.

'ಸಂಕ್ ಕಾಸ್ಟ್ ಫಾಲಸಿ' ಎಂದರೇನು?

'ಸಂಕ್ ಕಾಸ್ಟ್ ಫಾಲಸಿ' (Sunk Cost Fallacy) ಅಥವಾ 'ವ್ಯರ್ಥ ವೆಚ್ಚದ ಭ್ರಮೆ' ಎಂಬ ಪದಬಳಕೆಯಿದೆ. ಒಂದು ಸಿನಿಮಾವನ್ನು ಅರ್ಧ ನೋಡಿದ ಮೇಲೆ ತುಂಬಾ ಬೋರ್ ಅನಿಸಿದರೂ, 'ಟಿಕೆಟ್ ದುಡ್ಡು ಕೊಟ್ಟಿದ್ದೇನಲ್ಲ' ಎಂದು ಪೂರ್ತಿ ನೋಡುವುದು ಅಥವಾ ಲಾಭ ಕೊಡದ ಉದ್ಯಮಕ್ಕೆ ಈಗಾಗಲೇ ಹೂಡಿದ ಹಣದ ಮೇಲಿನ ವ್ಯಾಮೋಹದಿಂದ ಮತ್ತೆ ಮತ್ತೆ ಹಣ ಸುರಿಯುವುದಕ್ಕೆ 'ಸಂಕ್ ಕಾಸ್ಟ್ ಫಾಲಸಿ' ಅಂತಾರೆ.

'ಸಂಕ್ ಕಾಸ್ಟ್' ಎಂದರೆ ಏನು? ಅರ್ಥಶಾಸ್ತ್ರದಲ್ಲಿ 'ಸಂಕ್ ಕಾಸ್ಟ್' ಎಂದರೆ ಈಗಾಗಲೇ ಖರ್ಚಾಗಿಹೋದ ಮತ್ತು ಯಾವುದೇ ಕಾರಣಕ್ಕೂ ಮರಳಿ ಪಡೆಯಲು ಸಾಧ್ಯವಿಲ್ಲದ ಹಣ ಅಥವಾ ಸಂಪನ್ಮೂಲ ಎಂದರ್ಥ. ಉದಾಹರಣೆಗೆ, ನೀವು ತಿಂದ ಆಹಾರದ ಬಿಲ್ ಅಥವಾ ನೋಡಿದ ಸಿನಿಮಾದ ಟಿಕೆಟ್ ದರ. ಈ ಹಣವನ್ನು ನೀವು ಏನು ಮಾಡಿದರೂ ವಾಪಸ್ ಪಡೆಯಲು ಸಾಧ್ಯವಿಲ್ಲ. 'ನಾನು ಈಗಾಗಲೇ ಇದಕ್ಕೆ ಇಷ್ಟೊಂದು ಹಣ ಸುರಿದಿದ್ದೇನೆ, ಈಗ ಇದನ್ನು ಅರ್ಧಕ್ಕೆ ಬಿಟ್ಟರೆ ಅದೆಲ್ಲ ವ್ಯರ್ಥವಾಗುತ್ತದಲ್ಲ' ಎಂಬ ಆಲೋಚನೆಯೇ ಈ ಭ್ರಮೆಗೆ ಮೂಲ. 'ಹೋದದ್ದು ಹೋಯಿತು, ಇನ್ನು ಮುಂದಿನದನ್ನು ಉಳಿಸಿಕೊಳ್ಳೋಣ' ಎನ್ನುವ ಬದಲು 'ಹೋದದ್ದನ್ನು ಉಳಿಸಿಕೊಳ್ಳಲು ಇನ್ನಷ್ಟು ಕಳೆದುಕೊಳ್ಳೋಣ' ಎನ್ನುವ ತಪ್ಪು ನಿರ್ಧಾರವಿದು.

ಕೆಲವು ಸ್ನೇಹ ಅಥವಾ ಸಂಬಂಧಗಳು ನಮಗೆ ಮಾನಸಿಕ ನೆಮ್ಮದಿ ನೀಡುತ್ತಿರುವುದಿಲ್ಲ. ಆದರೆ 'ನಾವು ಹತ್ತು ವರ್ಷಗಳಿಂದ ಸ್ನೇಹಿತರಾಗಿದ್ದೇವಲ್ಲ' ಎಂಬ ಹಳೆಯ ಹೂಡಿಕೆಯ ಕಾರಣಕ್ಕೆ ಆ ಕಹಿ ಸಂಬಂಧವನ್ನು ಎಳೆಯುತ್ತಲೇ ಇರುತ್ತೇವೆ. ಲಾಭ ತರದ ಉದ್ಯಮವನ್ನು 'ಹಲವು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದೇವೆ' ಎಂಬ ಕಾರಣಕ್ಕೆ ಮುಂದುವರಿಸುವುದರಲ್ಲಿ ಅರ್ಥವಿಲ್ಲ.

ತಪ್ಪು ಹೂಡಿಕೆ ಮಾಡಿದ್ದೇವೆ ಎಂದು ಒಪ್ಪಿಕೊಳ್ಳುವುದು ಸೋಲಲ್ಲ, ಅದು ಬುದ್ಧಿವಂತಿಕೆ. ಹಡಗು ಮುಳುಗುತ್ತಿದೆ ಎಂದು ತಿಳಿದಾಗ, ನೀವು ಈ ಹಿಂದೆ ಅದಕ್ಕೆ ಎಷ್ಟು ಬಣ್ಣ ಹಚ್ಚಿದ್ದೀರಿ ಎಂಬುದು ಮುಖ್ಯವಾಗುವುದಿಲ್ಲ. ತಕ್ಷಣ ದೋಣಿಯಿಂದ ಇಳಿದು ಜೀವ ಉಳಿಸಿಕೊಳ್ಳುವುದು ಮುಖ್ಯವಾಗುತ್ತದೆ.

ಟ್ರಾಜಿಡಿ ಅಂದ್ರೆ ಅಜಗೀತೆ, ಲಾಸ್ಟ್ ಮೆಲೊಡಿ ಹಂಸಗೀತೆ

ನಿತ್ಯಜೀವನದ ಘಟನೆಗಳನ್ನು ಟ್ರಾಜಿಡಿ ಅಥವಾ ದುರಂತ ಎಂದು ಬಣ್ಣಿಸುವುದೇಕೆ? ಸಾವುನೋವು ಸಂಭವಿಸಬೇಕೆಂದಿಲ್ಲ, ಅಹಿತಕರ ಘಟನೆ ಏನೇ ನಡೆದರೂ ಅದು ದುರಂತ. ಕೆಲವರಿಗಂತೂ ಸಣ್ಣಪುಟ್ಟ ಸಂಗತಿಗಳೂ ದುರಂತವೆಂದೇ ದಾಖಲಾಗುತ್ತವೆ. ಒಂದು ಲೆಕ್ಕದಲ್ಲಿ ಅವರೆಲ್ಲ ನಾರ್ಮಲ್ ಲೈಫ್ ಲೀಡ್ ಮಾಡುವವರು. ಮಾರಣಾಂತಿಕ ಅಪಾಯಗಳೇನೂ ಅವರ ಚಿಂತೆ-ಚಿಂತನೆಯ ರಾಡಾರ್‌ನಲ್ಲಿ ಇರುವುದಿಲ್ಲ.



ತಿಳಿರು ತೋರಣ
ಶ್ರೀವತ್ಸ ಜೋಶಿ
vveditoped@gmail.com

ಅಜ ಅಂದರೆ ಆಡು. ಆಡಿಗೂ ಟ್ರಾಜಿಡಿಗೂ ಏನು ಸಂಬಂಧ? ಅದೊಂದು ಕುತೂಹಲದ ಸಂಗತಿ. ಭಾಷೆಯಲ್ಲಿ ಪದಗಳ ಹುಟ್ಟು ಮತ್ತು ಬೆಳವಣಿಗೆ ಹೇಗಿರುತ್ತದೆ, ಹೇಗೆ ಸಾಗುತ್ತದೆ ಎನ್ನುವುದಕ್ಕೆ ಒಂದು ಸ್ವಾರಸ್ಯಕರ ನಿದರ್ಶನ.

ನೀವೂ ಗಮನಿಸಿರಬಹುದು, ಇತ್ತೀಚಿನ ದಿನಗಳಲ್ಲಿ 'ದುರಂತ' ಎಂಬ ಪದಬಳಕೆ ಒಂದು ಕ್ಲಿಷೆಯೇ ಆಗಿಹೋಗಿದೆ. ಬ್ರೇಕಿಂಗ್ ನ್ಯೂಸ್‌ನ ಅವಸ್ಥೆಯೇ ಇದಕ್ಕೂ ಬಂದಿದೆ. ತೀವ್ರತೆ, ಪ್ರಸ್ತುತತೆ ಮತ್ತು ಆವಶ್ಯಕತೆಗಳ ಯಾವ ಮಾಪನಕ್ಕೂ ಹೋಗದೆ ವರದಿಯಾಗುವ ಎಲ್ಲ ಅವಘಡಗಳೂ ಈಗ ದುರಂತಗಳೇ. ''ರಂಜಾನ್ ಮೊದಲ ದಿನವೇ ಕರಾಚಿಯಲ್ಲಿ ಭೀಕರ ದುರಂತ: ಅಪಾರ್ಟ್‌ಮೆಂಟ್‌ನಲ್ಲಿ ಗ್ಯಾಸ್ ಸ್ಫೋಟಗೊಂಡು 16 ಜನರ ದುರ್ಮರಣ'', ''ಕ್ಯಾಲಿಫೋರ್ನಿಯಾದಲ್ಲಿ ಭಾರಿ ಹಿಮ ದುರಂತ: ಹಿಮಪಾತಕ್ಕೆ 8 ಮಂದಿ ಸ್ಕೀಯರ್ಸ್ ಬಲಿ'', ''ಬೆಂಗಳೂರಲ್ಲಿ ಹಳಿ ತಪ್ಪಿದ ನಮ್ಮ ಮೆಟ್ರೋ ಡ್ರೈವರ್‌ಲೆಸ್ ರೈಲು. ತಪ್ಪಿದ ಭಾರಿ ದುರಂತ'', ''ಬೆಂಕಿ ದುರಂತ: ಹಗಲಲ್ಲೇ ಹೊತ್ತಿ ಉರಿದ ಖಾಸಗಿ ಬಸ್'', ''ಅಜಿತ್ ಪವಾರ್ ವಿಮಾನ ದುರಂತ, ಮುಂದುವರಿದ ತನಿಖೆ'' ರೀತಿಯ ತಲೆಬರಹಗಳು ಪತ್ರಿಕೆಗಳಲ್ಲಿ, ಸುದ್ದಿವಾಹಿನಿಗಳಲ್ಲಿ ಬಂದು ಬಡಿಯುತ್ತಲೇ ಇರುತ್ತವೆ. ದುರಂತದಲ್ಲಿ ಒಂದು 'ಅಂತ' ಇದ್ದದ್ದು ಸಾಲದೆಂದು ಮತ್ತೊಂದು ಅಂತ್ಯ ಸೇರಿಸಿ ''ಹುಟ್ಟುಹಬ್ಬದಂದೇ ವಿಧಿಯ ಅಟ್ಟಹಾಸ. ಬರ್ತ್‌ಡೇ ಪಾರ್ಟಿ ಮುಗಿಸಿ ಬರುವಾಗ ದುರಂತ ಅಂತ್ಯ'' ರೀತಿಯ ಹೆಡ್‌ಲೈನುಗಳೂ ಆಗಾಗ ಅಪ್ಪಳಿಸುತ್ತವೆ.

ಒಟ್ಟಾರೆಯಾಗಿ ದುರಂತಗಳಿಗೆ ನಾವು ಒಗ್ಗಿಹೋಗಿದ್ದೇವೆ. ದಶಕಗಳ ಹಿಂದಿನ ಭೋಪಾಲ್ ವಿಷಾನಿಲ ದುರಂತ, ಚೆರ್ನೋಬಿಲ್ ಅಣುಸ್ಥಾವರ ದುರಂತ, ಬೆಂಗಳೂರಿನಲ್ಲಿ ವೀನಸ್ ಸರ್ಕಸ್ ದುರಂತ, ಗಂಗಾರಾಮ್ ಕಟ್ಟಡ ಕುಸಿತದ ದುರಂತ, ಅಮೆರಿಕದಲ್ಲಿ ವಿಶ್ವ ವಾಣಿಜ್ಯಕೇಂದ್ರ ಅವಳಿಗೋಪುರ ದುರಂತ, ಜಪಾನ್‌ನಲ್ಲಿ ಭೂಕಂಪ, ಇಂಡೋನೇಷ್ಯಾದಲ್ಲಿ ತ್ಸುನಾಮಿ ಹೀಗೆ ಭಾರಿ ದುರಂತಗಳಿಂದ ಹಿಡಿದು 'ಮ್ಯಾನ್‌ಹೋಲ್ ದುರಂತ, ಮೂವರ ಸಾವು', 'ಗರ್ಭಿಣಿ ಫೋಟೊಶೂಟ್ ವೇಳೆ ದುರಂತ, ಮೊದಲ ಮಗು ಸಾವು' ಎಂದು ಮುಂತಾಗಿ ದುರಂತಗಳ ಸುದ್ದಿಗಳು ಅಂತ್ಯವಿಲ್ಲದವಾಗುತ್ತವೆ. ಆಶ್ಚರ್ಯವೆಂದರೆ ಜೀವಹಾನಿ ಸಂಭವಿಸದಿರುವ ಅಪಘಾತವನ್ನೂ ದುರಂತವೆಂದೇ ಬಣ್ಣಿಸಲಾಗುತ್ತದೆ! 'ದೋಣಿ ದುರಂತ, ನಾಲ್ವರು ಪಾರು' ಎಂಬಂಥ ಸುದ್ದಿಶೀರ್ಷಿಕೆಗಳು ಅಪರೂಪವೇನಲ್ಲ. ಹಿಂದೊಮ್ಮೆ ನ್ಯೂಯಾರ್ಕ್ ಸಮೀಪ ಪ್ರಯಾಣಿಕರ ವಿಮಾನವೊಂದು ಪೈಲಟ್‌ನ ಚಾಣಾಕ್ಷತೆಯಿಂದ ಹಡ್ಸನ್ ನದಿಯಲ್ಲಿ ಅತ್ಯಾಶ್ಚರ್ಯಕರ ರೀತಿಯಲ್ಲಿ ಎಮರ್ಜೆನ್ಸಿ ಲ್ಯಾಂಡಿಂಗ್ ಮಾಡಿದ್ದನ್ನೂ 'ನದಿಗಿಳಿದ ವಿಮಾನ ದುರಂತ: ಪ್ರಯಾಣಿಕರೆಲ್ಲರೂ ಪವಾಡಸದೃಶ ಪಾರು' ಎಂದೇ ಬಿತ್ತರಿಸಲಾಗಿತ್ತು.

ಸುದ್ದಿಸಂಸ್ಥೆಗಳ ಸುದ್ದಿ ಬಿಡಿ, ಜನಸಾಮಾನ್ಯರ ಮಾತಿನಲ್ಲಿ ಸಮಾಚಾರಗಳು, ವ್ಯಾವಹಾರಿಕ ವಿಚಾರ ವಿನಿಮಯಗಳೂ ದುರಂತಮಯವೇ. ಹಿಂದೆ ಎಲ್ಲೋ ಅಪರೂಪಕ್ಕೆ ಕೇಳಿಬರುತ್ತಿದ್ದ ಡೈವೋರ್ಸ್ ಎನ್ನುವುದು ಈಗ ದೈನಂದಿನ ದುರಂತಗಳ ಸಾಲಿಗೆ ಸೇರಿದೆ. ಮೊಬೈಲ್ ಬಳಕೆಯ ಅತಿರೇಕದಿಂದ ಇಂದಿನ ಯುವಪೀಳಿಗೆಯ ಸಂವಹನ-ಸಂಪರ್ಕ ಭಾಷೆ ಅಷ್ಟೇ ಅಲ್ಲ ಜೀವನಶೈಲಿ ಕೂಡ ರಿಪೇರಿಯಾಗದಷ್ಟು ಖರಾಬಾಗಿದೆಯಲ್ಲ? ಅದೂ ದಿನನಿತ್ಯದ ದುರಂತ. ಜಾಗತೀಕರಣದ ಭೂತವು ಎಳನೀರು, ಮಜ್ಜಿಗೆ, ರಾಗಿಮಾಲ್ಟ್‌ಗಳ ಜಾಗದಲ್ಲಿ ಕೋಕ್, ಪೆಪ್ಸಿ, ಬಿಸ್ಲೇರಿಗಳನ್ನು ತಂದಿಟ್ಟಿರುವುದು ಒಂದು ದುರಂತವಾದರೆ, ಮೀಸಲಾತಿಯನ್ನು ದುರುಪಯೋಗಪಡಿಸಿಕೊಂಡ ಖದೀಮರು, ಮೈಗಳ್ಳರು ಉನ್ನತ ಸ್ಥಾನಗಳಿಗೇರಿ ಸಮಾಜದ ಸ್ವಾಸ್ಥ್ಯವನ್ನು ಅಧೋಗತಿಗಿಳಿಸಿರುವುದು ಮತ್ತೊಂದು ದುರಂತ. ಎಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಪಾಸಾಗುವುದೂ ದುರಂತ, ಪ್ರೀತಿಸಿದವಳು ಕೈಕೊಟ್ಟು ಬೇರೆಯವನೊಡನೆ ಓಡಿಹೋಗುವುದೂ ದುರಂತ. ಅದಕ್ಕೋಸ್ಕರ ಆತ್ಮಹತ್ಯೆ ಮಾಡಿಕೊಳ್ಳುವ ಅಗತ್ಯವಿಲ್ಲವಾದರೂ ಮಾಡಿಕೊಂಡರೆ ಅದೂ ದುರಂತ. ಸಚ್ಚಾರಿತ್ರ್ಯವುಳ್ಳ ಜನನಾಯಕನೊಬ್ಬ ಚುನಾವಣೆಯಲ್ಲಿ ಸೋಲುವುದೂ ದುರಂತ, ಕೆಟ್ಟವನೊಬ್ಬ ಗೆದ್ದುಬಂದು ಅಟ್ಟಹಾಸಗೈಯುವುದು ಅದಕ್ಕಿಂತ ದೊಡ್ಡ ದುರಂತ. ಕನ್ನಡನಾಡಿನ ರಾಜಧಾನಿಯಲ್ಲೇ ಕನ್ನಡ ಭಾಷೆ ಮತ್ತು ಕನ್ನಡಿಗ ಕೀಳಾಗಿ ಕಾಣಲ್ಪಡುವುದು ಕರುಳು ಕಿತ್ತುಬರುವಂಥ ದುರಂತ. ರೆಸ್ಟೋರೆಂಟ್‌ಗಳ ವಿಶ್ವರಾಜಧಾನಿ ಎಂಬ ಹೆಮ್ಮೆಯ ಬೆಂಗಳೂರಿನಲ್ಲಿ ಮನೆಗಳಲ್ಲಿ ಅಡುಗೆ ಆತಿಥ್ಯಗಳೆಲ್ಲ ಈಗ ಇಲ್ಲವಾಗುತ್ತಿರುವುದು ಅಷ್ಟೇ ಕಳವಳಕಾರಿ ದುರಂತ.

ಗಮನಿಸಬೇಕಾದ್ದೇನೆಂದರೆ ಈ ಎಲ್ಲ ಉದಾಹರಣೆಗಳಲ್ಲೂ ದುರಂತ ಎಂಬ ಪದ ಬಳಕೆಯಾಗಿರುವುದು ಇಂಗ್ಲಿಷ್‌ನ 'ಟ್ರಾಜಿಡಿ' ಎಂಬ ಅರ್ಥದಲ್ಲಿ. ಟ್ರಾಜಿಡಿ ಎಂಬ ಶಬ್ದವನ್ನು ನಾವು ಸಾಮಾನ್ಯವಾಗಿ ರಿಲೇಟ್ ಮಾಡುವುದು ಸಿನಿಮಾ, ನಾಟಕ, ಕಥೆ-ಕಾದಂಬರಿಗಳ ಸ್ವರೂಪಕ್ಕೆ, ಅವುಗಳ ಕಥಾಹಂದರಕ್ಕೆ ಮತ್ತು ಅವು ಮುಕ್ತಾಯಗೊಳ್ಳುವ ರೀತಿಗೆ. ದುಃಖದ ಸನ್ನಿವೇಶಗಳನ್ನೊಳಗೊಂಡವು, ವಿಶೇಷವಾಗಿ ದುಃಖದಲ್ಲೇ ಅಂತ್ಯಗೊಳ್ಳುವವು ಟ್ರಾಜಿಡಿ ಎನಿಸುತ್ತವೆ. ಅಂಥ ಸಿನಿಮಾಗಳಲ್ಲಿ ಕೊನೆಗೆ ತೆರೆಯ ಮೇಲೆ 'ಶುಭಂ' ಎಂದು ಮೂಡಿಬರುವುದಿಲ್ಲ, ಬದಲಿಗೆ ನಾಯಕ-ನಾಯಕಿ ಹೆಣವಾಗಿ ಬಿದ್ದಿರುವ ಹೃದಯವಿದ್ರಾವಕ ದೃಶ್ಯ, ಜತೆಗೆ 'ಪ್ರೀತಿಯೊಂದೇ ಶಾಶ್ವತ...' ಅಂತಲೋ 'ಪ್ರೇಮವೊಂದೇ ಅಮರ...' ಅಂತಲೋ ಏನಾದರೂ ಸಂದೇಶ. ಮಂಜಾದ ಕಣ್ಣುಗಳೊಂದಿಗೆ ಪ್ರೇಕ್ಷಕರು ಚಿತ್ರಮಂದಿರದಿಂದ ಹೊರಬರುತ್ತಾರೆ. ಟ್ರಾಜಿಡಿಯ ಟಿಪಿಕಲ್ ಡೆಫಿನಿಷನ್ ಅದು. ನಿಘಂಟುಗಳಲ್ಲೂ ಟ್ರಾಜಿಡಿಯ ಅರ್ಥವನ್ನು ಹಾಗೆಯೇ ವಿವರಿಸಿರುತ್ತಾರೆ- any play or narrative that seriously treats of calamitous events and has an unhappy but meaningful ending.

ಆದರೆ ಟ್ರಾಜಿಡಿ ಪದದ ಗ್ರೀಕ್ ಮೂಲ tragoidia ಎಂದು. ಅದರರ್ಥ goat song ಅಥವಾ ಹೋತದ ಹಾಡು ಎಂದು! ಮೂಲಧಾತು tragos ಅಂದರೆ ಹೋತ, ಗಂಡು ಆಡು. 'ಆಡಿನ ಹಾಡು' (ಅಕಾರ ಹಕಾರಗಳನ್ನು ಅದಲುಬದಲು ಮಾಡುವವರು 'ಹಾಡಿನ ಆಡು' ಎನ್ನಬಹುದು, ಅರ್ಥವ್ಯತ್ಯಾಸವೇನಿಲ್ಲ) ಮತ್ತು ದುಃಖಾಂತ್ಯಕ್ಕೆ ಏನು ಸಂಬಂಧ? ಪುರಾತನ ಗ್ರೀಕ್ ಕಲೆ, ಸಂಸ್ಕೃತಿ ಮತ್ತು ಜನಜೀವನಗಳನ್ನು ಆಳವಾಗಿ ಅಧ್ಯಯನ ಮಾಡಿರುವ ಜರ್ಮನ್ ವಿದ್ವಾಂಸ ವಾಲ್ಟರ್ ಬರ್ಕರ್ಟ್ ಇದನ್ನು ವಿವರಿಸಲಿಕ್ಕೆ ಕನ್ವಿನ್ಸಿಂಗ್ ಥಿಯರಿಯೊಂದನ್ನು ಮಂಡಿಸಿದ್ದಾರೆ: ಕ್ರಿಸ್ತಪೂರ್ವ ಐದು ಅಥವಾ ಆರನೆಯ ಶತಮಾನದ ಗ್ರೀಸ್ ದೇಶದಲ್ಲಿ ಡಯೊನಿಸಿಸ್ ದೇವತೆಯ ಉತ್ಸವ ನಡೆಯುವಾಗ ಹಾಡುಗಾರಿಕೆ ಸ್ಪರ್ಧೆ ಇರುತ್ತಿತ್ತಂತೆ. ಸ್ಪರ್ಧಾತ್ಮಕತೆ ಬಹುಶಃ ಗ್ರೀಕರ ನರನಾಡಿಗಳಲ್ಲಿ ಯಾವಾಗಲೂ ಹರಿಯುತ್ತಿರುತ್ತದೆ, ಅವರೇ ತಾನೆ ಒಲಿಂಪಿಕ್ಸ್ ಪಂದ್ಯಗಳನ್ನು ಆರಂಭಿಸಿದವರು? ಹಾಡಿನ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಒಂದು ಆಡು! ಆ ಆಡನ್ನು ಅಲ್ಲೇ ಕೊಂದು ಹಸಿಹಸಿ ತಿನ್ನುವಷ್ಟು ಉನ್ಮಾದದ ವಾತಾವರಣ. ಗ್ರೀಕ್ ಪುರಾಣಗಳ ಪ್ರಕಾರ ಡಯೊನಿಸಿಸ್ ಉನ್ಮಾದದ ದೇವತೆಯೆಂದೇ ಪ್ರಸಿದ್ಧಿ. ಡಯೊನಿಸಿಸ್ ಉತ್ಸವಗಳಲ್ಲಿ ಆಡಿನ ಬಲಿ ಕೊಡುವುದು ಮನುಷ್ಯ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತವಾಗಿ ದೇವರಿಗೆ ಅರ್ಪಣೆ ಎಂಬ ಭಾವವೂ ಇತ್ತು. ಆಡನ್ನು ಕೊಲ್ಲುವಾಗ ಡಿತಿರಾಂಬ್ ಎಂಬ ಹಾಡನ್ನು ಎಲ್ಲರೂ ಸೇರಿ ಹಾಡುವ ಪದ್ಧತಿ. ಕೊಲ್ಲುವವನು ಮುಸುಕುಧಾರಿ. ಅದೊಂದು ಭಯಾನಕ, ದುಃಖಕರ ಸನ್ನಿವೇಶ. ಕಟುಕ, ಕೊಲೆ, ರಕ್ತಪಾತ, ತಪ್ಪಿತಸ್ಥ ಭಾವ, ದುಃಖದ ಹಾಡು. ಟ್ರಾಜಿಡಿ ಎನಿಸಿಕೊಳ್ಳಲಿಕ್ಕೆ ಇನ್ನೇನು ಬೇಕು?

ಕೊಲ್ಲಲ್ಪಟ್ಟ ಆಡನ್ನು ಕುರಿತ ಚರಮಗೀತೆಯನ್ನೇ ಕಾಲಕ್ರಮೇಣ ಮನುಷ್ಯರ ನಿಧನಾನಂತರ ಹಾಡುವ ಸಂಪ್ರದಾಯ ಹುಟ್ಟಿಕೊಂಡಿತು. ಅರಿಸ್ಟಾಟಲ್ ತನ್ನ ಕೃತಿ 'ಪೊಯೆಟಿಕ್ಸ್'ನಲ್ಲಿ ಟ್ರಾಜಿಡಿಯನ್ನು ಮತ್ತಷ್ಟು ವಿವರಿಸುತ್ತಾನೆ. ಡಯೊನಿಸಿಸ್ ಉತ್ಸವಗಳಲ್ಲಿ ಡಿತಿರಾಂಬ್ ಹಾಡನ್ನು ಹಾಡುವಾಗ ಮುಖ್ಯ ಗಾಯಕ ಮತ್ತು ಸಂಗಡಿಗರ ನಡುವೆ ನಡೆಯುವ ಸಂಭಾಷಣೆ ನಾಟಕೀಯವಾಗುವುದನ್ನು ಬಣ್ಣಿಸುತ್ತಾನೆ. ಅದು ಬಹುಶಃ ನಮ್ಮಲ್ಲಿನ ಗೀಗೀ ಪದಗಳಲ್ಲಿ 'ಹೂಂ ಹೇಳಪ್ಪಾ...' ಅಂತಿರುತ್ತದಲ್ಲ ಹಾಗಿರುತ್ತಿತ್ತೋ ಏನೋ. ಸಮೂಹಗಾನದಲ್ಲಿ ಸಂಭಾಷಣೆಯನ್ನು ಆರಂಭಿಸಿದ ಕೀರ್ತಿ ಆ ಕಾಲದಲ್ಲಿ ಗ್ರೀಸ್‌ನಲ್ಲಿ

ಪ್ರಸಿದ್ಧ ಹಾಡುಗಾರ/ನಟ ಆಗಿದ್ದ ಥೆಸ್ಪಿಸ್‌ಗೆ ಸಲ್ಲುತ್ತದೆ. ಈಗಲೂ ಪ್ರಬುದ್ಧ ನಟರನ್ನು 'ಥೆಸ್ಪಿಯನ್' ಎನ್ನುವುದು ಈತನ ಹೆಸರಿನಿಂದಾಗಿಯೇ. ಇನ್ನೊಬ್ಬ ಗ್ರೀಕ್ ಹಾಡುಗಾರ ಅದಕ್ಕೆ ಮತ್ತಷ್ಟು ನಟರನ್ನು ಸೇರಿಸಿದನು. ಹಾಡಿಗಿಂತ ಸಂಭಾಷಣೆಯ ಭಾಗವೇ ಹೆಚ್ಚಿತು. ಟ್ರಾಜಿಡಿ ನಾಟಕ ಹುಟ್ಟಿಕೊಂಡದ್ದು ಹೀಗೆ. ಅರಿಸ್ಟಾಟಲ್‌ನ ವಿವರಣೆಯ ಪ್ರಕಾರ ಟ್ರಾಜಿಡಿಯಲ್ಲಿ ಸಾವುನೋವುಗಳೇ ಇರಬೇಕಂತೇನಿಲ್ಲ, ಮುಖ್ಯ ಪಾತ್ರವು ಜೀವನದಲ್ಲಿ ಮಹತ್ತರ ಬದಲಾವಣೆಯನ್ನು ಅನುಭವಿಸಬೇಕು. ಅದು ಸುಭಿಕ್ಷದಿಂದ ದುರ್ಗತಿಯತ್ತವೂ ಆಗಿರಬಹುದು, ಕೆಟ್ಟ ಪರಿಸ್ಥಿತಿಯಿಂದ ಒಳ್ಳೆಯದಕ್ಕೆ ಪರಿವರ್ತನೆಯೂ ಆಗಬಹುದು. ಟ್ರಾಜಿಡಿಯ ಮುಖ್ಯ ಉದ್ದೇಶವೆಂದರೆ ಪ್ರೇಕ್ಷಕರನ್ನು ಚಕಿತಗೊಳಿಸುವುದು. ಅಲ್ಲಿ ಕರುಣಾರಸ, ಬೀಭತ್ಸರಸಗಳೇ ಹರಿಯಬೇಕೆಂದಿಲ್ಲ; ಬೆಚ್ಚಿಬೀಳಿಸುವ, ಅಚ್ಚರಿಗೊಳಿಸುವ ಪ್ರಕ್ರಿಯೆ ಬೇಕು ಅಷ್ಟೇ.

ಮುಂದೆ ಕ್ರಿಸ್ತಶಕ 15-16ನೆಯ ಶತಮಾನಗಳಲ್ಲಿ, ಎಲಿಜಬೆತ್ ಯುಗದಲ್ಲಿ, ಏಕಮೇವಾದ್ವಿತೀಯ ವಿಲಿಯಂ ಷೇಕ್ಸ್‌ಪಿಯರ್ ಲೇಖನಿಯನ್ನೆತ್ತಿಕೊಂಡ ಸಮಯದಲ್ಲಿ ಟ್ರಾಜಿಡಿ ವಿವಿಧ ಆಯಾಮಗಳನ್ನು ಪಡೆದುಕೊಂಡಿತು. ಪ್ರತೀಕಾರದ ಟ್ರಾಜಿಡಿ (ಉದಾಹರಣೆಗೆ ಷೇಕ್ಸ್‌ಪಿಯರನ 'ಹ್ಯಾಮ್ಲೆಟ್') ಜನಪ್ರಿಯವಾಯಿತು. ಸತ್ತ ಪ್ರಿಯಕರ/ಪ್ರಿಯತಮೆ ದೆವ್ವವಾಗಿ ಕಾಡುವುದು, ಮತಿಭ್ರಮಣೆಗೊಂಡ ಪಾತ್ರಗಳು, ಶ್ಮಶಾನದ ದೃಶ್ಯಗಳು ಟ್ರಾಜಿಡಿಯ ಸಾಮಾನ್ಯ ಅಂಶಗಳಾದವು. ಖಳಪಾತ್ರವು ರಕ್ತ ಹೀರಿದರೇನೇ ಟ್ರಾಜಿಡಿ ವೆರಿಗುಡ್ ಎಂಬ ಮಾನದಂಡ ಹುಟ್ಟಿಕೊಂಡಿತು. ಸಾಹಿತಿಗಳು, ನಾಟಕಕಾರರು, ಚಲನಚಿತ್ರ ನಿರ್ಮಾಪಕರು ಟ್ರಾಜಿಡಿಯ ಹೊಸಹೊಸ ನಮೂನೆಗಳನ್ನು ತಂದರು. ದುರಂತ ನಾಯಕ (ಗುರುದತ್, ದಿಲೀಪ್‌ಕುಮಾರ್‌ರನ್ನು ನೆನಪಿಸಿಕೊಳ್ಳಿ), ದುರಂತ ನಾಯಕಿ (ಮೀನಾಕುಮಾರಿ, ಕನ್ನಡದಲ್ಲಿ ಕಲ್ಪನಾ) ಎಂದೇ ಗುರುತಿಸುವುದು ಶುರುವಾಯಿತು.

ಮತ್ತೆ ನಿತ್ಯಜೀವನದ ಘಟನೆಗಳನ್ನು ಟ್ರಾಜಿಡಿ ಅಥವಾ ದುರಂತ ಎಂದು ಬಣ್ಣಿಸುವುದೇಕೆ? ಅದು ಬಹುಶಃ ಅರಿಸ್ಟಾಟಲ್‌ನ ವ್ಯಾಖ್ಯೆಗೆ ಸರಿಹೋಗುವಂಥ ವಿಚಾರ. ಸಾವುನೋವು ಸಂಭವಿಸಬೇಕೆಂದಿಲ್ಲ, ಅಹಿತಕರ ಘಟನೆ ಏನೇ ನಡೆದರೂ ಅದು ದುರಂತ. ಕೆಲವರಿಗಂತೂ ಸಣ್ಣಪುಟ್ಟ ಸಂಗತಿಗಳೂ ದುರಂತವೆಂದೇ ದಾಖಲಾಗುತ್ತವೆ. ಒಂದು ಲೆಕ್ಕದಲ್ಲಿ ಅವರೆಲ್ಲ ನಾರ್ಮಲ್ ಲೈಫ್ ಲೀಡ್ ಮಾಡುವವರು. ಮಾರಣಾಂತಿಕ ಅಪಾಯಗಳೇನೂ ಅವರ ಚಿಂತೆ-ಚಿಂತನೆಯ ರಾಡಾರ್‌ನಲ್ಲಿ ಇರುವುದಿಲ್ಲ. ನನ್ನೊಬ್ಬ ಸ್ನೇಹಿತ ಭಾರತದಿಂದ ಹೊಸದಾಗಿ ಅಮೆರಿಕೆಗೆ ಬಂದವನು ಇಲ್ಲಿ ಡ್ರೈವಿಂಗ್ ಲೈಸೆನ್ಸ್ ಟೆಸ್ಟ್‌ನಲ್ಲಿ ಎರಡು ಸಲ ಫೇಲ್ ಆಗಿದ್ದನ್ನೇ ತನ್ನ ಜೀವನದ ಬಹುದೊಡ್ಡ ಟ್ರಾಜಿಡಿ ಎಂದು ಜೋಕ್ ಮಾಡುತ್ತಿದ್ದ; ಟೆಸ್ಟ್ ಮಾಡದೆಯೇ ಲೈಸೆನ್ಸ್ ಕೊಡುತ್ತಿದ್ದರೆ ಅವನಿಗೂ ಇತರರಿಗೂ ಎಂಥ ಘೋರ ಟ್ರಾಜಿಡಿ ಆಗುವ ಸಾಧ್ಯತೆಗಳಿದ್ದವೆನ್ನುವ ಪರಿವೆ ಅವನಿಗಿಲ್ಲ. ಒಟ್ಟಿನಲ್ಲಿ ಈಗ ಪರಿಸ್ಥಿತಿ ಹೇಗಿದೆಯೆಂದರೆ ಪಿಂಕ್‌ಸ್ಲಿಪ್ ಪಡೆದು ಕೆಲಸ ಕಳಕೊಂಡರೆ ಅದೊಂದು ದುರಂತ. ಷೇರು ಮಾರುಕಟ್ಟೆಯಲ್ಲಿ ಸರ್ವಸ್ವ ಕೊಚ್ಚಿಹೋದರೆ ಅದೊಂದು ದುರಂತ. ನ್ಯಾಯಾಧೀಶರ ಮೇಲೆ ಮೇಲೆ ಬೂಟು ಎಸೆದದ್ದು ದುರಂತ. ಅದೆಲ್ಲ ಬಿಡಿ, ನರೇಂದ್ರ ಮೋದಿ ಪ್ರಧಾನಿಯಾದದ್ದೇ ಭಾರತ ದೇಶದ ಅತಿದೊಡ್ಡ ದುರಂತ ಎಂದು ಹಲುಬುವ ಕ್ಷುದ್ರಜೀವಿಗಳು ಭಾರತದಲ್ಲೇ ಅದೆಷ್ಟಿಲ್ಲ! ವಿಪರ್ಯಾಸವೆಂದರೆ ಈ ಯಾವುದೇ ದುರಂತಗಳಿಗೂ ಆಡಿಗೂ ಏನೇನೂ ಸಂಬಂಧ ಇಲ್ಲ. ಹಾಗಾಗಿ, ಪ್ರಾಚೀನ ಗ್ರೀಸ್‌ನಲ್ಲಿ ಅಜಗೀತೆ (ಆಡಿನ ಹಾಡು) ಆಗಿದ್ದ ಟ್ರಾಜಿಡಿ ಇಂದು ತನ್ನ ನಿಜಾರ್ಥ ಕಳಕೊಂಡಿರುವುದೂ ಒಂದು ದುರಂತವೇ!

ಅಜಗೀತೆಯ ಕಥೆ ಅದಾದರೆ ಹಂಸಗೀತೆಯ ಕಥೆಯೂ ರೋಚಕವೇ. ಹಂಸಗೀತೆಯೆಂದರೆ ತರಾಸು ಬರೆದ ಕಾದಂಬರಿಯ, ಅದನ್ನಾಧರಿಸಿ ಜಿ.ವಿ. ಅಯ್ಯರ್ ನಿರ್ದೇಶಿಸಿದ ಚಲನಚಿತ್ರದ ಬಗ್ಗೆಯಲ್ಲ ಹೇಳ್ತಿರೋದು. 'ಹಂಸಗೀತೆ' ಎಂಬ ನುಡಿಗಟ್ಟು ಇಂಗ್ಲಿಷ್‌ನ Swan Song ಎಂಬುದರ ಸುಸಂಸ್ಕೃತ ಅನುವಾದ ಅಷ್ಟೇ. ಯಾರೇ ಒಬ್ಬ ಸಂಗೀತಗಾರನ ಜೀವನದಲ್ಲಿ ಕಟ್ಟಕಡೆಯ ಪ್ರಸ್ತುತಿಯನ್ನು Swan Song ಎನ್ನಲಾಗುತ್ತದೆ. ಉದಾಹರಣೆಗೆ 'ಶಂಕರಾಭರಣಂ' ಚಿತ್ರದಲ್ಲಿ 'ದೊರಕುನಾ ಇಟುವಂಟಿ ಸೇವಾ...' ಹಾಡು. ಆ ಚಿತ್ರದ ಕಥಾನಾಯಕ ಸಂಗೀತಗಾರ ಶಂಕರಶಾಸ್ತ್ರಿಗಳು ಅದನ್ನು ಹಾಡುತ್ತಿರುವಾಗಲೇ ಕೆಮ್ಮು ಬಂದು ಹಾಡಲಿಕ್ಕಾಗದೆ ಅರ್ಧದಲ್ಲಿ ನಿಲ್ಲಿಸಿ ಕೊನೆಗೆ ಅಸುನೀಗುತ್ತಾರೆ. ಆದ್ದರಿಂದ ಅದು Swan Song. ಅಷ್ಟಾಗಿ Swan (ಹಂಸ)ಗಳು ಹಾಡುವುದಕ್ಕೆ ಪ್ರಖ್ಯಾತವೇ? ಪ್ರಖ್ಯಾತಿ ಬಿಡಿ, ಹಂಸಗಳು ಹಾಡುತ್ತವೆಯೆ? ಕೋಗಿಲೆ, ಮೈನಾ, ಗಿಳಿ ಮುಂತಾದವೆಲ್ಲ ಹಾಡುತ್ತವೆಂದು ಗೊತ್ತು; ನರಿಯಿಂದ ಪ್ರಲೋಭನೆಗೊಳಗಾದ ಕಾಗೆಯೂ ಹಾಡುತ್ತದೆಂದು ಬೇಕಿದ್ದರೆ ಒಪ್ಪಿಕೊಳ್ಳೋಣ; ಆದರೆ ಹಂಸ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಇದ್ದ ಒಂದು ನಂಬಿಕೆಯ ಪ್ರಕಾರ, ಹಂಸವು ಸಾಯುವ ಮೊದಲು ಒಂದು ಸುಂದರ ಗೀತೆಯನ್ನು ಹಾಡುತ್ತದಂತೆ. ಇದು ಬಹುಮಟ್ಟಿಗೆ ಒಂದು ಕವಿಸಮಯವೇ ಹೊರತು ವೈಜ್ಞಾನಿಕವಾಗಿ ಸಂಪೂರ್ಣ ಸತ್ಯವಲ್ಲ. ಆದರೂ 'ಹೂಪರ್ ಸ್ವಾನ್' ಎಂಬ ಪ್ರಭೇದದ ಹಂಸಗಳು ತಮ್ಮ ಹೆಸರಿಗೆ ತಕ್ಕಂತೆ ವಿಚಿತ್ರವಾದ ಹಾರ್ನ್ ಶಬ್ದವನ್ನು ಮಾಡುವುದು ಹೌದು. ಅದರಲ್ಲೂ ಸಾಯುವ ಸಮಯದಲ್ಲಿ ಆ ವಿಶೇಷ ಶಬ್ದವನ್ನು ಮಾಡುತ್ತವೆಂದು ಗಮನಿಸಲಾಗಿದೆ. ಇದಕ್ಕೆ ಕಾರಣ, ಆ ಹಂಸದ ಉಸಿರಿನ ಕೊಳವೆ ಬಹಳ ಉದ್ದವಾಗಿರುವುದು ಮತ್ತು ಸಾಯುವಾಗ ಅದರ ಶ್ವಾಸಕೋಶದಿಂದ ಗಾಳಿ ಹೊರಬರುವ ವಿಧಾನವೆಂದು ಜೀವವಿಜ್ಞಾನಿಗಳ ಅಭಿಮತ. ಹಂಸವು ಮರಣಕಾಲದಲ್ಲಿ ಹೊರಡಿಸುವ ಶಬ್ದವನ್ನು ಕೆಲವರು 'ಸಂಗೀತದಲ್ಲಿ ಹೊಸಬನು ಕ್ಲಾರಿನೆಟ್ ಊದಿದಂತೆ' ಎಂದು ವರ್ಣಿಸಿದ್ದಿದೆ. ಅದು ನಿಜವಾಗಿಯೂ ಸುಂದರ ಗೀತೆ ಅಲ್ಲ. ಸಾಯುವ ಸಮಯದಲ್ಲಿ ಹಂಸವು ಒಂದು ವಿಚಿತ್ರ ಶಬ್ದ ಮಾಡುತ್ತದೆನ್ನುವ ಸತ್ಯ ಅಷ್ಟೇ. ಹೂಪರ್ ಸ್ವಾನ್ ಸಾಮಾನ್ಯವಾಗಿ ಗ್ರೀಸ್ ದೇಶದಲ್ಲಿ ಕಂಡುಬರುವ ಹಂಸ. ಪ್ರಾಚೀನ ಗ್ರೀಸ್‌ನಲ್ಲಿ ಯಾರೋ ಈ ಹಂಸ ಸಾಯುವಾಗಿನ ಶಬ್ದ ಕೇಳಿ, ಅದನ್ನು ಅತಿಶಯೋಕ್ತಿಯಾಗಿಸಿ, ಎಲ್ಲ ಹಂಸಗಳಿಗೂ ಅದೇ ಗುಣವಿದೆ ಎಂದು ಕಥೆ ಕಟ್ಟಿರಬಹುದು. ಅದೇ 'ಹಂಸದ ಅಂತಿಮ ಗೀತೆ' ಅಥವಾ ಹಂಸಗೀತೆ ಎಂದು ಜನಜನಿತವಾಯಿತು.

ಹಂಸಗೀತೆ ಬಗ್ಗೆ ಒಂದು ಈಸೋಪನ ಕಥೆಯೂ ಇದೆ. ಇದರಲ್ಲಿ ಹಂಸ ಸಾಯುವುದಿಲ್ಲ, ಹಾಡಿನಿಂದಾಗಿಯೇ ಬದುಕುಳಿಯುತ್ತದೆ! ಕಥೆ ಹೀಗಿದೆ: ''ಒಂದಾನೊಂದು ಊರಿನಲ್ಲಿ ಒಬ್ಬ ಶ್ರೀಮಂತನಿದ್ದನು. ಅವನು ಮಾರುಕಟ್ಟೆಯಿಂದ ಒಂದು ಬಾತುಕೋಳಿ ಮತ್ತು ಒಂದು ಹಂಸವನ್ನು ಕೊಂಡು ತಂದನು. ಬಾತುಕೋಳಿಯನ್ನು ತನ್ನ ಊಟಕ್ಕಾಗಿ ಸಾಕಿದನು; ಹಂಸವನ್ನು ಅದರ ಸುಂದರ ಗಾನಕ್ಕಾಗಿ ಉಳಿಸಿಕೊಂಡನು. ಒಂದು ದಿನ ಬಾತುಕೋಳಿಯನ್ನು ಕೊಲ್ಲುವ ಸಮಯ ಬಂತು. ಅಡುಗೆಯವನು ರಾತ್ರಿ ಕತ್ತಲಿನಲ್ಲಿ ಅದನ್ನು ಹಿಡಿಯಲು ಹೋದನು. ಕತ್ತಲೆ ಇದ್ದುದರಿಂದ ಯಾವುದು ಬಾತುಕೋಳಿ, ಯಾವುದು ಹಂಸ ಎಂದು ಗುರುತಿಸಲಾಗಲಿಲ್ಲ. ತಪ್ಪಾಗಿ ಅವನು ಬಾತುಕೋಳಿಯ ಬದಲು ಹಂಸವನ್ನೇ ಹಿಡಿದನು. ಸಾವು ಸಮೀಪಿಸಿದೆ ಎಂದು ಭಾವಿಸಿದ ಹಂಸ, ಒಡನೆಯೇ ಹಾಡಲು ಆರಂಭಿಸಿತು. ಅದರ ಶಬ್ದದಿಂದ ಅದು ಹಂಸ ಎಂದು ತಿಳಿಯಿತು. ಹೀಗೆ ತನ್ನ ಮಧುರ ಗಾನದ ಮೂಲಕ ಹಂಸ ತನ್ನ ಜೀವವನ್ನು ಉಳಿಸಿಕೊಂಡಿತು''. ಈಸೋಪನ ಈ ಕಥೆಯಂತೆಯೇ ಬೇರೆ ಪಾಶ್ಚಾತ್ಯ ತತ್ವಜ್ಞಾನಿ, ಸಾಹಿತಿ, ಕಲಾವಿದ ಘಟಾನುಘಟಿಗಳೂ Swan song ವಿಷಯವನ್ನು ಪ್ರಸ್ತಾವಿಸಿದ್ದಿದೆ. ಪ್ಲೇಟೋ, ಚೌಸರ್, ಲಿಯೊನಾರ್ಡೊ ಡ ವಿನ್ಸಿ ಮಾತ್ರವಲ್ಲದೆ ಷೇಕ್ಸ್‌ಪಿಯರ್‌ನ 'ದ ಮರ್ಚಂಟ್ ಆಫ್ ವೆನಿಸ್' ನಾಟಕದಲ್ಲಿಯೂ Let music sound while he doth make his choice; then, if he lose, he makes a swan-like end, fading in music... ಎಂಬ ಸಂಭಾಷಣೆಯನ್ನು ಭಾಷಾತಜ್ಞರು ವಿಶೇಷವಾಗಿ ಗುರುತಿಸುತ್ತಾರೆ.

ಇವೆಲ್ಲದಕ್ಕೂ ಕಳಸಪ್ರಾಯವಾದ ಸಂಗತಿಯೊಂದಿದೆ. ಅದೇನೆಂದರೆ ಇಂಗ್ಲಿಷ್‌ನ Swan ಪದಮೂಲ ಮತ್ತು ಸಂಸ್ಕೃತದ 'ಸ್ವನ' (ಧ್ವನಿ ಅಥವಾ ಶಬ್ದ ಎಂಬ ಅರ್ಥ) ಪದಮೂಲ ಒಂದೇ ಆಗಿರುವುದು! ಅಂದರೆ ದುಃಖಾಂತ್ಯವಿರಲಿ, ಸುಖಾಂತ್ಯವಿರಲಿ, ಅಂತ್ಯದ ಆರಂಭವಾಗುವುದು Swan ಅಥವಾ ಸ್ವನದಿಂದಲೇ. ಅಷ್ಟೇಕೆ, ಈ ಜಗತ್ತೇ ಆರಂಭವಾದದ್ದು Big bang ಶಬ್ದದಿಂದ ಅಥವಾ ಪ್ರಣವನಾದದಿಂದ ತಾನೆ?

ಪಾಕಿಸ್ತಾನವನ್ನು ಸೋಲಿಸಿದಾಗ ಸಿಗುವ ಖುಷಿಯೇ ಬೇರೆ!

ಅದ್ಯಾಕೋ ಗೊತ್ತಿಲ್ಲ, ಪಾಕಿಸ್ತಾನದ ಸೋಲು ನಮಗೆ ಯಾವಾಗಲೂ ಮುದನೀಡುತ್ತದೆ. ನಮ್ಮ ಆಟಗಾರರ ಶತಕ ನೀಡುವುದಕ್ಕಿಂತ ಹೆಚ್ಚು ಖುಷಿಯು, ಪಾಕಿಗಳ ವಿಕೆಟ್ ಬೀಳುವಾಗ ಸಿಗುತ್ತದೆ. ವಿಶ್ವ ಕಪ್ ಆಗಲಿ, ಇನ್ನಾವುದೇ ಪಂದ್ಯಾವಳಿಯಾಗಲಿ, 'ಕಪ್' ಗೆಲ್ಲುವುದು ನಮಗೆ ಪಾಕ್‌ನ ಮೇಲೆ ಗೆಲುವು ಸಾಧಿಸುವುದಕ್ಕಿಂತ ದೊಡ್ಡದೇನಲ್ಲ. ಯಾವುದೇ ಪಂದ್ಯಾವಳಿಯಲ್ಲಿ ಪಾಕಿಸ್ತಾನವನ್ನು ಸೋಲಿಸಿಬಿಟ್ಟರೆ ಭಾರತ ಖುಷ್.

ವಿದ್ಯಮಾನ

ವಿನಾಯಕ ವೆಂ. ಭಟ್ಟ, ಅಂಬ್ಲಿಹೊಂಡ
vveditoped@gmail.com

ಎರಡು ವರ್ಷಕ್ಕೊಮ್ಮೆ ಜರುಗುವ ಐಸಿಸಿ ಪುರುಷರ ಟಿ-20 ವಿಶ್ವಕಪ್ ಟೂರ್ನಿಯ ಹತ್ತನೇ ಆವೃತ್ತಿಯು ಭಾರತ ಮತ್ತು ಶ್ರೀಲಂಕಾ ಸಹ-ಆತಿಥ್ಯದಲ್ಲಿ ಪ್ರಾರಂಭವಾಗಿದೆ. ಹಾಲಿ ಚಾಂಪಿಯನ್ ಭಾರತ, 2024ರ ಟೂರ್ನಿಯಲ್ಲಿ ಗೆದ್ದ ಕಿರೀಟವನ್ನು ಉಳಿಸಿಕೊಳ್ಳಲು ಸರ್ವಸನ್ನದ್ಧವಾಗಿದೆ. ನಾವು ಗೆದ್ದಿದ್ದ 2024ರ ಪಂದ್ಯಾವಳಿಗೆ ಹೋಲಿಸಿದರೆ ಈ ಬಾರಿಯ ಟಿ-20 ವಿಶ್ವಕಪ್ ಪಂದ್ಯಾವಳಿ ಬಹು ಆಯಾಮಗಳಲ್ಲಿ ವಿಶೇಷವಾಗಿದೆ, ಭಾರತ ತಂಡದ ನೇತೃತ್ವದಲ್ಲಿ ಬದಲಾವಣೆಯಾಗಿದೆ. ರೋಹಿತ್ ಶರ್ಮ ಬದಲಿಗೆ ಸೂರ್ಯಕುಮಾರ್ ನಾಯಕತ್ವ ವಹಿಸಿದ್ದಾರೆ, ರೋಹಿತ್, ಕೊಹ್ಲಿ, ರವೀಂದ್ರ ಜಡೇಜರಂಥ ಅನುಭವಿ ಆಟಗಾರರು ಈ ಬಾರಿ ತಂಡದಲ್ಲಿಲ್ಲ, ಆ ಜಾಗದಲ್ಲಿ ಹೊಸ ಆಟಗಾರರ ಸೇರ್ಪಡೆಯಾಗಿದೆ. ಇನ್ನೂ ಒಂದು ವಿಶೇಷವೇನೆಂದರೆ, ಭಾಗವಹಿಸಿದ ಎಲ್ಲ ತಂಡಗಳನ್ನೂ ಲೆಕ್ಕಹಾಕಿದರೆ ಭಾರತ ತಂಡವನ್ನು ಹೊರತುಪಡಿಸಿಯೂ ಸುಮಾರು ನಲವತ್ತಕ್ಕೂ ಹೆಚ್ಚು ಭಾರತೀಯ ಮೂಲದ ಆಟಗಾರರು ಬೇರೆ ಬೇರೆ ದೇಶಗಳ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಮೊದಲಬಾರಿಗೆ ಬಾಂಗ್ಲಾ ದೇಶ ರಾಜಕೀಯ ಕಾರಣಗಳಿಗಾಗಿ ಪಂದ್ಯಾವಳಿಯಿಂದ ಹೊರಗುಳಿಯುವ ತೀರ್ಮಾನಮಾಡಿದೆ. ತಾನೂ ಭಾರತದ ವಿರುದ್ಧದ ಪಂದ್ಯವನ್ನು ತಿರಸ್ಕರಿಸುತ್ತೇನೆ ಎನ್ನುತ್ತಿದ್ದ ಪಾಕಿಸ್ತಾನ, ಶ್ರೀಲಂಕಾದ ಪ್ರೇಮದಾಸ ಮೈದಾನದಲ್ಲಿ ಆಡಿ ಸೋತು ಸುಣ್ಣವಾಯ್ತು. ಸುಮಾರು 20 ತಂಡಗಳು ಪಂದ್ಯಾವಳಿಯಲ್ಲಿ ಈ ಬಾರಿ ಪಾಲ್ಗೊಳ್ಳುತ್ತಿದ್ದು, ಇಟಲಿ ತಂಡ ಮೊದಲ ಬಾರಿಗೆ ವಿಶ್ವಕಪ್ ಆಡುತ್ತಿದೆ. ಕೆಲವು ಸಣ್ಣ ಸಣ್ಣ ದೇಶಗಳ ತಂಡಗಳು ಅಭೂತಪೂರ್ವವಾಗಿ ಆಡಿ ಅನಿರೀಕ್ಷಿತ/ಅಚ್ಚರಿಯ ಫಲಿತಾಂಶಗಳನ್ನು ನೀಡಿವೆ. ಸೋಲಿಲ್ಲದ ಸರದಾರರಾಗಿ ಭಾರತ, ದಕ್ಷಿಣಾ ಆಫ್ರಿಕಾ, ವೆಸ್ಟ್ ಇಂಡೀಸ್ ತಂಡಗಳು ಸೂಪರ್ 8ರ ಘಟ್ಟವನ್ನು ತಲುಪಿದರೆ, ಪಾಕಿಸ್ತಾನ, ಶ್ರೀಲಂಕಾ, ಇಂಗ್ಲೆಂಡ್ ತಂಡಗಳೂ ನಿರೀಕ್ಷೆಯಂತೆ ಸೂಪರ್ 8ರ ಘಟ್ಟವನ್ನು ತಲುಪಿವೆ. ಅದ್ಭುತ ಪ್ರದರ್ಶನ ನೀಡುವುದರ ಮೂಲಕ ಜಿಂಬಾಬ್ವೆ ತಂಡವು ಬಲಿಷ್ಠ ಆಸ್ಟ್ರೇಲಿಯಾ ತಂಡದ ಸೊಕ್ಕುಮುರಿದು ತಾನು ಅಜೇಯವಾಗಿ ಸೂಪರ್ 8ರ ಘಟ್ಟವನ್ನು ತಲುಪಿ ಅಚ್ಚರಿ ಮೂಡಿಸಿದೆ. ಅಫ್ಘಾನಿಸ್ತಾನ ತಂಡವು ಸ್ವಲ್ಪದರಲ್ಲಿ ಸೂಪರ್ 8ರ ಸ್ಥಾನ ಕಳೆದುಕೊಂಡಿದೆ. ಎರಡು ಸೂಪರ್ ಓವರುಗಳನ್ನು ಕಂಡ ಅದ್ಭುತ ಪಂದ್ಯದಲ್ಲಿ ಅಂತಿಮವಾಗಿ ಅದು ದಕ್ಷಿಣ ಆಫ್ರಿಕಾಕ್ಕೆ ಶರಣಾಯಿತು.

ಇಂಡಿಯನ್ ಪ್ರೀಮಿಯರ್ ಲೀಗ್ ಫ್ರಾಂಚೈಸಿ ಕೋಲ್ಕತಾ ನೈಟ್ ರೈಡರ್ಸ್, ಬಾಂಗ್ಲಾದೇಶದ ವೇಗದ ಬೌಲರ್ ಮುಸ್ತಾಫಿಜುರ್ ರೆಹಮಾನ್ ಅವರನ್ನು ಮುಂಬರುವ ಐಪಿಎಲ್ 2026ರ ಆಟಗಾರರ ಒಪ್ಪಂದದಿಂದ ಬಿಡುಗಡೆ ಮಾಡಿತು; ಇದರ ನಂತರ ಉದ್ಭವಿಸಿದ ಭಾರತದೊಂದಿಗಿನ ರಾಜತಾಂತ್ರಿಕ ಉದ್ವಿಗ್ನತೆ, ಭದ್ರತೆ ಮತ್ತು ಸ್ಥಳದ ವ್ಯವಸ್ಥೆಗಳ ವಿವಾದದ ನಡುವೆ ಬಾಂಗ್ಲಾದೇಶ 2026ರ ಟಿ-20 ವಿಶ್ವಕಪ್‌ನಿಂದ ಹಿಂದೆ ಸರಿದಿದೆ. ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು, ತನ್ನ ಆಟಗಾರರಿಗೆ ಭಾರತದಲ್ಲಿ ಭದ್ರತಾ ಬೆದರಿಕೆ ಇರುವುದರಿಂದ ತನ್ನ ವಿಶ್ವಕಪ್ ಪಂದ್ಯಗಳನ್ನು ಭಾರತದ ಬದಲು ಶ್ರೀಲಂಕಾ ಅಥವಾ ಇನ್ನಾವುದಾದರೂ ತಟಸ್ಥ ಮೈದಾನದಲ್ಲಿ ಆಡಲು ಅನುಮತಿ ನೀಡುವಂತೆ ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಅನ್ನು ಕೇಳಿತ್ತು. ಪಂದ್ಯಗಳನ್ನು ಸ್ಥಳಾಂತರಿಸಲು ಐಸಿಸಿ ನಿರಾಕರಿಸಿತು, ತನ್ನ ತಂಡವು ಭಾರತಕ್ಕೆ ಪ್ರಯಾಣಿಸುವುದಕ್ಕೆ ಅನುಮತಿ ನೀಡಲು ಬಾಂಗ್ಲಾ ಸರಕಾರವು ನಿರಾಕರಿಸಿತು. ಹಾಗಾಗಿ ಬಾಂಗ್ಲಾದೇಶದ ಬದಲಿಗೆ ಸ್ಕಾಟ್ಲೆಂಡ್‌ಗೆ ವಿಶ್ವಕಪ್ ಆಡುವ ಅವಕಾಶ ದೊರೆಯಿತು. ಬಾಂಗ್ಲಾದೇಶವೇನೋ ಈ ಪಂದ್ಯಾವಳಿಯಿಂದ ದೂರವುಳಿಯಿತು, ಜತೆಗೆ ಪಾಕಿಸ್ತಾನವನ್ನೂ ಸೇರಿಸಿಕೊಂಡಿತ್ತು. ಮೊದಲು ತಾನೂ ಬಾಂಗ್ಲಾ ದೇಶದ ಜತೆಗೆ ನಿಲ್ಲುತ್ತೇನೆ ಎನ್ನುತ್ತಿದ್ದ ಪಾಕಿಸ್ತಾನ, ಬಾಂಗ್ಲಾದೇಶಕ್ಕೆ ಕೈಕೊಟ್ಟು ಐಸಿಸಿಯ ಕೈಕಾಲು ಕಟ್ಟಿ ಭಾರತದಲ್ಲಾಗಬೇಕಿದ್ದ ಪಂದ್ಯವನ್ನು ಶ್ರೀಲಂಕಾಗೆ ಸ್ಥಳಾಂತರಗೊಳಿಸಿಕೊಂಡಿತು. ಈಗ ಬಾಂಗ್ಲಾದೇಶದ ತಂಡ ಮನೆಯಲ್ಲಿ ಆರಾಮವಾಗಿ ಟಿ.ವಿ.ಯಲ್ಲಿ ಮ್ಯಾಚ್ ನೋಡ್ತಾ ಕೂತಿರಬೇಕು ಪಾಪ. ಪಾಕಿಸ್ತಾನವನ್ನು ನಂಬಿದವರಿಗೆ ಏನಾಗಬೇಕಾಗಿತ್ತೋ ಅದು ಬಾಂಗ್ಲಾಕ್ಕಾಯಿತು ಅಷ್ಟೇ.

ಅದ್ಯಾಕೋ ಗೊತ್ತಿಲ್ಲ, ಪಾಕಿಸ್ತಾನದ ಸೋಲು ನಮಗೆ ಯಾವಾಗಲೂ ಮುದನೀಡುತ್ತದೆ. ನಮ್ಮ ಆಟಗಾರರ ಶತಕವು ನೀಡುವುದಕ್ಕಿಂತ ಹೆಚ್ಚು ಖುಷಿಯು, ಪಾಕಿಸ್ತಾನಿಗಳ ವಿಕೆಟ್ ತಪತಪನೆ ಬೀಳುವಾಗ ಸಿಗುತ್ತದೆ. ವಿಶ್ವ ಕಪ್ ಆಗಲಿ ಅಥವಾ ಇನ್ನಾವುದೇ ಪಂದ್ಯಾವಳಿಯಾಗಲಿ, 'ಕಪ್' ಗೆಲ್ಲುವುದು ನಮಗೆ ಪಾಕಿಸ್ತಾನದ ಮೇಲೆ ಗೆಲುವು ಸಾಧಿಸುವುದಕ್ಕಿಂತ ದೊಡ್ಡದೇನಲ್ಲ. ಯಾವುದೇ ಪಂದ್ಯಾವಳಿಯಲ್ಲಿ ಪಾಕಿಸ್ತಾನವನ್ನು ಸೋಲಿಸಿಬಿಟ್ಟರೆ ಭಾರತ ಖುಷ್. ಏಕದಿನ ವಿಶ್ವಕಪ್‌ನಲ್ಲಿ ನಾವು ವಿಜಯ ಸಾಧಿಸಿದ್ದು

ಎರಡೇ ಬಾರಿ. ಆದರೆ ಪಾಕಿಸ್ತಾನದ ಮೇಲೆ ಮಾತ್ರ ಪ್ರತಿ ವಿಶ್ವಕಪ್ ಪಂದ್ಯಾವಳಿಯಲ್ಲೂ ಗೆದ್ದಿದ್ದೇವೆ. ನಮಗೆ ಅಷ್ಟೇ ಸಮಧಾನ. ಅದೇ ಪಾಕಿಸ್ತಾನದ ವಿರುದ್ಧದ ಪಂದ್ಯವನ್ನು ಸೋತು ಆಮೇಲೆ ಪಂದ್ಯಾವಳಿಯಲ್ಲಿ ವಿಜೇತರಾದರೂ ನಮ್ಮಲ್ಲುಳಿಯುವುದು ಪಾಕಿಸ್ಥಾನದ ವಿರುದ್ಧದ ಸೋಲಿನ ನೋವೇ ವಿನಾ ಪಂದ್ಯಾವಳಿ ಗೆದ್ದ ಖುಷಿಯಲ್ಲ. ಇದು ಪಾಕಿಸ್ತಾನದ ವಿರುದ್ಧದ ನಮ್ಮ ಸಂವೇದನೆಯಾಗಿದೆ.

ಮೊನ್ನೆ ನಡೆದ ಹಣಾಹಣಿಯಲ್ಲಿ ಪಾಕಿಸ್ತಾನ ಸೋಲುವುದರಲ್ಲಿ ಯಾರಿಗಾದರೂ ಸಂಶಯವಿತ್ತಾ? ಖಂಡಿತ ಇರಲಿಕ್ಕಿಲ್ಲ. ಹೇಗೆ ಮತ್ತು ಎಷ್ಟು ಅಂತರದಿಂದ ಸೋಲುತ್ತಾರೆ ಎನ್ನುವುದಷ್ಟೇ ತಿಳಿಯುವುದು ಬಾಕಿ ಇತ್ತು. ಇದು ಗೊತ್ತಿದ್ದರೂ ಪಾಕಿಸ್ತಾನದವರಿಗಿಂತ ಭಾರತದ ಕ್ರಿಕೆಟ್ ಪ್ರೇಮಿಗಳಿಗೇ ಆತಂಕ ಹೆಚ್ಚು, ಕಾರಣ, ಏನಾದರೂ ಎಡವಟ್ಟಾಗಿ ನಾವು ಸೋತುಬಿಟ್ಟರೆ ಎನ್ನುವ ಸಣ್ಣ ಆತಂಕ! ಪಾಕಿಸ್ತಾನದ ಕ್ರಿಕೆಟ್ ಪ್ರೇಮಿಗಳಿಗೆ ಹಾಗಲ್ಲ, ಅವರಿಗೆ ಕಳೆದುಕೊಳ್ಳಲು ಏನೂ ಇಲ್ಲ, ಏನಾದರೂ ಯಡವಟ್ಟಾಗಿ ಭಾರತ ಸೋತರೆ ನಾವು ಗೆಲ್ಲಬಹುದು ಎನ್ನುವ ಆಸೆ ಮಾತ್ರ ಸದಾ ಅವರಿಗೆ ಇರುತ್ತದೆ. ಇಲ್ಲಿಯವರೆಗೆ ಆಡಿದ ಒಟ್ಟೂ ಹದಿನೇಳು ಟಿ-20 ಪಂದ್ಯಗಳಲ್ಲಿ ಹದಿನಾಲ್ಕರಲ್ಲಿ ಭಾರತವೇ ಗೆದ್ದಿದೆ ಅಂದಮೇಲೆ, ಈ ಎರಡು ತಂಡಗಳ ನಡುವೆ ನಡೆಯುವ ಪಂದ್ಯವನ್ನು 'ಹಣಾಹಣಿಯ' ಪಂದ್ಯ ಅಂತ ಕರೆಯುವುದು ಸರಿಯಲ್ಲ ಎಂದು ಭಾರತ ತಂಡದ ನಾಯಕನ ಸೂರ್ಯಕುಮಾರ್ ಅಭಿಪ್ರಾಯಪಡುತ್ತಾರೆ. ಒಂದೊಮ್ಮೆ, ಎರಡೂ ತಂಡಗಳು ಆರೇಳು ಬಾರಿ ಗೆದ್ದಿದ್ದರೆ ಈ ತಂಡಗಳ ನಡುವಿನ ಮುಖಾಮುಖಿಯನ್ನು 'ಟಕ್ಕರ್ ಕಾ ಮುಕಾಬ್ಲಾ' ಎನ್ನಬಹುದಿತ್ತು, ಆದರೆ ಅಂಕಿ-ಅಂಶಗಳು ಪಾಕಿಸ್ತಾನ ತಂಡದ ಪರವಾಗಿಲ್ಲ, ಹಾಗಾಗಿ 'ಟಕ್ಕರ್ ಕಾ ಮುಕಾಬ್ಲಾ' ಎನ್ನುವುದನ್ನು ಒಪ್ಪಲಾಗದು ಎನ್ನುತ್ತಾರೆ ಸೂರ್ಯ. ಭಾರತ ತಂಡದ ಮಾಜಿ ನಾಯಕ ಸೌರವ್ ಗಂಗೂಲಿಯದೂ ಇದೇ ಅಭಿಪ್ರಾಯ. 'ಆಸ್ಟ್ರೇಲಿಯಾ, ಇಂಗ್ಲೆಂಡ್ ಅಥವಾ ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯವಾದರೆ ಅದು ನಮಗೆ ಸಮಬಲದ ಪಂದ್ಯವೇ ವಿನಾ ಪಾಕಿಸ್ತಾನದ ವಿರುದ್ಧದ ಪಂದ್ಯವಲ್ಲ; ಸದ್ಯದ ಪಾಕಿಸ್ತಾನ ತಂಡ ನಮ್ಮ ತಂಡವನ್ನು ಹಣಿಯುವ ಸ್ಥಿತಿಯಲ್ಲಿಲ್ಲ' ಎನ್ನುವುದು ಅವರ ಅಭಿಪ್ರಾಯ.

ತಂಡದ ಸತತ ಉತ್ತಮ ಪ್ರದರ್ಶನದ ದೃಷ್ಟಿಯಿಂದ ಅಥವಾ ಆಡಳಿತಾತ್ಮಕವಾಗಿ ವಿಶ್ವ ಕ್ರಿಕೆಟನ್ನು ಹೆಚ್ಚೂಕಡಿಮೆ ಭಾರತವೇ ಆಳುತ್ತಿರುವುದರಿಂದ, ಭಾರತವು ವರ್ಷದಿಂದ ವರ್ಷಕ್ಕೆ ತನ್ನ ಪ್ರಾಬಲ್ಯವನ್ನು ಬೆಳೆಸಿಕೊಂಡೇ ಬಂದಿದೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ವಿಶ್ವದ ಅತ್ಯಂತ ಶ್ರೀಮಂತ ಮಂಡಳಿಯಾಗಿದೆ. ಐಸಿಸಿಯ ಆಡಳಿತದ ಚುಕ್ಕಾಣಿಯೂ ಈಗ ಭಾರತೀಯರ ಕೈಯಲ್ಲೇ ಇದೆ. ಹಾಗಾಗಿ ವಿಶ್ವ ಕ್ರಿಕೆಟ್‌ಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಭಾರತದ ಮಾತೇ ನಡೆಯೋದು ಎನ್ನುವ ಸತ್ಯ ಎಲ್ಲರಿಗೂ ಮನವರಿಕೆಯಾಗಿದೆ. ಭಾರತದಲ್ಲಿ 'ಟೆಸ್ಟ್' ಪಂದ್ಯಗಳನ್ನು ಆಡುವ ತಂಡ, ಏಕದಿನ ಆಡುವ ತಂಡ ಹಾಗೂ ಟಿ-20 ತಂಡಗಳು ಪ್ರತ್ಯೇಕವಾಗಿವೆ. ನಮ್ಮಲ್ಲಿ ಬೇರೆ ಬೇರೆ ಮಾದರಿಯ ಪಂದ್ಯಗಳನ್ನಾಡಲು ಪ್ರತ್ಯೇಕ ತಜ್ಞ ಆಟಗಾರರಿದ್ದಾರೆ. ಇನ್ನು, ಮತ್ತೆ ಮೂರು ರಾಷ್ಟ್ರೀಯ ತಂಡವನ್ನು ರಚಿಸಬಹುದಾದಷ್ಟು ಸಮರ್ಥ ಆಟಗಾರರು ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಇದರರ್ಥ ಭಾರತದಲ್ಲಿ ಅಷ್ಟು ಸಾಮರ್ಥ್ಯ ಹಾಗೂ ರಾಷ್ಟ್ರೀಯ ತಂಡವನ್ನು ಸೇರಲು ಸ್ಪರ್ಧೆಯಿದೆ. ನಮ್ಮಲ್ಲಿ ಆಟಗಾರರ 'ಪೈಪ್ ಲೈನ್' ಇದೆ ಅಂತ ಅರ್ಥವಾಗುತ್ತದೆ. ಪಾಕಿಸ್ತಾನದಂಥ ದೇಶದಲ್ಲಿ ಎಲ್ಲ ಮಾದರಿಯ ಪಂದ್ಯಕ್ಕೂ ಹೆಚ್ಚೂಕಡಿಮೆ ಅದೇ ಆಟಗಾರರು ಆಡಬೇಕಾಗುತ್ತದೆ. ಹಾಗೆ ನೋಡಿದರೆ, ಅಲ್ಲಿ ಈಗ ಹೊಸ ಆಟಗಾರರು ಬರುತ್ತಿರುವುದೂ ಕಡಿಮೆಯೇ ಆಗಿದೆ. 'ಇರ್ಫಾನ್ ಪಠಾಣ್ ತರಹದ ಸ್ವಿಂಗ್ ಬೌಲರ್ಸ್ ನಮ್ಮ ದೇಶದ ಗಲ್ಲಿಗಲ್ಲಿಗಳಲ್ಲಿದ್ದಾರೆ' ಎಂದು ಜಾವೇದ್ ಮಿಯಾಂದಾದ್ ಒಮ್ಮೆ ಹೇಳಿದ್ದನ್ನು ನೆನಪಿಸಿಕೊಳ್ಳಬಹುದಾಗಿದೆ. ಆದರೆ ಕಳೆದ 20 ವರ್ಷಗಳಲ್ಲಿ ವಿಶ್ವದರ್ಜೆಯ ಯಾವ 'ಬೌಲರ್' ಅಥವಾ 'ಬ್ಯಾಟ್ಸ್‌ಮನ್' ಪಾಕಿಸ್ತಾನದಿಂದ ಬಂದಹಾಗೆ ಕಾಣುತ್ತಿಲ್ಲ. ಆರ್ಥಿಕವಾಗಿ ದಿವಾಳಿಯಾಗಿ ಮೂಲಭೂತ ಸೌಲಭ್ಯ ಒದಗಿಸುವುದೇ ಸವಾಲಿನ ವಿಷಯವಾದಾಗ, ಕ್ರೀಡೆಯ ಅಭಿವೃದ್ಧಿಗೆ ಯಾವ ದೇಶ ತಾನೆ ತಲೆಕೆಡಿಸಿಕೊಳ್ಳುತ್ತೆ ಹೇಳಿ?

ವಿಶ್ವಕಪ್ ಸೇರಿ ಭಾರತ ತಂಡ ಇಲ್ಲಿಯವರೆಗೆ 17 ಪಂದ್ಯಾವಳಿಗಳಲ್ಲಿ ಜಯಶಾಲಿಯಾಗಿದ್ದರೆ, ಪಾಕಿಸ್ತಾನ ಗೆದ್ದಿರುವುದು ಕೇವಲ ಆರು ಪ್ರಶಸ್ತಿಗಳನ್ನು ಮಾತ್ರ. ಟಿ-20 ಪಂದ್ಯದಲ್ಲಿ ಪಾಕಿಸ್ತಾನ ಕೊನೆಯ ಬಾರಿಗೆ ಭಾರತವನ್ನು ಸೋಲಿಸಿದ್ದು ಯಾವಾಗ ಎಂದು ನೋಡುವುದಾದರೆ, ದುಬೈನಲ್ಲಿ ನಡೆದ 2022ರ ಏಷ್ಯಾ ಕಪ್‌ನ ಸೂಪರ್ ನಾಲ್ಕರ ಹಂತದಲ್ಲಿ ಭಾರತದ ವಿರುದ್ಧ ಪಾಕಿಸ್ತಾನ ಕೊನೆಯ ಟಿ-20 ಗೆಲುವು ಸಾಧಿಸಿದೆ. ಹಾಗಾಗಿ, ಯಾವುದೇ ಕೋನದಿಂದ ನೋಡಿದರೂ ಭಾರಕ್ಕೆ ಪಾಕಿಸ್ತಾನವು ಸರಿಸಾಟಿಯಾಗಲಾರದು; ಅದು ಕ್ರಿಕೆಟ್ ಸೇರಿದಂತೆ ಕ್ರೀಡಾ ಕ್ಷೇತ್ರವಾಗಿರಬಹುದು, ಬಹುಸಂಸ್ಕೃತಿಯ ಪ್ರಜಾಪ್ರಭುತ್ವವಿರಬಹುದು, ಧರ್ಮನಿರಪೇಕ್ಷತೆಯಿರಬಹುದು, ಆರ್ಥಿಕ ಸ್ಥಿತಿಗತಿಯಿರಬಹುದು, ವೈಶ್ವಿಕ ಮಾನ್ಯತೆಯಿರಬಹುದು, ಶಿಕ್ಷಣ ಮಟ್ಟವಿರಬಹುದು, ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆಯಿರಬಹುದು. ಇನ್ನು ರಕ್ಷಣಾ ವ್ಯವಸ್ಥೆಯ ಬಗ್ಗೆಯಂತೂ ಕೇಳುವುದೇ ಬೇಡ.

ಹಾಗಂತ ಪಾಕಿಸ್ತಾನ ವಿರುದ್ಧದ ಪಂದ್ಯಗಳಲ್ಲಿ ಮೊದಲೆಲ್ಲಾ ಭಾರತ ಸೋತಿದ್ದೇ ಹೆಚ್ಚು; ಏಕದಿನ ಪಂದ್ಯಗಳಲ್ಲಿ ಇಲ್ಲಿಯವರೆಗೆ 78 ಪಂದ್ಯಗಳನ್ನು ಪಾಕಿಸ್ತಾನ ಗೆದ್ದಿದ್ದರೆ, ಭಾರತ ಗೆದ್ದಿರುವುದು 58 ಪಂದ್ಯಗಳನ್ನು ಮಾತ್ರ. ಟೆಸ್ಟ್ ಪಂದ್ಯಗಳಲ್ಲೂ ದಾಖಲೆಗಳು ಪಾಕಿಸ್ತಾನದ ಪರವಾಗಿಯೇ ಇವೆ. ಅದರಲ್ಲೂ, ಸಚಿನ್, ಸೌರವ್ ಅವರ ತಲೆಮಾರು ಬರುವವರೆಗೆ ವಿಶ್ವಕಪ್ ಪಂದ್ಯಗಳನ್ನು ಹೊರತುಪಡಿಸಿ ಉಳಿದ ಬಹುತೇಕ ಏಕದಿನ ಪಂದ್ಯಗಳಲ್ಲಿ ಭಾರತ ಗೆದ್ದರೆ ಅದು ಅದ್ಭುತಗಳಲ್ಲೊಂದಾಗಿತ್ತು. ಈಗ ವೀಕ್ಷಕ ವಿವರಣೆ ಹೇಳುವ ಮಹನೀಯರೆಲ್ಲಾ ಆಟವಾಡುತ್ತಿದ್ದ ಕಾಲವಾಗಿತ್ತು ಅದು. ಇಮ್ರಾನ್ ಖಾನ್, ವಾಸಿಮ್ ಅಕ್ರಮ್, ವಕಾರ್ ಯೂನುಸ್ ಮುಂತಾದ ವೇಗಿಗಳು ಭಾರತದ ದಾಂಡಿಗರ ನಿದ್ದೆಗೆಡಿಸಿಬಿಡುತ್ತಿದ್ದರು. ಅವರ ಬ್ಯಾಟ್ಸಮನ್‌ಗಳು ಕೂಡಾ ನಮಗಿಂತ ಗಟ್ಟಿಗರಾಗಿರುತ್ತಿದ್ದರು. ಈಗ ಪಾಕಿಸ್ತಾನ ತಂಡದ ಆಟಗಾರರು, ಅಲ್ಲಿನ ಕ್ರಿಕೆಟ್ ಪ್ರೇಮಿಗಳು ಯಾವ ಅವಮಾನದ ಪರಿಸ್ಥಿತಿಯಲ್ಲಿರುತ್ತಾರೋ, ಆಗ ಬಹಳಕಾಲ ಅದೇ ಪರಿಸ್ಥಿತಿ ಭಾರತದ ಕ್ರಿಕೆಟ್ ಪ್ರೇಮಿಗಳದ್ದಾಗಿರುತ್ತಿತ್ತು.

ಭಾರತದ ವಿಕೆಟ್ ಪತನವಾದಾಗ ಅಥವಾ ಪಂದ್ಯ ಗೆದ್ದಾಗ ಪಾಕಿಸ್ತಾನದ ಆಟಗಾರರು ಮೈದಾನದಲ್ಲಿ ನಡೆಸುವ ಸಂಭ್ರಮಾಚರಣೆಗಳು ನಮ್ಮನ್ನು ಅತಿಯಾಗಿ ರೇಗಿಸುವಂತಿರುತ್ತಿತ್ತು. ಸತತ ಸೋಲುಗಳ ಗಾಯದ ಮೇಲೆ ಉಪ್ಪು ಸವರಿದಂತೆ, ಪಾಕಿಸ್ತಾನ ತಂಡವು ಭಾರತದ ಮೇಲೆ ಗೆದ್ದಾಗಲೆಲ್ಲ 'ಹಮಾರಾ ಪಾಕಿಸ್ತಾನ್ ಜೀತ್ ಗಯಾ' ಎಂದು ಇಲ್ಲಿನ ಪಾಕಿಸ್ತಾನ ಪರ ಮನಸ್ಥಿತಿಯ ಜನ ಪಟಾಕಿ ಹೊಡೆದು ಬೀದಿಯಲ್ಲಿ ಕುಣಿದು ಕುಪ್ಪಳಿಸಿ ಸಂಭ್ರಮಿಸುವುದಿತ್ತಲ್ಲ, ಅದನ್ನು ಸಹಿಸುವುದಂತೂ ಬಹಳ ಕಷ್ಟವಾಗುತ್ತಿತ್ತು. ಅಂಥ ದೇಶದ್ರೋಹಿಗಳನ್ನು ದಮನಿಸುವ ದಮ್ಮು, ತಾಕತ್ತೂ ಅಂದಿನ ಸರಕಾರಕ್ಕೆ ಇರುತ್ತಿರಲಿಲ್ಲ ಬಿಡಿ. ಕಳೆದ 15 ವರ್ಷಗಳಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ಸೋತಿರುವುದೂ ಕಡಿಮೆಯೇ. ಪಾಕಿಸ್ತಾನದ ತುತ್ತೂರಿಯನ್ನು ಭಾರತದಲ್ಲಿ ಊದುವವರೂ ಈಗ ಬಹುತೇಕ ಬಿಲ ಸೇರಿಕೊಂಡುಬಿಟ್ಟಿದ್ದಾರೆ. ಕಾಲಚಕ್ರ ತಿರುಗಿ, ಈಗ ಪಾಕಿಸ್ತಾನದಲ್ಲಿ ಬಲೂಚಿಸ್ತಾನದ ಜನರು ಭಾರತದ ಗೆಲುವನ್ನು ನಲಿದು ಕುಣಿದು ಸಂಭ್ರಮಿಸುತ್ತಾರೆ.

ಒಂದು ಪಂದ್ಯದಲ್ಲಂತೂ ಕೊನೆಯ ಬಾಲಿಗೆ 6 ರನ್ ಬೇಕಾದಾಗ ಚೇತನ್ ಶರ್ಮಾ ಅವರಿಗೆ ಸಿಕ್ಸರ್ ಬಾರಿಸಿ ಮಿಯಾಂದಾದ್ ಭಾರತದ ಪರವಾಗಿದ್ದ ಪಂದ್ಯವನ್ನು ಪಾಕಿಸ್ತಾನದ ಕಡೆಗೆ ತಿರುಗಿಸಿಬಿಟ್ಟಿದ್ದರು. ಆ ಪಂದ್ಯವನ್ನಂತೂ ನಮ್ಮ ತಲೆಮಾರಿನ ಯಾವುದೇ ಕ್ರಿಕೆಟ್ ಪ್ರೇಮಿಯು ಮರೆಯಲು ಸಾಧ್ಯವೇ ಇಲ್ಲ. ಶಾರ್ಜಾದಲ್ಲಿ ಶುಕ್ರವಾರ ನಡೆಯುತ್ತಿದ್ದ ಪಂದ್ಯಗಳಲ್ಲಿ ಅಂಪೈರ್‌ಗಳ ಕೆಟ್ಟ ನಿರ್ಣಯಗಳಿಂದಾಗಿ ನಾವು ಪಾಕಿಸ್ತಾನದ ವಿರುದ್ಧ ಸೋತಿದ್ದೆಷ್ಟು ಬಾರಿ! ಒಂದು ಬಾರಿಯಂತೂ ಅಕೀಬ್ ಜಾವೇದ್ ಎನ್ನುವ ಪಾಕಿಸ್ತಾನದ ಮಾಮೂಲಿ ಬೌಲರ್ ಹ್ಯಾಟ್ರಿಕ್ ತೆಗೆದುಕೊಂಡಿದ್ದರು. ರವಿಶಾಸ್ತ್ರಿ, ಅಜರುದ್ದೀನ್ ಹಾಗೂ ಸಚಿನ್ ತೆಂಡೂಲ್ಕರ್ ಮೂವರು ಅಗ್ರಕ್ರಮಾಂಕದ ಆಟಗಾರರು ಅವರ ಎಲ್‌ಬಿ ಬಲೆಗೆ ಬಿದ್ದಿದ್ದರು. ಅದನ್ನೆಲ್ಲ ಮರೆಯಲಿಕ್ಕೇ ಸಾಧ್ಯವಿಲ್ಲ. ಭಾರತೀಯ ಕ್ರಿಕೆಟ್ ಪ್ರೇಮಿಗಳ ಈ ಎಲ್ಲ ಹಳೆಯ ನೋವುಗಳಿಗೆ ಇತ್ತೀಚೆಗೆ ಸ್ವಲ್ಪ ಸಮಾಧಾನ ಸಿಗುತ್ತಿದೆ, ಹಳೆಯ ಗಾಯಗಳು ಈಗ ತಾನೆ ಮಾಯಲು ಶುರುವಾಗಿವೆ. ಇದೇ ಪಂದ್ಯಾವಳಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಮತ್ತೆ ಮುಖಾಮುಖಿಯಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಭಾರತ ತಂಡವೇ ಗೆಲ್ಲುವುದಾದರೆ ಎಷ್ಟು ಸಾರಿ ಮುಖಾಮುಖಿಯಾದರೂ ನಮಗೆ ತೊಂದರೆಯೇನು? ಎನ್ನಬಹುದು; ಆದರೆ ಕುರ್ಚಿಯ ತುದಿಯಲ್ಲಿ ಕುಳಿತು ಮ್ಯಾಚ್ ನೋಡುವ ಒತ್ತಡ ಮಾತ್ರ ನಮಗೆ ಇದ್ದೇ ಇದೆ.

ಈ ಪಂದ್ಯಾವಳಿಯಲ್ಲಿ ಪಾಕಿಸ್ತಾನವನ್ನಂತೂ ಒಮ್ಮೆ ದೊಡ್ಡ ಅಂತರದಿಂದ ಸೋಲಿಸಿಯಾಗಿದೆ. ಮತ್ತೆ ಸಿಕ್ಕರೆ ಸದೆಬಡಿಯುವುದೂ ಗ್ಯಾರಂಟಿಯಿದೆ. ವಾಸ್ತವಿಕವಾಗಿ ನಿಜವಾದ ಹೋರಾಟ ಇನ್ನು ಮೇಲೆ ಶುರುವಾಗಲಿಕ್ಕಿದೆ. ಭಾನುವಾರದಿಂದ ಪಂದ್ಯಾವಳಿಗೆ ರಂಗೇರಲಿದೆ. ನಾವು ವೆಸ್ಟ್ ಇಂಡೀಸ್, ಜಿಂಬಾಬ್ವೆ ಹಾಗೂ ಬಲಿಷ್ಠ ದಕ್ಷಿಣ ಆಫ್ರಿಕಾದ ಜತೆಗೆ ಆಡಬೇಕಿದೆ. ಈಗಾಗಲೇ ಎರಡು ಬಾರಿ ಟಿ-20 ವಿಶ್ವಕಪ್ ಕಿರೀಟ ಹೊತ್ತ ಭಾರತ ತಂಡವು, ಮೂರನೆಯದರ ಮೇಲೆ ಕಣ್ಣಿಟ್ಟಂತೆ ಕಾಣುತ್ತಿದೆ. ಸದ್ಯ ಎಲ್ಲ ವಿಭಾಗಗಳಲ್ಲಿ ಅಗತ್ಯ ಶಕ್ತಿ ಸಾಮರ್ಥ್ಯವೂ ನಮ್ಮ ತಂಡಕ್ಕಿದೆ. 140 ಕೋಟಿ ಜನರ ನಿರೀಕ್ಷೆ, ಆಶಯವಂತೂ ಇದ್ದೇ ಇರುತ್ತೆ. ನಮ್ಮ ನೀಲಿಧಾರಿ ಹುಡುಗರಿಗೆ 'ಆಲ್ ದ ವೆರಿ ಬೆಸ್ಟ್' ಹೇಳುವ ಸಮಯವಿದು.

ಈ ಬಾರೀನೂ ಕಪ್ ನಮ್ದೇ… ಆಗಲಿ!!

ಭ್ರಷ್ಟಾಚಾರ-ಮುಕ್ತ ಭಾರತ: ಕನಸಾಗಿ ಉಳಿಯುವುದೇ?

ಒಂದು ಕಾಲದಲ್ಲಿ ಸಮಾಜವು ತಪ್ಪು ಮಾಡಿದವರನ್ನು, ಭ್ರಷ್ಟರನ್ನು ಬಹಿಷ್ಕರಿಸುವ ಮೂಲಕ ನೈತಿಕತೆಯನ್ನು ಕಾಪಾಡಿಕೊಳ್ಳುತ್ತಿತ್ತು. ಆದರೆ ಇಂದು ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಭ್ರಷ್ಟಾಚಾರದ ಆರೋಪ ಹೊತ್ತು ಜೈಲುಶಿಕ್ಷೆ ಅನುಭವಿಸಿ ಬಂದವರಿಗೆ ಹೂಗುಚ್ಛ ನೀಡಿ, ಮೆರವಣಿಗೆಯ ಮೂಲಕ ಅದ್ದೂರಿಯಾಗಿ ಸ್ವಾಗತಿಸುವ 'ಸೇಬಿನ ಹಾರದ ಸಂಸ್ಕೃತಿ'ಯನ್ನು ನಾವು ಕಾಣುತ್ತಿದ್ದೇವೆ. ಇದು ಸಮಾಜದ ನೈತಿಕ ದಿವಾಳಿತನದ ಸಂಕೇತ.

ಕಳಕಳಿ

ಎಸ್.ಎನ್. ಭಟ್, ಸೈಪಂಗಲ್ಲು
vveditoped@gmail.com

ಭಾರತವು ಇಂದು ಜಾಗತಿಕ ವೇದಿಕೆಯಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಶಕ್ತಿಯಾಗಿ ಗುರುತಿಸಿಕೊಳ್ಳುತ್ತಿದೆ. ಚಂದ್ರಯಾನದಿಂದ ಹಿಡಿದು ಡಿಜಿಟಲ್ ಕ್ರಾಂತಿಯವರೆಗೆ ಭಾರತದ ಸಾಧನೆಗಳು ಜಗತ್ತನ್ನೇ ಬೆರಗುಗೊಳಿಸಿವೆ. ಆದರೆ, ಈ ಎಲ್ಲಾ ಪ್ರಗತಿಯ ನಡುವೆಯೂ ದೇಶದ ಅಡಿಪಾಯವನ್ನು ಗೆದ್ದಲು ಹುಳುವಿನಂತೆ ತಿನ್ನುತ್ತಿರುವ ಒಂದು ದೊಡ್ಡ ಪಿಡುಗು ಎಂದರೆ 'ಭ್ರಷ್ಟಾಚಾರ'. ಈ ಹಿನ್ನೆಲೆಯಲ್ಲಿ ಭ್ರಷ್ಟಚಾರ-ಮುಕ್ತ ಭಾರತ ಎಂಬುದು ಕೇವಲ ಕನಸಾಗಿ ಉಳಿಯುತ್ತದೆಯೇ? ಎಂಬ ಪ್ರಶ್ನೆ ಇಂದು ಪ್ರತಿಯೊಬ್ಬ ನಾಗರಿಕನನ್ನೂ ಕಾಡುತ್ತಿದೆ. ಈ ಗಂಭೀರ ಸಮಸ್ಯೆಯ ಬಗ್ಗೆ ಭಾರತದ ನ್ಯಾಯಾಂಗ ವ್ಯವಸ್ಥೆಯ ಮೈಲಿಗಲ್ಲು, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರು ಹಾಗೂ ಕರ್ನಾಟಕದ ಮಾಜಿ ಲೋಕಾಯುಕ್ತರಾದ ನ್ಯಾ. ಸಂತೋಷ್ ಹೆಗ್ಡೆ ಅವರು ವ್ಯಕ್ತಪಡಿಸಿರುವ ಕಳಕಳಿಯುಕ್ತ ವಿಚಾರಗಳು ಇಂದಿನ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿವೆ.

ವ್ಯವಸ್ಥೆಯ ಬುಡಕ್ಕೆ ಅಂಟಿದ ಹುಳು

ಸಂತೋಷ್ ಹೆಗ್ಡೆ ಅವರ ವಿಶ್ಲೇಷಣೆಯ ಪ್ರಕಾರ, ಭ್ರಷ್ಟಾಚಾರ ಎಂಬುದು ಕೇವಲ ಹಣದ ವ್ಯವಹಾರವಲ್ಲ; ಅದು ಮನುಷ್ಯನ ಮನಸ್ಸಿನ ವಿಕಾರ. ಇಂದಿನ ಸಮಾಜದ ಬಹುಪಾಲು ಅನಿಷ್ಟಗಳಿಗೆ ಮೂಲಕಾರಣ 'ಲೋಭ' ಮತ್ತು 'ಅತೃಪ್ತಿ'. ಮಾನವನ ಅಗತ್ಯಕ್ಕೆ ಬೇಕಾದದ್ದು ಪ್ರಕೃತಿಯಲ್ಲಿದೆ, ಆದರೆ ಅವನ ದುರಾಸೆಗಲ್ಲ ಎಂಬ ಗಾಂಧೀಜಿಯವರ ತತ್ವ ಇಂದು ಮರೆಯಾಗಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಮನುಷ್ಯನ ಹಪಾಹಪಿ ಮಿತಿ ಮೀರಿದೆ.

ಇದಕ್ಕೆ ಜ್ವಲಂತ ಉದಾಹರಣೆಯೆಂದರೆ, ಕೇವಲ ಆರ್ಥಿಕ ಲಾಭಕ್ಕಾಗಿ ಪಶ್ಚಿಮ ಘಟ್ಟಗಳಂಥ ಸೂಕ್ಷ್ಮ ಪರಿಸರವನ್ನು ನಾಶಮಾಡುತ್ತಿರುವುದು. ಇದರ ಕಹಿಫಲವನ್ನು ಇತ್ತೀಚೆಗೆ ಘಟಿಸಿದ, ವಯನಾಡು ಮತ್ತು ಕೊಡಗಿನ ಭೀಕರ ಗುಡ್ಡಕುಸಿತಗಳಲ್ಲಿ ನಾವು ಕಂಡಿದ್ದೇವೆ. ಮನುಷ್ಯನ ದುರಾಸೆಯು ಪ್ರಕೃತಿಯನ್ನು ಲೂಟಿ ಮಾಡಿದಾಗ ಇಂಥ ದುರಂತಗಳು ಸಂಭವಿಸುತ್ತವೆ. ಹಾಗೆಯೇ, ಸಾವಿರಾರು ಕೋಟಿ ಹಣವನ್ನು ಬ್ಯಾಂಕ್‌ಗಳಿಂದ ಲೂಟಿ ಮಾಡಿ ವಿದೇಶಕ್ಕೆ ಪರಾರಿಯಾದ ಆರ್ಥಿಕ ಅಪರಾಧಿಗಳ ಪ್ರಕರಣಗಳು 'ವೈಟ್ ಕಾಲರ್ ಕ್ರೈಂ' ಮತ್ತು ಕೊನೆಯಿಲ್ಲದ ಅತೃಪ್ತಿಗೆ ಸಾಕ್ಷಿಯಾಗಿವೆ. ಸೋಷಿಯಲ್ ಮೀಡಿಯಾದ 'ಪ್ರದರ್ಶನ ಸಂಸ್ಕೃತಿ'ಯು ಯುವಜನತೆಯನ್ನು ಸಕ್ರಮ ಗಳಿಕೆಗಿಂತ ಸುಲಭವಾಗಿ ಶ್ರೀಮಂತರಾಗುವ ತಪ್ಪು ಹಾದಿಗಳತ್ತ ಸೆಳೆಯುತ್ತಿರುವುದು ದೇಶದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಆತಂಕಕಾರಿಯಾಗಿದೆ.

ಸಾಮಾಜಿಕ ಮೌಲ್ಯಗಳ ಕುಸಿತ

ಒಂದು ಕಾಲದಲ್ಲಿ ಸಮಾಜವು ತಪ್ಪು ಮಾಡಿದವರನ್ನು ಮತ್ತು ಭ್ರಷ್ಟರನ್ನು ಬಹಿಷ್ಕರಿಸುವ ಮೂಲಕ ನೈತಿಕತೆಯನ್ನು ಕಾಪಾಡಿಕೊಳ್ಳುತ್ತಿತ್ತು. ಆದರೆ ಇಂದು ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಭ್ರಷ್ಟಾಚಾರದ ಆರೋಪ ಹೊತ್ತು ಜೈಲುಶಿಕ್ಷೆ ಅನುಭವಿಸಿ ಬಂದವರಿಗೆ ಹೂಗುಚ್ಛ ನೀಡಿ, ಮೆರವಣಿಗೆಯ ಮೂಲಕ ಅದ್ದೂರಿಯಾಗಿ ಸ್ವಾಗತಿಸುವ 'ಸೇಬಿನ ಹಾರದ ಸಂಸ್ಕೃತಿ'ಯನ್ನು ನಾವು ಕಾಣುತ್ತಿದ್ದೇವೆ. ಇದು ಸಮಾಜದ ನೈತಿಕ ದಿವಾಳಿತನದ ಸಂಕೇತ.ಇಂದು ವ್ಯಕ್ತಿಯ ಚಾರಿತ್ರ್ಯಕ್ಕಿಂತ ಅವನ ಬಳಿ ಇರುವ 'ಸಂಪತ್ತು' ಗೌರವದ ಮಾನದಂಡವಾಗಿದೆ. ಹಣವು ನ್ಯಾಯಯುತವಾದ ದಾರಿಯಲ್ಲಿ ಬಂದಿದೆಯೇ ಅಥವಾ ಅಕ್ರಮ ಮಾರ್ಗದಲ್ಲಿ ಗಳಿಸಿದ್ದೇ ಎಂಬ ವಿವೇಚನೆಯನ್ನು ಸಮಾಜವು ಮರೆತುಬಿಟ್ಟಿದೆ. ಈ 'ಸಂಪತ್ತಿನ ಆರಾಧನೆ' ಜನರನ್ನು ಸತ್ಯದ ಹಾದಿಯಿಂದ ದೂರ ತಳ್ಳಿ, ಹೇಗಾದರೂ ಮಾಡಿ ಹಣ ಗಳಿಸಬೇಕು ಎಂಬ ದುರಾಸೆಗೆ ತಳ್ಳುತ್ತಿದೆ. ಸಮಾಜವು ಭ್ರಷ್ಟರನ್ನು ಬಹಿಷ್ಕರಿಸಿ ಪ್ರಾಮಾಣಿಕರನ್ನು ಗೌರವಿಸುವ ಸಂಸ್ಕೃತಿಯನ್ನು ಮರಳಿ ಸ್ಥಾಪಿಸದ ಹೊರತು ಭ್ರಷ್ಟಾಚಾರ ಮುಕ್ತ ಸಮಾಜ ಅಸಾಧ್ಯ ಎಂಬುದು ಹೆಗ್ಡೆ ಅವರ ಖಚಿತ ಅಭಿಪ್ರಾಯವಾಗಿದೆ.

ವ್ಯವಸ್ಥೆಯ ವಿಪರ್ಯಾಸ

ಪ್ರಜಾಪ್ರಭುತ್ವದ ನಾಲ್ಕು ಸ್ತಂಭಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮಗಳು ಇಂದು ಲೋಭಿಗಳ ಕೈಯಲ್ಲಿ ಸಿಲುಕಿವೆಯೇ ಎಂಬ ಪ್ರಶ್ನೆ ಮೂಡುತ್ತಿದೆ. ಪ್ರಜಾಪ್ರಭುತ್ವದ ತತ್ವಗಳು ಮತ್ತು ನ್ಯಾಯಾಂಗ ಸಂಸ್ಥೆಗಳನ್ನು ರೂಪಿಸಿರುವುದು ಸಮಾಜದಲ್ಲಿ 'ಕಾಡಿನ ಕಾನೂನು' ಇರಬಾರದು ಎಂಬ ಕಾರಣಕ್ಕೆ. ಆದರೆ ಇಂದು ವ್ಯವಸ್ಥೆ ಎಷ್ಟು ಕೆಟ್ಟಿದೆಯೆಂದರೆ, ಕಾನೂನು ಕೇವಲ 'ಜೇಡರ ಬಲೆ'ಯಂತಾಗಿದೆ; ಇದರಲ್ಲಿ ಸಣ್ಣ ಹುಳಗಳು ಸಿಕ್ಕಿಹಾಕಿಕೊಳ್ಳುತ್ತವೆ, ಆದರೆ ದೊಡ್ಡ ವ್ಯಕ್ತಿಗಳು ಆ ಬಲೆಯನ್ನು ಹರಿದು ರಾಜಾರೋಷವಾಗಿ ಹೊರಬರುತ್ತಾರೆ.

ಮಣಿಪುರದಂಥ ಜನಾಂಗೀಯ ಸಂಘರ್ಷಗಳಲ್ಲಿ ವ್ಯವಸ್ಥೆಯು ದೀರ್ಘಕಾಲ ಮೌನವಾಗಿರುವುದು ಅಥವಾ ಕಾನೂನು-ಸುವ್ಯವಸ್ಥೆ ವಿಫಲವಾಗುವುದು ಪ್ರಜಾಪ್ರಭುತ್ವದ ಸ್ತಂಭಗಳ ದೌರ್ಬಲ್ಯವನ್ನು ತೋರಿಸುತ್ತದೆ. ಜನಪ್ರತಿನಿಧಿಗಳು ತಾವು 'ಜನರ ಸೇವಕರು' ಎಂಬುದನ್ನು ಮರೆತು ಸಮಾಜದ 'ಮಾಲೀಕರಂತೆ' ವರ್ತಿಸುತ್ತಿರುವುದು ಅಡಿಪಾಯವನ್ನೇ ಅಲುಗಾಡಿಸುತ್ತಿದೆ. ಅಧಿಕಾರವು ಜನಸೇವೆಗಾಗಿ ಇರುವ ಜವಾಬ್ದಾರಿಯಾಗುವ ಬದಲು, ಹಣ ಮಾಡುವ ಸುಲಭ ಮಾರ್ಗವಾಗಿ ಬದಲಾಗಿದೆ.

ನಾಗರಿಕ ಜವಾಬ್ದಾರಿ

ಇಲ್ಲಿ ಒಂದು ದೊಡ್ಡ ವಿಪರ್ಯಾಸವಿದೆ. ನಮ್ಮ ದೇಶದ ಗಡಿ ಭದ್ರತಾ ಪಡೆಗಳ ಸೈನಿಕರು ತಮ್ಮ ಜೀವನ, ಕುಟುಂಬ ಮತ್ತು ಕನಸುಗಳನ್ನು ಬದಿಗಿಟ್ಟು ದೇಶಕ್ಕಾಗಿ ಪ್ರಾಣತ್ಯಾಗ ಮಾಡುತ್ತಾರೆ. ಅವರು ಗಡಿಯಲ್ಲಿ ನಿಂತಿರುವುದರಿಂದಲೇ ನಾವು ಇಂದು ಶಾಂತಿಯಿಂದ ಬದುಕಲು ಸಾಧ್ಯವಾಗುತ್ತಿದೆ. ಆದರೆ, ದೇಶದ ಒಳಗಿರುವ ಭ್ರಷ್ಟರು ದೇಶವನ್ನು ಲೂಟಿ ಮಾಡುತ್ತಿರುವುದನ್ನು ಕಂಡಾಗ, ಆ ಸೈನಿಕರ ತ್ಯಾಗಕ್ಕೆ ನಾವು ಬೆಲೆ ಕೊಡುತ್ತಿದ್ದೇವೆಯೇ ಎಂಬ ಪ್ರಶ್ನೆ ಕಾಡುತ್ತದೆ. ಸೈನಿಕನನ್ನು ಮರೆತು, ದೇಶವನ್ನು ಲೂಟಿ ಮಾಡಿದವನಿಗೆ ಹೂಮಾಲೆ ಹಾಕುವ ಸಮಾಜವು ಆ ಸೈನಿಕನ ಬಲಿದಾನಕ್ಕೆ ಮಾಡುತ್ತಿರುವ ಅಪಮಾನವಾಗಿದೆ. ನಮ್ಮ ದೇಶದ ಶಕ್ತಿ ಇರುವುದು ಕೇವಲ ಕಟ್ಟಡಗಳಲ್ಲಲ್ಲ, ಬದಲಾಗಿ ಜನರ ಗುಣ-ನಡತೆಯಲ್ಲಿ.

ಮಾನವೀಯತೆಯ ಕೊರತೆ

ಭ್ರಷ್ಟಚಾರ-ಮುಕ್ತ ಭಾರತದ ಕನಸು ನನಸಾಗಬೇಕಾದರೆ ಶಿಕ್ಷಣ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆ ಬರಬೇಕು. ಕೋಲ್ಕತ್ತಾದ ಆಸ್ಪತ್ರೆಯಲ್ಲಿ ಇತ್ತೀಚೆಗೆ ನಡೆದ ಹೇಯಕೃತ್ಯವು (ಆರ್.ಜಿ. ಕರ್ ವೈದ್ಯಕೀಯ ಕಾಲೇಜಿನ ವೈದ್ಯೆಯ ಮೇಲಿನ ಭೀಕರ ಅತ್ಯಾಚಾರ ಮತ್ತು ಕೊಲೆ ಪ್ರಕರಣ) ಸಮಾಜದಲ್ಲಿ ನೈತಿಕತೆ

ಎಷ್ಟು ಪಾತಾಳಕ್ಕೆ ಕುಸಿದಿದೆ ಎಂಬುದನ್ನು ತೋರಿಸುತ್ತದೆ. ಶಿಕ್ಷಣವು ಕೇವಲ ಬೌದ್ಧಿಕ ಬೆಳವಣಿಗೆಗೆ ಸೀಮಿತವಾಗದೆ, ಮೌಲ್ಯಗಳನ್ನು ಕಲಿಸುವಂತಿರಬೇಕು. ಒಬ್ಬ ವ್ಯಕ್ತಿ ಎಷ್ಟೇ ಉನ್ನತ ಪದವಿ ಪಡೆದಿದ್ದರೂ, ಅವನಲ್ಲಿ 'ಮಾನವೀಯತೆ' ಮತ್ತು 'ಸಂತೃಪ್ತಿ' ಇಲ್ಲದಿದ್ದರೆ ಆತ ಸಮಾಜಕ್ಕೆ ಅಪಾಯಕಾರಿಯಾಗುತ್ತಾನೆ. ರೋಗಿಯ ನೋವಿಗೆ ಮಿಡಿಯದ ವೃತ್ತಿಪರರು ಅಥವಾ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವ ಕ್ರೂರ ಮನಸ್ಥಿತಿಗಳು ಬೆಳೆಯುತ್ತಿರುವುದು ಮೌಲ್ಯಯುತ ಶಿಕ್ಷಣದ ಕೊರತೆಯಿಂದಲೇ. ಆದ್ದರಿಂದ ಬಾಲ್ಯದಿಂದಲೇ 'ನೈತಿಕ ಶಿಕ್ಷಣ' ನೀಡುವುದು ಇಂದಿನ ತುರ್ತು ಅನಿವಾರ್ಯವಾಗಿದೆ.

ಕನಸನ್ನು ನನಸಾಗಿಸುವ ಹಾದಿ

ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಸಮಾಜದ ಸುಧಾರಣೆಗಾಗಿ ನೀಡುವ ಕರೆ ಅತ್ಯಂತ ನೇರವಾಗಿದೆ. ಭ್ರಷ್ಟಾಚಾರ-ಮುಕ್ತ ಸಮಾಜದ ನಿರ್ಮಾಣಕ್ಕಾಗಿ ನಾವು ಚತುರ್ಮುಖ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ. ಮೊದಲನೆಯದಾಗಿ, ಸಮಾಜದಲ್ಲಿ ಸಾಮಾಜಿಕ ಬಹಿಷ್ಕಾರದ ಶಕ್ತಿ ಅರಿವಾಗಬೇಕು; ಭ್ರಷ್ಟರನ್ನು ಸಾರ್ವಜನಿಕವಾಗಿ ಗೌರವಿಸುವುದನ್ನು ನಿಲ್ಲಿಸಿ ಅವರನ್ನು ದೂರವಿಟ್ಟಾಗ ಮಾತ್ರ ತಪ್ಪಿತಸ್ಥರಿಗೆ ತಮ್ಮ ಅಧರ್ಮದ ಅರಿವಾಗಲು ಸಾಧ್ಯ. ಎರಡನೆಯದಾಗಿ, ಪ್ರತಿಯೊಬ್ಬ ವ್ಯಕ್ತಿಯೂ ಸಂತೃಪ್ತಿಯ ಮಂತ್ರವನ್ನು ಪಾಲಿಸಬೇಕು; ನನಗೆ ಇಷ್ಟು ಸಾಕು ಎಂಬ ಮಿತಿಯನ್ನು ಅರಿತು ನಮ್ಮ ಅಗತ್ಯ ಮತ್ತು ದುರಾಸೆಯ ನಡುವೆ ಸ್ಪಷ್ಟ ಗೆರೆಯನ್ನು ಎಳೆದುಕೊಳ್ಳಬೇಕು. ಇದರೊಂದಿಗೆ, 'ನಾನು ಲಂಚ ಕೊಡುವುದಿಲ್ಲ ಮತ್ತು ಪಡೆಯುವುದಿಲ್ಲ' ಎಂಬ ವೈಯಕ್ತಿಕ ಸಂಕಲ್ಪವು ಕೇವಲ ಘೋಷಣೆಯಾಗದೆ ನಮ್ಮ ಜೀವನದ ಶಿಸ್ತಾಗಿ ಬದಲಾಗಬೇಕು. ಕೊನೆಯದಾಗಿ, ಸರಕಾರವು ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಿ, ಡಿಜಿಟಲೀಕರಣದ ಮೂಲಕ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೆ ತಂದು ಮಧ್ಯವರ್ತಿಗಳ ಹಾವಳಿಯನ್ನು ಸಂಪೂರ್ಣವಾಗಿ ತಡೆಗಟ್ಟಬೇಕು. ಈ ನಾಲ್ಕು ಮೌಲ್ಯಗಳು ಒಂದಾದಾಗ ಮಾತ್ರ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರವನ್ನು ಬೇರುಸಹಿತ ಕಿತ್ತೆಸೆಯಲು ಸಾಧ್ಯವಾಗುತ್ತದೆ.

ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಕಾನೂನುಗಳು ಮಾತ್ರ ಬದಲಾವಣೆ ತರಲಾರವು; ಇಲ್ಲಿ ಸರಕಾರದ ಸಕ್ರಿಯ ಪಾತ್ರ ಮತ್ತು ವ್ಯವಸ್ಥಿತ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳ ಏಕಕಾಲಿಕ ಕಾರ್ಯಾಚರಣೆ ಅತ್ಯಗತ್ಯವಾಗಿದೆ. ಸರಕಾರವು ಡಿಜಿಟಲೀಕರಣ ಮತ್ತು ಇ-ಗವರ್ನೆನ್ಸ್ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ತಂದು, ಲಂಚದ ಹಾವಳಿಗೆ ಆಸ್ಪದವಿಲ್ಲದಂತೆ ಮಾಡಬೇಕು. ಇದರ ಜತೆಗೆ, ಸಮಾಜದಲ್ಲಿ ನೈತಿಕ ಶಿಕ್ಷಣವನ್ನು ಉತ್ತೇಜಿಸುವ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳು ಸಾರ್ವಜನಿಕರಲ್ಲಿ 'ಭ್ರಷ್ಟರನ್ನು ಗೌರವಿಸುವುದು ಎಂದರೆ ಸೈನಿಕರ ತ್ಯಾಗಕ್ಕೆ ಅಪಮಾನ ಮಾಡಿದಂತೆ' ಎಂಬ ಪ್ರಜ್ಞೆಯನ್ನು ಮೂಡಿಸಬೇಕು. ವ್ಯವಸ್ಥೆಯಲ್ಲಿರುವ ಭ್ರಷ್ಟರು ಇಡೀ ದೇಶದ ಸಂಕೇತವಲ್ಲ ಎಂಬ ಸತ್ಯವನ್ನು ಅರಿತು, ಸಮಾಜವು ಅಂಥವರನ್ನು ಬಹಿಷ್ಕರಿಸುವ ಮತ್ತು ಪ್ರಾಮಾಣಿಕರನ್ನು ಸನ್ಮಾನಿಸುವ ಕೆಲಸ ಮಾಡಬೇಕಿದೆ. ಗಡಿಯಲ್ಲಿ ಪ್ರಾಣ ನೀಡಿ ನಮ್ಮನ್ನು ಕಾಯುವ ಸೈನಿಕರ ತ್ಯಾಗಕ್ಕೆ ನಿಜವಾದ ಬೆಲೆ ಸಿಗುವುದು ನಾವು ಒಳಗಿನ ಶತ್ರುವಾದ ಭ್ರಷ್ಟಾಚಾರವನ್ನು ಸೋಲಿಸಿದಾಗ ಮಾತ್ರ. ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಆಶಿಸಿದಂತೆ, ಸರಕಾರವು ಕಟ್ಟುನಿಟ್ಟಿನ ನ್ಯಾಯದಾನದ ಜವಾಬ್ದಾರಿ ಹೊತ್ತು, ಸಮಾಜವು ನೈತಿಕತೆಯನ್ನು ದಾರಿದೀಪವಾಗಿಸಿಕೊಂಡರೆ ಮಾತ್ರ 'ಭ್ರಷ್ಟಚಾರ-ಮುಕ್ತ ಭಾರತ' ಎಂಬ ಸುಂದರ ಕನಸು ನನಸಾಗಲು ಸಾಧ್ಯ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಐ ಸ್ಟ್ಯಾಂಡ್ ವಿತ್ ಅನ್ನೋದು ಚಟ ಆದ್ರೆ: 'ಸ್ಟ್ಯಾಂಡ್' ಅಪ್ ಕಾಮಿಡಿ ಸಿನಿಗನ್ನಡ

ಬಾಯಿಗೆ ಬಂದಿದ್ದು ಮಾತಾಡೋದು, ನಂತರ, 'ನಾನು ಹಾಗೆ ಹೇಳೇ ಇಲ್ಲ, ನನ್ನ ಮಾತನ್ನ ತಿರುಚಲಾಗಿದೆ' ಅಂತ ಹೇಳೋದು ರಾಜಕಾರಣಿಗಳ ಹಣೆಬರಹ. ಇನ್ನುಳಿದವರಿಗೆ, ಏನೇನೋ ಮಾತಾಡೋದು, ನಂತರ ತಪ್ಪಾಯ್ತು ಅಂತ ಕ್ಷಮೆ ಕೇಳೋದು ಚಾಳಿ. ಇದು ಇತ್ತೀಚೆಗೆ ಚಿತ್ರರಂಗದಲ್ಲಿ ಜಾಸ್ತಿ ಆಗಿದೆ. ಚಿತ್ರರಂಗದ ದೊಡ್ಡವರ ಬಗ್ಗೆ ಬಾಯಿಗೆ ಬಂದಂತೆ ನಾಲಿಗೆ ಹರಿಬಿಡೋದು, ನಂತರ ನಾನು ಹಾಗೆ ಮಾತಾಡಬಾರದಿತ್ತು. ನಿಮ್ಮ ಮನಸ್ಸಿಗೆ ನೋವಾಗಿದ್ರೆ, ಸಾರಿ ಅನ್ನೋದು. ಇದಕ್ಕೆ ಲೇಟೆಸ್ಟ್ ಉದಾಹರಣೆ ಸ್ಯಾಂಡಲ್‌ವುಡ್ ನಿರ್ಮಾಪಕ ಕನಕಪುರ ಶ್ರೀನಿವಾಸ್. ಇತ್ತೀಚೆಗೆ ತಮ್ಮ ಚಿತ್ರದ ಪ್ರಮೋಷನ್ ಸಮಯದಲ್ಲಿ ಪುನೀತ್ ರಾಜ್‌ಕುಮಾರ್, ಧ್ರುವ ಸರ್ಜಾ, ದರ್ಶನ್, ಜೋಗಿ ಪ್ರೇಮ್, ಎ.ಪಿ. ಅರ್ಜುನ್ ಇನ್ನೂ ಮುಂತಾದ ಅನೇಕರ ಬಗ್ಗೆ ಕೀಳುಭಾಷೆಯಲ್ಲಿ ಮಾತಾಡಿದ್ದ ಶ್ರೀನಿವಾಸ್ ಎಲ್ಲರ ಕೆಂಗಣ್ಣಿಗೆ ಗುರಿ ಆಗಿದ್ದರು. ಚಿತ್ರದ ಪ್ರಚಾರವೇದಿಕೆಯ ಮೇಲೆ ನಿಂತು ಅಸಹ್ಯವಾದ ಭಾಷೆ ಮತ್ತು ಪದಗಳ ಪ್ರಯೋಗ ಮಾಡಿದ್ದರು ಶ್ರೀನಿವಾಸ್. ಮಾನಸಿಕ ಅಸ್ವಸ್ಥನಂತೆ ಮಾತಾಡಿದ್ದ ಅವರನ್ನು ನೋಡಿ, 'ಇದು ಹೀಗೇ ಮುಂದುವರಿದರೆ ಶ್ರೀನಿವಾಸನ ಕಥೆ ಗೋವಿಂದ' ಅಂತ ಅನೇಕರು ಅಂದುಕೊಂಡಿದ್ದರು. ಅವುಗಳನ್ನು ಕೇಳಿದ ಅನೇಕರು ಈವಯ್ಯನಿಗೆ ಕೇಡುಗಾಲ ಬಂದಿದೆ ಅಂತ ಆಡಿಕೊಂಡರೆ, ಇನ್ನು ಕೆಲವರು ಇನ್ನು ಕೆಲವು ದಿನಗಳಲ್ಲಿ ಸಾರಿ ಅಂತ ತಡವರಿಸುತ್ತಾರೆ ಬಿಡಿ ಅಂತ ಸುಮ್ಮನಾಗಿದ್ದರು. ಈಗ ಹಂಗೇ ಆಗಿದೆ. ಹೊಸದಾಗಿ ಆಯ್ಕೆ ಆಗಿರುವ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜಯಮಾಲಾ ಅವರ ಜತೆ ಕೂತು, 'ನಾನು ಹಾಗೆ ಮಾತಾಡಬಾರದಿತ್ತು, ನಿಮ್ಮ ಮನಸ್ಸಿಗೆ ನೋವಾಗಿದ್ರೆ, ಕ್ಷಮಿಸಿ' ಅಂದಿದ್ದಾರೆ ಶ್ರೀನಿವಾಸ್. ಅದರಲ್ಲಿ ನೋವಾಗಿದ್ದರೆ ಅನ್ನೋ ಪ್ರಮೇಯವೇ ಇಲ್ಲ. ಅವರ ಮಾತಿನಿಂದ ಹಲವರಿಗೆ ನೋವಾಗಿದ್ದು ನಿಜವೇ. ಆದ್ರೂ ಶ್ರೀನಿವಾಸ್ ಈಗ 'ಸಾರಿ'ಯ ತಿಪ್ಪೆ ಸಾರಿಸಿದ್ದಾರೆ. ಇದು ಸ್ಯಾಂಡಲ್‌ವುಡ್‌ನ ಇತ್ತೀಚಿನ ಕೆಟ್ಟ ಬೆಳವಣಿಗೆ ಆದ್ರೂ ಇವರು ರಾಜಕಾರಣಿಗಳ ಥರ, 'ನಾನು ಹೇಳಿದ್ದನ್ನು ತಿರುಚಲಾಗಿದೆ' ಅಂತ ಹೇಳದೆ ನೇರವಾಗಿ 'ಸಾರಿ' ಕೇಳಿದ್ದಾರೆ ಅನ್ನೋದು ಮಾತ್ರ ಸಮಾಧಾನದ ವಿಷಯ.



ತುಂಟರಗಾಳಿ

ಹರಿ ಪರಾಕ್
vveditoped@gmail.com

ನೆಟ್ ಪಿಕ್ಸ್

ಅದು ಒಂದು ಸರಕಾರಿ ಹಾಸ್ಪಿಟಲ್. ಸುಮಾರು ಜನ ಅಲ್ಲಿ ಅಡ್ಮಿಟ್ ಆಗಿದ್ದರು. ಆದರೆ ಎಲ್ಲರಿಗೂ ಗೊತ್ತಿರುವಂತೆ ಡಾಕ್ಟರ್‌ಗಳ ಸಂಖ್ಯೆ ಕಮ್ಮಿ, ನರ್ಸ್‌ಗಳ ಸಂಖ್ಯೆ ಕಮ್ಮಿ. ವ್ಯವಸ್ಥೆ ಗೊಂದಲಮಯ. ಅಲ್ಲಿದ್ದ ಸ್ಟಾಫ್‌ಗಳು ಪಾಪ ಕಷ್ಟಪಟ್ಟು ಪರಿಸ್ಥಿತಿಯನ್ನು ಹೆಂಗೋ ನಿಭಾಯಿಸುತ್ತಿದ್ದರು. ಅಷ್ಟರಲ್ಲಿ ಒಂದು ದಿನ ಬೆಳಗ್ಗೆ ಅಲ್ಲಿನ ರಿಸೆಪ್ಷನಿಷ್ಟ್‌ಗೆ ಒಂದು ಕಾಲ್ ಬಂತು. ಆಕೆ ಎತ್ತಿ 'ಹಲೋ' ಅಂದ್ಳು. ಆ ಕಡೆಯಿಂದ ಒಬ್ಬ ಗಂಡಸಿನ ವಾಯ್ಸ್ ಬಂತು: ''ಮೇಡಂ, ಬೆಡ್ ನಂಬರ್ 302ರಲ್ಲಿ ಇರೋ ಖೇಮು ಅನ್ನೋ ಪೇಷೆಂಟ್ ಪರಿಸ್ಥಿತಿ ಹೇಗಿದೆ ಈಗ?''

''ಒಂದ್ ನಿಮಿಷ ಇರಿ, ಡೀಟೇಲ್ಸ್ ನೋಡ್ತೀನಿ… ಹ್ಞಾ ಅವರು ಈಗ ಚೆನ್ನಾಗೇ ಇದ್ದಾರೆ''.

''ಅವರ ಆಕ್ಸಿಜನ್ ಲೆವೆಲ್ ಹೇಗಿದೆ?''

''ಕಂಟ್ರೋಲ್‌ನಲ್ಲಿದೆ ಸರ್''

''ಅವರ ಬಿಪಿ ಸರಿ ಇದೆಯಾ, ಹಾರ್ಟ್ ಪ್ರಾಬ್ಲಮ್ ಏನೂ ಇಲ್ಲ ತಾನೇ?''

''ಎಲ್ಲ ಸರಿ ಇದೆ ಸರ್''

''ಖೇಮು ಅವರಿಗೆ ಎಲ್ಲಾ ಮೆಡಿಸಿನ್ ಸರಿಯಾಗಿ ಕೊಡ್ತಾ ಇದ್ದಾರಾ, ಅವರ ಹೆಲ್ತ್ ಪ್ರೋಗ್ರೆಸ್ ಹೇಗಿದೆ?''

''ಸರ್, ಖೇಮು ಅವರು ಎಲ್ಲ ರೀತಿಯಿಂದ ಆರೋಗ್ಯವಾಗಿದ್ದಾರೆ. ಮೋಸ್ಟ್‌ಲೀ ನಾಳೆ ಅವರನ್ನ ಡಿಸ್‌ಚಾರ್ಜ್ ಮಾಡ್ತಾರೆ. ಅದ್ಸರಿ, ನೀವ್ಯಾರು, ಅವರಿಗೆ ತುಂಬಾ ಹತ್ತಿರವರು ಅನ್ನಿಸುತ್ತೆ, ಅವರ ಮಗನಾ?''

''ಅಲ್ಲಾ ಮೇಡಂ, ನಾನೇ ಖೇಮು ಮಾತಾಡ್ತಾ ಇರೋದು; ಬಡ್ಡಿಮಕ್ಳು, ಇಲ್ಲಿ ಯಾರೂ ಏನ್ ಆಗ್ತಿದೆ ಅಂತ ಹೇಳೋರೇ ಗತಿ ಇಲ್ಲ''.

ಲೂಸ್ ಟಾಕ್ — ನರೇಂದ್ರ ಮೋದಿ

- **ಏನ್ ಸರ್, ಮತ್ತೆ ಸ್ವಚ್ಛ ಭಾರತ್ ಅಭಿಯಾನದ ಇನ್ನೊಂದು ಇನ್ನಿಂಗ್ಸ್ ಶುರುಮಾಡಿದ್ದೀರಂತೆ, ಏನ್ ಕಾನ್ಸೆಪ್ಟ್ ಈ ಸಲ?**
- ಉಪ್ಪು ತಿಂದವ ನೀರು ಕುಡಿಯಬೇಕು, 'ಸುಸ್ಸು' ಮಾಡಿದವ ನೀರು ಹಾಕಲೇಬೇಕು.
- **ಓಹೋ, ಸರಿ. ಎಲ್ಲರನ್ನೂ ಮತ್ತೆ ಕಸ ಗುಡಿಸೋ ಕೆಲಸಕ್ಕೆ ಇಳಿಸೋ ಪ್ಲ್ಯಾನ್ ಇದೆಯಂತೆ?**
- ಹೌದು, ಈಗ ಯಾರು ಬೇಕಾದರೂ ಕಸ ಗುಡಿಸಬಹುದು, ನಮ್ಮದು ಈಗ 'ಗುಡಿಸಲು' ಮುಕ್ತ ದೇಶ.
- **ಈ ಅಭಿಯಾನಕ್ಕೆ ಏನಾದ್ರೂ ಸ್ಲೋಗನ್ ಇಟ್ಟಿದ್ದೀರಾ?**
- ಹೌದು. ಭಾರತಕ್ಕಾಗಿ ಕಸ 'ಗುಡಿ'ಸಿ, ನಿಮ್ಮ ದೇಶ ದೇವರ 'ಗುಡಿ' ಆಗುತ್ತದೆ. ಹೆಂಗಿದೆ?
- **ಸೂಪರ್. ಸರಿ, ಈ ಅಭಿಯಾನದ ಉದ್ದೇಶ ಏನು?**
- ಎಲ್ಲರಿಗೂ ಕಸ ಗುಡಿಸೋ ಕೆಲ್ಸ ಕೊಟ್ರೆ, ದೇಶನೂ ಕ್ಲೀನ್ ಆಗುತ್ತೆ, ನಿರುದ್ಯೋಗ ಸಮಸ್ಯೆನೂ ನಿವಾರಣೆ ಆಗುತ್ತೆ
- **ಓಹೋ, ಮಾಸ್ಟರ್ ಪ್ಲ್ಯಾನ್ ನಿಮ್ಮದು. ಸರಿ, ಇದಕ್ಕೆ ಯಾವಾಗ ಚಾಲನೆ ಕೊಡ್ತೀರಾ?**
- ಆದಷ್ಟು ಬೇಗ ಟ್ವೀಟ್ ಮಾಡ್ತೀನಿ– 'ಕೊಚ್ಚೇ' ದಿನ್ ಜಾನೇವಾಲೇ ಹೈ ಅಂತ.

(ಕಾಲ್ಪನಿಕ ಸಂದರ್ಶನ)

ಲೈನ್ ಮ್ಯಾನ್

- **ಸೋಮು: ಕಂಡಕಂಡ ಹುಡುಗಿಯರ ಹತ್ರ ಫ್ಲರ್ಟ್ ಮಾಡ್ತೀಯಲ್ಲ ನಿನ್ನ ಹೆಂಡ್ತಿ ಏನೂ ಅನ್ನಲ್ವಾ?**
- ಖೇಮು: ಇಲ್ಲಪ್ಪ, ಅವಳು ಅದನ್ನೆಲ್ಲಾ ತುಂಬಾ ಸ್ಪೋರ್ಟಿವ್ ಆಗಿ ತಗೋತಾಳೆ. ಅಂದಹಾಗೆ ಅವಳ ಫೇವರಿಟ್ ಸ್ಪೋರ್ಟ್ WWF
- **ಕೋಳಿಗಳ ಹಣೆಬರಹ**
- ಕೋಳಿಗಳು ಎಷ್ಟ್ ವರ್ಷ ಬದುಕಿರ್ತವೆ ಅಂತ ಯಾರಿಗೂ ಗೊತ್ತಿಲ್ಲ ಅನ್ಸುತ್ತೆ. ಪಾಪ, ಬದುಕೋಕೆ ಬಿಟ್ರೆ ತಾನೇ ಗೊತ್ತಾಗೋದು. ಸ್ವಲ್ಪ ದೊಡ್ಡದಾದ ತಕ್ಷಣ ಕೊಯ್ಕೊಂಡ್ ತಿಂದ್ ಬಿಡ್ತೀವಿ
- **ಲೇಟೆಸ್ಟ್ ಟ್ರೆಂಡ್**
- ಕೆಲವರು 'ಐ ಸ್ಟ್ಯಾಂಡ್ ವಿತ್' ಅನ್ನೋಕೆ ತುದಿಗಾಲಲ್ಲೇ ನಿಂತಿರ್ತಾರೆ
- **ಮಾತೆತ್ತಿದರೆ, 'ಐ ಸ್ಟ್ಯಾಂಡ್ ವಿತ್' ಅನ್ನೋರದ್ದು**
- 'ಸ್ಟ್ಯಾಂಡ್' ಅಪ್ ಕಾಮಿಡಿ
- **'ಐ ಸ್ಟ್ಯಾಂಡ್ ವಿತ್' ಅನ್ನೋದು ಎಲ್ಲ ಟೈಮಲ್ಲೂ ಸಪೋರ್ಟ್ ಮಾಡಿದ ಹಾಗಾಗಲ್ಲ**
- ಯಾಕಂದ್ರೆ, ಯಾರಾದ್ರೂ ಎಲೆಕ್ಷನ್ನಿಗೆ ನಿಂತಾಗ 'ಐ ಸ್ಟ್ಯಾಂಡ್ ವಿತ್' ಅಂದ್ರೆ ನಾನು ಅವರ ವಿರುದ್ಧ ಸ್ಪರ್ಧೆ ಮಾಡ್ತಾ ಇದ್ದೀನಿ ಅಂತ ಅರ್ಥ
- **'ಮತ'ದಾರರು ರಾಜಕಾರಣಿಗಳನ್ನ ಹೇಗೆ ಹೆದರಿಸಬಹುದು?**
- ನೀನ್ ಹಿಂಗೇ ಆಡ್ತಾ ಇದ್ರೆ, ನನ್ 'ಕೈ' ಮಾತಾಡಲ್ಲ, ನನ್ 'ಬೆರಳು' ಮಾತಾಡುತ್ತೆ ಅಷ್ಟೇ.
- **ರಾಜ್ಯದಲ್ಲಿ ಆಗ್ತಾ ಇರೋ ಎಲ್ಲಾ ಅವಘಡಗಳಿಗೂ ಮುಖ್ಯಮಂತ್ರಿಯೇ ಕಾರಣ**
- ಯಾಕಂದ್ರೆ ಇದು 'ರಾಜ'ಕಾರಣ
- **ಸೋತವರನ್ನು ಆಡಿಕೊಳ್ಳೋ ಮಂದಿ, ಆಡಿಕೊಂಡು ಸಾಕಾದಾಗ ಏನಂತಾರೆ?**
- ಅಯ್ಯೋ, ಹೋಗ್ಲಿ ಬಿಡಿ, ದಿನಾ ಸೋಲೋರಿಗೆ ನಗೋರ್ಯಾರು
- **ಒಂದರ ಹಿಂದೆ ಒಂದು ಧಾರಾವಾಹಿ ನಿರ್ಮಿಸುವ ಪ್ರೊಡಕ್ಷನ್ ಹೌಸ್**
- 'ಸೋಪ್' ಫ್ಯಾಕ್ಟರಿ
- **ಧಾರಾವಾಹಿಗಳ ಟಿಆರ್‌ಪಿ**
- 'ಸೀರಿಯಲ್' ನಂಬರ್

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:39

ಸಮಾಚಾರ ಸಣ್ಣದಲ್ಲ

ಲವ್ ಜಿಹಾದ್ ತಡೆಗೆ 'ವಿವಾಹ ನೋಂದಣಿ'

ಅಹಮದಾಬಾದ್: 'ಲವ್ ಜಿಹಾದ್' ಕುತಂತ್ರ ತಡೆಯಲು ಗುಜರಾತ್ ಸರಕಾರ 'ವಿವಾಹ ನೋಂದಣಿ ಕಡ್ಡಾಯ'ಗೊಳಿಸಿದೆ. ಅಲ್ಲದೇ ವಿವಾಹ ನೋಂದಣಿ ನಿಯಮಗಳಲ್ಲಿ ಹಲವು ಬದಲಾವಣೆ ಮಾಡಲು ಮುಂದಾಗಿದೆ. ಪ್ರೇಮ ವಿವಾಹಗಳ ಬಗ್ಗೆ ಪೋಷಕರಿಗೆ ವಾಟ್ಸಾಪ್ ಮೂಲಕ ಸಂದೇಶ ನೀಡಲೂ ಯೋಜಿಸಿದೆ. ಈ ಸಂಬಂಧ ಗೃಹ ಸಚಿವ ಹರ್ಷ ಸಾಂಘ್ವಿ ವಿಧಾನಸಭೆಯಲ್ಲಿ ಪ್ರಸ್ತಾವನೆ ಮಂಡಿಸಿದ್ದಾರೆ. ಗುಜರಾತ್ ಸರಕಾರದ ಈ ಕ್ರಮ ಗೌಪ್ಯತೆ, ಪೋಷಕರ ಒಪ್ಪಿಗೆ ಮತ್ತು ಗುರುತಿನ ವಂಚನೆ ವಿರುದ್ಧದ ಸುರಕ್ಷತೆಗಳ ಕುರಿತು ರಾಜಕೀಯ ಮತ್ತು ಸಾಮಾಜಿಕ ಚರ್ಚೆಗೆ ಕಾರಣವಾಗಿದೆ.ವಧು-ವರರು ತಮ್ಮ ಪೋಷಕರ ಗುರುತಿನ ಚೀಟಿ, ಫೋನ್ ನಂಬರ್, ನಿವಾಸದ ಪುರಾವೆ ಮತ್ತಿತರ ದಾಖಲೆಗಳನ್ನು ನೀಡಬೇಕಿದೆ. ಮದುವೆ ನೋಂದಣಿಗೆ ಅರ್ಜಿ ಸ್ವೀಕರಿಸಿದ 40 ದಿನಗಳ ಬಳಿಕವಷ್ಟೇ ವಿವಾಹ ನೋಂದಣಿ. ನೋಂದಣಿಗೆ ಅರ್ಜಿ ಸಲ್ಲಿಕೆಯಾದ 10 ದಿನದೊಳಗೇ ಉಪ ನೋಂದಣಾಧಿಕಾರಿ ಕಚೇರಿ ಪೋಷಕರಿಗೆ ಮಾಹಿತಿ ನೀಡುತ್ತದೆ. ಈ ಸಂದರ್ಭ ಹುಡುಗ-ಹುಡುಗಿಯಲ್ಲಿ ಯಾರಾದರೂ ವಂಚನೆಗೆ ಯತ್ನಿಸಿದ್ದರೆ ಅದನ್ನು ತಡೆಯಲು ಅವಕಾಶವಾಗಲಿದೆ. ಇಬ್ಬರೂ ಗುರುತಿನ ಚೀಟಿ ನೀಡುವುದು, ಸಾಕ್ಷಿದಾರರನ್ನು ಕರೆತರುವುದು, ದಾಖಲೆಗಳ ನೋಟರಿ ಪರಿಶೀಲನೆ ಕಡ್ಡಾಯ ಮಾಡಲಾಗಿದೆ. ಅರ್ಜಿಯನ್ನು ಜಿಲ್ಲಾ ನೋಂದಣಾಧಿಕಾರಿಗೆ ಕಳುಹಿಸಬೇಕು. ನಾವು ಪ್ರೀತಿಯನ್ನು ವಿರೋಧಿಸುವುದಿಲ್ಲ. ಆದರೆ ಯಾರಾದರೂ 'ಸಲೀಮ್ ಸುರೇಶ್' ಆಗಿ ನಕಲಿ ಗುರುತಿನೊಂದಿಗೆ ಹುಡುಗಿಯನ್ನು ಮೋಸದ ಬಲೆಗೆ ಬೀಳಿಸಲು ಯತ್ನಿಸಿದರೆ ರಾಜ್ಯ ಸರಕಾರ ಅಂತಹ ವಂಚನೆಗೆ ಅವಕಾಶ ನೀಡುವುದಿಲ್ಲ ಎಂದು ಗೃಹ ಸಚಿವ ಹರ್ಷ ಸಾಂಘ್ವಿ ಸದನಕ್ಕೆ ತಿಳಿಸಿದರು.

ವ್ಯಾನ್‌ಗೆ ಬಸ್ ನೇರ ಡಿಕ್ಕಿ, ಐವರು ಸಾವು

ಭೋಪಾಲ್: ಮಧ್ಯಪ್ರದೇಶ ರಾಜ್ಯದ ಭಿಂಡ್ ಜಿಲ್ಲೆಯ ಗೋಹದ್ ಚೌರಾಹಾ ಪೊಲೀಸ್ ಠಾಣಾ ವ್ಯಾಪ್ತಿಯ ಗಿಲ್ ಧಾಬಾ ಬಳಿಯ ರಾಷ್ಟ್ರೀಯ ಹೆದ್ದಾರಿ 719ರಲ್ಲಿ ಶನಿವಾರ ನಡುಕಿನ 2.30ರಲ್ಲಿ ಪ್ರಯಾಣಿಕರಿದ್ದ ವ್ಯಾನ್ ವೊಂದಕ್ಕೆ ಸಾರಿಗೆ ಬಸ್ ನೇರ ಡಿಕ್ಕಿ ಹೊಡೆದ ಪರಿಣಾಮ ವ್ಯಾನ್‌ನಲ್ಲಿದ್ದ ಐವರು ಮೃತಪಟ್ಟು, ಆರು ಮಂದಿ ಗಂಭೀರವಾಗಿ ಗಾಯಗೊಂಡರು. ಸ್ಥಳಕ್ಕೆ ಬಂದ ಪೊಲೀಸರು, ಸ್ಥಳೀಯರ ಸಹಾಯ ಪಡೆದು ಗಾಯಾಳುಗಳನ್ನು ತಕ್ಷಣ ಗೋಹದ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಗಂಭೀರ ಸ್ಥಿತಿಯಲ್ಲಿದ್ದವರನ್ನು ವೈದ್ಯರ ಸೂಚನೆ ಮೇರೆಗೆ ಗ್ವಾಲಿಯರ್ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಬಸ್ ಡಿಕ್ಕಿ ಹೊಡೆದ ರಭಸಕ್ಕೆ ವ್ಯಾನ್ ಪೂರ್ಣ ಜಖಂಗೊಂಡಿದೆ. ಮದುವೆ ಸಮಾರಂಭಕ್ಕೆ ಹೋಗಿದ್ದವರನ್ನು ಅವರ ಊರಿನಲ್ಲಿ ಇಳಿಸಿದ ಬಳಿಕ ಖಾಲಿ ಬಸ್ ಭಿಂಡಿಯಿಂದ ಗ್ವಾಲಿಯರ್‌ಗೆ ಚಲಿಸುತ್ತಿತ್ತು. ಗ್ವಾಲಿಯರ್‌ನಿಂದ ಭಿಂಡ್‌ಗೆ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ವ್ಯಾನ್‌ಗೆ ನೇರ ಡಿಕ್ಕಿ ಹೊಡೆದಿದೆ. ಅಪಘಾತಕ್ಕೆ ಬಸ್‌ನ ಅತಿವೇಗವೇ ಕಾರಣ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಟೋಲ್‌ಪ್ಲಾಜಾ: ಏ.1 ನಗದು ಪಾವತಿ ಇಲ್ಲ

ದೆಹಲಿ: ಮುಂಬರುವ ಏ.1ರಿಂದಲೇ ದೇಶದಲ್ಲಿನ ಎಲ್ಲಾ ಹೆದ್ದಾರಿ ಟೋಲ್ ಪ್ಲಾಜಾಗಳಲ್ಲಿ ಶುಲ್ಕವನ್ನು ನಗದು ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ. ಏನಿದ್ದರೂ ಫಾಸ್ಟ್‌ಟ್ಯಾಗ್ ಮೂಲಕವೇ ಪಾವತಿ ಮಾಡಬೇಕಿದೆ. ಟೋಲ್‌ಪ್ಲಾಜಾ ಬಳಿ ವಾಹನಗಳು ಹೆಚ್ಚು ಸಮಯ ನಿಲ್ಲಬೇಕಾಗುವುದನ್ನು ತಪ್ಪಿಸಲೆಂದೇ ಈ ವ್ಯವಸ್ಥೆ ಜಾರಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್‌ಎಚ್‌ಎಐ) ಹೇಳಿದೆ. ಹೆದ್ದಾರಿ ಟೋಲ್‌ಗಳಲ್ಲಿ ಪೂರ್ಣ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಲು ಕ್ರಮ ವಹಿಸಲಾಗಿದೆ. ಹೊಸ ನಿಯಮ ಜಾರಿಯಾದಲ್ಲಿ ಫಾಸ್ಟ್ ಟ್ಯಾಗ್ ಅಥವಾ ಯುಪಿಐ ಮೂಲಕ ಮಾತ್ರ ಟೋಲ್ ಪಾವತಿ ಮಾಡಬೇಕಾಗುತ್ತದೆ. ಒಂದೊಮ್ಮೆ ವಾಹನಗಳಲ್ಲಿ ಫಾಸ್ಟ್‌ಟ್ಯಾಗ್ ಇಲ್ಲದೇ ಇದ್ದರೆ 'ಯುಪಿಐ' ಮೂಲಕ ಪಾವತಿಸಬಹುದು. ಆದರೆ, ಶೇ.25ರಷ್ಟು ಹೆಚ್ಚು ಶುಲ್ಕ ಭರಿಸಬೇಕಾಗುತ್ತದೆ. ಈ ಕ್ರಮವು ಶುಲ್ಕ ಪ್ಲಾಜಾಗಳಲ್ಲಿ ದಟ್ಟಣೆಯನ್ನು ಕಡಿಮೆ ಮಾಡುತ್ತದೆ. ಟೋಲ್ ವಹಿವಾಟುಗಳಲ್ಲಿ ಹೆಚ್ಚಿನ ಸ್ಥಿರತೆ ಮತ್ತು ಪಾರದರ್ಶಕತೆಯನ್ನು ತರುವ ಮೂಲಕ ಹೆದ್ದಾರಿ ಬಳಕೆದಾರರಿಗೆ ಸುಗಮ ಪ್ರಯಾಣಕ್ಕೆ ಅನುವು ಮಾಡಿಕೊಡುತ್ತದೆ ಎಂದು ಪ್ರಾಧಿಕಾರ ತಿಳಿಸಿದೆ.

ಅಪ್ರಾಪ್ತ ಪುತ್ರನಿಗೆ ಕಾರು: ಅಪ್ಪ ಜೈಲು

ಶ್ರೀನಗರ: ಜಮ್ಮು-ಕಾಶ್ಮೀರದ ಬುಡ್ಗಾಮ್ ಜಿಲ್ಲೆಯ ತಂದೆಯೊಬ್ಬ ಅಪ್ರಾಪ್ತ ಪುತ್ರನಿಗೆ ಕಾರು ಚಲಾಯಿಸಲು ಅವಕಾಶ ನೀಡಿದ್ದಕ್ಕೆ ಈಗ ಜೈಲು ಸೇರುವಂತಾಗಿದೆ. ಶ್ರೀನಗರದ ವಿಶೇಷ ಸಂಚಾರ ನ್ಯಾಯಾಲಯದ ನ್ಯಾಯಾಧೀಶರಾದ ಶಬೀರ್ ಅಹ್ಮದ್ ಮಲಿಕ್ ಅವರು, ವಾಹನದ ಮಾಲೀಕನಾದ ಅಪ್ಪನಿಗೆ 3 ವರ್ಷಗಳ ಜೈಲು ಶಿಕ್ಷೆ ವಿಧಿಸಿದ್ದಾರೆ. ಅಲ್ಲದೇ, 25,000 ರು. ದಂಡ ಪಾವತಿಸುವಂತೆಯೂ 5 ಪುಟಗಳ ತೀರ್ಪಿನಲ್ಲಿ ಆದೇಶಿಸಿದ್ದಾರೆ.

{ ಶ್ರೀಕಾಂತ್ ಶಿಂಧೆ } ಶಿವಸೇನೆ ಸಂಸದ

ವಿಶ್ವಮಟ್ಟದಲ್ಲಿ ಭಾರತ ಪ್ರಗತಿ ತೋರಿಸುವ ಉದ್ದೇಶದಿಂದ ದೆಹಲಿಯಲ್ಲಿ 'ಎಐ ಇಂಪ್ಯಾಕ್ಟ್ ಶೃಂಗಸಭೆ' ಆಯೋಜಿಸಲಾಗಿತ್ತು. ಕಾಂಗ್ರೆಸ್ ಕಾರ್ಯಕರ್ತರು ದೇಶವನ್ನು ಅಪಮಾನಿಸಲು ಅರೆಬೆತ್ತಲೆ ಪ್ರತಿಭಟನೆ ನಡೆಸಿದರು. ಪಕ್ಷವನ್ನು, ಕಾರ್ಯಕರ್ತರನ್ನು ಸರಿಯಾಗಿ ನಿರ್ವಹಿಸಲಾಗದ ರಾಹುಲ್ ಗಾಂಧಿ ಲೋಕಸಭೆ ಪ್ರತಿಪಕ್ಷ ನಾಯಕರಾಗಲು ಅನರ್ಹರು.

ದೇಶಾದ್ಯಂತ ಕಮಲ ಕಲಿಗಳ ಪ್ರತಿಭಟನೆ | 4 ಯುವ ಕಾಂಗ್ರೆಸ್ಸಿಗರು 5 ದಿನ ಕಸ್ಟಡಿಗೆ | ರಾಹುಲ್‌ಗೆ ಬಿವಾಂಡಿಯಲ್ಲಿ ಕಪ್ಪು ಬಾವುಟ

ಅರೆಬೆತ್ತಲೆ ಯುವ ಕಾಂಗ್ರೆಸ್‌ಗೆ ಬಿಜೆಪಿ ಕಪ್ಪು ಬಟ್ಟೆ

ದೆಹಲಿ: ದೆಹಲಿಯ ಭಾರತ್ ಮಂಟಪಂನಲ್ಲಿ ಶುಕ್ರವಾರ ಕೊನೆಗೊಂಡ 5 ದಿನಗಳ 'ಎಐ ಇಂಪ್ಯಾಕ್ಟ್ ಶೃಂಗ' ಯಶಸ್ವಿಯಾಗಿ ನಡೆದು ಇಡೀ ವಿಶ್ವದ ಗಮನ ಸೆಳೆದಿದ್ದರೆ, ಶೃಂಗಸಭೆಯ ಕೊನೆ ದಿನ ಯುವ ಕಾಂಗ್ರೆಸ್‌ನ 10 ಕಾರ್ಯಕರ್ತರು 'ಎ.ಐ ಶೃಂಗದ ವೇದಿಕೆಗೆ ನುಗ್ಗಿ' ಅಂಗಿ ತೆಗೆದು ಅರೆಬೆತ್ತಲೆಯಾಗಿ ಪ್ರತಿಭಟನೆ ನಡೆಸಿ ದೇಶದ ಗೌರವ ಮಣ್ಣುಪಾಲು ಮಾಡಲು ಯತ್ನಿಸಿದ್ದರು. ಯುವ ಕಾಂಗ್ರೆಸ್‌ನ ನಡೆ ಖಂಡಿಸಿ ಬಿಜೆಪಿ ಶನಿವಾರ ದೇಶಾದ್ಯಂತ ಪ್ರತಿಭಟನೆ ಹಮ್ಮಿಕೊಂಡಿತ್ತು. ದೆಹಲಿ, ಮುಂಬೈ ಸೇರಿದಂತೆ ದೇಶಾದ್ಯಂತ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.ದೇಶದ ಹಲವೆಡೆ ಕಾಂಗ್ರೆಸ್ ಪಕ್ಷ ಮತ್ತು ಕಾಂಗ್ರೆಸ್ ನಾಯಕರ ವಿರುದ್ಧ ಬಿಜೆಪಿ ಪ್ರತಿಭಟನೆ ನಡೆಸುತ್ತಿದೆ. ದೆಹಲಿಯಲ್ಲಿ ಕಾಂಗ್ರೆಸ್ ಕಚೇರಿ ಮುತ್ತಿಗೆಗೆ ಬಿಜೆಪಿ ಕಾರ್ಯಕರ್ತರು ಯತ್ನಿಸಿದರು.

ಮಹಾರಾಷ್ಟ್ರದಲ್ಲೂ ಕಾಂಗ್ರೆಸ್ ವಿರುದ್ಧ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಥಾಣೆ ಜಿಲ್ಲೆಯ ಬಿವಾಂಡಿಯಲ್ಲಿ ನ್ಯಾಯಲಯದಲ್ಲಿನ ಮಾನಹಾನಿ ಪ್ರಕರಣದ ವಿಚಾರಣೆಗೆಂದು ಆಗಮಿಸಿದ್ದ ರಾಹುಲ್ ಗಾಂಧಿಗೆ ಕಪ್ಪುಪಟ್ಟಿ ಪ್ರದರ್ಶಿಸಲಾಯಿತು.

ಮುಂಬೈ, ಸೂರತ್, ಮುಲುಂಡ್, ಹೈದರಾಬಾದ್, ಜೈಪುರ, ಜಮ್ಮು, ಬೆಂಗಳೂರು, ಬೆಳಗಾವಿ, ಬಳ್ಳಾರಿ, ಹುಬ್ಬಳ್ಳಿಯಲ್ಲಿಯೂ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಕಾಂಗ್ರೆಸ್ ಮತ್ತು ಯುವ ಕಾಂಗ್ರೆಸ್ ನಡೆಯನ್ನು ಖಂಡಿಸಿದರು. ರಾಹುಲ್ ಗಾಂಧಿ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಹುಲ್ ಸಂಚರಿಸುತ್ತಿದ್ದ ಕಾರಿಗೆ ಬಿಜೆಪಿ ಕಾರ್ಯಕರ್ತರಿಂದ ಕಪ್ಪು ಬಾವುಟ ಪ್ರದರ್ಶನ.

ರಾಹುಲ್‌ಗೆ ಕಪ್ಪು ಬಾವುಟ

ಮಹಾರಾಷ್ಟ್ರದ ಬಿವಾಂಡಿಯ ಮುಲುಂಡ್‌ನಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರೊಬ್ಬರು ರಾಹುಲ್ ಗಾಂಧಿ ವಿರುದ್ಧ 2014ರಲ್ಲಿ ಮಾನನಷ್ಟ ಮೊಕದ್ದಮೆ ಹೂಡಿದ್ದು, ಅದರಲ್ಲಿ ಪಡೆದಿದ್ದ ಜಾಮೀನಿಗೆ ಹೊಸ ಶ್ಯೂರಿಟಿ ನೀಡಲು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ತೆರಳುತ್ತಿದ್ದಾಗ, ಬಿವಾಂಡಿಯಲ್ಲಿ ಬಿಜೆಪಿ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿ ಆಕ್ರೋಶ ಹೊರಹಾಕಿದ್ದಾರೆ. 'ಲಷರ್-ಎ-ರಾಹುಲ್' ಎಂದೂ ಪ್ರತಿಭಟನಾಕಾರರು ಘೋಷಣೆ ಕೂಗಿದ್ದಾರೆ. ಮಹಾತ್ಮ ಗಾಂಧಿ ಹತ್ಯೆ ಹಿಂದೆ ಆರ್‌ಎಸ್‌ಎಸ್ ಕೈವಾಡವಿದೆ ಎಂದು ರಾಹುಲ್ ಗಾಂಧಿ ಭಾಷಣದಲ್ಲಿ ಹೇಳಿದ್ದರು. ಅದರಿಂದ ಆರ್‌ಎಸ್‌ಎಸ್ ಕಾರ್ಯಕರ್ತನಾದ ತಮ್ಮ ಮಾನಹಾನಿಯಾಗಿದೆ ಎಂದು ಆರ್‌ಎಸ್‌ಎಸ್ ಕಾರ್ಯಕರ್ತ ರಾಜೇಶ್ ಕುಂಟೆ ಮೊಕದ್ದಮೆ ಹೂಡಿದ್ದಾರೆ.

ಯುವ ಕಾಂಗ್ರೆಸ್ ನಡೆಗೆ ಪ್ರತಿಪಕ್ಷಗಳ ಖಂಡನೆ

'ಎಐ ಇಂಪ್ಯಾಕ್ಟ್ ಶೃಂಗ'ದ ವೇದಿಕೆಯಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರ ವರ್ತನೆಗೆ ಪ್ರತಿಪಕ್ಷಗಳ ನಾಯಕರಿಂದಲೂ ಖಂಡನೆ ವ್ಯಕ್ತವಾಗಿದೆ.ದೇಶ-ವಿದೇಶಗಳ ಪ್ರಮುಖರು, ಎಐ-ಐಟಿ ಉದ್ಯಮ ಕ್ಷೇತ್ರದ ಗಣ್ಯರು ಭಾಗಿಯಾಗಿದ್ದ ಎಐ ಶೃಂಗಸಭೆ ಭಾರತದಲ್ಲಿನ ನವ ತಂತ್ರಜ್ಞಾನದ ಸಾಧನೆ ಪ್ರದರ್ಶಿಸುವ ಉದ್ದೇಶ ಹೊಂದಿತ್ತು. ಆದರೆ, ಯುವ ಕಾಂಗ್ರೆಸ್ ಪ್ರತಿಭಟನೆ ದೇಶಕ್ಕೇ ಮಸಿ ಬಳಿಯಲೆತ್ನಿಸಿದೆ. ಸರಕಾರದ ವಿರುದ್ಧ ಅಸಮಾಧಾನ ಹೊರಹಾಕಲು ಇದು ಸರಿಯಾದ ವೇದಿಕೆ ಆಗಿರಲಿಲ್ಲ ಎಂದು ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನಾಯಕ ವೈ.ಎಸ್.ಜಗನ್ ಮೋಹನ್ ರೆಡ್ಡಿ ಬೇಸರ ವ್ಯಕ್ತಪಡಿಸಿದ್ದಾರೆ. ಯುವ ಕಾಂಗ್ರೆಸ್ ಭಾರತೀಯರೆಲ್ಲರೂ ತಲೆ ತಗ್ಗುವಂತೆ ಮಾಡಿದೆ. ನಮ್ಮ ರಾಜಕೀಯ ಎಲ್ಲಿಗೆ ಹೋಗುತ್ತಿದೆ? ರಾಜಕೀಯ ಭಿನ್ನಾಭಿಪ್ರಾಯ ಏನೇ ಇದ್ದರೂ ಜಗತ್ತಿಗೆ ನಾವು ಒಗ್ಗಟ್ಟನ್ನೇ ತೋರಿಸಬೇಕಿದೆ ಎಂದಿದ್ದಾರೆ.ಯುವ ಕಾಂಗ್ರೆಸ್ ಪ್ರತಿಭಟನೆ ವೈಖರಿ ಅತ್ಯಂತ ಆಕ್ಷೇಪಾರ್ಹ ಎಂದು ಬಿಎಸ್‌ಪಿ ನಾಯಕಿ ಮಾಯಾವತಿ ಟೀಕಿಸಿದ್ದಾರೆ. ಇದು ಅಂತಾರಾಷ್ಟ್ರೀಯ ಸಮಾವೇಶ. ಇಲ್ಲಿ ಕಾಂಗ್ರೆಸ್ ಯುವ ಕಾರ್ಯಕರ್ತರು ಅರೆನಗ್ನ ರೀತಿ ಪ್ರತಿಭಟನೆ ನಡೆಸಿರುವುದು ಅತ್ಯಂತ ಅಸಭ್ಯ ಮತ್ತು ಖಂಡನೀಯ. ಅಂತಾರಾಷ್ಟ್ರೀಯ ಶೃಂಗಸಭೆಯಲ್ಲಿ ಕಾಂಗ್ರೆಸ್ ಪಕ್ಷದವರ ಇಂಥ ನಡವಳಿಕೆ ಕಳವಳಕಾರಿ ವಿಷಯ. ದೇಶದ ಘನತೆ-ಅಸ್ಮಿತೆಗೆ ಹಾನಿಯಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದ್ದಾರೆ.ಯುವ ಕಾಂಗ್ರೆಸ್ ಸದಸ್ಯರು ಶೃಂಗಸಭೆಯಂಥ ವೇದಿಕೆಯನ್ನು ರಾಜಕೀಯ ನಾಟಕಗಳಿಗೆ ಬಳಸಿರುವುದು ಖಂಡನಾರ್ಹ. ಜಾಗತಿಕ ವೇದಿಕೆಗಳಲ್ಲಿ ಪ್ರತಿಭಟಿಸುವುದರಿಂದ ಮಹಾನ್ ರಾಷ್ಟ್ರ ಭಾರತ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಟ್ಟದಾಗಿ ಬಿಂಬಿತವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯ ವ್ಯತ್ಯಾಸ ಸಹಜವಾದರೂ ಎಲ್ಲಿ-ಹೇಗೆ ಪ್ರತಿಭಟಿಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಕಾಂಗ್ರೆಸ್ ನಡೆ ಖಂಡನಾರ್ಹ ಎಂದು ಬಿಆರ್‌ಎಸ್ ಹಿರಿಯ ನಾಯಕ ಕೆ.ಟಿ.ರಾಮರಾವ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಂಗಿ ಬಿಚ್ಚಿದವರಿಗೆ 5 ದಿನ ಪೊಲೀಸ್ ವಿಚಾರಣೆ

ದೆಹಲಿಯ ಭಾರತ್ ಮಂಟಪದಲ್ಲಿನ ಎಐ ಶೃಂಗಸಭೆಯ ಕೊನೆದಿನ ವೇದಿಕೆಗೆ ನುಗ್ಗಿ ಅಂಗಿ ಬಿಚ್ಚಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರಲ್ಲಿ ನಾಲ್ವರನ್ನು ಪೊಲೀಸರು ಬಂಧಿಸಿದ್ದು, ನಾಲ್ವರನ್ನೂ ಪಟಿಯಾಲ ಹೌಸ್ ನ್ಯಾಯಾಲಯಕ್ಕೆ ಶನಿವಾರ ಹಾಜರುಪಡಿಸಲಾಗಿತ್ತು. ಕೃಷ್ಣ ಹರಿ, ಕುಂದನ್ ಯಾದವ್, ಅಜಯ್ ಕುಮಾರ್ ಮತ್ತು ನರಸಿಂಹ ಯಾದವ್ ಬಂಧಿತರು. ಆರೋಪಿಗಳ ಪರ ವಕೀಲರು ಸಲ್ಲಿಸಿದ ಜಾಮೀನು ಅರ್ಜಿಗಳನ್ನು ರದ್ದುಗೊಳಿಸಿದ ನ್ಯಾಯಾಲಯ, ನಾಲ್ವರೂ ಆರೋಪಿಗಳನ್ನು 5 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿದೆ.

'ಜೆನ್ ಝಡ್' ಪ್ರೇರಣೆ: ನೇಪಾಳದಲ್ಲಿ ಕಳೆದ ವರ್ಷ ನಡೆದಿದ್ದ ಯುವಜನರ 'ಜೆಜ್ ಝಡ್ ಪ್ರತಿಭಟನೆ' ಯಿಂದ ಪ್ರೇರಣೆಗೊಂಡು ದೆಹಲಿಯಲ್ಲಿನ 'ಎಐ ಶೃಂಗದಲ್ಲಿ ಪ್ರತಿಭಟನೆ ನಡೆಸಿದ್ದಾಗಿ ಯುವ ಕಾಂಗ್ರೆಸ್ ಕಾರ್ಯಕರ್ತರು ಹೇಳಿಕೊಂಡಿದ್ದಾರೆ. ಯುವ ಕಾಂಗ್ರೆಸ್ ಕಾರ್ಯಕರ್ತರು, ಎಐ ಶೃಂಗಸಭೆಯಲ್ಲಿ ಬರಿ ಪ್ರತಿಭಟನೆಯನ್ನಷ್ಟೇ ಅಲ್ಲ, ಗಲಭೆ ಸೃಷ್ಟಿಸುವುದಕ್ಕೂ ಪಿತೂರಿ ನಡೆಸಿದ್ದರು ಎಂದು ಪೊಲೀಸ್ ತನಿಖೆ ವೇಳೆ ತಿಳಿದುಬಂದಿದೆ.

ರಾಷ್ಟ್ರವಿರೋಧಿ ಘೋಷಣೆ: ಆರೋಪಿಗಳು ರಾಷ್ಟ್ರವಿರೋಧಿ ಘೋಷಣೆಗಳನ್ನು ಕೂಗಿದರು. ಪ್ರಧಾನಿ ವಿರುದ್ಧ ಸಂದೇಶಗಳನ್ನು ಹೊಂದಿರುವ ಟಿ-ಶರ್ಟ್‌ಗಳನ್ನು ಪ್ರದರ್ಶಿಸಿದರು ಎಂದು ಸರಕಾರಿ ವಕೀಲರು ವಾದಿಸಿದರು.ಎಐ ಶೃಂಗಸಭೆಯಲ್ಲಿಯೂ ನೇಪಾಳ ಮಾದರಿಯಲ್ಲೇ ಹೋರಾಟ ನಡೆಸಲು ಬಯಸಿದ್ದರು. ದೇಶವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ತಲೆತಗ್ಗಿಸುವಂತೆ ಮಾಡಲು ಸಂಚು ರೂಪಿಸಿದ್ದರು ಎಂದು ಪೊಲೀಸ್ ಅಧಿಕಾರಿಗಳು ಪಟಿಯಾಲ ಹೌಸ್ ನ್ಯಾಯಾಲಯಕ್ಕೆ ತಿಳಿಸಿದ್ದು, ಬಂಧಿತ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು 5 ದಿನಗಳ ಕಸ್ಟಡಿಗೆ ನೀಡುವಂತೆ ನ್ಯಾಯಾಲಯದಲ್ಲಿ ಕೋರಿದರು. ಅದಕ್ಕೆ ಸಮ್ಮತಿಸಿದ ನ್ಯಾಯಾಧೀಶರು, ನಾಲ್ವರೂ ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದರು.ಪ್ರತಿಭಟನೆ ಶಾಂತಿಯುತವಾಗಿತ್ತು. ಹಿಂಸಾಚಾರ ನಡೆದಿಲ್ಲ. ಪ್ರತಿಭಟನಾಕಾರರೆಲ್ಲರೂ ಪದವೀಧರರು, ಸುಶಿಕ್ಷಿತರು. ರಾಜಕೀಯ ಪ್ರೇರಣೆಯಿಂದ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಆರೋಪಿಗಳ ಪರ ವಕೀಲರು ವಾದ ಮಂಡಿಸಿದ್ದರು.ಎಲ್ಲಾ ಕೋನಗಳಿಂದಲೂ ತನಿಖೆ ಮುಂದುವರೆದಿದೆ. ಪ್ರತಿಭಟನೆಯಲ್ಲಿ ಭಾಗಿಯಾಗಿ ಈಗ ತಲೆಮರೆಸಿಕೊಂಡಿರುವ ಯುವಕರನ್ನು ಗುರುತಿಸಿ ಬಂಧಿಸುವ ಯತ್ನಗಳು ನಡೆದಿವೆ. ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಪಾಕ್‌ನ ಮಾಜಿ ಸಚಿವೆ ಪುತ್ರಿ, ಅಳಿಯನಿಗೆ 17 ವರ್ಷ ಜೈಲು

ಇಸ್ಲಾಮಾಬಾದ್: ಪಾಕಿಸ್ತಾನದ ಮಾನವ ಹಕ್ಕುಗಳ ಕಾರ್ಯಕರ್ತೆ, ನ್ಯಾಯವಾದಿಯೂ ಆಗಿರುವ ಇಮಾನ್ ಝೈನಾಬ್ ಮಝಾರಿ ಹಾಝಿರ್ ಮತ್ತು ಆಕೆಯ ಪತಿ ಹಾದಿ ಅಲಿ ಛತ್ತ ಅವರನ್ನು ಜೈಲಿಗೆ ಹಾಕಲಾಗಿದೆ. ಕಾರಣ, ಸತ್ಯವನ್ನು ಹೇಳಿದ್ದು.

'ಪಾಕಿಸ್ತಾನ ಒಂದು ಭಯೋತ್ಪಾದಕ ದೇಶ' ಎಂದು ಪತಿ-ಪತ್ನಿ ಇಬ್ಬರೂ ಹೇಳಿದ್ದಾರೆ. ಅಲ್ಲದೇ, ದೇಶದ ಸೇನೆಯ ದುರಾಡಳಿತದ ವಿರುದ್ಧವೂ ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ವಾಗ್ದಾಳಿ ನಡೆಸಿದ್ದಾರೆ. ಅದಕ್ಕೇ ಇಬ್ಬರ ವಿರುದ್ಧವೂ ದೂರು ದಾಖಲಿಸಿದ ಪೊಲೀಸರು ಬಂಧಿಸಿ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. 'ಕಂಟೆನ್ಷಿಯಸ್ ಪ್ರಿವೆನ್ಷನ್ ಆಫ್ ಎಲೆಕ್ಟ್ರಾನಿಕ್ ಕ್ರೈಮ್ಸ್ ಆಕ್ಟ್'(ಪಿಇಸಿಎ) ಅನ್ವಯ ಪತಿ-ಪತ್ನಿಯನ್ನು ಬಂಧಿಸಿದ ಪೊಲೀಸರು, ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.



ಇಬ್ಬರೂ 'ಸೈಬರ್ ಭಯೋತ್ಪಾದನೆ ಮಾಡಿದ್ದಾರೆ. ಭಯೋತ್ಪಾದನೆಯನ್ನು ವೈಭವೀಕರಿಸಿದ್ದಾರೆ. ದೇಶದ ಬಗ್ಗೆ ತಪ್ಪು ಮಾಹಿತಿ ಹರಡಿದ್ದಾರೆ' ಎಂದು ಹೇಳಿದ ನ್ಯಾಯಾಲಯ, ಇಬ್ಬರನ್ನೂ ಅಪರಾಧಿಗಳು ತೀರ್ಪು ನೀಡಿದೆ. ಅಲ್ಲದೇ, ತಲಾ 17 ವರ್ಷಗಳ ಸೆರೆವಾಸ ವಿಧಿಸಿದೆ.

ಇಮಾನ್ ಝೈನಾಬ್ ಅವರ ತಾಯಿ ಶಿರೀನ್ ಮಝಾರಿ ಅವರೂ ಹಿರಿಯ ವಕೀಲೆ, ಇಮ್ರಾನ್ ಖಾನ್ ಅವರ 'ಪಿಟಿಐ' ಪಕ್ಷದ ಸರಕಾರದಲ್ಲಿ ಮಾನವ ಹಕ್ಕುಗಳ ಸಚಿವೆ ಆಗಿದ್ದರು.

ಅಮೆರಿಕ ಸುಪ್ರೀಂನಲ್ಲಿ ಟ್ರಂಪ್ ಮಣಿಸಿದ ಭಾರತೀಯ ವಕೀಲ

ವಾಷಿಂಗ್ಟನ್: ಭಾರತ, ಚೀನಾ, ಬ್ರೆಜಿಲ್ ಸೇರಿದಂತೆ ವಿವಿಧ ದೇಶಗಳಿಂದ ಅಮೆರಿಕಕ್ಕೆ ಆಮದಾಗುವ ಸರಕುಗಳ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮನಸೋ ಇಚ್ಛೆ ಸುಂಕ ವಿಧಿಸಿದ್ದನ್ನು ವಿರೋಧಿಸಿ ಅಲ್ಲಿನ ಸುಪ್ರೀಂ ಕೋರ್ಟ್‌ನಲ್ಲಿ ನಡೆದ ಕಾನೂನು ಹೋರಾಟದಲ್ಲಿ ವಕಾಲತು ವಹಿಸಿದ್ದವರಲ್ಲಿ ಭಾರತ ಮೂಲದ ಅಮೆರಿಕ ವಕೀಲ ನೀಲ್ ಕತ್ಯಾಲ್(55) ಈಗ ಸುದ್ದಿಯ ಕೇಂದ್ರ ಬಿಂದುವಾಗಿದ್ದಾರೆ.

ನೀಲ ಕತ್ಯಾಲ್ ಅಮೆರಿಕದಲ್ಲಿ ಪ್ರಸಿದ್ಧ ವಕೀಲರು. ಇವರ ತಂದೆ-ತಾಯಿ ಭಾರತದವರು. ತಾಯಿ ಪ್ರತಿಭಾ ಮಕ್ಕಳ ತಜ್ಞೆ. ತಂದೆ ಸುಂದರ್ ಇಂಜಿನಿಯರ್. 1970ರ ಮಾ.12ರಂದು ಷಿಕಾಗೋದಲ್ಲಿ ಜನಿಸಿದ ಕತ್ಯಾಲ್ ಕಾನೂನು ಪದವಿ ಪಡೆದು ಅಮೆರಿಕದ ವಿವಿಧ ಕೋರ್ಟ್‌ಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಸಾಲಿಸಿಟರ್ ಜನರಲ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಡೊನಾಲ್ಡ್ ಟ್ರಂಪ್ ವಿರುದ್ಧವೇ 52 ಪ್ರಕರಣಗಳಲ್ಲಿ ವಾದಿಸಿದ್ದಾರೆ. ಅದರಲ್ಲಿ ಟ್ರಂಪ್ ವರ್ಸಸ್ ಹಾವಾಯ್ ಪ್ರಕರಣ ಮತ್ತು ಈಗಿನ 'ಟಾರಿಫ್' ವಿರುದ್ಧದ ಪ್ರಕರಣ ಪ್ರಮುಖವಾಗಿವೆ. ಪ್ರಸ್ತುತ ಜಾರ್ಜ್ ಟೌನ್ ವಿವಿಯಲ್ಲಿ ಪ್ರಾಧ್ಯಾಪಕರಾಗಿರುವ ನೀಲ್, ಸದ್ಯ ಟ್ರಂಪ್ ಆಡಳಿತ ಹೆಚ್ಚುವರಿ ಸುಂಕ ವಿಧಿಸಿದ ಪ್ರಕರಣದಲ್ಲಿ ಸಣ್ಣ ಉದ್ಯಮಿಗಳ ಪರ ವಾದ ಮಂಡಿಸಿದ್ದರು.

'ನಾವು ದಾವೆಯಲ್ಲಿ ಕೇಳಿಕೊಂಡಿದ್ದನ್ನೆಲ್ಲಾ ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ನೀಡಿದೆ. ನಮಗೆ ಪೂರ್ಣ ಜಯ ದೊರಕಿದೆ ಎಂದು ತೀರ್ಪು ಪ್ರಕಟವಾದ ಬಳಿಕ ನೀಲ್ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಅಮೆರಿಕದ ನ್ಯಾಯಾಂಗ ಇಲಾಖೆಯ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಎಡ್ಮಂಡ್ ಜೆ. ರ್‍ಯಾಂಡಾಲ್ಫ್' ಸೇರಿದಂತೆ ಹಲವು ಪ್ರಶಸ್ತಿಗಳು ನೀಲ್‌ಗೆ ಸಂದಿವೆ. 2017ರಲ್ಲಿ ಲಿಟಿಗೇಟರ್ ಆಫ್ ದಿ ಇಯರ್ ಪ್ರಶಸ್ತಿಗೂ ಭಾಜನರಾಗಿದ್ದರು.

ಪಂಜಾಬ್-ಕಾಶ್ಮೀರ 3 ಐಇಡಿ ನಿಷ್ಕ್ರಿಯ

ಶ್ರೀನಗರ: ಪಂಜಾಬ್ ಮತ್ತು ಕಾಶ್ಮೀರದಲ್ಲಿ ಶನಿವಾರ ಭದ್ರತಾ ಪಡೆಗಳ ಗಸ್ತು ವೇಳೆ 3 'ಸುಧಾರಿತ ಸ್ಫೋಟಕ ಸಾಧನ'(ಐಇಡಿ)ಗಳು ಪತ್ತೆಯಾಗಿವೆ. ಅಮೃತಸರದ ರಯಾ ಪೊಲೀಸ್ ಠಾಣೆ ಬಳಿ ಶಂಕಾಸ್ಪದವಾಗಿ ಇರಿಸಲಾಗಿದ್ದ ಚೀಲದ ಒಳಗೆ 'ಐಇಡಿ' ಇರುವುದು ಪತ್ತೆಯಾಗಿದೆ. ತಕ್ಷಣವೇ ಬಾಂಬ್ ನಿಷ್ಕ್ರಿಯ ದಳಕ್ಕೆ ಕರೆ ಮಾಡಲಾಗಿದೆ. ಸ್ಥಳಕ್ಕೆ ಬಂದ ಸಿಬ್ಬಂದಿ 'ಐಇಡಿ'ಯನ್ನು ನಿಷ್ಕ್ರಿಯಗೊಳಿಸಿದ್ದಾರೆ. ಈ ಸಂಗತಿಯನ್ನು ಎಸ್‌ಎಸ್‌ಪಿ ಸೊಹೈಲ್ ಖಾಸಿಂ ಮಿರ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕಾಶ್ಮೀರದ ಗಂದೇರ್‌ಬಾಲ್ ಜಿಲ್ಲೆಯ ಸಫಾಪೋರಾದಲ್ಲಿಯೂ ಶನಿವಾರ 'ಸುಧಾರಿತ ಸ್ಫೋಟಕ ಸಾಧನ'(ಐಇಡಿ) ಪತ್ತೆಯಾಗಿದೆ. ಭಾರತೀಯ ಸೇನೆ ಮತ್ತು ಜಮ್ಮು-ಕಾಶ್ಮೀರ ಪೊಲೀಸರ ಉಗ್ರರ ಶೋಧದಲ್ಲಿದ್ದಾಗ ಐಇಡಿ ಸ್ಫೋಟಕ ಪತ್ತೆಯಾಗಿದದು, ಬಾಂಬ್ ನಿಷ್ಕ್ರಿಯ ದಳ ನಿಷ್ಕ್ರಿಯಗೊಳಿಸಿದೆ. ಉತ್ತರ ಕಾಶ್ಮೀರದಲ್ಲಿ ಶನಿವಾರ 3ನೇ ಐಇಡಿ ಪತ್ತೆಯಾಗಿದ್ದು, ಅದನ್ನೂ ನಿಷ್ಕ್ರಿಯಗೊಳಿಸಲಾಗಿದೆ.

ಇದಕ್ಕೂ ಮುನ್ನ ಗುರುವಾರ ತಂಗ್ಮರಾಗ್ ರಸ್ತೆಯಲ್ಲಿ ಮತ್ತು ಬಾರಾಮುಲ್ಲಾದಲ್ಲಿ ತಕಾ ಒಂದು ಐಇಡಿ ಪತ್ತೆಯಾಗಿದ್ದವು. ಈ ಘಟನೆಗಳು ಜಮ್ಮು-ಕಾಶ್ಮೀರದ ಕೆಲವೆಡೆ ಭಯೋತ್ಪಾದನಾ ಚಟುವಟಿಕೆ ಮುಂದುವರಿದಿರುವುದಕ್ಕೆ ಸಾಕ್ಷಿಯಾಗಿವೆ.

ಸ್ಯಾಂಟಿಯಾಗ ಹೆದ್ದಾರಿಯಲ್ಲಿ ಅವಘಡ | ಹಲವರಿಗೆ ಗಾಯ, 50 ವಾಹನಗಳು ಭಸ್ಮ

ಚಿಲಿ: ಅನಿಲ ಟ್ಯಾಂಕರ್ ಪಲ್ಟಿ, 4 ಜನ ಸಜೀವದಹನ

ಸ್ಯಾಂಟಿಯಾಗೊ: ಚಿಲಿ ದೇಶದ ರಾಜಧಾನಿ ಸ್ಯಾಂಟಿಯಾಗೊದಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ಸಾಗುತ್ತಿದ್ದ ದ್ರವ ಸ್ವರೂಪಿ ಅನಿಲದ ಟ್ಯಾಂಕರ್, ಚಾಲಕನ ನಿಯಂತ್ರಣ ತಪ್ಪಿದ್ದರಿಂದ ಹೆದ್ದಾರಿಯಲ್ಲೇ ಪಲ್ಟಿಯಾಗಿದೆ. ಪರಿಣಾಮ ಅನಿಲ ಟ್ಯಾಂಕರ್ ಜಖಂಗೊಂಡು ಸ್ಫೋಟಿಸಿದ್ದರಿಂದ ಅದರಲ್ಲಿದ್ದ ದ್ರವ ಸ್ವರೂಪದ ಅನಿಲವೆಲ್ಲಾ ಸುತ್ತಲ ಹತ್ತಾರು ಮೀಟರ್‌ಗಳ ವ್ಯಾಪ್ತಿಯಲ್ಲಿ ಹರಡಿದೆ. ಅದೇ ಮಾರ್ಗದಲ್ಲಿ ಬಂದ 50 ವಾಹನಗಳೂ ಅನಿಲದ ದಟ್ಟ ಮೋಡದೊಳಗೆ ಮುಚ್ಚಿ ಹೋಗಿವೆ.

ಅದೇ ಕ್ಷಣದಲ್ಲಿ ಬೆಂಕಿಯ ಕಿಡಿತಾಗಿ ಅನಿಲದ ಮೋಡ ಥಟ್ಟನೆ ಹೊತ್ತಿಕೊಂಡು ಉರಿಯಲಾರಂಭಿಸಿದೆ. ಈ ಅವಘಡದಲ್ಲಿ ಸಿಲುಕಿಕೊಂಡಿದ್ದ 50 ವಾಹನಗಳಲ್ಲಿದ್ದವರಲ್ಲಿ ಸ್ಥಳದಲ್ಲೇ ನಾಲ್ವರು ಸಜೀವ ದಹನವಾಗಿದ್ದಾರೆ.

ಹಲವರು ಗಾಯಗೊಂಡಿದ್ದಾರೆ. 50ಕ್ಕೂ ಹೆಚ್ಚು ವಾಹನಗಳೂ ಬೆಂಕಿಯ ರೌದ್ರಾವತಾರದಲ್ಲಿ ಸಿಲುಕಿಕೊಂಡು ಹೊರಬರಲಾರದೇ ಸುಟ್ಟು ಹೋಗಿವೆ.

ತೀವ್ರವಾಗಿ ಸುಟ್ಟ ಗಾಯಗಳಾಗಿರುವವರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಚಿಂತಾಜನಕವಾಗಿದ್ದು, ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎಂದು ರಕ್ಷಣಾ ತಂಡದ ಅಧಿಕಾರಿಗಳು ಹೇಳಿದ್ದಾರೆ.

ದ್ರವಸ್ವರೂಪಿ ಅನಿಲದ ಟ್ಯಾಂಕರ್‌ನ ಚಾಲಕ ಅತಿವೇಗವಾಗಿ, ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದೇ ಅವಘಡಕ್ಕೆ ಕಾರಣ ಎಂದು ಸ್ಯಾಂಟಿಯಾಗೋದ ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅನಿಲ ಟ್ಯಾಂಕರ್ ಸ್ಥಳೀಯ ಗ್ಯಾಸ್ಕೊ ಕಂಪನಿಗೆ ಸೇರಿದ್ದಾಗಿದೆ. ತನಿಖೆ ಆರಂಭಿಸಲಾಗಿದೆ ಎಂದು ಪೊಲೀಸರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಉ.ಪ್ರ. ಚಿತ್ರಕೂಟದಲ್ಲಿ 2020ರಲ್ಲಿ ದಂಪತಿ ಸೆರೆ | ಅಪರಾಧಿ ಪತಿ ನೀರಾವರಿ ಇಲಾಖೆಯಲ್ಲಿ ಜೆ.ಇ

33 ಮಕ್ಕಳ ಲೈಂಗಿಕ ಶೋಷಣೆ: ದಂಪತಿಗೆ ಗಲ್ಲು

ಲಖನೌ: ಬಂದಾ, ಚಿತ್ರಕೂಟ ಸುತ್ತಮುತ್ತಲ ಪ್ರದೇಶಗಳಿಂದ ಪುಟ್ಟ ಮಕ್ಕಳನ್ನು ಅಪಹರಿಸಿ, ಮಕ್ಕಳನ್ನು ಲೈಂಗಿಕ ಶೋಷಣೆಗೆ ಒಳಪಡಿಸಿ ಅಶ್ಲೀಲ ವೀಡಿಯೊ ತಯಾರಿಸಿ ಡಾರ್ಕ್ ವೆಬ್‌ನಲ್ಲಿ ಅಪ್ಲೋಡ್ ಮಾಡುತ್ತಿದ್ದ ಉತ್ತರ ಪ್ರದೇಶದ ಬಂದಾದಲ್ಲಿನ ಕ್ರಿಮಿನಲ್ ದಂಪತಿಗೆ ವಿಶೇಷ ಪೋಕ್ಸೊ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ.

6 ವರ್ಷಗಳ ಹಿಂದೆ ಚಿತ್ರಕೂಟ ಪ್ರದೇಶದಲ್ಲಿ 33 ಮಕ್ಕಳ ಅಪಹರಣವಾಗಿತ್ತು. ಮಕ್ಕಳ ಸರಣಿ ಅಪಹರಣ ಪ್ರಕರಣದ ಸಮಗ್ರ ತನಿಖೆ ನಡೆಸುವಂತೆ ಕೇಂದ್ರ ತನಿಖಾ ದಳ(ಸಿಬಿಐ)ಕ್ಕೆ ವಹಿಸಲಾಯಿತು.

ತನಿಖೆ ನಡೆಸಿದಾಗ ನೀರಾವರಿ ಇಲಾಖೆಯ ಜೂನಿಯರ್ ಇಂಜಿನಿಯರ್ ರಾಮ್ ಭವನ್ ಮತ್ತು ಪತ್ನಿ ದುರ್ಗಾವತಿ ಮಕ್ಕಳನ್ನು ಅಪಹರಿಸಿ ಬಂಧನದಲ್ಲಿರಿಸಿ ಲೈಂಗಿಕವಾಗಿ ಶೋಷಣೆ ಮಾಡಿ ಅದರ ವಿಡಿಯೊಗಳನ್ನು ಸಿದ್ಧಪಡಿಸಿ ಅಂತರ್ಜಾಲದಲ್ಲಿ ಮಾರಾಟಕ್ಕಿಡುತ್ತಿದ್ದ ಸಂಗತಿ ಬಯಲಾಯಿತು. ಆರೋಪಿ ದಂಪತಿ 5ರಿಂದ 16 ವರ್ಷದವರೆಗಿನ ಮಕ್ಕಳನ್ನು ಅಪಹರಿಸುತ್ತಿತ್ತು. 2020ರ ಅಕ್ಟೋಬರ್‌ನಲ್ಲಿ ದಂಪತಿಯನ್ನು ಬಂಧಿಸಿದ ಸಿಬಿಐ, ಭಾರತೀಯ ದಂಡ ಸಂಹಿತೆ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ(ಪೋಕ್ಸೊ) ಕಾಯಿದೆ ಮತ್ತು ಮಾಹಿತಿ ತಂತ್ರಜ್ಞಾನ ಕಾಯಿದೆಯಡಿ ವಿವಿಧ ಅಪರಾಧಗಳಡಿ ದೋಷಾರೋಪ ಪಟ್ಟಿ ಸಲ್ಲಿಸಿತು. ಐದೂವರೆ ವರ್ಷಗಳ ಕಾಲ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ದಂಪತಿಗಳಿಬ್ಬರೂ ಅಪರಾಧಿಗಳು ಎಂದು ಶುಕ್ರವಾರ ತೀರ್ಪು ಪ್ರಕಟಿಸಿತು. ಶಿಕ್ಷೆಯ ಪ್ರಮಾಣವನ್ನು ಶನಿವಾರ ಪ್ರಕಟಿಸಿ ಮರಣದಂಡನೆ ಶಿಕ್ಷೆ ವಿಧಿಸಿದೆ.

ಅಪರಾಧಿ ದಂಪತಿ ರಾಮ್‌ಭವನ್ ಮತ್ತು ಪದ್ಮಾವತಿ.

ದಂಪತಿಯಿಂದ ಖರೀದಿಸಿದ ಅಶ್ಲೀಲ ವಿಡಿಯೊಗಳನ್ನು ಅಂತಾರಾಷ್ಟ್ರೀಯ ಜಾಲದವರು, ಎನ್‌ಕ್ರಿಪ್ಟ್ ಮಾಡಿದ ಪ್ಲಾಟ್‌ಫಾಮ್‌ಗಳಲ್ಲಿ ಮತ್ತು ಡಾರ್ಕ್‌ನೆಟ್ ವೆಬ್ ಚಾನೆಲ್‌ಗಳಲ್ಲಿ ಆಸಕ್ತ ಖರೀದಿದಾರರಿಗೆ ಹಂಚಿ ಹಣ ಮಾಡುತ್ತಿದ್ದರು ಎಂದು ಸಿಬಿಐ ವರದಿಯಲ್ಲಿ ಹೇಳಿತ್ತು.

ಸಂತ್ರಸ್ತ ಕುಟುಂಬಗಳಿಗೆ ತಲಾ 10 ಲಕ್ಷ ರು. ಪರಿಹಾರ ನೀಡುವಂತೆಯೂ ನ್ಯಾಯಾಲಯ ಆರೋಪಿ ದಂಪತಿಗೆ ಆದೇಶಿಸಿದೆ.

ಅಪರೂಪದ ಭೂಖನಿಜ, ಪರಿಸರ ಸ್ನೇಹಿ ಇಂಧನ: 5 ವರ್ಷಕ್ಕೆ 2000 ಕೋಟಿ ಡಾಲರ್ ವ್ಯಾಪಾರ

ಭಾರತ-ಬ್ರೆಜಿಲ್ ವ್ಯಾಪಾರ ಒಪ್ಪಂದ

ದೆಹಲಿ: ಭಾರತ-ಬ್ರೆಜಿಲ್ ದೇಶಗಳು ಮುಂದಿನ 5 ವರ್ಷಗಳಲ್ಲಿ ಎರಡೂ ದೇಶಗಳ ನಡುವಿನ ವ್ಯಾಪಾರ ಪ್ರಮಾಣವನ್ನು 2 ಸಾವಿರ ಕೋಟಿ ಡಾಲರ್‌ಗಳಿಗೆ ಹೆಚ್ಚಿಸುವ ಸಂಬಂಧ ಶನಿವಾರ ಒಪ್ಪಂದ ಮಾಡಿಕೊಂಡಿವೆ.

ಪ್ರಧಾನಿ ನರೇಂದ್ರ ಮೋದಿ-ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡಿ.ಸಿಲ್ವಾ ನೇತೃತ್ವದ ನಿಯೋಗಗಳು ದೆಹಲಿಯಲ್ಲಿ ಶನಿವಾರ ವ್ಯಾಪಾರ ವಹಿವಾಟು ವೃದ್ಧಿ ಕುರಿತು ಸುದೀರ್ಘ ಸಭೆ ನಡೆಸಿ ಚರ್ಚಿಸಿ ಬಳಿಕ ಒಪ್ಪಂದ ಮಾಡಿಕೊಂಡಿವೆ.ಅಪರೂಪದ ಭೂ ಖನಿಜಗಳು, ರಾಸಾಯನಿಕಗಳು, ಇಂಧನಗಳು, ಮುಖ್ಯವಾಗಿ ಪರಿಸರ ಸ್ನೇಹಿ ಎಥನಾಲ್ ಮಿಶ್ರಣ, ವಿಮಾನಗಳಿಗೆ ಅಗತ್ಯವಾದ ಸುಸ್ಥಿರ ಇಂಧನ, ನವೀಕರಿಸಬಹುದಾದ ಇಂಧನ ಮೂಲಗಳು ಮೊದಲಾದ ಅಂಶಗಳು ಎರಡೂ ದೇಶಗಳ ನಡುವಿನ ವ್ಯಾಪಾರದ ಚರ್ಚೆಯಲ್ಲಿ ಕೇಳಿಬಂದವು. ಇದಕ್ಕೂ ಮುನ್ನ, ಅಧಿಕೃತ ಭಾರತ ಪ್ರವಾಸದಲ್ಲಿರುವ ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲ ಡಿ,ಸಿಲ್ವಾ ಅವರಿಗೆ ಗಾರ್ಡ್ ಆಫ್ ಹಾನರ್ ಸಹಿತ ರಾಷ್ಟ್ರಪತಿ ಭವನದಲ್ಲಿ ವೈಭವೋಪೇತ ಸ್ವಾಗತ ನೀಡಲಾಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಬ್ರೆಜಿಲ್‌ನ ಪ್ರಥಮ ಪ್ರಜೆಯನ್ನು ಗೌರವದಿಂದ ಬರಮಾಡಿಕೊಂಡರು.2025ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬ್ರೆಜಿಲ್‌ಗೆ ಭೇಟಿ ನೀಡಿದ್ದರು. ಇದು ಕಳೆದ 50 ವರ್ಷಗಳಲ್ಲಿಯೇ ಭಾರತದ ಪ್ರಧಾನಿಯೊಬ್ಬರ ಮೊದಲ ಬ್ರೆಜಿಲ್ ಭೇಟಿಯಾಗಿತ್ತು.



ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ-ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಹಸ್ತಲಾಘವ.

ಭಾರತದ ನಿಯೋಗ

ಭಾರತದ ನಿಯೋಗದಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್, ವಾಣಿಜ್ಯ ಸಚಿವ ಪಿಯೂಶ್ ಗೋಯಲ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ವಿದೇಶಾಂಗ ಸಹಾಯಕ ಸಚಿವರಾದ ಪಬಿತ್ರಾ ಮಾರ್ಗೆರಿಟಾ, ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ, ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಮತ್ತಿತರ ಹಿರಿಯ ಅಧಿಕಾರಿಗಳಿದ್ದರು.

2030ರೊಳಗೆ ಎ.ಐ ಮೂಲಸೌಕರ್ಯ-ಕೌಶಲ ಅಭಿವೃದ್ಧಿ: ಎಂಎಸ್

ಎಐ ಅಭಿವೃದ್ಧಿಗೆ ₹4 ಲಕ್ಷ ಕೋಟಿ ಹೂಡಿಕೆ

ದೆಹಲಿ: ದೆಹಲಿಯ ಭಾರತ್ ಮಂಟಪಂನಲ್ಲಿ ಶುಕ್ರವಾರ ಸಂಜೆ ಸಮಾರೋಪಗೊಂಡ 'ಎಐ ಇಂಪ್ಯಾಕ್ಟ್ ಶೃಂಗಸಭೆ-2026'ರಲ್ಲಿ ಭಾಗಿಯಾಗಿದ್ದ ಮೈಕ್ರೋಸಾಫ್ಟ್ ಕಂಪನಿ ಮಹತ್ವದ ಘೋಷಣೆ ಮಾಡಿದೆ.

2030ರ ವೇಳೆಗೆ ಎಐ ಸಂಬಂಧಿತ ಮೂಲಸೌಕರ್ಯ ಮತ್ತು ಕೌಶಲ ಅಭಿವೃದ್ಧಿಗಾಗಿ 5000 ಕೋಟಿ ಡಾಲರ್ (4 ಲಕ್ಷ ಕೋಟಿ ರು.) ಬಂಡವಾಳವನ್ನು ಭಾರತ ಸೇರಿದಂತೆ ದಕ್ಷಿಣ ಏಷ್ಯಾ ಭಾಗದಲ್ಲಿ ಹೂಡಿಕೆ ಮಾಡುವುದಾಗಿ ಬಿಲ್‌ಗೇಟ್ ನೇತೃತ್ವದ ದಿಗ್ಗಜ ಸಂಸ್ಥೆ ಘೋಷಿಸಿದೆ.

ಮೈಕ್ರೋಸಾಫ್ಟ್ ಅಧ್ಯಕ್ಷ ಬ್ರಾಡ್‌ಸ್ಮಿತ್ ಎಐ ಶೃಂಗದಲ್ಲಿ ಮಾತನಾಡಿ, ಎ.ಐ ಪ್ರಯೋಜನಗಳು ಈವರೆಗೂ ಜಾಗತಿಕವಾಗಿ ಸಮಾನವಾಗಿ ವಿತರಣೆಗೊಂಡಿಲ್ಲ. ಕೆಲ ದೇಶಗಳಲ್ಲಿ ಎಐ ವೇಗವಾಗಿ ಬೆಳೆಯುತ್ತಿದ್ದರೆ, ಕೆಲ ದೇಶಗಳಲ್ಲಿ ಅದರ ವ್ಯಾಪ್ತಿ ಸೀಮಿತವಾಗಿದೆ. ಈ ವ್ಯತ್ಯಾಸ ತಪ್ಪಿಸಿ, ದೊಡ್ಡ ದೇಶಗಳು ಮತ್ತು ದೊಡ್ಡ ಕಂಪನಿಗಳು, ಅಷ್ಟೇ ಅಲ್ಲ ಸಾಮಾನ್ಯ ಜನರನ್ನೂ ಎಐ ತಂತ್ರಜ್ಞಾನ ತಲುಪಬೇಕು ಎಂದು ಕಂಪನಿ ಬಯಸುತ್ತದೆ ಎಂದರು.



ಭಾರತ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕ ಮೊದಲಾದ ದೇಶಗಳಲ್ಲಿ 'ಎ.ಐ'ಗೆ ದೊಡ್ಡ ಅವಕಾಶವಿದೆ. ಆ ದೇಶಗಳಲ್ಲಿ ಪ್ರತಿಭೆಗಳು ಮತ್ತು ಬಳಕೆದಾರರು ಇಬ್ಬರೂ ಇದ್ದಾರೆ. ಆದರೆ ಸರಿಯಾದ ಮೂಲಸೌಕರ್ಯ ಮತ್ತು ತರಬೇತಿ ಇಲ್ಲದೇ, ಎ.ಐನ ಪೂರ್ಣ ಪ್ರಯೋಜನ ಪಡೆಯಲು ಸಾಧ್ಯವಿಲ್ಲ. ಹೀಗಾಗಿ ಮೈಕ್ರೋಸಾಫ್ಟ್ ಕಂಪನಿ ಎಐ ಮೂಲಸೌಕರ್ಯ ಅಭಿವೃದ್ಧಿಗೆ ಮುಂದಾಗಿದೆ ಎಂದರು.

ಸಮಾಚಾರ ಸಣ್ಣದಲ್ಲ

ಉರ್ದು ಶಾಲೆಯ ವಾರ್ಷಿಕೋತ್ಸವ

ಗುಡಿಬಂಡೆ: ಪಟ್ಟಣದಲ್ಲಿರುವ ಏಕೈಕ ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳಿಂದ ಮೂಡಿಬಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭಿಕರ ಕಣ್ಮನ ಸೆಳೆದವು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಿಇಒ ಕೃಷ್ಣ ಕುಮಾರಿ ಅವರು ಮಾತನಾಡಿದರು. ಕಾರ್ಯಕ್ರಮದ ಯಶಸ್ಸಿನ ಹಿಂದೆ ಇಲ್ಲಿನ ಅತಿಥಿ ಶಿಕ್ಷಕರ ಪರಿಶ್ರಮ ಅಪಾರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬಳಿಕ ತಾಲೂಕು ಖಾಸಗಿ ಶಾಲೆಗಳ ಒಕ್ಕೂಟದ ಅಧ್ಯಕ್ಷ ರಾಮಾಂಜಿ ಮಾತನಾಡಿದರು. ಶಾಲೆಯನ್ನು ಅಸ್ತಿತ್ವದಲ್ಲಿರಿಸಲು ಸತತವಾಗಿ ಹೋರಾಟ ನಡೆಸುತ್ತಿರುವ ಮಾಜಿ ಎಸ್ ಡಿ ಎಂ ಸಿ ಅಧ್ಯಕ್ಷ ಮಹಮ್ಮದ್ ನಾಸಿರ್‌ಈ ಕಾರ್ಯಕ್ರಮದ ಉಸ್ತುವಾರಿ ವಹಿಸಿ ಯಶಸ್ವಿಯಾಗಿ ನಿರೂಪಣೆ ಮಾಡಿದರು. ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ಶಾಲೆಯ ಹಳೆ ವಿದ್ಯಾರ್ಥಿ ರಿಯಾಜ್ ಪಾಷ ಮಾತನಾಡಿದರು. ಮುಖ್ಯ ಶಿಕ್ಷಕ ರವೀಂದ್ರ, ಗೌಡ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಮುನಿಕೃಷ್ಣಪ್ಪ, ಪಿಎಂ ಶ್ರೀ ಶಾಲೆಯ ಮುಖ್ಯ ಶಿಕ್ಷಕ ಶಂಕರ್,ಎಸ್ ಡಿ ಎಮ್ ಸಿ ಅಧ್ಯಕ್ಷ ಶಫಿ, ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಬ್ದುಲ್ ವಹಾಬ್, ಮುಖಂಡರಾದ ಶಬ್ಬೀರ್,ಅಂಬಿಕಾ ಸುದರ್ಶನ್, ಬುಲೆಟ್ ಶ್ರೀನಿವಾಸ್, ಫಯಾಜ್ ಅಹಮದ್ ಖಾನ್, ಬಿ ಆರ್‌ಸಿ ಅನಿತಾ ಸೇರಿದಂತೆ ಶಿಕ್ಷಕರು ಹಾಗೂ ಪೋಷಕರು ಭಾಗವಹಿಸಿದ್ದರು.

ಸಮ ಸಮಾಜಕ್ಕೆ ಶ್ರಮಿಸಿದ ಸರ್ವಜ್ಞ

ಕೊರಟಗೆರೆ: ತ್ರಿಪದಿಗಳ ಮೂಲಕ ಸತ್ಯ, ಧರ್ಮ,ನೈತಿಕತೆ ಮತ್ತು ಮಾನವೀಯ ಮೌಲ್ಯಗಳ ಬೋಧನೆ ಮಾಡಿ ಸಮಾಜವನ್ನು ಜಾಗೃತಗೊಳಿಸಿದ ಮಹಾನ್ ಸಂತಕವಿ ಸರ್ವಜ್ಞ ಅವರ ಜೀವನವೇ ನಮ್ಮೆಲ್ಲರಿಗೂ ಆದರ್ಶ ಪ್ರಾಯವಾಗಿದೆ ಎಂದು ತಹಸೀಲ್ದಾರ್‌ಮಂಜುನಾಥ್ ಹೇಳಿದರು. ಪಟ್ಟಣದ ತಾಲೂಕು ಕಚೇರಿಯಲ್ಲಿ ಆಡಳಿತದ ವತಿಯಿಂದ ಶುಕ್ರವಾರ ಏರ್ಪಡಿಸಲಾಗಿದ್ದ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. 16ನೇ ಶತಮಾನದಲ್ಲಿ ಸಾಮಾನ್ಯಜನರಆಡುಭಾಷೆಯಲ್ಲಿಯೇ ಆಳವಾದ ಜೀವನ ತತ್ವಗಳನ್ನು ಸಾರಿದಅಪರೂಪದ ಕವಿ ಸರ್ವಜ್ಞರು ಎಂದು ಸ್ಮರಿಸಿದರು. ಜಾತಿ ವ್ಯವಸ್ಥೆ, ಮೇಲು-ಕೀಳು ಭೇದಭಾವ, ಜ್ಞಾನ ಅಜ್ಞಾನ, ಸತ್ಯ ಮಿಥ್ಯ, ಹುಟ್ಟುತ್ತು ಸಾವುಗಳ ತತ್ವಗಳನ್ನುಸುಲಭವಾಗಿ ಅರ್ಥವಾಗುವ ತ್ರಿಪದಿಗಳಮೂಲಕ ಜನಮನಗಳಲ್ಲಿ ಬಿತ್ತಿದ ಅವರು ನಿಜವಾದ ಸಮಾಜ ಸುಧಾರಕರಾಗಿದ್ದರು ಎಂದರು. ಕಾರ್ಯಕ್ರಮದಲ್ಲಿ ತಾಲೂಕು ಕುಂಬಾರ ಸಂಘದ ಎಸ್. ಹನುಮಂತ ಮಾತನಾಡಿದರು. ಉಪಾಧ್ಯಕ್ಷ ಮೋಹನ್‌ಕುಮಾರ್,ಗೌರವಾಧ್ಯಕ್ಷ ಅಶ್ವಥ್ ನಾರಾಯಣರಾಜು ಹಾಗೂ ನಿರ್ದೇಶಕರಾದ ಶಂಕರಣ್ಣ, ದಾಸಪ್ಪ, ಪುಟ್ಟರಾಜು, ಲಕ್ಷ್ಮಮ್ಮ, ರಾಜೇಶ್, ಜಗದೀಶ್, ಮಲ್ಲೇಶಯ್ಯ, ಗುರುದೇವ ಸೇರಿದಂತೆ ಇತರರುಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇಂದು ಗುಬ್ಬಿಯಪ್ಪ ಜಾತ್ರೆಗೆ ಚಾಲನೆ

ಗುಬ್ಬಿ: ಗುಬ್ಬಿ ಕ್ಷೇತ್ರಾಧಿಪತಿ ಶ್ರೀ ಗೋಸಲ ಚನ್ನಬಸವೇಶ್ವರಸ್ವಾಮಿ (ಗುಬ್ಬಿಯಪ್ಪ) ಅವರ ಜಾತ್ರಾ

ಮಹೋತ್ಸವ ಫೆ.22 ರಂದು ಧ್ವಜಾರೋಹಣ ಮೂಲಕ ಚಾಲನೆ ಸಿಗಲಿದೆ. ಫೆ.26 ರಂದು ಸ್ವಾಮಿಯವರ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನಡೆದು, ಮಾ.3 ರಂದು ಸಾವಿರಾರು ಭಕ್ತರನ್ನು ಸೆಳೆಯುವ ಬೆಳ್ಳಿ ಪಲ್ಲಕ್ಕಿ ಉತ್ಸವ ಅದ್ದೂರಿಯಾಗಿ ಜರುಗಲಿದೆ. ಮಾ.15 ರಂದು ಪಟ್ಟಣದ ಹೊರವಲಯದ ಚನ್ನಶೆಟ್ಟಿಹಳ್ಳಿ ಗದ್ದುಗೆಗೆ ಸ್ವಾಮಿ ಮೆರವಣಿಗೆ ಹೊರಟು ರಾತ್ರಿ ಭವ್ಯ ಮೆರವಣಿಗೆ ಮೂಲಕ ಮರಳುವ ಮೂಲಕ ಜಾತ್ರೆ ಸಂಪನ್ನಗೊಳ್ಳಲಿದೆ. ಈ ನಡುವೆ ನಿತ್ಯ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಿರಂತರ ನಡೆಯಲಿದೆ. ಬಸವವಾಹನ, ಬಿಳಿ ಕುದುರೆ ವಾಹನ, ನವರಂಗ ಪಲ್ಲಕ್ಕಿ ಉತ್ಸವ ಪ್ರತಿ ನಿತ್ಯ ನಡೆಯಲಿದೆ. ಮಾ.23 ಹಾಗೂ ರಥೋತ್ಸವ ದಿನದಂದು ಸಂಪೂರ್ಣ ರಾಮಾಯಣ ನಾಟಕ ಹಾಗೂ ಬೆಳ್ಳಿ ಪಲ್ಲಕ್ಕಿ ಉತ್ಸವ ದಿನದಂದು ಶ್ರೀಕೃಷ್ಣ ಸಂಧಾನ ನಾಟಕ ಹಾಗೂ ತೆಪ್ಪೋತ್ಸವ ದಿನದಂದು ಕುರುಕ್ಷೇತ್ರ ನಾಟಕ ಪ್ರದರ್ಶನ ನಡೆಯಲಿದೆ. ಫೆ. 27 ರಂದು ರುದ್ರಾಕ್ಷಿ ಮಂಟಪ ಹಾಗೂ ಫೆ.28 ರಂದು ನಾಟಕರತ್ನ ಗುಬ್ಬಿ ವೀರಣ್ಣ ಅವರ ಕುಟುಂಬದಿಂದ ವಿಚಿತ್ರ ಮಂಟಪ ಉತ್ಸವ ನಡೆದು ಮಾ.9 ರಂದು ತೆಪ್ಪೋತ್ಸವ ಮೂಲಕ ಜಾತ್ರೆಯು ಅಂತಿಮ ಹಂತ ತಲುಪಲಿದೆ ಎಂದು ಜಾತ್ರಾ ಸಮಿತಿ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

{ಡಾ.ಎಚ್.ಸಿ.ಮಹದೇವಪ್ಪ} ಸಚಿವ

ತಿ.ನರಸಿಪುರ ವ್ಯಾಪ್ತಿಯ ತುರಗನೂರು ಶಾಖಾ ನಾಲೆಯು ವಿಶ್ವೇಶ್ವರಯ್ಯ ನಾಲೆಯ ಅಂತಿಮ ನೆಲೆಯಾಗಿದ್ದು, ಈ ನಾಲೆಯನ್ನು 1943ರಲ್ಲಿ ನಿರ್ಮಿಸಲಾಗಿದೆ. ಇದರ ಆಧುನೀಕರಣದಿಂದ ಸುಮಾರು 1800 ಎಕರೆ ಕೃಷಿ ಭೂಮಿಗೆ ನೀರು ಸಿಗಲಿದೆ.

ರಾಜ್ಯ ಮಾನವ ಹಕ್ಕುಗಳ ಕಮಿಟಿಯಿಂದ ಅಬ್ಲೂಡು ಗ್ರಾಮದಲ್ಲಿ ಮನೆ ನಿರ್ಮಾಣದ ಪರಿಕರಗಳ ವಿತರಣೆ | ಬೈರೇಗೌಡ ಹೇಳಿಕೆ

10 ಸಾವಿರ ಮಂದಿಗೆ ಉಚಿತ ಸೂರು: ಭರವಸೆ

ಚಿಕ್ಕಬಳ್ಳಾಪುರ: ಸ್ವಾತಂತ್ರ್ಯ ಬಂದು 78 ವರ್ಷ ಕಳೆದರೂ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಸೂರಿಲ್ಲದವರ ಸಂಖ್ಯೆ ಹೇರಳವಾಗಿದೆ. ಇದನ್ನು ಮನಗಂಡ ಕರ್ನಾಟಕ ಮಾನವ ಹಕ್ಕುಗಳ ಕಮಿಟಿ ಜಿಲ್ಲೆಯಲ್ಲಿ 10 ಸಾವಿರಕ್ಕೂ ಹೆಚ್ಚು ಸೂರಿಲ್ಲದ ಮಂದಿಗೆ ಸೂರು ಕಲ್ಪಿಸುವ ಬೃಹತ್ ಸಂಕಲ್ಪಕ್ಕೆ ಸಮಾಜದ ಸಹಕಾರವಿರಲಿ ಎಂದು ಸಂಸ್ಥಾಪಕ ಅಧ್ಯಕ್ಷ ಸಿ.ಎಂ.ಬೈರೇಗೌಡ ಮನವಿ ಮಾಡಿದರು.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಕಮಿಟಿ ವತಿಯಿಂದ ಅಬ್ಲೂಡು ಗ್ರಾಮದ ವೃತ್ತದಲ್ಲಿ ಶನಿವಾರ ಏರ್ಪಡಿಸಿದ್ದ ಮನೆ ನಿರ್ಮಾಣದ ಪರಿಕರಗಳ ಉಚಿತ ವಿತರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕುವೆಂಪು ಸಂದೇಶ ಸಾಕಾರ:

ಅವರಿವರೆನ್ನದೆ ಮನುಷ್ಯ ಮನುಷ್ಯರಿಗೆ ನೆರವಾಗುವುದೇ ರಾಷ್ಟ್ರಕವಿ ಕುವೆಂಪು ಹೇಳುವ ಮನುಜ ಮತ ವಿಶ್ವಪಥದ ಸಂದೇಶವಾಗಿದೆ. ಇದನ್ನು ಅರ್ಥ ಅರಿತಿರುವ ನಾನು ಮತ್ತು ನಮ್ಮ ಸಮಿತಿ ಜಿಲ್ಲೆಯ 8 ತಾಲೂಕುಗಳಲ್ಲಿ ಸಂಚರಿಸಿ ಇಂದಿಗೂ ಗುಡಿಸಿಲುಗಳಲ್ಲಿ,ಟೆಂಟುಗಳಲ್ಲಿ, ತಡಿಕೆಗಳಲ್ಲಿ, ಬಸ್ ತಂಗುದಾಣಗಳಲ್ಲಿ ಆಶ್ರಯ ಪಡೆದು ವಾಸ ಮಾಡುತ್ತಿರುವ ನಿರ್ಗತಿಕರಿಗೆ ನೆರವಾಗಲು ಮುಂದಾಗಿದ್ದೇವೆ. ಈ ಸೇವೆಯನ್ನು ಸ್ವಂತ ಖರ್ಚಿನಿಂದ ಮಾಡುವ ಸಂಕಲ್ಪ ತೊಡಲಾಗಿದ್ದು ಸಮಾಜದ ಸಹಾಯವೂ ಜತೆಗೂಡಿದರೆ ಜಿಲ್ಲೆಯನ್ನು ಗುಡಿಸಲು ಮುಕ್ತ ಮಾಡಬಹುದು ಎಂದರು.

ಅಬ್ಲೂಡು ಸರ್ಕಲ್ನಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಕಮಿಟಿ ವತಿಯಿಂದ ಏರ್ಪಡಿಸಿದ್ದ ಮನೆ ನಿರ್ಮಾಣದ ಪರಿಕರಗಳ ಉಚಿತ ವಿತರಣೆಗೆ ಸಿ.ಎಂ.ಬೈರೇಗೌಡ ಅವರು ಚಾಲನೆ ನೀಡಿದರು.

ಮಾದರಿಯಾಗಲಿ:

ನಮ್ಮ ಸಂಸ್ಥೆಯ ಪರೋಪಕಾರದ ಈ ಯೋಜನೆಯ ಅವಧಿ 10 ವರ್ಷಗಳಾಗಿದ್ದು ಹಂತಹಅತವಾಗಿ ಬಡವರಿಗೆ ಆಸರೆಯಾಗುವ ಕೈಂಕರ್ಯವಿದೆ. ಗಂಡ ಹೆಂಡತಿ ಇರುವ ಒಂದು ಕುಟುಂಬಕ್ಕೆ 600 ಇಟ್ಟಿಗೆ, 25 ಮೂಟೆ ಸಿಮೆಂಟ್, 1 ಕಿಟಕಿ, 1 ಬಾಗಿಲು, ಛಾವಣಿಗೆ ತಗಡಿನ ಶೀಟುಗಳನ್ನು ಉಚಿತವಾಗಿ ನೀಡುತ್ತಿದ್ದೇವೆ.

ಹಾಗೆಯೇ ತಂದೆತಾಯಿ ಅತ್ತೆ ಮಾವ ಹೀಗೆ ಇದ್ದಲ್ಲಿ 800 ಇಟ್ಟಿಗೆ ಜತೆಗೆ ಕಿಟಕಿ ಬಾಗಿಲಿ ಸಿಮೆಂಟ್, ಒಂದು ವೇಳೆ ಅಂಗವಿಕಲರಿದ್ದಲ್ಲಿ 1 ಸಾವಿರ ಇಟ್ಟಿಗೆ ಸಹಿತ ಎಲ್ಲಾ ಪರಿಕರ ನೀಡಲಾಗುವುದು. ಒಟ್ಟಾರೆ ಮನುಷ್ಯರಾದವರಿಗೆ ತಲೆಮೇಲೆ ಸ್ವಂತ ಸೂರಿದ್ದಲ್ಲಿ ಹೇಗೋ ಬದುಕು ಸಾಗಿಸಬಹುದು ಎಂದು ಭಾವಿಸಿ ಈ ಕೆಲಸವನ್ನು ಮಾಡುತ್ತಿದ್ದೇವೆ ಎಂದರು.

ಯಾರಿಗೆಲ್ಲಾ ಈ ಸೌಲಭ್ಯ?:

ಮಾನವ ಹಕ್ಕುಗಳ ಕಮಿಟಿ 4 ಹಂತಗಳಲ್ಲಿ ಫಲಾನುಭವಿಗಳ ಆಯ್ಕೆ ಮಾಡಲಿದ್ದು ಅದರಂತೆ ಯಾವುದೇ ಸಮುದಾಯದವರಿರಲಿ ಕಡುಬಡವರಾಗಿರಬೇಕು. ಗುಡಿಸಲಿನಲ್ಲಿ ವಾಸಿಸುವವರಾಗಿರಬೇಕು. 1 ಎಕರೆಗಿಂತ ಹೆಚ್ಚು ಭೂಮಿ ಹೊಂದಿರಬಾರದು. ಫಲಾನುಭವಿಯ ಮಕ್ಕಳು ಸರಕಾರಿ ಶಾಲೆಗಳಲ್ಲಿ ಓದುತ್ತಿರಬೇಕು. ನೀರಾವರಿ ಸೌಲಭ್ಯ ವಂಚಿತರಾಗಿರಬೇಕು. ದ್ವಿಚಕ್ರವಾಹನ ಬಿಟ್ಟು ಬೇರೆ ಯಾವುದೇ ವಾಹನ ಹೊಂದಿರಬಾರದು. ಅಂತಹವರಿಗೆ ಉಚಿತ ಸೂರು ಕಲ್ಪಿಸಲು ಆದ್ಯತೆ ನೀಡಲಾಗುವುದು.

> ಈ ಸೇವೆಯನ್ನು ಸ್ವಂತ ಖರ್ಚಿನಿಂದ ಮಾಡುವ ಸಂಕಲ್ಪ ತೊಡಲಾಗಿದ್ದು ಸಮಾಜದ ಸಹಾಯವೂ ಜತೆಗೂಡಿದರೆ ಜಿಲ್ಲೆಯನ್ನು ಗುಡಿಸಲು ಮುಕ್ತ ಮಾಡಬಹುದು.
> –ಸಿ.ಎಂ.ಬೈರೇಗೌಡ, ಕರ್ನಾಟಕ ಮಾನವ ಹಕ್ಕುಗಳ ಕಮಿಟಿ ಸಂಸ್ಥಾಪಕ ಅಧ್ಯಕ್ಷ

ಲಾಭದ ಹಣದಲ್ಲಿ ಸೇವೆ?:

ಮಾನವ ಹಕ್ಕುಗಳ ಕಮಿಟಿ ವತಿಯಿಂದ ಹಾಲೋಬ್ರಿಕ್ಸ್ ಇಟ್ಟಿಗೆ ಫ್ಯಾಕ್ಟರಿ ಇಟ್ಟಿದ್ದು ಇದರಲ್ಲಿ ಬರುವ ಲಾಭಾಂಶದಲ್ಲಿ ಬಡ ನಿರ್ಗತಿಕರಿಗೆ ಸೂರು ಕಲ್ಪಿಸುವ ಯೋಜನೆ ಮುಂದುವರೆಸಲಾಗುವುದು. ಸಮಾಜ ಸೇವೆ ಮಾಡಲು ರಾಜಕೀಯ ಅಧಿಕಾರವೇ ಇರಬೇಕು ಎಂದೇನಿಲ್ಲ. ಒಳ್ಳೆಯ ಮನಸ್ಸಿದ್ದರೆ ಸಾಕು.ನೊಂದವರ ಕಣ್ಣೀರು ಒರೆಸುವ ಪ್ರತಿಯೊಂದು ಕೆಲಸವೂ ಸಮಾಜಸೇವೆಯೇ ಆಗಿದೆ.ಯಾರು ಬೇಕಾದರೂ ಈಕ್ಷೇತ್ರವನ್ನು ಪ್ರವೇಶಿಸಬಹುದು. ಮೊದಲಿಗೆ ಶಿಡ್ಲಘಟ್ಟ ಕ್ಷೇತ್ರದ ಚಿಕಲನೇರ್ಪು ಭಾಗದಲ್ಲಿ ಮನೆ ನಿರ್ಮಾಣ ಮಾಡಲು ಪರಿಕರ ವಿತರಣೆ ಆಗಲಿದೆ.ನಂತರ ಆಂಧ್ರದ ಗಡಿಯನ್ನು ಹಂಚಿಕೊಂಡಿರುವ ಚಿಂತಾಮಣಿ,ಬಾಗೇಪಲ್ಲಿ, ಗುಡಿಬಂಡೆಗಳಲ್ಲಿ ಮುಂದುವರೆಸಲಾಗುವುದು ಎಂದರು.

15★20 ಅಡಿಗೆ ವಿತರಣೆ

ನಮ್ಮ ಯೋಜನೆಯಲ್ಲಿ 15★21 ಅಡಿ ಪಾಯ ಹಾಕಿಕೊಂಡವರಿಗೆ ಸಂಪೂರ್ಣ ಮನೆಪೂದರ್ಣವಾಗುವಷ್ಟು ಪರಿಕರಗಳನ್ನು ಉಚಿತವಾಗಿ ವಿತರಣೆ ಮಾಡಲಾಗುವುದು.

ಇದನ್ನು ಮೀರಿ ಪಾಯ ಹಾಕಿದ್ದರೆ ಅದರ ಹೆಚ್ಚುವರಿ ಖರ್ಚನ್ನು ಅವರೇ ಭರಿಸಬೇಕಿದೆ.

ಉದ್ದೇಶ ಸರಳವಾಗಿ ಬದುಕಲು ಬೇಕಾದ ಮನೆ ನಿರ್ಮಾಣಕ್ಕೆ ನಾವು ಸಹಾಯ ಮಾಡುತ್ತಿದ್ದೇವೆ.ಇದನ್ನು ಮೀರಿ ಪಾಯ ಹಾಕಿದ್ದರೆ ಈ ಅಳತೆಯಲ್ಲಿ ಎಷ್ಟಾಗುತ್ತೋ ಅಷ್ಟನ್ನು ನೀಡಲಾಗುವುದು.

ದುಬಾರಿ ಮನೆಗಳಿಗೆ ನೆರವಾಗಲು ಆಗದು ಎಂಬುದನ್ನು ಸ್ಪಷ್ಟಪಡಿಸಿದರು.ಬಿಇಒ ನರೇಂದ್ರ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ವಿಸ್ಡಮ್ ನಾಗರಾಜ್, ರೈತಸಂಘದ ರವಿ ಪ್ರಕಾಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ 10 ಮಂದಿಗೆ ಮನೆಕಟ್ಟಿಕೊಳ್ಳಲು ಬೇಕಾದ ಇಟ್ಟಿಗೆ, ಕಿಟಕಿ, ಬಾಗಿಲು, ಸಿಮೆಂಟ್ ಎಂ.ಸ್ಯಾಂಡ್, ಶೀಟ್ಗಳನ್ನು ಉಚಿತವಾಗಿ ವಿತರಿಸಿದರು.ಈವೇಳೆ ರೈತ ಸಂಘದ ತಾದುರು ಮಂಜುನಾಥ್ ರವಿಪ್ರಕಾಶ್ ಕೋಟೆ ಚೆನ್ನೇಗೌಡ, ವಲಸೇನಹಳ್ಳಿ ನಾರಾಯಣಸ್ವಾಮಿ ,ಮರಗೆಲಸ ಸಂಘದ ಅಧ್ಯಕ್ಷ ಪ್ರದೀಪ್ ದೀಪು, ಈಶ್ವರ್‌ರೆಡ್ಡಿ, ಮತ್ತಿತರರು ಇದ್ದರು.

ಸರ್ವಜ್ಞ ಜೀವನ ನಮಗೆಲ್ಲರಿಗೂ ಆದರ್ಶ

ಬಾಗೇಪಲ್ಲಿ: ಸಮಾಜದಲ್ಲಿ ಜಾತಿ, ವರ್ಗ,ವರ್ಣ ಭೇದ ಎನ್ನದೇ ಸರ್ವರ ಒಳಿತಿಗಾಗಿ ಶ್ರಮಿಸಿದ ಸರ್ವಜ್ಞ ನಮ್ಮೆಲ್ಲರಿಗೂ ಆದರ್ಶವಾಗಿದ್ದಾರೆ ಎಂದು ಬಿಇಒ ಎನ್. ವೆಂಕಟಪ್ಪ ಅವರು ಹೇಳಿದರು.

ಪಟ್ಟಣದ ತಾಪಂ,ಜಿಪಂ, ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಸರ್ವಜ್ಞ ಜಯಂತಿ ಅಂಗವಾಗಿ ಸರ್ವಜ್ಞ ಚಿತ್ರಪಟಕ್ಕೆ ಪುಷ್ಪ ನಮನ ಮಾಡಿ ಮಾತನಾಡಿದರು.

ಜಾತಿ ವ್ಯವಸ್ಥೆ, ಅಂಧಶ್ರದ್ಧೆ, ಜಾತಿಯತೆ, ದೌರ್ಜನ್ಯ, ಕಂದಾಚಾರ, ದಬ್ಬಾಳಿಕೆ , ಶೋಷಣೆ, ಮೌಢ್ಯತೆಗಳೆಂಬ ಅನಿಷ್ಟತೆ ಪದ್ಧತಿಯನ್ನು ಧಿಕ್ಕರಿಸಿ ಸಮ ಸಮಾಜದ ಪರಿಕಲ್ಪನೆಯನ್ನು ಮುನ್ನೆಲೆಗೆ ತರುವ ಪ್ರಯತ್ನ ಸರ್ವಜ್ಞ ಮಾಡಿದರು. ಬಲಾಢ್ಯರ ಶೋಷಣೆಗೆ ಒಳಪಟ್ಟ ತಳವರ್ಗ ಸಮುದಾಯದವರ ಬದುಕು ದುರ್ಬರವಾಗಿತು. ಅಂತಹ ಕತ್ತಲೆಯ ದಿನಗಳಲ್ಲಿ 'ತ್ರಿಪದಿ ವಚನ'ಗಳ ಮುಖಾಂತರ ಬಂದ ಸರ್ವಜ್ಞ ಸಮಾಜದ ಅರಿವನ್ನು ವಿಸ್ತರಿಸಿದರು. ಜಾತಿ, ಕುಲ, ಮತ, ಲಿಂಗ ಭೇದಗಳ ತಾರತಮ್ಯ ಅಳಿಸಿ ಸಾಮರಸ್ಯದ ಸಮಾಜ ಕಟ್ಟಲು ಪ್ರಯತ್ನಿಸಿದರು.

ಸರ್ವಜ್ಞ ಜಯಂತಿ ಅಂಗವಾಗಿ ಸರ್ವಜ್ಞ ಭಾವಚಿತ್ರಕ್ಕೆ ಬಿಇಒ ಎನ್. ವೆಂಕಟಪ್ಪ ಅವರು ಪುಷ್ಪ ನಮನ ಸಲ್ಲಿಸಿದರು.

ಸಮಾಜದಲ್ಲಿ ಇಂದಿಗೂ ಬೇರೂರಿರುವ ಜಾತಿ-ಧರ್ಮ, ಮೇಲು-ಕೀಳು, ಬಡವ-ಶ್ರೀಮಂತ ಎಂಬ ತಾರತಮ್ಯ ಹೋಗಲಾಡಿಸಲು ಸರ್ವಜ್ಞ ಸೇರಿದಂತೆ ಅನೇಕ ಮಹಾತ್ಮರ ಮಾನವೀಯ ಮೌಲ್ಯಗಳು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಪ್ರಧಾನ ಭಾಷಣಕಾರ ಮಂಜುನಾಥ್ ಎಂ.ಎನ್ ಮಾತನಾಡಿ, ಜಾತಿ ವ್ಯವಸ್ಥೆ, ಅಂಧಶ್ರದ್ಧೆ, ದೌರ್ಜನ್ಯ, ಕಂದಾಚಾರ, ದಬ್ಬಾಳಿಕೆ , ಶೋಷಣೆ, ಮೌಢ್ಯತೆಗಳೆಂಬ ಅನಿಷ್ಟ ಪದ್ಧತಿಯನ್ನು ಧಿಕ್ಕರಿಸಿ ಸಮ ಸಮಾಜದ ಪರಿಕಲ್ಪನೆಯನ್ನು ಮುನ್ನೆಲೆಗೆ ತರುವ ಪ್ರಯತ್ನ ತಮ್ಮ ತ್ರಿಪದಿ ವಚನಗಳ ಮೂಲಕ ಸರ್ವಜ್ಞರು ಮಾಡಿದ್ದರು. ಅವರ ವಚನಗಳನ್ನು ಇಂದಿನ ಪೀಳಿಗೆಗೆ ತಲುಪಿಸಲು ರಾಜ್ಯ ಸರಕಾರ ಜಯಂತಿ ಕಾರ್ಯಕ್ರಮ ಆಚರಿಸಲಾಗುತ್ತಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿಗಳಾದ ಶ್ರೀನಿವಾಸ್, ಕೈಗಾರಿಕಾ ವಿಸ್ತರಣಾಧಿಕಾರಿ ಬಾಬು, ಕರವೇ ಹರೀಶ್ ಹಾಗೂ ಅಧಿಕಾರಿ ವರ್ಗದವರು ಹಾಜರಿದ್ದರು.

ನಾಳೆ ಆಂಜನೇಯಸ್ವಾಮಿ ದೇಗುಲ ಪ್ರತಿಷ್ಠಾಪನೆ

ಕೋಲಾರ: ತಾಲೂಕಿನ ವರದನಹಳ್ಳಿ-ಚದುಮನಹಳ್ಳಿ ಗ್ರಾಮದಮಧ್ಯೆ ಇರುವ ಶ್ರೀ ಪವಾಡ ಉದ್ಭವ ಆಂಜನೇಯಸ್ವಾಮಿ ಸೀತಮ್ಮನಗುಟ್ಟ ದೇವಾಲಯ ಹಾಗೂ ಅಶ್ವತ್ಥಕಟ್ಟೆ ಜೀರ್ಣೋದ್ದಾರ ಪ್ರತಿಷ್ಠಾಪನೆ ಶನಿವಾರದಿಂದ ಸೋಮವಾರದವರೆಗೆ ನಡೆಯಲಿದೆ.

21ರಂದು ಶನಿವಾರ ಬೆಳಗ್ಗೆ 10ಕ್ಕೆ ಹೋಮದ ಮೂಲಕ ಧಾರ್ಮಿಕ ಕೈಂಕರ್ಯಗಳು ಆರಂಭಗೊಂಡಿದ್ದು ಭಾನುವಾರ ತತ್ವಹೋಮ,ಕಳಶಾರಾಧನೆ,ಮಹಾಪೂಜೆ, ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗವಿದೆ. 23ರಂದು ಭಾನುವಾರ ಆಂಜನೇಯ ಸ್ವಾಮಿ ಪ್ರತಿಷ್ಠಾಪನೆಯನ್ನು ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ನೆರವೇರಿಸುವರು. ಚಿಕ್ಕಬಳ್ಳಾಪುರದ ಮಂಗಳಾನಂದ ಶ್ರೀ, ನಾಗಲಾಪುರ ದತೇಜೇಶಲಿಂಗ ಶಿವಾಚಾರ್ಯ ಸ್ವಾಮಿ, ಎಡಿಜಿಪಿ ಡಿ.ದೇವರಾಜ್, ಸಮಾಜಸೇವಕ ಮುದುವಾಡಿ ಗಿರೀಶ್, ಅನಂತ ಜ್ಯೂಯರ್ಸ್ ಮಾಲೀಕ ಡಿ.ಎನ್.ಅನಂತ ಭಾಗವಹಿಸುವರು.

ಸಂಸದ ಎಂ.ಮಲ್ಲೇಶ್ ಬಾಬು, ಮಾಜಿ ಸಂಸದ ಎಸ್.ಮುನಿಸ್ವಾಮಿ, ಶಾಸಕರಾದ ನಂಜೇಗೌಡ, ಕೊತ್ತೂರು ಮಂಜುನಾಥ್, ಮಾಜಿ ಶಾಸಕ ಕೆ.ಶ್ರೀನಿವಾಸಗೌಡ,ವರ್ತೂರ್ ಪ್ರಕಾಶ್,ಎಂಎಲ್ಸಿ ಇಂಚರಗೋವಿಂದರಾಜ್ ,ಅನಿಲ್ ಕುಮಾರ್,ಕೋಮುಲ್ ನಿರ್ದೇಶಕ ಡಿ.ವಿ.ಹರೀಶ್, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಬ್ಯಾಲಹಳ್ಳಿ ಗೋವಿಂದಗೌಡ,ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಡಿ.ಕೆ.ರಮೇಶ್ ಮುಂತಾದ ಗಣ್ಯರು ಭಾಗವಹಿಸುವರು. 20 ವರ್ಷದ ಹಿಂದೆ ದೊಡ್ಡ ಬಂಡೆಯ ಮೇಲೆ ಬಣ್ಣದಲ್ಲಿ ಆಂಜನೇಯ ಮೂರ್ತಿ ಚಿತ್ರವನ್ನು ಬರೆಸಿ ಗ್ರಾಮಸ್ಥರು ಪೂಜೆ ಮಾಡುತ್ತಿದ್ದು ಬಂಡೆಯ ಹಿಂದೆ ಸೀತಮ್ಮನ ಪಾದಗಳು ಮೂಡಿಬಂದಿವೆ. ರಾಮಾಯಣದ ಸೀತಾಪಹರಣದ ಸಂದರ್ಭದಲ್ಲಿ ವರದನಹಳ್ಳಿಯಲ್ಲಿ ಸೀತಮ್ಮ ಪಾದಗಳನ್ನು ಇಟ್ಟ ನಂತರ ಪುನಃ ಆವಣಿ ಬೆಟ್ಟದ ಮೇಲೆ ಪಾದಗಳನ್ನು ಊರಿದ್ದಾರೆಂದು ಪೌರಾಣಿಕ ಐತಿಹ್ಯವನ್ನು ಗ್ರಾಮದ ಯುವ ಮುಖಂಡ ಫಾರ್ಮಾ ನವೀನ್ ಕುಮಾರ್‌ಹೇಳುತ್ತಾರೆ.

ವರದನಹಳ್ಳಿ ಆಂಜನೇಯ ಸ್ವಾಮಿ ದೇಗುಲ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಅನಂತ ಧಾರ್ಮಿಕ ಕೈಂಕರ್ಯಗಳನ್ನು ನಡೆಸಿಕೊಟ್ಟರು

ದಲಿತರಿಗೆ ದೇಗುಲ ಪ್ರವೇಶ ನಿರಾಕರಣೆ: ದೂರು

ತುಮಕೂರು: ಮೈಮೇಲೆ ದೇವರು ಬಂದಂತೆ ನಾಟಕವಾಡಿದ ವ್ಯಕ್ತಿಯೊಬ್ಬ ಹೊಸದಾಗಿ ಮದುವೆಯಾಗಿ ದೇವಸ್ಥಾನಕ್ಕೆ ಬಂದ ದಲಿತ ದಂಪತಿಯನ್ನು ಹೊರಗೆ ಕಳಿಸಿ ಅಸ್ಪೃಶ್ಯತೆ ಆಚರಣೆ ಮಾಡಿರುವ ಘಟನೆ ಜಿಲ್ಲೆಯ ತುರುವೇಕೆರೆ ತಾಲೂಕಿನ ಗೋಣಿ ತುಮಕೂರಿನಲ್ಲಿ ನಡೆದಿದ್ದು, ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿದೆ.

ತುರುವೇಕೆರೆ ತಾಲೂಕು ಗೋಣಿ ತುಮಕೂರಿನ ಅರಸಮ್ಮ ದೇವಾಲಯಕ್ಕೆ ದಲಿತ ಸಮುದಾಯದ ನವದಂಪತಿಗಳಾದ ಜಗದೀಶ್ ಮತ್ತು ಪತ್ನಿ ಪೂಜೆ ಮಾಡಿಸಲು ಬಂದಿದ್ದಾರೆ. ಇದನ್ನು ಗಮನಿಸಿದ ನಾರಾಯಣಪ್ಪ ನೂತನ ದಂಪತಿಯನ್ನು ನೇರವಾಗಿ ಕಳುಹಿಸಿದರೆ ಸಮಸ್ಯೆಯಾಗುತ್ತದೆ ಎಂದು ತಿಳಿದು ಮೈ ಮೇಲೆ ದೇವರು ಬಂದಂತೆ ನಾಟಕವಾಡಿದ್ದಾರೆ.

ದೇವರು ಮೈದುಂಬಿಕೊಂಡ ನಾರಾಯಣಪ್ಪ ನೀವು ದಲಿತರು, ದಲಿತರಿಗೆ ದೇವಾಲಯದ ಒಳಗೆ ಪ್ರವೇಶವಿಲ್ಲ, ನಡಿ ಆಚೆಗೆ ಎಂದು ದಬ್ಬಾಳಿಕೆಯಿಂದ ದಲಿತ ನವದಂಪತಿ ಮತ್ತು ಅವರ ಕುಟುಂಬವನ್ನು ಹೊರಗೆ ಕಳುಹಿಸಿ, ನಿಮ್ಮ ಪ್ರವೇಶದಿಂದ ಪುಣ್ಯ ಮಾಡಿಸಬೇಕು ಎಂದು ಅಸ್ಪೃಶ್ಯತೆ ಆಚರಣೆ ಮಾಡಿರುವ ವಿಡಿಯೋ ಎಲ್ಲರ ಮೊಬೈಲ್ ನಲ್ಲಿ ಹರಿದಾಡುತ್ತಿದೆ.

ಗ್ರಾಮಸ್ಥರ ನಡವಳಿಕೆಯಿಂದ ಬೇಸತ್ತ ಜಗದೀಶ್ ದಂಪತಿ ತುರುವೇಕೆರೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ ಹಿನ್ನೆಲೆಯಲ್ಲಿ ನಾರಾಯಣಪ್ಪ, ಪ್ರಭಾ, ಕಾಂತಣ್ಣ, ಅಮೂಲ್ಯ, ಪುಟ್ಟೇಗೌಡ, ಪದ್ಮ ಮತ್ತು ಇತರರ ಮೇಲೆ ಎಫ್ ಐಆರ್‌ದಾಖಲಿಸಲಾಗಿದೆ. ದೇವರು ಮೈ ಮೇಲೆ ಬಂದಂತೆ ನಾಟಕವಾಡಿದ್ದ ನಾರಾಯಣಪ್ಪನನ್ನು ಪೊಲೀಸರು ಬಂಧಿಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದು ಉಳಿದವರಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ದಲಿತ ದಂಪತಿ ದೇಗುಲದ ಒಳಗೆ ಬರುತ್ತಿದ್ದಂತೆ ಮೈಮೇಲೆ ದೇವರು ಬಂದಂತೆ ನಟಿಸಿದ ಸವರ್ಣೀಯ ವ್ಯಕ್ತಿ.

ಹೇಮಾವತಿ ಕಾಮಗಾರಿ ಪೂರ್ಣಕ್ಕೆ ಆಗ್ರಹ

ಚಿಕ್ಕನಾಯಕನಹಳ್ಳಿ: ಹೇಮಾವತಿ ನಾಲಾ ಕಾಮಗಾರಿಗಳು ಪೂರ್ಣಗೊಳ್ಳದಿದ್ದರೆ ತಾಲೂಕಿನಾದ್ಯಂತ ನಡೆಯುತ್ತಿರುವ ಇತರೆಲ್ಲಾ ಸರಕಾರಿ ಕಾಮಗಾರಿಗಳನ್ನು ತಡೆಯಲಾಗುತ್ತದೆ' ಎಂದು ಭಟ್ಟರ ಹಳ್ಳಿ ಮಲ್ಲಿಕಾರ್ಜುನ ಅವರು ಸರಕಾರಕ್ಕೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೇಮಾವತಿ ಯೋಜನೆಯಡಿ ಬಾಕಿ ಇರುವ 11 ಸೇತುವೆಗಳು ಮತ್ತು 8 ಕಿಲೋಮೀಟರ್‌ಉದ್ದದ ಕಾಮಗಾರಿ ಪರ್ಣಗೊಂಡರೆ ಮಾತ್ರ ನವಿಲೆ ಕೆರೆಗೆ ನೀರು ಹರಿಯಲು ಸಾಧ್ಯ. ಈ ಕೆಲಸಗಳಿಗೆ ಅಗತ್ಯವಿರುವ ಅನುದಾನ ಲಭ್ಯವಿದ್ದರೂ ಹಾಗೂ ಭೂಮಿ ವಶಪಡಿಸಿಕೊಳ್ಳುವ ಪ್ರಕ್ರಿಯೆ ಪರ್ಣಗೊಂಡಿದ್ದರೂ ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲದೆ ಕೆಲಸ ವಿಳಂಬವಾಗುತ್ತಿದೆ ಎಂದು ದೂರಿದರು. ಇದು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯನ್ನು ಎತ್ತಿ ತೋರಿಸುತ್ತದೆ. ಮುಂದಿನ ಎರಡು ತಿಂಗಳು ಸುಸ್ಥಿರವಾಗಿ ಕೆಲಸ ನಡೆಸಿದರೆ ಈ ಯೋಜನೆ ಪರ್ಣಗೊಂಡು ಕೆರೆಗೆ ನೀರು ತಲುಪಲಿದೆ ಎಂದರು. ನವಿಲೆ ಕೆರೆಗೆ ನೀರು ಬಂದರೆ ಈ ಭಾಗದ ರೈತರ ಪರಿಸ್ಥಿತಿ ಸುಧಾರಿಸುತ್ತದೆ. ಕ್ಷಾರಿ ಅಡೆತಡೆಗಳನ್ನು ಬದಿಗಿಟ್ಟು, ಯುದ್ಧೋಪಾದಿಯಲ್ಲಿ ಕೆಲಸ ನಡೆಸಿ ಮಳೆಗಾಲಕ್ಕೆ ಮುನ್ನವೇ ನೀರು ತಲುಪುವಂತೆ ಮಾಡಬೇಕು. ಇಲ್ಲವಾದಲ್ಲಿ ತಾಲೂಕಿನ ಪ್ರತಿಯೊಂದು ಕ್ಷಾರಿ ಕೆಲಸವನ್ನೂ ತಡೆದು ಪ್ರತಿಭಟಿಸುವುದಾಗಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ನೀರಾವರಿ ಹೋರಾಟಗಾರ ಮಧು ಮಾತನಾಡಿದರು. ಹೇಮಾವತಿ ನೀರಾವರಿ ಹೋರಾಟ ಸಮಿತಿಯ ಆಟೋ ಮಂಜುನಾಥ್, ಹೊನ್ನೆಬಾಗಿ ಪ್ರಸನ್ನ, ಯೋಗಿಶ್, ಹನುಮಂತಪ್ಪ, ರೈತ ಸಂಘದ ಯದುಕುಮಾರ್,ಮುದ್ದೇನಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಗಂಗಾಧರಯ್ಯ ಹಾಗೂ ಇತರರು ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಭಟ್ಟರ ಹಳ್ಳಿ ಮಲ್ಲಿಕಾರ್ಜುನ ಅವರು ಮಾತನಾಡಿದರು.

ಇಂದು ವಿದ್ಯಾರ್ಥಿ, ಪೋಷಕರ ಸಮಾವೇಶ

ಚಿಕ್ಕಬಳ್ಳಾಪುರ : ಸರಕಾರಿ ಶಾಲೆಗಳನ್ನು ಕೆಪಿಎಸ್ ಮ್ಯಾಗ್ನೆಟ್ ಶಾಲೆಯೊಂದಿಗೆ ವಿಲೀನಗೊಳಿಸುವ ಮೂಲಕ ಆ ಊರಿನ ಸರ್ಕಾರಿ ಶಾಲೆಯನ್ನು ಮುಚ್ಚಲು ಮುಂದಾಗಿರುವ ಸರಕಾರದ ನೀತಿಯನ್ನು ಖಂಡಿಸಿ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆಯಿಂದ ದಿನಾಂಕ 22 ಫೆಬ್ರವರಿ 2026ರಂದು ಚಿಕ್ಕಬಳ್ಳಾಪುರ ಜಿಲ್ಲಾಮಟ್ಟದ ವಿದ್ಯಾರ್ಥಿ-ಪೋಷಕರ ಪ್ರತಿಭಟನಾ ಸಮಾವೇಶವನ್ನು ಅಂಬೇಡ್ಕರ್‌ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ವೇದಿಕೆ ಕಾರ್ಯಕ್ರಮಕ್ಕೂ ಮೊದಲುಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯಿಂದ ಮೆರವಣಿಗೆ ಮೂಲಕ ಅಂಬೇಡ್ಕರ್‌ಭವನ ತಲುಪುವುದು. ಪ್ರತಿಭಟನೆಯಲ್ಲಿ ಪ್ರೊಫೆಸರ್‌ಕೋಡಿ ರಂಗಪ್ಪ- ಶಿಕ್ಷಣ ತಜ್ಞರು, ಎಐಡಿಎಸ್‌ಒ ಖಜಾಂಚಿ ಸುಭಾಷ್ ಬೆಟ್ಟದ ಕೊಪ್ಪ, ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ವಿನಯ್ ಚಂದ್ರ, ಸುಧಾ ವೆಂಕಟೇಶ್,ಜಿಲ್ಲಾ ಮುಖಂಡರು, ದಲಿತ ಸಂಘರ್ಷ ಸಮಿತಿ, ಲಕ್ಷ್ಮೀನಾರಾಯಣ ರೆಡ್ಡಿ- ರೈತ ಮುಖಂಡರು ಕರ್ನಾಟಕ ರಾಜ್ಯ ರೈತ ಸಂಘ, ಬೈರಾ ರೆಡ್ಡಿ,ಜಿಲ್ಲಾ ಕಾರ್ಯದರ್ಶಿಗಳು ರಾಜ್ಯ ರಹಿತ ಸಂಘಟನೆಗಳ ಒಕ್ಕೂಟ, ಹನುಮೇಶ್- ಜಿಲ್ಲಾ ಕಾರ್ಮಿಕ ಮುಖಂಡರು ಎಐಯುಟಿಯುಸಿ, ಕೃಷ್ಣರಾಜ್ಯ ಉಪಾಧ್ಯಕ್ಷರು-ಎಐಡಿವೈಒ ಮತ್ತಿತರರು ಭಾಗವಹಿಸುವರು.

ಅರೇನಹಳ್ಳಿಯಲ್ಲಿ ನೀರಿನ ತೊಟ್ಟಿಗೆ ಬಿದ್ದು ಕರಡಿ ಸಾವು

ಗುಬ್ಬಿ: ರೈತನ ಜಮೀನಿನಲ್ಲಿ ನೀರಿನ ತೊಟ್ಟಿಗೆ ಕುಡಿಯಲು ಬಂದ ಕರಡಿ ತೊಟ್ಟಿಗೆ ಬಿದ್ದು ಸಾವನ್ನಪ್ಪಿದ ಘಟನೆ ತಾಲ್ಲೂಕಿನ ನಿಟ್ಟೂರು ಹೋಬಳಿ ಅರೇನಹಳ್ಳಿ ಗ್ರಾಮದಲ್ಲಿ ನಡೆದಿದೆ.ಜಯಣ್ಣ ಎಂಬ ರೈತರ ಜಮೀನಿನಲ್ಲಿ ಸುಮಾರು 10 ವರ್ಷದ ಹೆಣ್ಣು ಕರಡಿ ಆಹಾರ ಅರಸಿ ಜಮೀನಿನಲ್ಲಿದ್ದ ತೊಟ್ಟಿಗೆ ನೀರು ಕುಡಿಯಲು ಬಂದು ತೊಟ್ಟಿಗೆ ಬಿದ್ದು ಮೃತಪಟ್ಟಿದೆ.

ಅನಾರೋಗ್ಯಕ್ಕೆ ತುತ್ತಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ರೈತರು ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿ ಸಿಬ್ಬಂದಿಗಳು ಭೇಟಿ ನೀಡಿ ಪಶು ವೈದ್ಯಾಧಿಕಾರಿಗಳಿಂದ ಕಳೆಬರಹವನ್ನು ಮರಣೋತ್ತರ ಪರೀಕ್ಷೆ ನಡೆಸಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪವಿತ್ರ, ಸಮಕ್ಷಮದಲ್ಲಿ ರಾತ್ರಿ ಗಂಟೆ ಸಮಯದಲ್ಲಿ ಅಗ್ನಿಸ್ಪರ್ಶ ಮೂಲಕ ಅಂತ್ಯಕ್ರಿಯೆ ನಡೆಸಲಾಯಿತು.

ಕರಡಿ ಸಾವಿಗೆ ನಿಖರ ಕಾರಣ ಮರಣೋತ್ತರ ಪರೀಕ್ಷೆ ವರದಿ ಬಂದ ಮೇಲೆ ತಿಳಿಯಲಿದೆ.

ನೌಕರರು ಖಾದಿ ಧರಿಸುವುದು ಕಡ್ಡಾಯ

ಚಿಕ್ಕಬಳ್ಳಾಪುರ: ರಾಜ್ಯ ಸರಕಾರವು ತನ್ನ ನೌಕರರಿಗೆ ತಿಂಗಳಲ್ಲಿ ಒಂದು ದಿನ ಖಾದಿ ಉಡುಪು ಧರಿಸುವುದನ್ನು ಕಡ್ಡಾಯಗೊಳಿಸಿದ್ದು ಪ್ರತಿ ತಿಂಗಳ ಮೊದಲ ಶನಿವಾರ ಮತ್ತು ರಾಷ್ಟ್ರೀಯ ಹಬ್ಬಗಳಂದು ಖಾದಿ ಬಟ್ಟೆಗಳನ್ನು ಧರಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ತಿಳಿಸಿದರು.

ನಗರ ಹೊರವಲಯ ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಿದ್ದ ತಾತ್ಕಾಲಿಕ ಖಾದಿ ಪ್ರದರ್ಶನದ ಮಳಿಗೆಯನ್ನು ಜಿಲ್ಲಾಧಿಕಾರಿ ಜಿ.ಪ್ರಭು ಅವರು ಉದ್ಘಾಟಿಸಿ ಮಾತನಾಡಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ನಿರ್ದೇಶನದಂತೆ ಖಾದಿ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿ ಖಾದಿ ಬಟ್ಟೆಗಳನ್ನು ಧರಿಸಲು ಪ್ರೇರಣೆ ನೀಡುವ ನಿಟ್ಟಿನಲ್ಲಿ ಜಿಲ್ಲಾಡಳಿತ ಭವನದಲ್ಲಿ ತಾತ್ಕಾಲಿಕ ಖಾದಿ ಮಳಿಗೆಯನ್ನು ಉದ್ಘಾಟಿಸಲಾಗಿದೆ ಎಂದರು.

ಕರ್ನಾಟಕ ಸರ್ಕಾರವು ತನ್ನ ನೌಕರರಿಗೆ ತಿಂಗಳಲ್ಲಿ ಒಂದು ದಿನ ಖಾದಿ ಉಡುಪು ಧರಿಸುವುದನ್ನು ಕಡ್ಡಾಯಗೊಳಿಸಿದೆ. ಪ್ರತಿ ತಿಂಗಳ ಮೊದಲ ಶನಿವಾರ ಮತ್ತು ರಾಷ್ಟ್ರೀಯ ಹಬ್ಬಗಳಂದು ಖಾದಿ ಬಟ್ಟೆಗಳನ್ನು ಧರಿಸಬೇಕು. ಇದು ಸ್ವದೇಶಿ ಉತ್ಪನ್ನಗಳ ಬಗ್ಗೆ ಗೌರವ, ರಾಷ್ಟ್ರೀಯ ಭಾವನೆ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಉತ್ತೇಜಿಸುವ ಗುರಿ ಹೊಂದಿದೆ. ಖಾದಿ ನೇಕಾರರಿಗೆ ಇದು ಜೀವನೋಪಾಯ ಒದಗಿಸುತ್ತದೆ ಈ ಹಿನ್ನೆಲೆಯಲ್ಲಿ ಮಾರ್ಚ್ ಮೊದಲನೇ ಶನಿವಾರ ಚಿಕ್ಕಬಳ್ಳಾಪುರ ನಗರದ ಗಾಂಧಿ ಭವನದಲ್ಲಿ ಜಿಲ್ಲಾಡಳಿತದಿಂದ ಖಾದಿ ಉತ್ಸವ ಆಚರಣೆ ಮಾಡಲಾಗುತ್ತಿದ್ದು, ಅಂದು ಜಿಲ್ಲಾಡಳಿತದ ಅಧಿಕಾರಿಗಳು, ಸಿಬ್ಬಂದಿ ಖಾದಿ ಉಡುಗೆಗಳನ್ನು ಧರಿಸಿ ಉತ್ಸವದಲ್ಲಿ ಭಾಗವಹಿಸಲು ಸೂಚನೆ ನೀಡಿದರು ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ ವೈ ನವೀನ್ ಭಟ್, ಅಪರ ಜಿಲ್ಲಾಧಿಕಾರಿ ಡಾ. ಭಾಸ್ಕರ್ ,ಚಿಂತಾಮಣಿಯ ಖಿಒಖ ಸಿಲ್ಕ ಇಂಡಸ್ಟ್ರೀಸ್ ನ ಕಾರ್ಯದರ್ಶಿ ಶ್ರೀನಿವಾಸ್, ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಅಧಿಕಾರಿ ಕೆ ನರೇಶ್, ಜಿಲ್ಲಾ ವಾರ್ತಾಧಿಕಾರಿ ಎಂ ಜುಂಜಣ್ಣ, ವಾರ್ತಾ ಸಹಾಯಕ ಮಂಜುನಾಥ್ ಇದ್ದರು.

ನಗರ ಹೊರವಲಯ ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಿದ್ದ ತಾತ್ಕಾಲಿಕ ಖಾದಿ ಪ್ರದರ್ಶನದ ಮಳಿಗೆಯನ್ನು ಜಿಲ್ಲಾಧಿಕಾರಿ ಜಿ.ಪ್ರಭು ಅವರು ಉದ್ಘಾಟಿಸಿದರು.

ಒಗ್ಗಟ್ಟಿನ ಶಕ್ತಿ ತೋರಿಸೋಣ: ಅಂಜಿನಪ್ಪ

ಶಿಡ್ಲಘಟ್ಟ: ಚಿಕ್ಕಬಳ್ಳಾಪುರದಲ್ಲಿ 23ರಂದು ನಡೆಯಲಿರುವ ಪ್ರತಿಭಟನೆಗೆ ಶಿಡ್ಲಘಟ್ಟ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಭಾಗವಹಿಸಬೇಕು ಎಂದು ಕಾಂಗ್ರೆಸ್ ಮುಖಂಡ ಪುಟು ಅಂಜಿನಪ್ಪ ಕರೆ ನೀಡಿದ್ದಾರೆ.

ನಗರದ ವಾಯುಪುತ್ರ ಹೋಟೆಲ್ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನಸಾಮಾನ್ಯರ ಸಮಸ್ಯೆಗಳು ದಿನೇ ದಿನೇ ಹೆಚ್ಚುತ್ತಿದ್ದು, ಅವುಗಳಿಗೆ ಶಾಶ್ವತ ಪರಿಹಾರ ಒದಗಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು. ರೈತರು, ಕಾರ್ಮಿಕರು, ಯುವಕರು ಹಾಗೂ ಮಹಿಳೆಯರು ಎದುರಿಸುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಸಂಕಷ್ಟಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.ಈ ಹೋರಾಟದಲ್ಲಿ ಕೇಂದ್ರದ ಹಿರಿಯ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವು ರಾಷ್ಟ್ರೀಯ ನಾಯಕರು ಭಾಗವಹಿ ಸಲಿದ್ದಾರೆ ಎಂದು ತಿಳಿಸಿದರು. ರಾಜ್ಯದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹಾಗೂ ಸಚಿವ ಸಂಪುಟದ ಸದಸ್ಯರು, ಪಕ್ಷದ ಪ್ರಮುಖರು ಹಾಜರಾಗಲಿದ್ದಾರೆ ಎಂದರು. ಪಕ್ಷದ ತತ್ವಹುಸಿದ್ಧಾಂತಗಳ ರಕ್ಷಣೆ ಮತ್ತು ಜನಪರ ಹೋರಾಟಗಳಿಗೆ ಶಕ್ತಿ ತುಂಬುವುದು ಪ್ರತಿಯೊಬ್ಬ ಕಾರ್ಯಕರ್ತನ ಜವಾಬ್ದಾರಿ ಎಂದು ಹೇಳಿದರು. ಪ್ರತಿಭಟನೆ ಶಿಸ್ತಿನೊಂದಿಗೆ ಹಾಗೂ ಸಂಘಟಿತ ರೀತಿಯಲ್ಲಿ ನಡೆಯಲಿದ್ದು, ಶಿಡ್ಲಘಟ್ಟದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ವನ್ನು ಯಶಸ್ವಿಗೊಳಿಸಬೇಕೆಂದು ಪುಟು ಅಂಜಿನಪ್ಪ ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಮುಖಂಡ ಪುಟು ಅಂಜಿನಪ್ಪ ಅವರು ಮಾತನಾಡಿದರು.

ಸಮಾಚಾರ ಸಣ್ಣದಲ್ಲ

ಭಾರತಕ್ಕೆ 2-1 ಸರಣಿ ಗೆಲುವು

ಅಡಿಲೇಡ್: ಶನಿವಾರ ಅಡಿಲೇಡ್ ಓವಲ್‌ನಲ್ಲಿ ನಡೆದ ಮೂರನೇ ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾವನ್ನು 17 ರನ್‌ಗಳಿಂದ ಸೋಲಿಸುವ ಮೂಲಕ ಭಾರತೀಯ ಮಹಿಳಾ ಕ್ರಿಕೆಟ್ ತಂಡವು 2-1 ಸರಣಿ ಜಯ ಸಾಧಿಸಿತು. ಇದು ಆಸೀಸ್ ವಿರುದ್ಧ ಭಾರತದ ಎರಡನೇ ಸರಣಿ ಗೆಲುವಾಗಿದೆ. ಕೊನೆಯ ಕೊನೆಯ ಬಾರಿಗೆ 2016ರಲ್ಲಿ ಆಸ್ಟ್ರೇಲಿಯಾವನ್ನು ಭಾರತ ಸೋಲಿಸಿತ್ತು. ಆಗ ಮಿಥಾಲಿರಾಜ್ ನೇತೃತ್ವದ ತಂಡ 2-1 ಅಂತರದಿಂದ ಜಯ ಸಾಧಿಸಿತ್ತು, ಇದೀಗ 10 ವರ್ಷದ ಬಳಿಕ ಮತ್ತೊಂದು ಸರಣಿ ಗೆದ್ದ ಸಾಧನೆ ಮಾಡಿದೆ. ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆಯ್ದುಕೊಂಡಿತು. ಆರಂಭಿಕ ಆಟಗಾರ್ತಿ ಸ್ಮೃತಿ ಮಂಧಾನಾ ಮತ್ತು ಜೆಮಿಮಾ ರೋಡಿಗಸ್ ಅರ್ಧಶತಕ ಬಾರಿಸುವ ಮೂಲಕ ತಂಡ 6 ವಿಕೆಟ್‌ಗೆ 176 ರನ್ ಪೇರಿಸಿತು. ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ 9 ವಿಕೆಟ್‌ಗೆ 159 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲೊಪ್ಪಿಕೊಂಡಿತು. ಸ್ಪಿನ್ನರ್‌ಗಳಾದ ಶ್ರೇಯಾಂಕಾ ಪಾಟೀಲ್(22 ರನ್‌ಗೆ 3 ವಿಕೆಟ್) ಮತ್ತು ಶ್ರೀಚರಣಿ (32 ರನ್‌ಗೆ 3 ವಿಕೆಟ್) ಪಡೆದು ಆಸೀಸ್ ಕುಸಿತಕ್ಕೆ ಕಾರಣರಾದರು.

ಸೂಫಿ ಜತೆ ಧವನ್ ಶೀಘ್ರವೇ ಮದುವೆ?

ದೆಹಲಿ: ಟೀಮ್ ಇಂಡಿಯಾ ಮಾಜಿ ಆಟಗಾರ ಶಿಖರ್ ಧವನ್ ಮನೆಯಲ್ಲಿ ಮದುವೆ ಸಂಭ್ರಮ ಜೋರಾಗಿದೆ. ಎರಡನೇ ಬಾರಿ ದಾಂಪತ್ಯ ಜೀವನಕ್ಕೆ ಕಾಲಿಡಲು ಅವರು ಸಜ್ಜಾಗಿದ್ದಾರೆ. ಈ ಮೂಲಕ

ತಮ್ಮ ದಾಂಪತ್ಯ ಜೀವನದಲ್ಲೂ ಎರಡನೇ ಇನ್ನಿಂಗ್ಸ್ ಆರಂಭಿಸುತ್ತಿದ್ದಾರೆ. ಐರ್ಲೆಂಡ್ ಮೂಲದ ಕ್ರಿಕೆಟ್ ಆಟಗಾರ್ತಿ ಸೂಫಿ ಶೈನ್ ಜತೆಗೆ ಮಾಜಿ ಕ್ರಿಕೆಟಿಗ ವಿವಾಹವಾಗಲಿದ್ದಾರೆ. ಶುಕ್ರವಾರ ಧವನ್ ತಮ್ಮ ಸಂಗೀತ ಶಾಸ್ತ್ರದ ಫೋಟೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. ಅವರಿಬ್ಬರ ಮದುವೆ ಸಮಾರಂಭವು ದೆಹಲಿಯಲ್ಲಿ ನಡೆಯುವ ಸಾಧ್ಯತೆಯಿದೆ. ಈ ಮದುವೆಗೆ ಕ್ರಿಕೆಟ್ ತಾರೆಯರು, ಬಾಲಿವುಡ್ ನಟನಟಿಯರು ಆಗಮಿಸುವ ನಿರೀಕ್ಷೆಯಿದೆ. ಇತ್ತೀಚೆಗೆ ಶಿಖರ್ ಧವನ್ ಹಾಗೂ ಸೂಫಿ ಶೈನ್ ನಿಶ್ಚಿತಾರ್ಥ ಮಾಡಿಕೊಂಡಿದ್ದರು. ಆ ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಶಿಖರ್ ಧವನ್ ಈ ಹಿಂದೆ ಆಸ್ಟ್ರೇಲಿಯಾ ಮೂಲದ ಆಯೇಷಾ ಮುಖರ್ಜಿ ಎಂಬವರನ್ನು ವಿವಾಹವಾಗಿದ್ದರು. ಆದರೆ 2023ರಲ್ಲಿ ದಂಪತಿ ಕಾನೂನು ಮುಖಾಂತರ ವಿಚ್ಛೇದನ ಪಡೆದು ಪರಸ್ಪರ ಬೇರೆ ಬೇರೆ ವಾಸಿಸುತ್ತಿದ್ದಾರೆ.

ಗೆಲುವಿನ ಓಟದ ನಿರೀಕ್ಷೆಯಲ್ಲಿ ಟೀಮ್ ಇಂಡಿಯಾ । ಎರಡೂ ತಂಡಗಳಲ್ಲೂ ಬದಲಾವಣೆ ಸಾಧ್ಯತೆ

ಭಾರತ V/S ದಕ್ಷಿಣ ಆಫ್ರಿಕಾ ಇಂದು ಸೂಪರ್ ಹಣಾಹಣಿ

ಅಹಮದಾಬಾದ್: ಭಾರತ ಮತ್ತು ದಕ್ಷಿಣ ಆಫ್ರಿಕಾ ಇಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ನ ಸೂಪರ್-8 ಪಂದ್ಯಾವಳಿಯಲ್ಲಿ ಪರಸ್ಪರ ಮುಖಾಮುಖಿಯಾಗಲಿವೆ.

ಸೆಮಿಫೈನಲ್‌ನಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಗುರಿಯನ್ನು ಹೊಂದಿರುವ ಎರಡೂ ತಂಡಗಳಿಗೆ ಇದು ಮೊದಲ ಪಂದ್ಯವಾಗಿದೆ. ತಮ್ಮ ತಮ್ಮ ಗುಂಪುಗಳಲ್ಲಿ ಅಜೇಯ ನಾಲ್ಕು ಗೆಲುವಿನೊಂದಿಗೆ ಎರಡೂ ತಂಡಗಳು ಅಗ್ರಸ್ಥಾನ ಪಡೆದಿತ್ತು, ಹೀಗಾಗಿ ಭಾನುವಾರದ ಮುಖಾಮುಖಿ ಭಾರೀ ಪೈಪೋಟಿಯಿಂದ ಕೂಡಿರುವ ನಿರೀಕ್ಷೆಯಿದೆ.

ಗುಂಪು ಹಂತದಲ್ಲಿ ಟೀಮ್ ಇಂಡಿಯಾ ಪಾಕಿಸ್ತಾನ, ಅಮೆರಿಕ, ನೆದರ್‌ಲೆಂಡ್ ಮತ್ತು ನಮೀಬಿಯಾ ಜತೆಗೆ 'ಎ' ಗುಂಪಿನಲ್ಲಿ ಆಡಿ, ಎಲ್ಲಾ ನಾಲ್ಕು ತಂಡಗಳ ವಿರುದ್ಧವೂ ಗೆದ್ದಿತ್ತು. ನಾಲ್ಕು ಸಂದರ್ಭಗಳಲ್ಲಿಯೂ ಭಾರತ ತಂಡವು ಮೊದಲು ಬ್ಯಾಟಿಂಗ್ ಮಾಡಿ ಉತ್ತಮ ಮೊತ್ತವನ್ನು ಗಳಿಸಿತ್ತು. ನಮೀಬಿಯಾ ವಿರುದ್ಧ 93 ರನ್‌ಗಳಿಂದ ಗೆದ್ದರೆ, ಪಾಕಿಸ್ತಾನವನ್ನು 61 ರನ್‌ಗಳಿಂದ ಸೋಲಿಸಿತ್ತು.

ದಕ್ಷಿಣ ಆಫ್ರಿಕಾ ತಂಡವು ಕೆನಡಾ ವಿರುದ್ಧ 57 ರನ್‌ಗಳ ಜಯದೊಂದಿಗೆ ಟೂರ್ನಿಯನ್ನು ಆರಂಭಿಸಿತ್ತು, ನಂತರ ಅಫಘಾನಿಸ್ತಾನ ವಿರುದ್ಧದ ಡಬಲ್ ಸೂಪರ್ ಓವರ್ ಆಡಿ ಗೆಲುವು ಸಾಧಿಸಿತ್ತು. ಮೂರನೇ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಏಳು ವಿಕೆಟ್‌ಗಳ ಜಯ, ಯುಎಇ ವಿರುದ್ಧ ಆರು ವಿಕೆಟ್ ಅಂತರದ ಮೇಲುಗೈ ಸಾಧಿಸಿತ್ತು.

ಒಟ್ಟು ಮುಖಾಮುಖಿ ವಿವರ: ಟಿ20 ಮಾದರಿಯ ಕ್ರಿಕೆಟ್‌ನಲ್ಲಿ ಉಭಯ ತಂಡಗಳು ಒಟ್ಟು 35 ಬಾರಿ ಮುಖಾಮುಖಿಯಾಗಿವೆ. ಈ ಪೈಕಿ ಭಾರತ 21 ಪಂದ್ಯಗಳಲ್ಲಿ ಜಯಗಳಿಸಿದರೆ, ದಕ್ಷಿಣ ಆಫ್ರಿಕಾ 13 ಬಾರಿ ಜಯಗಳಿಸಿದೆ. ಒಂದು ಪಂದ್ಯ ಫಲಿತಾಂಶವಿಲ್ಲದೆ ಕೊನೆಗೊಂಡಿದೆ.

ಭಾರತ ತಂಡದಲ್ಲಿ ಬದಲಾವಣೆ: ಈ ಹಿಂದಿನ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಅನುಪಸ್ಥಿತಿಯಲ್ಲಿ ಅವಕಾಶ ಸಿಕ್ಕರೂ, ಸಂಜು ಸ್ಯಾಮ್ಸನ್ ತಮ್ಮ ಬ್ಯಾಟಿಂಗ್ ಅನ್ನು ದೊಡ್ಡ ಸ್ಕೋರ್ ಆಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ. ಈಗಿನ ತಂಡದ ಕಾಂಬಿನೇಷನ್ ಗಮನಿಸಿದರೆ, ಸಂಜುಗೆ ಸೂಪರ್-8ರಲ್ಲಿ ಅವಕಾಶ ಸಿಗುವ ಸಾಧ್ಯತೆಗಳು ಕಡಿಮೆ ಎಂದು ತೋರುತ್ತದೆ. ಅಭಿಷೇಕ್ ಶರ್ಮಾ ಈಗಾಗಲೇ ವಿಶ್ವಕಪ್‌ನಲ್ಲಿ ಮೂರು ಡಕೌಟ್ ಸಂಪಾದನೆ ಮಾಡಿದ್ದರೂ, ದ. ಆಫ್ರಿಕಾ ವಿರುದ್ಧ ಮತ್ತೊಂದು ಅವಕಾಶ ಸಿಗಬಹುದು.

ಭಾರತ ಸಂಭಾವ್ಯ ತಂಡ

ಸೂರ್ಯಕುಮಾರ್ ಯಾದವ್ (ನಾಯಕ), ಅಕ್ಷರ್ ಪಟೇಲ್, ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಜಸ್ಪ್ರೀತ್ ಬುಮ್ರಾ, ವರುಣ್ ಚಕ್ರವರ್ತಿ, ಹರ್ಷಿತ್ ರಾಣಾ, ವಾಷಿಂಗ್ಟನ್ ಸುಂದರ್, ಕುಲ್ದೀಪ್ ಯಾದವ್, ಇಶಾನ್ ಕಿಶನ್ (ಕೀಪರ್), ರಿಂಕು ಸಿಂಗ್.

ದಕ್ಷಿಣ ಆಫ್ರಿಕಾ ತಂಡ

ಏಡೆನ್ ಮಾರ್ಕ್ರಾಮ್ (ನಾಯಕ), ಕಾರ್ಬಿನ್ ಬಾಷ್, ಡೆವಾಲ್ಡ್ ಬ್ರೆವಿಸ್, ಕ್ವಿಂಟನ್ ಡಿ ಕಾಕ್, ಟೋನಿ ಡಿ ಜಾರ್ಗಿ, ಡೊನೊವನ್ ಫೆರೇರಾ, ಮಾರ್ಕೊ ಯಾನ್ಸನ್, ಜಾರ್ಜ್ ಲಿಂಡೆ, ಕೇಶವ್ ಮಹಾರಾಜ್, ಕ್ವೆನಾ ಎಂಫಾಕಾ, ಡೇವಿಡ್ ಮಿಲ್ಲರ್, ಲುಂಗಿ ಎನ್‌ಗಿಡಿ, ಕಗಿಸೊ ರಬಾಡ.

ಭಾರತ-ದ.ಆಫ್ರಿಕಾ ಟಿ20 ವಿಶ್ವಕಪ್ ಮುಖಾಮುಖಿ
ಆಡಿದ ಪಂದ್ಯಗಳು-7
ಭಾರತ-5 ಗೆಲುವು
ದ.ಆಫ್ರಿಕಾ-2 ಗೆಲುವು

ಸ್ಪಿನ್ ಪಿಚ್ ಕಾರಣದಿಂದ ಪಂದ್ಯದಲ್ಲಿ ಕುಲ್ದೀಪ್ ಯಾದವ್‌ಗೆ ಅವಕಾಶ ಸಿಗುವ ಸಾಧ್ಯತೆ ಇದೆ. ಟೂರ್ನಿಯ ಆರಂಭದಲ್ಲಿ ಬುಮ್ರಾ ಗಾಯಗೊಂಡಿದ್ದ ಕಾರಣ ಮೊಹಮ್ಮದ್ ಸಿರಾಜ್‌ಗೆ ತಂಡದಲ್ಲಿ ಸ್ಥಾನ ಸಿಕ್ಕಿತ್ತು. ಆದರೆ ಆ ಬಳಿಕ ಬುಮ್ರಾ ಕಮ್ ಬ್ಯಾಕ್ ಮಾಡಿದ ಕಾರಣ ಇದೀಗ ಸೂಪರ್ 8ರಲ್ಲಿ ಸಿರಾಜ್‌ಗೆ ಅವಕಾಶ ಸಿಗುವ ಸಾಧ್ಯತೆ ಕಡಿಮೆ.

ದ.ಆಫ್ರಿಕಾಕ್ಕೂ ಪಂದ್ಯಗೆಲ್ಲುವಾಸೆ: ಏಡೆನ್ ಮಾರ್ಕ್ರಾಮ್ ನಾಯಕತ್ವದ ದ.ಆಫ್ರಿಕಾ ಈ ಸಲ ಗ್ರೂಪ್ ಹಂತದಲ್ಲಿ ಉತ್ತಮ ಪ್ರದರ್ಶನ ತೋರಿದೆ. ತಂಡದ ಬ್ಯಾಟ್ಸ್‌ಮನ್‌ಗಳಾದ ಕ್ವಿಂಟನ್ ಡಿ ಕಾಕ್, ಜೇಸನ್ ಸ್ಮಿತ್ ಮುಂತಾದವರು ಉತ್ತಮ ಫಾರ್ಮ್‌ನಲ್ಲಿದ್ದಾರೆ. ಅದೇ ರೀತಿ ರಿಯಾನ ರಿಕೆಲ್ಟನ್, ಟ್ರಿಸ್ಟನ್ ಸ್ಟಬ್ಸ್ ಮುಂತಾದವರೂ ಈಗಾಗಲೇ ಈ ಟಿ20 ವಿಶ್ವಕಪ್‌ನಲ್ಲಿ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ.

ಎರಡೂ ತಂಡಗಳಿಗೂ ತಲಾ ಒಂದು ಅಂಕ ಹಂಚಿಕೆ

ನ್ಯೂಜಿಲೆಂಡ್-ಪಾಕಿಸ್ತಾನ ಪಂದ್ಯ ಮಳೆಯಿಂದ ರದ್ದು

ಕೊಲಂಬೊ: ಶನಿವಾರ ಇಲ್ಲಿ ಸುರಿದ ಭಾರೀ ಮಳೆಯಿಂದಾಗಿ ಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ -ನ್ಯೂಜಿಲೆಂಡ್-ಪಾಕಿಸ್ತಾನ ಪಂದ್ಯ ರದ್ದಾಗಿದೆ. ಎರಡೂ ತಂಡಗಳಿಗೂ ತಲಾ ಒಂದು ಅಂಕ ನೀಡಲಾಗಿದೆ.

ಪಂದ್ಯದ ಟಾಸ್ ಅನ್ನು ಪಾಕಿಸ್ತಾನ ಗೆದ್ದಿತ್ತು. ಆದರೆ ಕ್ರೀಡಾಂಗಣದಲ್ಲೂ ಮಳೆನೀರು ತುಂಬಿಕೊಂಡ ಕಾರಣಕ್ಕಾಗಿ ಪಂದ್ಯವನ್ನು ಆರಂಭಿಸಲಾಗಲಿಲ್ಲ. ಹಲವಾರು ಬಾರಿ ಅಂಪೈರ್‌ಗಳು ಕ್ರೀಡಾಂಗಣವನ್ನು ಪರೀಕ್ಷಿಸಿ, ಪಂದ್ಯವನ್ನು ರದ್ದುಪಡಿಸುವ ನಿರ್ಧಾರಕ್ಕೆ ಬಂದರು.

ಶನಿವಾರ ಪೂರ್ತಿ ಕೊಲಂಬೊದ ಆರ್.ಪ್ರೇಮದಾಸ ಸ್ಟೇಡಿಯಂ ಸುತ್ತಮುತ್ತ ಮೋಡ ಕವಿದ ವಾತಾವರಣವಿತ್ತು. ಕ್ರೀಡಾಂಗಣದ ಸುತ್ತಮುತ್ತ ಬಿರುಗಾಳಿ ಬೀಸಿದ ಕಾರಣ ಆಟಗಾರರಿಗೆ ಮೈದಾನಕ್ಕಿಳಿಯಲು ಸಾಧ್ಯವಾಗಲಿಲ್ಲ.

ಐಸಿಸಿ ನಿಯಮಗಳ ಪ್ರಕಾರ ಟಿ20 ಪಂದ್ಯದಲ್ಲಿ ಫಲಿತಾಂಶ ಘೋಷಿಸಲು ಎರಡೂ ತಂಡಗಳು ಕನಿಷ್ಠ 5 ಓವರ್‌ಗಳ ಬ್ಯಾಟಿಂಗ್ ಮಾಡಬೇಕಿತ್ತು. ಆದರೆ ಕೊಲಂಬೊದ ಪಾಕ್-ಕಿವೀಸ್ ಹಣಾಹಣಿಯಲ್ಲಿ ಶನಿವಾರ ಒಂದೇ ಒಂದು ಬಾಲ್ ಆಡಲು ಸಾಧ್ಯವಾಗದ ಕಾರಣ ಪಂದ್ಯವನ್ನು ರದ್ದುಗೊಳಿಸಲಾಯಿತು. ಪಾಕಿಸ್ತಾನ-ನ್ಯೂಜಿಲೆಂಡ್ ತಂಡಗಳಿಗೆ ತಲಾ ಒಂದು ಅಂಕ ನೀಡಲಾಗಿದೆ.

ಲೀಗ್ ಹಂತದಂತೆಯೇ, ಸೂಪರ್ 8 ಪಂದ್ಯಗಳಿಗೆ ಯಾವುದೇ ಮೀಸಲು ದಿನವನ್ನು ನಿಗದಿಪಡಿಸಲಾಗಿಲ್ಲ. ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳಿಗೆ ಮಾತ್ರ ಮೀಸಲು ದಿನದ ಸೌಲಭ್ಯವಿರುತ್ತದೆ. ಸೂಪರ್-8 ಹಂತದಲ್ಲಿ ಯಾವುದೇ ಪಂದ್ಯ ರದ್ದಾಗಿ ಅಂಕಗಳು ಹಂಚಿಹೋದರೆ, ಅದು ಎರಡೂ ತಂಡಗಳ ಸೆಮಿಫೈನಲ್ ಅವಕಾಶಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಪಾಕಿಸ್ತಾನ ತಂಡವು ತನ್ನ ಗುಂಪು ಹಂತದಲ್ಲಿ ಭಾರತದ ವಿರುದ್ಧ ಸೋತರೂ, ಉಳಿದ ಪಂದ್ಯಗಳನ್ನು ಗೆಲ್ಲುವ ಮೂಲಕ ಸೂಪರ್ 8ಕ್ಕೆ ಅರ್ಹತೆ ಪಡೆದುಕೊಂಡಿತ್ತು. ಸೂಪರ್-8ರಲ್ಲಿ ಪಾಕಿಸ್ತಾನದ ಮುಂದಿನ ಪಂದ್ಯಗಳು ಕ್ಯಾಂಡಿಯಲ್ಲಿ ಇಂಗ್ಲೆಂಡ್ ವಿರುದ್ಧ (ಫೆ. 24) ಮತ್ತು ಕೊಲಂಬೊದಲ್ಲಿ ಶ್ರೀಲಂಕಾ ವಿರುದ್ಧ (ಫೆ.28) ನಡೆಯಲಿವೆ. ನ್ಯೂಜಿಲೆಂಡ್ ಕೂಡ ಉತ್ತಮ ಫಾರ್ಮ್‌ನಲ್ಲಿದ್ದು, ಅದು ಮುಂದಿನ ಸೂಪರ್-8 ಪಂದ್ಯದಲ್ಲಿ ಫೆ.25ರಂದು ಅತಿಥೇಯ ಶ್ರೀಲಂಕಾ ವಿರುದ್ಧ ಮತ್ತು ಫೆ.27ರಂದು ಇಂಗ್ಲೆಂಡ್ ವಿರುದ್ಧ ಸೆಣಸಾಡಲಿದೆ.



ಕೊಲಂಬೊ ಕ್ರೀಡಾಂಗಣದಲ್ಲಿ ಕಿವೀಸ್-ಪಾಕ್ ಪಂದ್ಯಕ್ಕೆ ಅಡ್ಡಿಯಾದ ಮಳೆ

ಸೂಪರ್-8 ಮತ್ತೊಂದು ರೋಚಕ ಕದನ: ಲಂಕಾಗೆ ಇಂದು ಇಂಗ್ಲೆಂಡ್ ಸವಾಲು

ಪಲ್ಲೆಕೆಲೆ: ಇಲ್ಲಿ ಇಂದು ನಡೆಯಲಿರುವ ಟಿ20 ವಿಶ್ವಕಪ್‌ನಲ್ಲಿ ಅತಿಥೇಯ ಶ್ರೀಲಂಕಾ ತಂಡವು ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಎರಡೂ ತಂಡಗಳೂ ಗ್ರೂಪ್ ಪಂದ್ಯದಲ್ಲಿ ತಲಾ ಮೂರು ಪಂದ್ಯಗಳನ್ನು ಗೆದ್ದು ಮತ್ತು ಒಂದು ಪಂದ್ಯಗಳಲ್ಲಿ ಸೋತು ಆರು ಅಂಕಗಳನ್ನು ಗಳಿಸಿದ್ದವು.

ಫೆ.8ರಂದು ನಡೆದ ಪಂದ್ಯದಲ್ಲಿ ಶ್ರೀಲಂಕಾ ತಂಡವು ಐರ್ಲೆಂಡ್ ವಿರುದ್ಧ 20 ರನ್‌ಗಳಿಂದ ಗೆಲುವನ್ನು ಕಂಡಿತ್ತು. ತನ್ನ 2ನೇ ಪಂದ್ಯದಲ್ಲಿ ಒಮಾನ್ ವಿರುದ್ಧ ಲಂಕಾ 105 ರನ್‌ಗಳ ಭರ್ಜರಿ ಅಂತರದ ಗೆಲುವು ಸಾಧಿಸಿತ್ತು. ಗ್ರೂಪ್ ಹಂತದ 3ನೇ ಪಂದ್ಯದಲ್ಲಿ ಆಸೀಸ್ ತಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿದ ಲಂಕಾ ಮೇಲುಗೈ ಪಡೆದಿತ್ತು. ಆದರೆ ಅದರ ಗ್ರೂಪ್ ಹಂತದ ಕೊನೆಯ ಪಂದ್ಯದಲ್ಲಿ ಜಿಂಬಾಬ್ವೆ ತಂಡವು ಅತಿಥೇಯ ಲಂಕಾವನ್ನು 6 ವಿಕೆಟ್‌ಗಳಿಂದ ಮಣಿಸಿ ಗೆಲುವಿನ ನಗೆ ಬೀರಿತ್ತು.

ಲಂಕಾ ತಂಡದಂತೆ ಇಂಗ್ಲೆಂಡ್ ಕೂಡಾ ಈ ಸಲದ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ನೇಪಾಳ ವಿರುದ್ಧ ಗೆದ್ದು ಟೂರ್ನಿಯಲ್ಲಿ ಶುಭಾರಂಭ ಮಾಡಿತ್ತು. ಆದರೆ ಎರಡನೇ ಪಂದ್ಯದಲ್ಲಿ ಅದು ವೆಸ್ಟ್ ಇಂಡೀಸ್ ವಿರುದ್ಧ ಮುಗ್ಗರಿಸಿತ್ತು. ಮತ್ತೆ 3ನೇ ಪಂದ್ಯದಲ್ಲಿ ಸ್ಕಾಟ್ಲೆಂಡ್ ವಿರುದ್ಧ 5 ವಿಕೆಟ್‌ಗಳ ಗೆಲುವನ್ನು ಕಂಡು, 4ನೇ ಪಂದ್ಯದಲ್ಲಿ ಇಟಲಿ ವಿರುದ್ಧ 24 ರನ್‌ಗಳಿಂದ ಜಯ ಸಾಧಿಸಿತ್ತು.

ದಾಸುನ್ ಶನಕ ನಾಯಕತ್ವದ ಲಂಕಾ ತಂಡ ಈ ಸಲದ ವಿಶ್ವಕಪ್‌ನಲ್ಲಿ ನಿರೀಕ್ಷೆಗೂ ಮೀರಿ ಉತ್ತಮ ಪ್ರದರ್ಶನ ನೀಡಿದೆ. ತಂಡದ ಆಟಗಾರರಾದ ಕುಸಲ್ ಮೆಂಡಿಸ್, ಪಾತುಂ ನಿಸ್ಸಂಕ ಮುಂತಾದವರು ಉತ್ತಮ ಫಾರ್ಮ್‌ನಲ್ಲಿದ್ದಾರೆ. ಹಾಗೆಯೇ ಬೌಲರ್‌ಗಳಾದ ದುನಿತ್ ವೆಲ್ಲಾಲಗೆ, ಮಹೀಶ್ ತೀಕ್ಷಣ ಉತ್ತಮ ಲಯ ಕಂಡುಕೊಂಡಿದ್ದಾರೆ. ಇಂದು ನಡೆಯಲಿರುವ ಲಂಕಾ-ಇಂಗ್ಲೆಂಡ್ ನಡುವಿನ ಪಂದ್ಯ ರೋಚಕತೆಯಿಂದ ಕೂಡಿರಬಹುದೆಂಬ ನಿರೀಕ್ಷೆ ಕ್ರಿಕೆಟ್‌ಪ್ರೇಮಿಗಳದ್ದಾಗಿದೆ.

ವಿಟಾಕೀಸ್

ಕವಳ ಪೋಸ್ಟರ್ ರಿಲೀಸ್

ಕನ್ನಡದಲ್ಲಿ ವಿಭಿನ್ನ ಶೀರ್ಷಿಕೆಯ ಸಿನಿಮಾಗಳು ತೆರೆಗೆ ಬರುತ್ತಿವೆ. ಅಂತೆಯೇ ಈಗ ಕವಳ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಟೈಟಲ್ ಪೋಸ್ಟರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಚಿತ್ರದ ಫಸ್ಟ್ ಲುಕ್ ಒಂದಷ್ಟು ಕುತೂಹಲವನ್ನೂ ಮೂಡಿಸಿದೆ. ನೀಲವರ್ಣದ ಕರದಲ್ಲಿ ತೊಟ್ಟಿರುವ ರುದ್ರಾಕ್ಷಿ, ಜತೆಗೆ ಕೈಯಲ್ಲಿ ಹಿಡಿದಿರುವ ಕತ್ತಿ ರಕ್ತ ಸಿಕ್ತವಾಗಿದೆ. ಇದನ್ನು ಗಮನಿಸಿದರೆ ಇದು ಮಾಸ್ ಜತೆಗೆ ಆ್ಯಕ್ಷನ್ ಬೆರೆತ ಸಿನಿಮಾವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಕವಳ ಎಂದರೆ ಭಿಕ್ಷೆ ಎಂಬ ಅರ್ಥವಿದೆ. ಇದು ಮಾಸ್ ಚಿತ್ರವಾಗಿದ್ದು ಸಿನಿಮಾಗೆ ಕವಳ ಎಂಬ ಟೈಟಲ್ ಇಡಲು ಕಾರಣ ಏನು ಎಂಬುದನ್ನು ಮುಹೂರ್ತದ ದಿನ ತಿಳಿಸುವುದಾಗಿ ನಿರ್ದೇಶಕ ಜೈ ಹೇಳುತ್ತಾರೆ. ಈ ಹಿಂದೆ ಆರ್.ಎಕ್ಸ್.ಸೂರಿ, ಭೈರಾದೇವಿ ಚಿತ್ರಗಳನ್ನು ನಿರ್ದೇಶಿಸಿದ್ದ ಶ್ರೀಜೈ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ರಾಧಾಕೃಷ್ಣ ಆರ್ಟ್ಸ್ ಹಾಗೂ ಡ್ರೀಮ್ ವರ್ಲ್ಡ್ ಸಿನಿಮಾಸ್ ಬ್ಯಾನರ್‌ನಲ್ಲಿ ಬಿ.ಲೋಕೇಶ್ ಹಾಗೂ ಅಡವಯ್ಯ ಪೂಜಾರ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಸಂದೀಪ್ ನಾಗರಾಜ್ ನಾಯಕನಾಗಿ ನಟಿಸುತ್ತಿದ್ದು, ಉಳಿದಂತೆ ಅಚ್ಯುತ್ ಕುಮಾರ್, ರಂಗಾಯಣ ರಘು, ನಾಜರ್, ಸಮುದ್ರ ಖನಿ, ಈಶ್ವರಿ ರಾವ್, ಕಿಶೋರ್, ಶ್ರವಣ್, ಗಿಲ್ಲಿ ನಟ, ಪ್ರಕಾಶ್ ತುಮ್ಮಿನಾಡ್ ಮುಂತಾದವರು ತಾರಾಗಣದಲ್ಲಿದ್ದಾರೆ. ಕರುಣಾಕರನ್ ಛಾಯಾಗ್ರಹಣ, ಕೆ.ಕೆ.ಸೆಂಥಿಲ್ ಪ್ರಸಾದ್ ಸಂಗೀತ ನಿರ್ದೇಶನ, ಅರ್ಜುನ್ ರಾಜ್, ವಿಕ್ರಮ್ ಮೋರ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಒಬ್ಬೊಂಟಿಯಾದೆ ಎಂದ ಕೃಷ್ಣ

ನಟ ಡಾರ್ಲಿಂಗ್ ಕೃಷ್ಣ ನಿರ್ದೇಶನದಲ್ಲಿ ಮೂಡಿಬಂದ ಲವ್ ಮಾಕ್ಟೇಲ್ ಸೂಪರ್ ಹಿಟ್ ಸಿನಿಮಾವಾಗಿತ್ತು. ಬಾಕ್ಸ್ ಆಫೀಸ್‌ನಲ್ಲಿಯೂ ಉತ್ತಮ ಗಳಿಕೆ ಕಂಡಿತ್ತು. ಬಳಿಕ ಲವ್ ಮಾಕ್ಟೇಲ್ 2 ಚಿತ್ರ ಕೂಡ ತೆರೆಗೆ ಬಂದು ಯಶಸ್ವಿ ಪ್ರದರ್ಶನ ಕಂಡಿತ್ತು. ಅದೇ ಖುಷಿಯಲ್ಲಿರುವ ಡಾರ್ಲಿಂಗ್ ಕೃಷ್ಣ ಈಗ ಲವ್ ಮಾಕ್ಟೇಲ್ 3 ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಜತೆಗೆ ಈ ಸಿನಿಮಾದಲ್ಲಿಯೂ ನಾಯಕನಾಗಿ ನಟಿಸಿದ್ದು, ಹೊಸ ಅವತಾರದಲ್ಲಿ ಪ್ರೇಕ್ಷಕರ ಮುಂದೆ ಬರಲಿದ್ದಾರೆ. ಇತ್ತೀಚೆಗಷ್ಟೇ ಈ ಚಿತ್ರದ ಹಾಡು ಬಿಡುಗಡೆಯಾಗಿತ್ತು. ತಂದೆ ಮಗಳ ಬಾಂಧವ್ಯವನ್ನು ಸಾರುವ ಗೀತೆ ಸಿನಿಪ್ರಿಯರ ಮನಗೆದ್ದಿತ್ತು. ಈಗ ಒಬ್ಬೊಂಟಿಯಾದೆ ನಾ.. ಎಂಬ ಲಿರಿಕಲ್ ವೀಡಿಯೊ ಹಾಡು ಬಿಡುಗಡೆಯಾಗಿದೆ. ಈ ಹಾಡು ಸಾಮಾಜಿಕ ಜಾಲತಾಣದಲ್ಲಿ ಸಖತ್ ಸದ್ದು ಮಾಡುತ್ತಿದೆ. ಮಾತು ಮೌನವಾಗಿದೆ.. ಶೋಕ ಭಾವ ಮೂಡಿದೆ.. ಎಂಬ ಸಾಲುಗಳೊಂದಿಗೆ ಶುರುವಾಗುವ ಈ ಗೀತೆಗೆ ರಾಘವೇಂದ್ರ ಕಾಮತ್ ಸಾಹಿತ್ಯ ಬರೆದಿದ್ದು, ನಕುಲ್ ಅಭಯಂಕರ್ ಸಂಗೀತ ಸಂಯೋಜಿಸಿದ್ದಾರೆ. ಜತೆಗೆ ಹಾಡಿಗೂ ದನಿಯಾಗಿದ್ದಾರೆ. ಒಬ್ಬೊಂಟಿಯಾದೆ ಗೀತೆ ಸಂಗೀತ ಪ್ರಿಯರ ಮನಗೆದ್ದಿದ್ದು, ಎವರ್‌ಗ್ರೀನ್ ಪ್ರೇಮಗೀತೆಗಳ ಸಾಲಿನಲ್ಲಿ ಸೇರಲಿದೆ. ಡಾರ್ಲಿಂಗ್ ಕೃಷ್ಣ, ಲವ್ ಮಾಕ್ಟೇಲ್ ಸರಣಿಯ ಮೊದಲ ಆವೃತ್ತಿಯಲ್ಲಿಯೇ ಹಾಡುಗಳಿಗೆ ವಿಶೇಷ ಒತ್ತು ನೀಡಿದ್ದು, ಅದು ಲವ್ ಮಾಕ್ಟೇಲ್ ಎರಡನೇ ಭಾಗದಲ್ಲಿಯೂ ಮುಂದುವರಿದಿತ್ತು. ಆ ಎರಡೂ ಸರಣಿಗಳ ಗೆಲುವಿನಲ್ಲಿ ಹಾಡುಗಳ ಪಾತ್ರವೂ ಪ್ರಮುಖವಾಗಿತ್ತು. ಇದೀಗ ಮೂರನೇ ಭಾಗದಲ್ಲಿಯೂ ಕೂಡಾ ಅದು ಮುಂದುವರಿದಿದೆ. ಅಂದಹಾಗೆ, ಈಗಾಗಲೇ ಹಾಡುಗಳ ಮೂಲಕ ಪ್ರೇಕ್ಷಕರಿಗೆ ಹತ್ತಿರಾಗಿರುವ ಲವ್ ಮಾಕ್ಟೇಲ್ 3 ಏಪ್ರಿಲ್ 10ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಕ್ರಿಸ್‌ಮಿ ಬ್ಯಾನರಿನಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಡಾರ್ಲಿಂಗ್ ಕೃಷ್ಣಗೆ ಜತೆಯಾಗಿ ಮಿಲನಾ ನಾಗರಾಜ್ ಬಣ್ಣಹಚಿದ್ದು, ಸಂವೃತಾ, ಅಮೃತಾ ಅಯ್ಯಂಗಾರ್, ರಚೆಲ್ ಡೇವಿಡ್, ಅಭಿಲಾಶ್ ದಳಪತಿ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ.

ಒಂದೇ ಚಿತ್ರದಲ್ಲಿ ಕಮಲ್-ರಜನಿ

ಭಾರತೀಯ ಚಿತ್ರರಂಗ ಒಂದು ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲು ಸಜ್ಜಾಗಿದೆ. ಚಿತ್ರರಂಗದ ಇಬ್ಬರು ದಿಗ್ಗಜರಾದ ರಜನಿಕಾಂತ್ ಮತ್ತು ಕಮಲ್ ಹಾಸನ್ ಬರೋಬ್ಬರಿ ನಾಲ್ಕುವರೆ ದಶಕಗಳ ಬಳಿಕ ಮತ್ತೆ ಒಂದೇ ಚಿತ್ರದಲ್ಲಿ ನಟಿಸಲಿದ್ದಾರೆ. ಇದನ್ನು ಕೇಳಿ ಸಿನಿಪ್ರಿಯರು ಹಿರಿಹಿರಿ ಹಿಗ್ಗಿದ್ದಾರೆ. ಈ ಇಬ್ಬರು ಮಹಾನ್ ನಟರು ಎಪ್ಪತ್ತರ ದಶಕದಲ್ಲಿ ಒಟ್ಟಿಗೆ ನಟಿಸಿದ್ದರು, ಇವರಿಬ್ಬರ ಸಿನಿಮಾ ನೋಡಲು ಅಭಿಮಾನಿಗಳು ಮುಗಿಬೀಳುತ್ತಿದ್ದರು. ಈಗ ನಾಲ್ಕೂವರೆ ದಶಕಗಳ ಬಳಿಕ ಇಬ್ಬರು ದಿಗ್ಗಜರು ಒಂದೇ ಸಿನಿಮಾದಲ್ಲಿ ಜತೆಯಾಗುತ್ತಿದ್ದು, ಭಾರತೀಯ ಚಲನಚಿತ್ರ ಇತಿಹಾಸದ ಅತ್ಯಂತ ಮಹತ್ವದ ಘಟನೆಗಳಲ್ಲಿ ಒಂದಾಗಿದೆ. ತಲೆಮಾರುಗಳ ಪ್ರೇಕ್ಷಕರನ್ನು ರಂಜಿಸಿದ ಮತ್ತು ಭಾರತೀಯ ಸಿನಿಮಾವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದ ಇಬ್ಬರು ದಿಗ್ಗಜರ ಪರಂಪರೆಯ ಸಂಗಮ ಇದಾಗಿದೆ. ಹಾಗಾಗಿ ಇದು ಕುತೂಹಲಕ್ಕೂ ಕಾರಣವಾಗಿದೆ. ರೆಡ್ ಜೈಂಟ್ ಮೂವೀಸ್ ಸಂಸ್ಥೆಯು ಈ ಐತಿಹಾಸಿಕ ಸಾಹಸಕ್ಕೆ ಕೈಹಾಕಿದ್ದು, ಈ ಇಬ್ಬರು ಸ್ಟಾರ್ ನಟರನ್ನು ಮತ್ತೆ ಒಂದೇ ಚಿತ್ರಕ್ಕಾಗಿ ಜತೆಯಾಗಿಸುವಲ್ಲಿ ಯಶಸ್ವಿಯಾಗಿದೆ. ಈ ಚಿತ್ರದ ಪ್ರೋಮೊ ಬಿಡುಗಡೆಯಾಗಿದ್ದು, ಕಮಲ್ ಹಾಸನ್ ಮತ್ತು ರಜನಿಕಾಂತ್ ರೆಟ್ರೋ ಲುಕ್‌ನಲ್ಲಿ ಮಿಂಚಿದ್ದಾರೆ. ಈ ಇಬ್ಬರು ನಟಿಸಲಿರುವ ಸಿನಿಮಾ ಅದ್ದೂರಿ ವೆಚ್ಚದ ಚಿತ್ರವಾಗಿದ್ದು, ದೊಡ್ಡ ತಾರಾಬಳಗವೇ ಚಿತ್ರದಲ್ಲಿರುವುದು ಖಚಿತವಾಗಿದೆ. ಜೈಲರ್ ನಂತಹ ಸೂಪರ್ ಹಿಟ್ ಸಿನಿಮಾವನ್ನು ನಿರ್ದೇಶನ ಮಾಡಿರುವ ಖ್ಯಾತ ನಿರ್ದೇಶಕ ನೆಲ್ಸನ್ ದಿಲೀಪ್‌ಕುಮಾರ್ ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಸಂಗೀತದಲ್ಲಿಯೇ ಮೋಡಿ ಮಾಡಿರುವ ಅನಿರುದ್ಧ್ ರವಿಚಂದರ್ ಈ ಸಿನಿಮಾಕ್ಕೆ ಸಂಗೀತ ಸಂಯೋಜಿಸಲಿದ್ದಾರೆ. ರಜನಿಕಾಂತ್ ಮತ್ತು ಕಮಲ್ ಹಾಸನ್ ಅವರನ್ನು ಒಂದೇ ಚಿತ್ರದಲ್ಲಿ ತೆರೆಗೆ ತರುತ್ತಿರುವುದು ಸಂತಸದ ವಿಚಾರ. ಇದು ನಮ್ಮೆಲ್ಲರ ಪಾಲಿಗೆ ಕನಸು ನನಸಾದ ಸಂತಸದ ಕ್ಷಣ. ನಲವತ್ತೇಳು ವರ್ಷಗಳ ಬಳಿಕ ದಿಗ್ಗಜರ ಸಂಗಮಕ್ಕೆ ವೇದಿಕೆ ಕಲ್ಪಿಸುತ್ತಿರುವುದು ಹೆಮ್ಮೆ ತಂದಿದೆ ಎಂದು ರೆಡ್ ಜೈಂಟ್ ಮೂವೀಸ್ ಸಂತಸ ಹಂಚಿಕೊಂಡಿದೆ.

ಸರಳ ವಿರಳ ಪ್ರೇಮಕಥೆ

ಕನ್ನಡ ಚಿತ್ರರಂಗದಲ್ಲಿ ಬಹುದಿನಗಳ ಬಳಿಕ ಕಾದಂಬರಿ ಆಧಾರಿತ ಚಿತ್ರ ತೆರೆಗೆ ಬಂದಿದೆ. ತ್ರಿವೇಣಿ ಅವರು ರಚಿಸಿರುವ ಈ ಕಾದಂಬರಿ ಸರಳ ಸುಬ್ಬರಾವ್ ಶೀರ್ಷಿಕೆಯಲ್ಲಿ ಬೆಳ್ಳಿತೆರೆಗೆ ಬಂದಿದ್ದು, ಪ್ರೇಕ್ಷಕರನ್ನು ಸೆಳೆಯುತ್ತಿದೆ. ಸರಳ ಸುಂದರವಾದ ಪ್ರೇಮಕಥೆ ಪ್ರೇಕ್ಷಕರನ್ನು ಎಪ್ಪತ್ತರ ದಶಕಕ್ಕೆ ಕೊಂಡೊಯ್ಯುತ್ತಿದೆ. ಅಂದಿನ ಕಾಲದಲ್ಲಿ ಸತಿ ಪತಿಗಳ ನಡುವಿನ ಬಾಂಧವ್ಯ ಹೇಗಿತ್ತು. ಸಂಸಾರ ಹೇಗೆ ಸಾಗುತ್ತಿತ್ತು ಎಂಬುದನ್ನು ಸಿನಿಪ್ರಿಯರ ಮುಂದಿಡಲಾಗಿದೆ.

ಚಿತ್ರ :ಸರಳ ಸುಬ್ಬರಾವ್
ನಿರ್ದೇಶನ : ಮಂಜು ಸ್ವರಾಜ್
ನಿರ್ಮಾಣ : ಲೋಹಿತ್ ನಂಜುಡಯ್ಯ
ತಾರಾಗಣ : ಅಜಯ್ ರಾವ್, ಮಿಶಾ, ವೀಣಾ ಸುಂದರ್, ರಂಗಾಯಣ ರಘು ಮುಂತಾದವರು.
ರೇಟಿಂಗ್ : ★★★

ಕಾಲೇಜಿನ ಪ್ರೊಫೆಸರ್ ಆಗಿದ್ದ ಸುಬ್ಬರಾವ್‌ಗೆ ಮದುವೆ ಮಾಡಲು ಮನೆಯವರು ವಧು ಹುಡುಕುತ್ತಿರುತ್ತಾರೆ. ಅದೇ ಸಮಯಕ್ಕೆ ಸರಳ, ಸುಬ್ಬರಾವ್‌ನ ಕಣ್ಣಿಗೆ ಬೀಳುತ್ತಾಳೆ. ಮೊದಲ ನೋಟದಲ್ಲಿಯೇ ಸುಬ್ಬುಗೆ, ಸರಳ ಮೇಲೆ ಪ್ರೇಮಾಂಕುರವಾಗುತ್ತದೆ. ಮನೆಯವರ ಒಪ್ಪಿಗೆಯ ಮೇರೆಗೆ ಇಬ್ಬರ ವಿವಾಹವೂ ನೆರವೇರುತ್ತದೆ. ಸರಳ ಹೆಸರಿಗೆ ತಕ್ಕಂತೆ ಸರಳತೆಯನ್ನು ಮೈಗೂಡಿಸಿಕೊಂಡಿರುತ್ತಾಳೆ. ಪತಿಯ ಕೈಹಿಡಿದು ಬಂದ ಮೇಲೆ ಸೇರಿದ ಮನೆಯನ್ನು, ಮನೆಯವರನ್ನು ತನ್ನ ಮನೆಯವರಂತೆ ನೋಡಿಕೊಳ್ಳುತ್ತಾಳೆ. ಸಂಸಾರದಲ್ಲಿ ಬರುವ ಏತರಿಳಿತಗಳನ್ನು ಸರಳ ಮತ್ತು ಸುಬ್ಬರಾಯ ಹೇಗೆ ನಿಭಾಯಿಸಿಕೊಂಡು ಸಂಸಾರವನ್ನು ಸುಧಾರಿಸಿಕೊಂಡು ಹೋಗುತ್ತಾರೆ ಎಂಬುದನ್ನು ಚಿತ್ರದಲ್ಲಿ ಅಚ್ಚುಕಟ್ಟಾಗಿ ಕಟ್ಟಿಕೊಡಲಾಗಿದೆ. ಅದರ ಜತೆಗೆ ಭಾರತ ಮತ್ತು ಪಾಕಿಸ್ತಾನದ ಯುದ್ಧ ಸರಳ ಸುಬ್ಬರಾವ್ ಕುಟುಂಬದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಸಿನಿಮಾ ನೋಡಿ ತಿಳಿದರೆ ಚೆಂದ. ಸರಳವಾದ ಅಪರೂಪದ ಈ ಪೇಮಕಥೆ ಸುಮಧುರ ಗಾನದಂತೆ ಮನಸಿನಾಳಕ್ಕೆ ಇಳಿಯುತ್ತದೆ. ಮಾಸ್ ಕ್ಲಾಸ್, ಆ್ಯಕ್ಷನ್ ಸಿನಿಮಾಗಳ ಅಬ್ಬರದ ನಡುವೆ ಅಪರೂಪದ ಕೌಟುಂಬಿಕ ಕಥೆಯನ್ನು ಆಯ್ದುಕೊಂಡಿರುವ ನಿರ್ದೇಶಕ ಮಂಜು ಸ್ವರಾಜ್, ಅದನ್ನು ಇಂದಿನ ತಲೆಮಾರಿಗೂ ಹಿಡಿಸುವಂತೆ ತೆರೆಯಲ್ಲಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಸುಬ್ಬರಾವ್ ಆಗಿ ಅಜಯ್ ಅದ್ಭುತವಾಗಿ ಅಭಿನಯಿಸಿದ್ದಾರೆ. ಸರಳಾ ಪಾತ್ರದಲ್ಲಿ ಮಿಶಾ ನಾರಂಗ್ ಸರಳತೆಯಲ್ಲಿಯೇ ಮನಗೆಲ್ಲುತ್ತಾರೆ. ರಂಗಾಯಣ ರಘು, ವೀಣಾ ಸುಂದರ್, ಚಿತ್ಕಲಾ ಬಿರಾದಾರ್ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅಜನೀಶ್ ಲೋಕನಾಥ್ ಅವರ ಸಂಗೀತ ನಿರ್ದೇಶನದ ಚಿತ್ರಕ್ಕೆ ಹೊಸ ಮೆರಗು ತಂದಿದೆ. ಒಟ್ಟಾರೆ ಸರಳ ಸುಬ್ಬರಾವ್ ಚಿತ್ರದ ಮೂಲಕ ಎಪ್ಪತ್ತರ ದಶಕದವರು ಹೇಗೆಲ್ಲ ಇದ್ದರು, ಅವರ ಆಲೋಚನೆ, ಬದುಕಿನ ಕ್ರಮಗಳು ಹೇಗಿರುತ್ತಿತ್ತು. ಎಷ್ಟು ಸುಂದರವಾಗಿರುತ್ತಿತ್ತು ಎಂಬುದನ್ನು ಕುಟುಂಬ ಸಮೇತ ಕುಳಿತು ನೋಡಿ ಆನಂದಿಸಬಹುದು.

ನಮ್ಮ ರಾಜ್ಯದ ಅತಿ ಅಪರೂಪದ ಮತ್ತು ಅಪಾರ ಜೀವವೈವಿಧ್ಯ ಹೊಂದಿರುವ ಪಶ್ಚಿಮ ಘಟ್ಟಗಳ ಭಾಗದಲ್ಲಿ, ರಸ್ತೆಯನ್ನು ವಿಸ್ತರಣೆ ಮಾಡುವ ಮತ್ತು ಅದಕ್ಕೆಂದೇ ಸುರಂಗ ಕೊರೆಯುವ ಪ್ರಸ್ತಾಪ ಮುನ್ನೆಲೆಗೆ ಬಂದಿದೆ. ಆದರೆ, ಅಂತಹದೊಂದು ಬೃಹತ್ ಕಾಮ ಗಾರಿಯಿಂದಾಗಿ ನಡೆಯಬಹುದಾದ ಕಾಡಿನ ನಾಶ ಅನೂಹ್ಯ. ಇಂದಿನ ಸನ್ನಿವೇಶದಲ್ಲಿ, ಕಾಡನ್ನು ಕಡಿದು ರಸ್ತೆ ವಿಸ್ತರಿಸುವಷ್ಟು ಸಿರಿವಂತರು ನಾವಲ್ಲ, ಬದಲಿಗೆ ಈಗ ಇರುವ ಪರಿಸರವನ್ನು ಉಳಿಸಿಕೊಂಡು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳ ಬೇಕಾದುದು ಇಂದಿನ ತುರ್ತು ಅಗತ್ಯ.

ಬೇಕೆ ಇಂತಹ ವಿನಾಶ!

ಹೆದ್ದಾರಿಗಾಗಿ ಕಾಡು ನಾಶ?

» ಶಶಿಧರ ಹಾಲಾಡಿ

ಪಶ್ಚಿಮ ಘಟ್ಟಗಳು ಮತ್ತು ಅದರ ಆಶ್ರಯದಲ್ಲಿ ಬೆಳೆದಿರುವ ವನಸಿರಿ – ಇದನ್ನು ಪಡೆದಿರುವ ನಮ್ಮ ರಾಜ್ಯವು ನಿಜಕ್ಕೂ ಅದೃಷ್ಟವಂತ ರಾಜ್ಯ! ಇಂತಹದೊಂದು ಅಪರೂಪದ ಕಾಡುಪ್ರದೇಶವನ್ನು ಪಡೆದಿರುವ ನಮ್ಮ ರಾಜ್ಯದ ಜನರು ಸಹ ಅದೃಷ್ಟವಂತರು. ಇಂತಹ ಅಪರೂಪದ ಕಾಡು, ವನಸಿರಿ, ಜೀವ ವೈವಿಧ್ಯ ನಮ್ಮ ದೇಶದ ಅವೆಷ್ಟೋ ರಾಜ್ಯಗಳಲ್ಲಿ ಕಾಣಸಿಗದು! ಸಹ್ಯಾದ್ರಿ ಶ್ರೇಣಿಯ ಅಪಾರ ಜೀವ ವೈವಿಧ್ಯವು ನಮ್ಮ ರಾಜ್ಯದ ಸಿರಿ; ಕಾಡು, ಬೆಟ್ಟ, ತೊರೆ, ನದಿ, ಜಲಪಾತ, ಉರಗ, ಹಕ್ಕಿ, ಹುಲಿ, ಆನೆ – ಹೀಗೆ ನಮ್ಮ ರಾಜ್ಯದ ಪ್ರಾಕೃತಿಕ ವಿಸ್ಮಯಗಳು ಒಮದೇ ಎರಡೇ! ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಪ್ರಮುಖ ಸ್ಥಾನ ಪಡೆದಿರುವ ಪಶ್ಚಿಮ ಘಟ್ಟಗಳ ಬಹುಭಾಗವು ನಮ್ಮ ರಾಜ್ಯದಲ್ಲಿದೆ; ಆ ಘಟ್ಟಗಳಲ್ಲಿ ಬೆಳೆದಿರುವ ನಿತ್ಯ ಹರಿದ್ವರ್ಣ ವನದ ಬಹುಭಾಗವು ಕರ್ನಾಟಕದಲ್ಲಿದೆ; ಆ ಕಾಡುಗಳಲ್ಲಿರುವ ಅಪಾರ ಸಂಖ್ಯೆಯ ಸಸ್ಯ ಮತ್ತು ಪ್ರಾಣಿಗಳು ನಮ್ಮ ರಾಜ್ಯದಲ್ಲಿವೆ. ನಮ್ಮ ರಾಜ್ಯದ ಪಶ್ಚಿಮಘಟ್ಟಗಳು ನಮ್ಮ ಪರಂಪರೆಯ ಭಾಗ; ಜತೆಗೆ ಇಲ್ಲಿನ ವನಸಿರಿಯು ಸಮಸ್ತ ಕನ್ನಡಿಗರ ಹೆಮ್ಮೆ.

ಆದರೆ, ಇಪ್ಪತ್ತೊಂದನೆಯ ಶತಮಾನದ ಮೊದಲರ್ಧದಲ್ಲಿ, ಇಂದು ಏನಾಗುತ್ತಿದೆ? ನಮ್ಮ ರಾಜ್ಯದಲ್ಲಿರುವ ಪಶ್ಚಿಮ ಘಟ್ಟಗಳನ್ನು, ಅಲ್ಲಿನ ಕಾಡುಗಳನ್ನು ಹಂತಹಂತವಾಗಿ ಕತ್ತರಿಸುವ, ನಾಶ ಮಾಡುವ, ಬರಡು ಮಾಡುವ ಗಂಭೀರ ಪ್ರಯತ್ನಗಳು ನಿರಂತರಗಾಗಿ ನಡೆಯುತ್ತಲೇ ಇವೆ! ಕಾಡು ನಾಶ ಮಾಡಲು, ಸಹ್ಯಾದ್ರಿಯ ಒಡಲನ್ನು ಬರಿದು ಮಾಡಲು ನಮ್ಮವರು ಮುಂದೊಡ್ಡುವ ಕಾರಣಗಳು ಹಲವು; ಕ್ಷುಲ್ಲಕ ನೆಪಗಳು ಹಲವು; ಕಾಡಿನೊಳಗೆ ಬೃಹತ್ ಕಾಮಗಾರಿಗಳನ್ನು ಯೋಜಿಸಲು, ಅದಕ್ಕಾಗಿ ಅದೆಷ್ಟೋ ಸಾವಿರ ರುಪಾಯಿಗಳನ್ನು ವೆಚ್ಚಮಾಡಲು ನಮ್ಮ ಸರಕಾರಗಳು ತುದಿಗಾಲಿನಲ್ಲಿ ನಿಂತಿವೆಯೇನೋ ಎಂಬಂತಹ ಸನ್ನಿವೇಶ! ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ದೊಡ್ಡ ದೊಡ್ಡ ಕಂಪೆನಿಗಳು, ಅದಕ್ಕಾಗಿ ವಿಶ್ವಮಟ್ಟದಲ್ಲಿ ಟೆಂಡರ್! ಕಾಡಿನೊಳಗೆ ನೂರಾರು ಲಾರಿಗಳ ಓಡಾಟ, ಬುಲ್‌ಡೋಜರ್‌ಗಳ ಆರ್ಭಟ, ಹೊಸ ಹೊಸ ಕಾಲುವೆಗಳನ್ನು ನಿರ್ಮಿಸಲು ನೆಲವನ್ನು ಅಕರಾಳ ವಿಕರಾಳವಾಗಿ ಅಗೆದುಹಾಕುವ ಉತ್ಸಾಹ! ಒಟ್ಟಿನಲ್ಲಿ, ಬರಿದಾಗುತ್ತಿರುವುದು ಮಾತ್ರ, ಅಮೂಲ್ಯವಾದ ಕಾಡು, ಜೀವವೈವಿಧ್ಯ ಮತ್ತು ಪ್ರಾಕೃತಿಕ ಸಂಪತ್ತು. ಇಲ್ಲಿ 'ಬರಿದಾಗುತ್ತಿರುವ' ಎಂಬ ಪದವು, ನಡೆಯುತ್ತಿರುವ ವಿನಾಶವನ್ನು ತೆಳುವಾಗಿ ವರ್ಣಿಸುತ್ತಿದೆ; ಏಕೆಂದರೆ, ಪಶ್ಚಿಮ ಘಟ್ಟಗಳಲ್ಲಿ ಒಮ್ಮೆ ನಾಶವಾದ ಕಾಡಿನ ಭಾಗವು ಇನ್ನೆಂದಿಗೂ ಮರುಚೇತರಿಸಿಕೊಳ್ಳಲು ಸಾಧ್ಯವಿಲ್ಲ! ಇಂತಹ ಹಲವು ಯೋಜನೆಗಳು ಈ ಶತಮಾನದಲ್ಲಿ ಜಾರಿಗೆ ಬಂದಿವೆ, ಬರುತ್ತಿವೆ, ಈಗ ಪ್ರಗತಿಯಲ್ಲಿವೆ. ದೂರದ ಬಯಲು ಸೀಮೆಗೆ ನೀರು ತರಲೆಂದು ಈಗಲೂ ನಡೆಯುತ್ತಿರುವ ಎತ್ತಿನ ಹೊಳೆ ಯೋಜನೆಯನ್ನೇ ಗಮನಿಸಿದರೆ, ಅದಾವ ಪರಿಯಲ್ಲಿ ಸಹ್ಯಾದ್ರಿಯ ಪರಿಸರವು ನಾಶವಾಗುತ್ತಿದೆ ಎಂಬುದು ಅರಿವಾದೀತು; ಹಲವು ವರ್ಷಗಳಿಂದ ಸಹ್ಯಾದ್ರಿಯ ಮಡಿಲಲ್ಲಿ ನಡೆಯುತ್ತಿರುವ ಈ ಬೃಹತ್ ಕಾಮಗಾರಿಯು ಇನ್ನೂ ಮುಂದುವರಿದಿದೆ, ಆದರೆ ಆ ಯೋಜನೆಯಿಂದ ಬರುತ್ತದೆನ್ನಲಾಗಿರುವ ನೀರು ಇನ್ನೂ ಸಮರ್ಪಕವಾಗಿ ಬಂದಿಲ್ಲ. ಶರಾವತಿ ಪಂಪ್ಡ್ ಸ್ಟೋರೇಜ್, ಬೆಂಗಳೂರಿಗೆ ಶರಾವತಿಯ ನೀರು, ಅಘನಾಶಿನಿ ವರದಾ ಜೋಡಣೆಯ ಯೋಜನೆ, ಹುಬ್ಬಳ್ಳಿ ಅಂಕೋಲ ಹೆದ್ದಾರಿಗಾಗಿ ಕಾಡಿನ ನಾಶ – ಇಂತಹ ಹೊಸ ಹೊಸ ಯೋಜನೆಗಳ ಪ್ರಸ್ತಾಪಗಳು ಸದಾ ಸುದ್ದಿಯಲ್ಲಿವೆ. ಇನ್ನು 20ನೆಯ ಶತಮಾನದಲ್ಲಿ ಇಂತಹ ನೂರಾರು ಕಾಮಗಾರಿಗಳು ಸಹ್ಯಾದ್ರಿಯ ಪರಿಸರವನ್ನು ಗಹನವಾಗಿ ನಾಶಮಾಡಿದ್ದನ್ನು ಕಂಡಿದ್ದೇವೆ.



ಹೊಸ ನೆಪಗಳು ಹೊಸ ಯೋಜನೆಗಳು

ಈಗ ಕಾಡುನಾಶದ ಹೊಸ ಮಜಲನ್ನು ನಾವು ಪ್ರವೇಶಿಸುತ್ತಿದ್ದೇವೆಯೋ ಏನೋ ಎಂಬಂತಹ ಒಂದು ಹೊಸ ಯೋಜನೆಯ ಪ್ರಸ್ತಾಪ ಸುದ್ದಿಯಲ್ಲಿದೆ. ಅದುವೇ, ಆಗುಂಬೆ ಘಾಟಿಯ ರಸ್ತೆ ಅಗಲೀಕರಣ (ರಾಷ್ಟ್ರೀಯ ಹೆದ್ದಾರಿ 169 ಎ) ಮತ್ತು ಅದಕ್ಕಾಗಿ ಸುರಂಗ ಯೋಜನೆ! ನಮ್ಮ ರಾಜ್ಯದಲ್ಲಿ ಇನ್ನೂ ನಾಶವಾಗದೇ ಉಳಿದುಕೊಂಡಿರುವ ಅಪರೂಪದ ಕಾಡನ್ನು ಹೊಂದಿರುವ ಸೋಮೇಶ್ವರ ಅಭಯಾರಣ್ಯ ಮತ್ತು ಆಗುಂಬೆ ಸುತ್ತಲಿನ ಕಾಡಿಗೆ ತೀವ್ರ ಧಕ್ಕೆ ತರುವಂತಹ ಹೊಸ ಯೋಜನೆಯನ್ನು ಈಗ ಪ್ರಸ್ತಾಪಿಸಲಾಗಿದೆ. ದಟ್ಟಕಾಡಿನಲ್ಲಿ ರಸ್ತೆಯ ಅಗಲೀಕರಣ ಒಂದು ಅಪಾಯವಾದರೆ, ಅದಕ್ಕಾಗಿ ಸಹ್ಯಾದ್ರಿಯ ಗರ್ಭದಲ್ಲಿ ಕೊರೆಯಲಿರುವ ಉದ್ದೇಶಿತ ಸುರಂಗವು, ಜಲಮೂಲವನ್ನೇ ನಾಶಗೊಳಿಸುವ ಸಾಧ್ಯತೆ ಹೊಂದಿದ್ದು, ಅದರಿಂದಾಗಿ ಅಪಾರ ಪ್ರಮಾಣದ ಕಾಡು ಹಾನಿಗೊಳಗಾಗುತ್ತದೆ.

ಈಗ ಉಳಿದುಕೊಂಡಿರುವ, ವಿರಳಾತಿವಿರಳ ಎನಿಸುವ ದಟ್ಟವಾದ ಕಾಡು ಮತ್ತು ವನಸಿರಿಯು ಆವರಿಸಿರುವ ಆಗುಂಬೆ ಸುತ್ತಲಿನ ಪರಿಸರವು ಅತಿ ಅಮೂಲ್ಯವಾದುದು; ಅಲ್ಲಿನ ಪರಿಸರ ನಾಶ ಎಂದರೆ, ಅದು ಬಹುದೊಡ್ಡ ವಿನಾಶ! ಆದ್ದರಿಂದ, ಆಗುಂಬೆ ಘಾಟಿಯ ರಸ್ತೆಯನ್ನು ಈಗ ಇರುವ ಸ್ಥಿತಿಯಲ್ಲೇ ತುಸು ಉತ್ತಮಗೊಳಿಸಿ, ಆ ಪ್ರದೇಶದ ಉತ್ತಮಗುಣಮಟ್ಟದ ಕಾಡನ್ನು ಮತ್ತು ಜೀವವೈವಿಧ್ಯವನ್ನು ಉಳಿಸಿಕೊಳ್ಳಬೇಕು ಎಂದು ಪರಿಸರಪ್ರೇಮಿಗಳು ಆಗ್ರಹಿಸುತ್ತಿದ್ದಾರೆ. ಈ ಆಗ್ರಹವು ಸಕಾರಣ ಮತ್ತು ಸ್ವಾರ್ಥರಹಿತ ಕೂಡ; ಆಗುಂಬೆ ಸುತ್ತಲೂ ಹರಡಿರುವ ಮತ್ತು ಸೋಮೇಶ್ವರ ಅಭಯಾರಣ್ಯದಲ್ಲಿನ ಕಾಡನ್ನು ರಕ್ಷಿಸುವುದರಿಂದಾಗಿ, ನಮ್ಮ ಮುಂದಿನ ಪೀಳಿಗೆಯು ಸಕಾಲದಲ್ಲಿ ಮಳೆ, ಬೆಳೆಯನ್ನು ಪಡೆದು, ಕುಡಿಯುವ ನೀರನ್ನು ಹೊಂದುವಂತಾಗುತ್ತದೆ ಎಂಬ ಮಾತು ಸಹ ನಮ್ಮ ರಾಜ್ಯದ ಭವಿಷ್ಯದ ಹಿತದೃಷ್ಟಿಯಿಂದ ಪ್ರಮುಖ ಎನಿಸುತ್ತದೆ.

ಬೇರೆ ಘಾಟಿ ರಸ್ತೆಗಳೂ ಇವೆ!

ಸದ್ಯ, ಆಗುಂಬೆ ಘಾಟಿ ರಸ್ತೆಯು, ಒಂದು ಕಡಿದಾದ, ಅಗಲಕಿರಿದಾದ ರಸ್ತೆಯಾಗಿದ್ದು, ಸೋಮೇಶ್ವರ–ಹೆಬ್ರಿ ಮೂಲಕ ಮಲೆನಾಡನ್ನು ಕರಾವಳಿಗೆ ಸಂಪರ್ಕಿಸುವ ಮಾರ್ಗ ಎನಿಸಿದೆ. ಶಿವಮೊಗ್ಗ ಜಿಲ್ಲೆಯಲ್ಲಿರುವ ನಾಗೋಡಿ ಘಾಟಿ ಮತ್ತು ಬಾಳೆಬರೆ ಘಾಟಿಗಳು ಕುಂದಾಪುರ ಪ್ರದೇಶಕ್ಕೆ ಸಂಪರ್ಕ ನೀಡುತ್ತವೆ (ಇಲ್ಲಿ ಬಸ್ ಮತ್ತು ಲಾರಿಗಳುಸಹ ಸಂಚರಿಸಬಹುದು) ; ಆಗುಂಬೆ ಘಾಟಿಯು ತೀರ್ಥಹಳ್ಳಿಯಿಂದ ಉಡುಪಿಗೆ ಸಂಪರ್ಕ ನೀಡುತ್ತದೆ; ಇನ್ನೂ ದಕ್ಷಿಣದಲ್ಲಿ ಕೆರೆಕಟ್ಟೆ ಘಾಟಿ, ಚಾರ್ಮಾಡಿ ಘಾಟಿ, ಬಿಸಿಲೆ ಘಾಟಿ, ಶಿರಾಡಿ ಘಾಟಿ ಮತ್ತು ಸಂಪಾಜೆ ಘಾಟಿಗಳು ಕರಾವಳಿ ಜಿಲ್ಲೆಗಳಿಗೆ ಸಂಪರ್ಕ ನೀಡುತ್ತವೆ. ಇವುಗಳ ಪೈಕಿ, ಆಗುಂಬೆ ಘಾಟಿಯು ಅತಿ ಕಿರಿದು ಮತ್ತು ಅತಿ ಕಡಿದು. 14 ಹಿಮ್ಮುರಿ ತಿರುವುಗಳನ್ನು ಹೊಂದಿರುವ ಈ ರಸ್ತೆಯು, ತೀವ್ರ ಕಡಿದಾಗಿದ್ದು, ಕೇವಲ 10 ಕಿ.ಮೀ. ಅಂತರದಲ್ಲಿ ಘಟ್ಟದ ಕೆಳಗಿನ ಸೋಮೇಶ್ವರಕ್ಕೆ ಸಂಪರ್ಕ ಕಲ್ಪಿಸುತ್ತದೆ. ಅಗಲ ಕಿರಿದಾಗಿದ್ದು, ಹೆಚ್ಚು ವಿಸ್ತರಿಸಲು ಅವಕಾಶ ಇಲ್ಲದೇ ಇದ್ದುದರಿಂದ, ಸದ್ಯ ಈ ಘಾಟಿಯ ಮೂಲಕ ಕಾರು, ಮಿನಿ ಬಸ್, ಮಿನಿ ಟ್ರಕ್ ಮೊದಲಾದ ಚಿಕ್ಕ ವಾಹನಗಳು ಮಾತ್ರ ಸಂಚರಿಸಬಲ್ಲವು. ದೊಡ್ಡ ಬಸ್ ಮತ್ತು ಲಾರಿಗಳ ಸಂಚಾರವನ್ನು ಇಲ್ಲಿ ನಿಷೇದಿಸಲಾಗಿದೆ.

ಸಿಂಗಳೀಕಗಳ ಆವಾಸಸ್ಥಾನ

ದಟ್ಟವಾದ ಕಾಡಿನಲ್ಲಿ ಸಾಗುವ ಆಗುಂಬೆ ಘಾಟಿ ರಸ್ತೆಯಲ್ಲಿ ಸಂಚರಿಸುವವರಿಗೆ ಸುಂದರ ಪರಿಸರ ದೃಶ್ಯಗಳ ಕಾಣಸಿಗುತ್ತವೆ; ಜತೆಗೆ, ಅಳಿವಿನ ಅಂಚಿನಲ್ಲಿರುವ ಸಿಂಗಳೀಕ (ಲಯನ್ ಟೈಲ್ಡ್ ಮಕಾಕ್)ಗಳು ಈ ಕಾಡುಪ್ರದೇಶದಲ್ಲಿ ವಾಸಿಸುತ್ತವೆ; ಇಲ್ಲಿನ ಕಾಡಿನಲ್ಲಿ ವಿವಿಧ ಉರಗಗಳ ಜತೆ, ಕಾಳಿಂಗ ಸರ್ಪಗಳೂ ಇವೆ. ಇತರ ಹಲವು ಅಪರೂಪದ ಹಕ್ಕಿಗಳಿವೆ, ಪ್ರಾಣಿಗಳಿವೆ, ಕೀಟಗಳಿವೆ, ಜೀವಿಗಳಿವೆ. ಈಗ ಅಗಲಕಿರಿದಾಗಿರುವ ಈ ರಸ್ತೆಯ ಅಗಲವನ್ನು ಹೆಚ್ಚಿಸಿ, ಮೇಗರವಳ್ಳಿಯಿಂದ ಸೋಮೇಶ್ವರದ ತನಕ ಸುರಂಗ ಕೊರೆಯುವ ಪ್ರಸ್ತಾಪವನ್ನು ಈಗ ಮಾಡಲಾಗಿದೆ; ಇದಕ್ಕಾಗಿ ಡಿಪಿಆರ್ (ವಿವರವಾದ ಸಮೀಕ್ಷೆ) ತಯಾರಿಸಲು ಸಿದ್ಧವಾಗಿದ್ದು, ಅದಕ್ಕಾಗಿ, ಸುಮಾರು 2.33 ಕೋಟಿ ರುಪಾಯಿಗಳನ್ನು ಮೀಸಲಿರಿಸಲಾಗಿದೆ. ಅಕಸ್ಮಾತ್ ಈ ಪ್ರಸ್ತಾಪವು ಪುರಸ್ಕಾರಗೊಂಡು, ಯೋಜನೆಯು ಜಾರಿಗೆ ಬಂದರೆ, ಸುಮಾರು 8,000 ಕೋಟಿ ರುಪಾಯಿಗಳ ಯೋಜನೆ ಇದಾಗಬಹುದು ಎಂದು ಕೆಲವು ಪರಿಸರಪ್ರೇಮಿಗಳು ಅಂದಾಜಿಸಿದ್ದು, ಪಶ್ಚಿಮಘಟ್ಟಗಳ ನಡುವೆ ಇಂತಹದೊಂದು ಬೃಹತ್ ಕಾಮಗಾರಿಯನ್ನು ಕೈಗೊಳ್ಳುವುದು ಭವಿಷ್ಯದ ದೃಷ್ಟಿಯಿಂದ ಅತಿ ಅಪಾಯಕಾರಿ ಎಂದು ವಾದಿಸುತ್ತಿದ್ದಾರೆ.



ವಿಶ್ವಪರಂಪರೆಯ ತಾಣ ಎನಿಸಿರುವ ಪಶ್ಚಿಮ ಘಟ್ಟಗಳ ಗರ್ಭದಲ್ಲಿ ಸುರಂಗವನ್ನು ಕೊರೆದರೆ, ಅಲ್ಲಿನ ಜಲಮೂಲಗಳ ಮೇಲೆ ತೀವ್ರ ಪರಿಣಾಮವಾಗುತ್ತದೆ ಮತ್ತು ತೊರೆ ಮತ್ತು ನದಿಗಳ ಸ್ವರೂಪವೇ ಬದಲಾದೀತು ಎಂದು ಪರಿಸರ ತಜ್ಞರು ಈಗಾಗಲೇ ಎಚ್ಚರಿಸಿದ್ದಾರೆ. ರಸ್ತೆ ಅಗಲೀಕರಣಕ್ಕಾಗಿ ಸಂಚರಿಸುವ ಬೃಹತ್ ಟ್ರಕ್ ಮತ್ತು ಜೆಸಿಬಿಗಳಿಂದಾಗಿ, ಹಲವು ಅಪರೂಪದ ಜೀವಿಗಳು ನಾಶವಾಗುವ ಸಾಧ್ಯತೆ ಇದೆಯಾದ್ದರಿಂದ, ಆಗುಂಬೆ ಘಾಟಿ ರಸ್ತೆಯನ್ನು ಹೆಚ್ಚಿನ ಅಭಿವೃದ್ಧಿಗೆ ಒಳಪಡಿಸುವುದು ಬೇಡ ಎಂದು ಹೇಳುತ್ತಿದ್ದಾರೆ.

ಈಗ ಇರುವ ರಸ್ತೆಯ ಒಂದು ಬದಿಯಲ್ಲಿ ಕಬ್ಬಿಣದ ಕಟ್ಟಣೆ ಮತ್ತು ಕಾಂಕ್ರೀಟ್ ಬಳಕೆಯಿಂದ ಕೆಲವು ಅಡಿಗಳಷ್ಟು ಅಗಲ ಮಾಡಿ, ವಾಹನಗಳ ಸರಾಗ ಸಂಚಾರಕ್ಕೆ ಅವಕಾಶ ಮಾಡಿಕೊಡಬಹುದು ಎಂದು ಕೆಲವು ತಜ್ಞರು ಸೂಚಿಸಿದ್ದಾರೆ. ಜತೆಗೆ, ಶಿವಮೊಗ್ಗದಿಂದ ಉಡುಪಿ ಜಿಲ್ಲೆಗೆ ಸಾಗಲು, ಆಗುಂಬೆ ಘಾಟಿಯಲ್ಲದೇ, ಬಾಳೆಬರೆ ಘಾಟಿ ಮತ್ತು ನಾಗೋಡಿ ಘಾಟಿ ರಸ್ತೆಗಳು ಈಗಾಗಲೇ ಬಳಕೆಯಲ್ಲಿರುವುದರಿಂದ, ಅಲ್ಲಿ ದೊಡ್ಡ ಗಾತ್ರದ ವಾಹನಗಳೂ ಚಲಿಸಲು ಅವಕಾಶವಿರುವುದರಿಂದಾಗಿ, ಆಗುಂಬೆ ರಸ್ತೆಯನ್ನು ಈಗ ಇರುವಂತೆಯೇ ಇಟ್ಟುಕೊಂಡು, ಅವೈಜ್ಞಾನಿಕವಾಗಿ ವಿಸ್ತರಿಸುವ ಅವಶ್ಯಕತೆ ಇಲ್ಲ ಎಂದು ಪರಿಸರಪ್ರೇಮಿಗಳು ಹೇಳಿದ್ದಾರೆ. ಇಂದಿನ ಸನ್ನಿವೇಶದಲ್ಲಿ, ಅಪಾರ ಪ್ರಮಾಣದ ಕಾಡಿನ ನಾಶಕ್ಕೆ ಅವಕಾಶ ನೀಡುವ ಇಂತಹದೊಂದು ಕಾಮಗಾರಿಯನ್ನು ಕೈಗೊಳ್ಳುವುದು ಅಪಾಯಕಾರಿ ಎಂದು ಪರಿಸರ ತಜ್ಞರು ಸಕಾರಣವಾಗಿ ಹೇಳಿದ್ದಾರೆ.

21ನೆಯ ಶತಮಾನದಂತಹ ಆಧುನಿಕ ಯುಗದಲ್ಲಿ ನಾವಿದ್ದೇವೆ; ಈಗಲೂ ನಮ್ಮನ್ನು ಆಳುವವರು, ಜನಪ್ರತಿನಿಧಿಗಳು ಕಾಡನ್ನು ನಾಶ ಮಾಡಿ ಅಭಿವೃದ್ಧಿ ಕಾಮಗಾರಿಗಳನ್ನು ಜಾರಿಗೆ ತರಲು ಉತ್ಸುಕರಾಗಿರುವುದು ಆಘಾತಕಾರಿಯೇ ಸರಿ. ಹಿಂದಿನ ದಶಕಗಳಲ್ಲಿ ಸಾಕಷ್ಟು ಕಾಡನ್ನು, ಪ್ರಾಕೃತಿಕ ಸಂಪತ್ತನ್ನು ಅಭಿವೃದ್ಧಿಗಾಗಿ ನಾಶ ಮಾಡಿದ್ದೇವೆ; ಆಗಿದ್ದು ಆಗಿಹೋಯಿತು; ಅದರಿಂದಾಗಿ ಅಭಿವೃದ್ಧಿಯೂ ಆಗಿದೆ; ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸತರಲ್ಲಿ ನೀರಾವರಿ ಮತ್ತು ರಸ್ತೆ ನಿರ್ಮಾಣಕ್ಕೆ ಆದ್ಯತೆ ಇತ್ತು; ಪರಿಸರ ರಕ್ಷಿಸುವ ಕೂಗು ಎದ್ದಿರಲಿಲ್ಲ; ಅಭಿವೃದ್ಧಿಗೆ ಆದ್ಯತೆ ಇತ್ತು. ಆದರೆ, ಈಗ ಅಂದರೆ, ಇಪ್ಪತ್ತೊಂದನೆಯ ಶತಮಾನದಲ್ಲಿ ನಾವು ಪರಿಸರವನ್ನು ನಾಶಮಾಡಿ, ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಷ್ಟು 'ಶ್ರೀಮಂತರಾಗಿ' ಉಳಿದಿಲ್ಲ! ನಿಜ! ನಮ್ಮ ರಾಜ್ಯದ ಪರಿಸರವು, ಕಾಡುಗಳು, ಗುಡ್ಡಗಾಡು

ಪ್ರದೇಶಗಳು, ವನಸಿರಿ, ಸಸ್ಯಸಂಪತ್ತು, ಜೀವ ವೈವಿಧ್ಯವು ಇಂದು ತೀವ್ರ ಒತ್ತಡದಲ್ಲಿದೆ. ಈಗ ಉಳಿದುಕೊಂಡಿರುವ ಪರಿಸರವನ್ನು, ಜೀವ ವೈವಿಧ್ಯವನ್ನು ರಕ್ಷಿಸಬೇಕಾದುದು ನಮ್ಮ ಸರಕಾರಗಳ, ಪ್ರಾಜ್ಞರ ಆದ್ಯ ಕರ್ತವ್ಯ ಎನಿಸಿದೆ. ಬರೇ ರಕ್ಷಿಸುವುದಲ್ಲ, ಬದಲಿಗೆ ಅತೀವ ಆಸ್ಥೆಯಿಂದ, ಈಗ ಉಳಿದಿರುವ ಪರಿಸರವನ್ನು ಕಾಪಾಡಿಕೊಳ್ಳಬೇಕಾಗಿದೆ. ಈಗ ಕೆಲವೇ ಕೆಲವು ಪ್ರದೇಶಗಳಲ್ಲಿ ಉಳಿದಿರುವ ಪ್ರಾಕೃತಿಕ ಸಂಪತ್ತನ್ನು ರಕ್ಷಿಸಿಕೊಂಡು, ಮುಂದಿನ ಪೀಳಿಗೆಗೆ, ತಲೆಮಾರಿಗೆ ಒಪ್ಪಿಸಬೇಕು, ಆ ಮೂಲಕ ಅವರ ಬದುಕನ್ನು ಸಾಕಷ್ಟು ಹಸನಾಗಿರಿಸಬೇಕು; ಇದು ನಮ್ಮ ಸರಕಾರದ, ಜನಪ್ರತಿನಿಧಿಗಳ, ಅಧಿಕಾರಿಗಳ ಆದ್ಯ ಕರ್ತವ್ಯ ಎನಿಸಬೇಕಾಗಿತ್ತು. ಆದರೆ, ಸರಕಾರಕ್ಕೆ, ಅದರ ಚುಕ್ಕಾಣಿ ಹಿಡಿದಿರುವವರಿಗೆ, ಪರಿಸರದ ಮೇಲೆ ಪ್ರಾಮಾಣಿಕ ಕಾಳಜಿಯೇ ಇಲ್ಲ ಎನಿಸುವಂತಹ ವರದಿಗಳು ಪತ್ರಿಕೆಗಳಲ್ಲಿ ಈಗ ಪ್ರಕಟಗೊಳ್ಳುತ್ತಿವೆ. ನಿರಂತರವಾಗಿ ಒಂದರ ಹಿಂದೆ ಒಂದರಂತೆ ವರದಿಯಾಗುತ್ತಿರುವ ಹೊಸ ಹೊಸ ಪರಿಸರ ವಿರೋಧಿ ಯೋಜನೆಗಳು ಮತ್ತು ಕಾಮಗಾರಿಗಳ ವಿವರ ಕಂಡಾಗ ಇಂತಹದೊಂದು ಅನುಮಾನ ಹುಟ್ಟುತ್ತಿದೆ.

ಹಾಗಿದ್ದರೆ ಇದಕ್ಕೆ ಪರಿಹಾರವೇನು? ಎಂಬ ಪ್ರಶ್ನೆ ಉದಿಸಬಹುದು. ಉತ್ತರ ಸರಳ, ಆದರೆ ಆಚರಣೆಯು ತುಸು ಕಠಿಣ; ಸರಳ ಉತ್ತರವೆಂದರೆ, ಈಗ ಉಳಿದಿರುವ ಪರಿಸರವನ್ನು ಹೀಗೆಯೇ ಉಳಿಸಿಕೊಂಡು, ಅಭಿವೃದ್ಧಿಯನ್ನು ಸಾಧಿಸಬೇಕು. ಆದರೆ ಇದನ್ನು ಆಚರಣೆಗೆ ತರಲು, ಹೆಚ್ಚು ಸಂಪನ್ಮೂಲವೈ ಬೇಕು ಮತ್ತು ವೈಜ್ಞಾನಿಕ ಚಿಂತನೆ ಅಗತ್ಯ. ರಸ್ತೆ ವಿಸ್ತರಣೆಗೆ ಕಾಡನ್ನು ಕಡಿಯುವ ಬದಲು, ಪರ್ಯಾಯ ಮಾರ್ಗಗಳನ್ನು ಜಾರಿಗೆ ತರಬೇಕು. ಆ ಮೂಲಕ, ಈಗ ಇರುವ ಪರಿಸರ ಸಂಪತ್ತನ್ನು ಉಳಿಸಿಕೊಳ್ಳಬೇಕು, ಬದುಕಿಕೊಂಡಿರುವ ಜೀವವೈವಿಧ್ಯವನ್ನು ಕಾಪಾಡಬೇಕು. ನಾಗರಿಕ ಮಾನವನಾಗಿ, ಎ.ಐ. ಅಂತಹ ಆಧುನಿಕ ವ್ಯವಸ್ಥೆಯನ್ನು ಕಂಡುಹಿಡಿದ ಬುದ್ಧಿವಂತ ಮಾನವನಾಗಿ, ಅಷ್ಟರ ಮಟ್ಟಿಗಿನ ಜವಾಬ್ದಾರಿಯನ್ನು ನಾವು ಹೊರಲು ಸಿದ್ಧರಾಗಬೇಕು, ಹೊರಬೇಕು. ಪರಿಸರ ರಕ್ಷಣೆಯು ಸರಕಾರ ಮುದ್ರಿಸುವ ಪಠ್ಯಪುಸ್ತಕಗಳಲ್ಲಿ ಮಾತ್ರ ಒಂದು 'ಪಾಠ'ವಾಗಿ ಬಂಧಿಯಾಗಿದ್ದರೆ ಉಪಯೋಗವಿಲ್ಲ, ಅದು ಬದುಕಿನ ಪಾಠವಾಗಬೇಕು. ಆಗುಂಬೆ ಸರಹದ್ದಿನ ಕಾಡನ್ನು ಈಗ ಇರುವಂತೆಯೇ ಇರಗೊಡಬೇಕು, ಅದುವೇ ನಿಜವಾದ ಪರಿಸರ ರಕ್ಷಣೆ. ಇದು ನಮ್ಮ ಮತ್ತು ನಮ್ಮ ಮುಂದಿನ ಪೀಳಿಗೆ ಹಿತಕ್ಕಾಗಿ ಮಾತ್ರ!

ಕೃಷಿಕರಿಗಾಗಿ ರೈತಪೀಠ ಪ್ರಶಸ್ತಿ!

ಸಂಜೀವಿನಿ ಗೋಧಾಮದಿಂದ ವಿನೂತನ ಅಭಿಯಾನ

ನಮ್ಮ ದೇಶದಲ್ಲಿ ಕೃಷಿಕರ ಸಂಖ್ಯೆ ಅಧಿಕ; ಆದರೆ, ಬಹುಪಾಲು ಕೃಷಿಕರ ಬದುಕು ಕಷ್ಟದಲ್ಲಿದೆ! ದೇಶದ ಜನರ ಹೊಟ್ಟೆಯನ್ನು ತುಂಬಿಸುವ ಆಹಾರ ಬೆಳೆಯುವ ಕೃಷಿಕರು, ಇಂದು ತುಸು ಕೀಳರಿಮೆಯಲ್ಲಿ ಬದುಕುತ್ತಿದ್ದಾರೆ. ಕಷ್ಟದ ಕೃಷಿಯನ್ನು ನಂಬಿ, ಸಾಕಷ್ಟು ನೋವನ್ನು ಅನುಭವಿಸಿದ್ದರಿಂದಾಗಿ, ತಮ್ಮ ಮಕ್ಕಳು ಕೃಷಿಯನ್ನು ಅವಲಂಬಿಸಿ ತೊಂದರೆಗೆ ಸಿಲುಕುವುದು ಬೇಡ ಎಂಬುದು ನಮ್ಮ ಬಹುಪಾಲು ಕೃಷಿಕರ ಅಭಿಮತ; ಆದ್ದರಿಂದ, ದೊಡ್ಡ ನಗರಗಳಿಗೆ ತಮ್ಮ ಮಕ್ಕಳನ್ನು ಕಳಿಸಿ, ಅಲ್ಲಿ ದುಡ್ಡು ಮಾಡಲಿ ಎಂದು ಬಯಸುತ್ತಿದ್ದಾರೆ. ಇದಾಗಬಾರದು, ಕೃಷಿಕರ ಬದುಕಿಗೆ ಬೆಲೆ ಸಿಗಬೇಕು, ಕೃಷಿಕರಿಗೆ ಗೌರವ ಸಿಗಬೇಕು ಎಂದು ಪ್ರಾಮಾಣಿಕವಾಗಿ ಬಯಸಿದ ಉತ್ಸಾಹಿ ಕೃಷಿಕರೊಬ್ಬರು, ಹೇಗೆ ನಮ್ಮ ದೇಶದ ಭವಿಷ್ಯವು ಕೃಷಿಯಲ್ಲಿ, ಗದ್ದೆಗಳಲ್ಲಿ ಇದೆ ಎಂಬುದನ್ನು ವಿವರಿಸುತ್ತಾರೆ, ಮಾತ್ರವಲ್ಲ, ಸ್ವತಃ ತಾವೇ ಕೃಷಿ ಮಾಡಿ, ಮಾದರಿಯಾಗಿದ್ದಾರೆ.



» ನರೇಂದ್ರ ರೈ ದೇರ್ಲ

ನಿಮಗೆ ಈ ದೇಶದ ಪ್ರತಿಷ್ಠಿತ ಜ್ಞಾನಪೀಠ ಗೊತ್ತು. ವಿಶ್ವವಿದ್ಯಾನಿಲಯಗಳಲ್ಲಿರುವ ಅಲ್ಲಮಪೀಠ, ಕನಕಪೀಠ, ತುಳು ಪೀಠ... ಇಂಥ ಶೈಕ್ಷಣಿಕ ಅಧ್ಯಯನ ಪೀಠಗಳೂ ಗೊತ್ತು. ಮಠ ಪರಂಪರೆಗೆ ಸಂಬಂಧಿಸಿದ ವ್ಯಾಸಪೀಠ ದಾಸಪೀಠಗಳೂ ಗೊತ್ತು. ಈ ನಡುವೆ ಇದೇನು ಹೊಸ 'ರೈತ ಪೀಠ'?

ಹೌದು, ಇದು ಕೃಷಿಗೆ ಸಂಬಂಧಿಸಿದ ಸಾಧಕ ರೈತನಿಗೆ ಸಲ್ಲುವ ಹೊಸ ರೈತ ಪ್ರಶಸ್ತಿ! ಸರಕಾರ ದ್ದಲ್ಲ, ರೈತ ಉದ್ಯಮಿಯೊಬ್ಬರು ಸ್ಥಾಪಿಸಿದ ನೂತನ ಪ್ರಶಸ್ತಿ.

ಈ ದೇಶದ ಒಬ್ಬ ರೈತನ ಮಗನಾಗಿ, ಎಲ್ಲದಕ್ಕಿಂತ ಹೆಚ್ಚು ಅನ್ನ ತಿನ್ನುವ ಒಬ್ಬ ಸಾದಾಸೀದ ನೆಲದವನಾಗಿ ಈ ಪ್ರಶಸ್ತಿಯ ಹೆಸರೇ ನನ್ನೊಳ ಗಡೆ ರೋಮಾಂಚನವನ್ನು ಹುಟ್ಟಿಸುತ್ತದೆ. ಇದಕ್ಕೆ ಕಾರಣಗಳು ಅನೇಕ. ನಿಮಗೆ ಗೊತ್ತಿರ ಬೇಕು. ಈ ದೇಶದಲ್ಲಿ ಸಮಾಜ ಸುಧಾರಕರ, ಸ್ವಾತಂತ್ರ್ಯ ಹೋರಾಟಗಾರರ, ಸಂತರ, ಸಾಹಿತಿಗಳ, ಕಲಾವಿದರ ಮುತ್ಸದ್ದಿಗಳ, ಉದ್ಯಮಿಗಳ, ಶಿಕ್ಷಣ ತಜ್ಞರ ಹೆಸರಿನಲ್ಲಿ ಆನೇಕ ಪ್ರಶಸ್ತಿಗಳಿವೆ. ಸರಕಾರ, ಖಾಸಗಿ ಎಂದು ನೂರಾರು ಪ್ರಶಸ್ತಿಗಳು ಪ್ರತಿ ವರ್ಷ ಇಂಥವರಿಗೆ ಸಲ್ಲುತ್ತದೆ. ಪ್ರಶಸ್ತಿ ವಿತರಣೆಗೆಂದೇ ಕೋಟ್ಯಾಂತರ ರೂಪಾಯಿ ವೆಚ್ಚವಾಗುತ್ತದೆ. ದೇಶದ ಬೆನ್ನೆಲುಬಾದ ಕೃಷಿಕರಿಗೆ ಯಾವ ಪ್ರಶಸ್ತಿ ಇದೆ? ಸದಾ ಬಿಸಿಲು ಮಳೆ ಚಳಿಗೆ ಮೈ ಒಡ್ಡುವ ರೈತನಿಗೂ ಇಂತಹದ್ದೇ ಘನತೆಯ ಒಂದು ಪ್ರಶಸ್ತಿ ಬೇಕು ಎಂಬ ಯೋಚನೆ ಹುಟ್ಟುವುದೇ ಈ ಕಾಲಕ್ಕೆ ಬಹಳ ಆಪರೂಪ.

ಹಾಗಂತ ಈ ಪ್ರಶಸ್ತಿಯ ಪರಿಕಲ್ಪನೆ ಹುಟ್ಟಿದ್ದು ಪ್ರಭುತ್ವದ ಕಡೆಯಿಂದಲ್ಲ. ರೈತರದ್ದೇ ಸಾವಿರಾರು ಎಕರೆ ಹೊಲ ಗದ್ದೆ ತೋಟಗಳನ್ನು ಆಕ್ರಮಿಸಿ, ಉದ್ಯಮದ ಸಾಮ್ರಾಜ್ಯ ಕಟ್ಟಿದ ಮಹಾನ್ ಬಂಡವಾಳಶಾಹಿಗಳಿಂದಲ್ಲ. ಅದೇ ಹಳ್ಳಿಯಿಂದ ಬಡತನದ ದಾರಿಯಲ್ಲಿ ಸೆಣಸಿ ಶೂನ್ಯದಿಂದಲೇ ಉದ್ಯಮದ ಮಹಲು ಕಟ್ಟಿದ ಒಬ್ಬ ಅಸಾಧಾರಣ ಸಾಧಕನಿಂದ. ಅವರೇ ಡಾ. ರಾಮಕೃಷ್ಣ ಆಚಾರ್. ಪ್ರಸ್ತುತ ಮೂಡುಬಿದ್ರೆ– ಕಾರ್ಕಳ ಮುನಿಯಾಲಿನ ಗೋ–ಧಾಮದ ನಿವಾಸಿ.

ವಿದೇಶದಲ್ಲಿ ಕೃಷಿಕರಿಗೆ ಗೌರವ

ಇವರು ಭತ್ತ ಸಂಸ್ಕರಿಸುವ ಯಂತ್ರಗಳನ್ನು ದೇಶ ವಿದೇಶಗಳಿಗೆ ತಲುಪಿಸುವ, ಅಳವಡಿಸುವ ಉದ್ದೇಶದಿಂದ, ಜಗತ್ತಿನ ಕೃಷಿ ಆಧರಿತ ಅದರಲ್ಲೂ ಭತ್ತ ಧಾನ್ಯಗಳ ಕೃಷಿಯನ್ನು ಅವಲಂಬಿಸಿದ ಸುಮಾರು 32 ದೇಶಗಳನ್ನು ತಿರುಗಾಡಿದವರು. ವಿದೇಶಕ್ಕೆ ಹೋದಾಗಲೆಲ್ಲ ಗ್ರಾಮೀಣ ಪ್ರದೇಶಗಳಿಗೆ ಭೇಟಿಕೊಟ್ಟು ರೈತರನ್ನು ನೇರವಾಗಿ ಮಾತನಾಡಿಸಿದ್ದು, ಹೊಲ ಗದ್ದೆಗಳಿಗೆ ಭೇಟಿ ಕೊಟ್ಟದ್ದೇ ಹೆಚ್ಚು. ಅಲ್ಲೆಲ್ಲಾ ಅವರು ಕಂಡಂತೆ ರೈತ ರಾಜನಾಗಿದ್ದಾನೆ! ಎಲ್ಲರಿಗಿಂತ ಎತ್ತರದಲ್ಲಿದ್ದಾನೆ. ''ಥೈಲಾಂಡ್ ವಿಯೆಟ್ನಾಂ ಕಾಂಬೋಡಿಯ ಆಸ್ಟ್ರೇಲಿಯಾ ಬ್ರೆಜಿಲ್... ಅಲ್ಲೆಲ್ಲ ರೈತರು ಸುಪ್ರೀಂ ಲೀಡರ್‌ಗಳಾಗಿದ್ದಾರೆ. ನೂರಾರು ಎಕರೆ ಭೂಮಿಯಲ್ಲಿ ಕೃಷಿ ಮಾಡುವ ಅಲ್ಲಿಯ ಮೇಟಿಗೆ ಸಾಮಾಜಿಕವಾಗಿ ತುಂಬು ಗೌರವ ಮಾನ್ಯತೆ ಇದೆ. ಗೌರವದ ಸ್ಥಾನದಲ್ಲಿರುವ ರೈತರ ನೆಲಸಂಬಂಧವನ್ನು ಇಷ್ಟಪಡುವಂತೆ ಅಲ್ಲಿಯ ಸರಕಾರವೇ ಪ್ರಚೋದಿಸುತ್ತದೆ. ಗೌರವಿಸುತ್ತದೆ, ಸಹಕರಿಸುತ್ತದೆ. ಅಲ್ಲಿಯ ರೈತರ ಅನ್ನದ ಕೆಲಸಕ್ಕೆ ಗೌರವ ಮಾನ್ಯತೆ ನೀಡಲಾಗಿದೆ. ▶▶ ಪುಟ 4

ಪ್ರಶಸ್ತಿ ಪ್ರದಾನ

ನಾಡಿನ ಸಮಸ್ತ ರೈತರಿಗೆ ಗೌರವ ಕೊಡುವ ಪ್ರತೀಕ ಎನಿಸುವಂತೆ, ಸಂಜೀವಿನಿ ಗೋಧಾಮ, ಮುನಿಯಾಲು ವತಿಯಿಂದ ಮೊತ್ತಮೊದಲ 'ರೈತಪೀಠ' ಪ್ರಶಸ್ತಿಯನ್ನು ಕಳೆದ ವಾರ ಪ್ರದಾನ ಮಾಡಲಾಯಿತು; ಗೋಧಾಮ ನೀಡುತ್ತಿರುವ ಈ ಪ್ರಶಸ್ತಿಗೆ ಮೊದಲ ವರ್ಷ (2026) ಭಾಜನರಾದವರು, ಬಿ.ಕೆ.ದೇವರಾಯ ಎಂಬ ಕೃಷಿ ತಪಸ್ವಿ; ಮಿತ್ತಬಾಗಿಲು ಎಂಬ ಪುಟ್ಟ ಹಳ್ಳಿಯಲ್ಲಿದ್ದುಕೊಂಡು 240ಕ್ಕೂ ಅಧಿಕ ಬತ್ತದ ತಳಿಗಳನ್ನು ರಕ್ಷಿಸಿಕೊಂಡು ಬಂದಿರುವ ದೇವರಾಯರು, 'ರೈತ ಪೀಠ' ಪ್ರಶಸ್ತಿಗೆ ನಿಜಕ್ಕೂ ಅರ್ಹರು. ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧವಾಗಿರುವ 'ಜ್ಞಾನಪೀಠ' ಪ್ರಶಸ್ತಿಯನ್ನು ನೆನಪಿಸುವ ಈ 'ರೈತಪೀಠ' ಪ್ರಶಸ್ತಿಯು, ನಮ್ಮ ನಾಡಿನ ಇತರ ಎಲ್ಲಾ ರೈತರಿಗೆ ಸ್ಫೂರ್ತಿ ನೀಡಲಿ ಎಂಬ ಆಶಯವು, ಸಂಜೀವಿನಿ ಗೋಧಾಮದ ರೂವಾರಿ ರಾಮಕೃಷ್ಣ ಆಚಾರ್ ಅವರದ್ದು.

ಪುಸ್ತಕ ವಿಮಾನ

ನಾಡು ನುಡಿಗೆ ಕೊಡುಗೆ ನೀಡಿದವರು

ನಮ್ಮ ನಾಡು ಮತ್ತು ನುಡಿಗೆ ಮಹತ್ವದ ಕೊಡುಗೆ ನೀಡಿದವರ ಕುರಿತಾದ ಬರಹಗಳನ್ನು ಒಳ ಗೊಂಡ ಈ ಪುಸ್ತಕದಲ್ಲಿ, ಹಲವು ಅಪರೂಪದ ಮತ್ತು ಇದುವರೆಗೆ ಪ್ರಚಲಿತಕಕ್ಕೆ ಬಾರದ ಮಾಹಿತಿಗಳು ಅಡಕಗೊಂಡಿರುವುದು ವಿಶೇಷ.

» ರಾ.ನಂ. ಚಂದ್ರಶೇಖರ

ಗೋಕಾಕ್ ಚಳವಳಿಯಲ್ಲಿ ಸಾಮಾನ್ಯ ಯುವಕನಾಗಿ ಪಾಲ್ಗೊಂಡ ಸಕ್ಕರೆ ಸೀಮೆ ಮಂಡ್ಯ ಜಿಲ್ಲೆಯ ವ.ಚ. ಚನ್ನೇಗೌಡ, ರಾಜ್ಯ ಮಟ್ಟದಲ್ಲಿ ಮುಂಚೂಣಿ ಕನ್ನಡ ಚಳವಳಿಗಾರರಾಗಿ ಗುರುತಿಸುವಂತೆ ಬೆಳೆದಿರುವ ಪರಿ ನಿಜಕ್ಕೂ ವಿಶೇಷ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿಯ ಸ್ಥಾಪಕ ಸಂಘಟನಾ ಕಾರ್ಯದರ್ಶಿಯಾಗಿ, ರಾಜ್ಯಾಧ್ಯಕ್ಷರಾಗಿ, ಕನ್ನಡದ ಪ್ರಮುಖ ಹೋರಾಟಗಾರರಾಗಿ, 'ಕನ್ನಡ-ಕನ್ನಡಿಗ-ಕರ್ನಾಟಕ'ಗಳ ರಕ್ಷಣೆಯಲ್ಲಿ ಮುಂಚೂಣಿ ಹೆಸರು, 'ವ.ಚ.' ಎಂಬ 'ಸಾಚ' ಕನ್ನಡ ಹೋರಾಟಗಾರ ಚನ್ನೇಗೌಡ.

ಡಾ. ಎಂ. ಚಿದಾನಂದಮೂರ್ತಿ ಮತ್ತು ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ನಿಕಟವರ್ತಿಯಾಗಿದ್ದ ಚನ್ನೇಗೌಡರು, ಅರಿವು, ಆಚರಣೆ ಎಂಬ ತತ್ತ್ವವನ್ನು ಅಳವಡಿಸಿಕೊಂಡ ಹೋರಾಟಗಾರ. ಕ.ರಾ.ರ.ಸಾ.ಸಂ. ಕನ್ನಡ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕನ್ನಡನಾಡಿನ ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ವ್ಯಾಪಕವಾಗಿ ಓದಿಕೊಂಡು ಪತ್ರಿಕಾ ಪ್ರಕಟಣೆಗಳನ್ನು ಸಿದ್ಧಪಡಿಸುವುದನ್ನು ರೂಢಿಸಿಕೊಂಡು ಡಾ. ಎಂ. ಚಿದಾನಂದಮೂರ್ತಿಯವರಿಂದಲೇ ಸೈ ಎನಿಸಿಕೊಂಡವರು. ಗೋಕಾಕ್ ಚಳವಳಿಯ ನಂತರ ನಡೆದ ಪ್ರಮುಖ ಕನ್ನಡ ಹೋರಾಟಗಳಲ್ಲಿ ಪಾಲ್ಗೊಂಡಿದ್ದಲ್ಲದೇ, ಸ್ವತಃ ಕೆಲವು ಮಹತ್ವದ ಕನ್ನಡ ಹೋರಾಟಗಳನ್ನು ಸಂಘಟಿಸಿದ ಹೆಗ್ಗಳಿಕೆ ಗೌಡರಿಗೆ ಸಲ್ಲಬೇಕು. ಪುಸ್ತಕ ಪ್ರಕಟಣೆ, ಪುಸ್ತಕ ಬಹುಮಾನ, ನಾಡು ನುಡಿಗೆ ದುಡಿದವರನ್ನು ಗೌರವಿಸುವಂತಹ ಕನ್ನಡ ಕಟ್ಟುವ, ಪ್ರೋತ್ಸಾಹಿಸುವ ಕಾರ್ಯಗಳನ್ನು ಮಾಡಿದರು. ಇವರ ಈ ಕೆಲಸಗಳಿಗೆ ಕಳಶ ಪ್ರಾಯವಾದದ್ದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸ್ಥಾಪಿಸಿರುವ 'ನೃಪತುಂಗ ಸಾಹಿತ್ಯ ಪ್ರಶಸ್ತಿ.'

ಹೀಗೆ ಬಹುಮುಖಿ ನೆಲೆಯಲ್ಲಿ ಕನ್ನಡ ಕೆಲಸ ಮಾಡುತ್ತಿದ್ದ ಮಿತ್ರ ಚನ್ನೇಗೌಡರು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾದಾಗ ಸಹಜವಾಗಿ ನಿರೀಕ್ಷೆ ಹೆಚ್ಚಿತ್ತು. ಪರಿಷತ್ತಿನ ಚಟುವಟಿಕೆಗಳನ್ನು ಶ್ರದ್ಧೆಯಿಂದ ಸಂಘಟಿಸುವ ಜೊತೆಗೆ ಕನ್ನಡ ಸಾಹಿತ್ಯವನ್ನು ತಿಳಿಯುವ ಪ್ರಯತ್ನ ಮಾಡಿದರು. ಕುಶಲ ಕರ್ಮಿಯಾಗಿದ್ದವರು ಕಲೆ ಯಲ್ಲಿ ಪದವಿ ಪಡೆದರು. ಸಿಕ್ಕ ಸ್ಥಾನಕ್ಕೆ ಮಾನ ತಂದುಕೊಡುವ ನಿಟ್ಟಿನಲ್ಲಿ ಪೂರ್ವಸಿದ್ಧತೆಯಾಗಿತ್ತು. ನಿವೃತ್ತರಾದ ಮೇಲೆ ಕರ್ನಾಟಕ ವಿಕಾಸ ರಂಗದ ಅಧ್ಯಕ್ಷರಾಗಿ ತಮ್ಮ ಸಂಪರ್ಕ ಜಾಲವನ್ನು ಬಳಸಿಕೊಂಡು ರಂಗದ ಚಟುವಟಿಕೆಯನ್ನು ಜಿಲ್ಲೆಗಳಿಗೆ ವಿಸ್ತರಿಸುತ್ತಿದ್ದಾರೆ. ಜೊತೆಗೆ ಅಧ್ಯಯನ ನಡೆಸಿ ಹೆಚ್ಚು ಬರೆಯುತ್ತಿದ್ದಾರೆ.

'ನಾಡ ಹಣತೆಗಳು' ಎಂಬ ವ್ಯಕ್ತಿ ಚಿತ್ರಗಳ ಸಂಕಲನದ ಶೀರ್ಷಿಕೆಯ ಧ್ವನಿ ಅರ್ಥಪೂರ್ಣವಾಗಿದೆ. ಈ ಕಥನ ಮಾಲೆಯ ವ್ಯಕ್ತಿಗಳು ಒಂದಲ್ಲ ಒಂದು ಬಗೆಯಲ್ಲಿ ಕನ್ನಡನಾಡು-ನುಡಿಗೆ ಬಹುವಾಗಿ ಶ್ರಮಿಸಿದ ಮಹನೀಯರು. ಇದು ಅವರ ಸಂಕ್ಷಿಪ್ತ ಪರಿಚಯವಾಗಿದೆ. ನೆರೆಯ ರಾಜ್ಯದ ಪೊಟ್ಟಿ ಶ್ರೀರಾಮುಲು ಅವರ ಕುರಿತು ಸಹ ಇಲ್ಲಿ ಲೇಖನವಿದೆ. ಶ್ರೀರಾಮುಲು ಅವರು ಭಾಷಾನ್ವಯ ರಾಜ್ಯ ರಚನೆಗೆ ಪ್ರಾಣವನ್ನೇ ಕೊಟ್ಟರು. ಅವರ ಆತ್ಮಾಹುತಿಯಿಂದ ಭಾಷಾವಾರು ಪ್ರಾಂತಗಳು ರಚನೆಯಾದವು.

ಇಂದಿನ ಮಾಹಿತಿ ತಂತ್ರಜ್ಞಾನ ಪ್ರವಾಹ ದಿಂದ ನಮ್ಮ ಯುವ ಜನತೆಯನ್ನು ಪಾರುಮಾಡಿ ಇತಿಹಾಸ, ಪರಂಪರೆ ಯನ್ನು ತಿಳಿಸುವುದು ನಮ್ಮ ಕರ್ತವ್ಯವಾಗಿದೆ. ಆ ಹಾದಿಯಲ್ಲಿ ಈ ಸಂಕಲನ ಒಂದು ಉತ್ತಮ ಪ್ರಯತ್ನ ಎನ್ನಬಹುದು. ತಮಿಳರಿಗೆ ತಿರುವಳ್ಳುವರ್, ಮರಾಠಿಗರಿಗೆ ಶಿವಾಜಿ ಇರುವಂತೆ ಕನ್ನಡಿಗರಿಗೆ ಸಾಂಸ್ಕೃತಿಕ ನಾಯಕರಿಲ್ಲದಿರುವುದು ದೊಡ್ಡ ಕೊರತೆ ಎನಿಸಿತ್ತು. ಕರ್ನಾಟಕ ಸರ್ಕಾರ ಬಸವಣ್ಣನವರನ್ನು ಕನ್ನಡ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದಾಗ ಲೇಖಕರು ಬಸವಣ್ಣನವರ ಬಗ್ಗೆ ಲೇಖನ ಬರೆದು ಎಲ್ಲ ಕಚೇರಿಗಳಲ್ಲಿ ಬಸವಣ್ಣನವರ ಫೋಟೋ ಹಾಕಿರುವುದು ಸ್ವಾಗತಾರ್ಹ. ಆದರೆ, ಅವರ ಒಂದೆರಡು ಆದರ್ಶಗಳನ್ನಾದರೂ ಪಾಲಿಸಿದರೆ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದಕ್ಕೂ ಸಾರ್ಥಕತೆ ಬರುತ್ತದೆ ಎಂದು ಹೇಳುತ್ತಾರೆ.



ನಾಡ ಹಣತೆಗಳು

ಲೇ: ವ.ಚ.ಚನ್ನೇಗೌಡ
ಪ್ರ: ಸಪ್ನ ಬುಕ್ ಹೌಸ್ ಬೆಂಗಳೂರು
ಬೆಲೆ ರು.100/-

ಕನ್ನಡ ಕಾರ್ಯಕರ್ತರಿಗೆ ಕುವೆಂಪು ಹೆಸರೇ ಸ್ಫೂರ್ತಿ. ಅವರ ಸಿದ್ಧಿ-ಸಾಧನೆಯನ್ನು ಪರಿಚಯಿಸುವ ನಾಲ್ಕು ಲೇಖನಗಳಿವೆ. ಇತ್ತೀಚೆಗೆ ಕೆಲವರು ತಾವು ಹೇಳುವುದೇ ವಾಸ್ತವ ಇತಿಹಾಸ ಎಂದು ಪ್ರತಿಪಾದಿಸಿ, 'ಕುವೆಂಪು ದೇವರನ್ನು ನಂಬುತ್ತಿರಲಿಲ್ಲ' ಎಂದು ಪ್ರತಿಪಾದಿಸುತ್ತಿರುವಾಗ ಇಲ್ಲಿ 'ಕುವೆಂಪು ದೇವರನ್ನು ನಂಬುತ್ತಿದ್ದರು' ಎಂಬುದನ್ನು ಆಧಾರಸಮೇತ ನಿರೂಪಿಸಿರುವ ಜನಪ್ರಿಯ ಲೇಖನವು ಇಲ್ಲಿದೆ. ನನ್ನ ಗುರುಗಳಾದ ಡಾ. ಎಂ. ಚಿದಾನಂದಮೂರ್ತಿ ಯವರು ಮತ್ತು ಪ್ರೊ.ಎಲ್.ಎಸ್. ಶೇಷಗಿರಿರಾವ್ ಅವರ ಬಗ್ಗೆ ಬರೆದಿರುವ ಲೇಖನಗಳು ಕನ್ನಡಾಸಕ್ತರು ಗಮನಿಸಲೇಬೇಕಾದವು. ಇಲ್ಲಿಯವರೆಗೆ ಯಾರೂ ದಾಖಲಿಸದ ಕೆಲವು ಸ್ವಾನುಭವದ ಸಂಗತಿಗಳನ್ನು ಆಧಾರ ಸಮೇತ ದಾಖಲಿಸಿದ್ದಾರೆ. ಜೊತೆಯಲ್ಲಿ ಕೆಲಸಮಾಡಿದ ಕನ್ನಡ ಹೋರಾಟ ಗಾರರ ಬಗ್ಗೆ ಆತ್ಮೀಯವಾಗಿ ಬರೆದಿದ್ದಾರೆ. ಕನ್ನಡ ನಾಡು ಕಂಡ ಉತ್ತಮ ರಾಜಕಿಯ ಮುತ್ಸದ್ದಿ ಎಸ್.ಎಂ. ಕೃಷ್ಣ ಮತ್ತು ಚಂದ್ರಶೇಖರನಾಥ ಸಾಮೀಜಿ ಬಗ್ಗೆ ಬರೆದಿರುವ ಲೇಖನಗಳು ಅಪರೂಪದ ಮಾಹಿತಿಯನ್ನೊಳಗೊಂಡಿವೆ. ನಾಡಾಭಿಮಾನಿಗಳಿಗೆ ಇಂತಹ ಉಪಯುಕ್ತ ಕೃತಿ ಯನ್ನು ನೀಡಿರುವ, ಕನ್ನಡ ಹೋರಾಟಗಾರ ವ.ಚ. ಚನ್ನೇಗೌಡರು ವಿಶೇಷ ಅಭಿನಂದನೆಗೆ ಅರ್ಹರು.

ವಿದೇಶದಲ್ಲಿ ಜನಿಸಿದ ಮಗು!

ಈ ಕೃತಿಯು ಮಾತೆಯೊಬ್ಬರ ಮನದಾಳದ ಮಾತುಗಳು. ಕೃತಿಯ ಶೀರ್ಷಿಕೆಯು ತಿಳಿಸುವಂತೆ, 'ಸುಚೇತನ : ಯುಕೆಯಲ್ಲೊಂದು ಪ್ರಸವ ಪ್ರಸಂಗ'. ಲೇಖಕಿಯು ಯು.ಕೆ.ದೇಶಕ್ಕೆ ಹೋಗಿದ್ದಾಗ ಪಡೆದ ಅನುಭವಗಳು, ಗರ್ಭಧಾರಣೆ, ಮಗುವಿನ ಜನನ, ಸೂಲಗಿತ್ತಿಯ ಮಾತುಕತೆ, ಇವರನ್ನು ಆರೈಕೆ ಮಾಡಲು ತಾಯಿಯವರು ಬಂದದ್ದು ಮೊದಲಾದ ವಿವರಗಳನ್ನು ಬರೆದಿದ್ದಾರೆ. ಜತೆಗೆ, ಯು.ಕೆ. ದೇಶದ ಸಾಮಾಜಿಕ ಜೀವನ, ಮಾರುಕಟ್ಟೆಗಳ ವಿವರ, ಮಗು ಜನಿಸುವಾಗ ಮತ್ತು ಜನಿಸಿದ ನಂತರ ತಾಯಂದಿರು ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು ಮತ್ತು ಪಾಲನೆಯ ವಿವರಗಳು ಇವೆ. ಲೇಖಕಿ ಮತ್ತು ಅವರ ಪತಿ ಇಬ್ಬರೂ ಕೆಲಸದಲ್ಲಿ ತೊಡಗಿಕೊಂಡಾಗ, ಇವರ ಮಗು 'ಸುಚೇತನ್'ನ ನಿದ್ರೆಗೆ ಭಂಗವಾಗದಂತೆ ನೋಡಿಕೊಳ್ಳಲು ಬೇಬಿ ಮಾನಿಟರ್ ಕ್ಯಾಮೆರಾವನ್ನು ಅವನ ಮಲಗುವ ಕೋಣೆಯಲ್ಲಿ ಅಳವಡಿಸಿ, ಅದನ್ನು ನೈಜ ಸಮಯದಲ್ಲಿ ವೀಕ್ಷಿಸುವ ವ್ಯವಸ್ಥೆ ಮಾಡಿಕೊಂಡಿದ್ದರು. ಇಂತಹ ಸಣ್ಣ ಪುಟ್ಟ ಆದರೆ ಪ್ರಮುಖ ಉಪಕ್ರಮಗಳಿಂದಾಗಿ, ಮಗುವಿನ ಆರೋಗ್ಯವನ್ನು ಕಾಪಾಡಬಹುದು ಎಂದು ಲೇಖಕಿ ಬರೆದಿದ್ದಾರೆ. ಇದು ಯು.ಕೆ.ದೇಶದ ಸಾಮಾಜಿಕ ಬದುಕಿನ ಚಿತ್ರಣವೂ ಹೌದು.



ಸುಚೇತನ

ಲೇ: ಸುಮಲತಾ
ಪ್ರ: ಸಪ್ನ ಬುಕ್ ಹೌಸ್ ಬೆಂಗಳೂರು
ಬೆಲೆ ರು.120/-

ಮಾಸ್ತಿ ಎಂಬ ಹಳ್ಳಿಯ ಕಥೆಗಳು!

ಕನ್ನಡದ ಪ್ರಸಿದ್ಧ ಲೇಖಕ, ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಊರು, ಕೋಲಾರ ಸೀಮೆಯ 'ಮಾಸ್ತಿ' ಎಂಬ ಹಳ್ಳಿ. ಆ ಊರಿನವರೇ ಆದ ಈ ಕಥಾ ಸಂಕಲನದ ಲೇಖಕರು, ಮಾಸ್ತಿ ಎಂಬ ಹಳ್ಳಿಯ ಗ್ರಾಮೀಣ ಸನ್ನಿವೇಶಗಳನ್ನು ಕಥೆಗಳ ರೂಪದಲ್ಲಿ ಇಲ್ಲಿ ನಿರೂಪಿಸಿದ್ದಾರೆ. ಓದುಗರಿಗೆ 1970 ಮತ್ತು 80ರ ದಶಕದ ಬಯಲು ಸೀಮೆಯ ಬದುಕಿನ ಚಿತ್ರಣವನ್ನು ಈ ಕಥೆಗಳು ನೀಡುತ್ತವೆ. ''ತಮ್ಮ ಊರಿನ ಮೇರುವ ಅಪರಿಮಿತ ಪ್ರೀತಿ ಮತ್ತು ಅಭಿಮಾನವನ್ನು ಅಕ್ಷರ ರೂಪದಲ್ಲಿ ವ್ಯಕ್ತಪಡಿಸಿರುವ ಲೇಖಕರು, ಓದುಗರಿಗೆ 70ರ ಮತ್ತು 80ರ ದಶಕದ ಗ್ರಾಮೀಣ ಕರ್ನಾಟಕದ ಅಪ್ಯಾಯಮಾನವಾದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಮಾಸ್ತಿ ಊರಿನ ವರಿಗೆ ಮಾತ್ರವಲ್ಲದೆ, ಬೇರಾವುದೇ ಊರಿನ ವರಿಗೂ ಮೂರ್ನಾಕು ದಶಕಗಳಷ್ಟು ಹಿಂದಿನ ಅವರ ಭಾಗದ ಸವಿನೆನಪುಗಳು ಮರುಕಳಿಸು ವಂತೆ ಮಾಡುವ ಈ ಪುಸ್ತಕ, ಓದುಗನನ್ನು ಭೂತ ಕಾಲದ ಒಂದು ಮಧುರ ಕನಸಿನ ಲೋಕಕ್ಕೆ ಕರೆದೊಯ್ಯುತ್ತದೆಯೆಂದರೆ ಉತ್ಪ್ರೇಕ್ಷೆಯಾಗ ಲಾರದು.'' (ಬೆನ್ನುಡಿಯಲ್ಲಿ ಶಿವಪ್ರಸಾದ್ ಎ.)



ಮಾಸ್ತಿ ಕಥೆಗಳು

ಲೇ: ಚೆಲುವಪತಿ ಸಂಪತ್ ಕುಮಾರ್ ರಾಮಾನುಜಂ
ಪ್ರ: ಸ್ನೇಹ ಬುಕ್ ಹೌಸ್ ಬೆಂಗಳೂರು
9845031335, ಬೆಲೆ ರು.160/-

ಭಾವನಾತ್ಮಕ ಶಾಯಿರಿಗಳು

ಕನ್ನಡದಲ್ಲಿ ಶಾಯಿರಿಗಳ ರಚನೆಯ ಪ್ರಯೋಗ ಅಲ್ಲಲ್ಲಿ ನಡೆದಿದೆ. ಉರ್ದು ಮೂಲದ ಈ ಕಾವ್ಯ ಪ್ರಕಾರವನ್ನು ಕನ್ನಡಕ್ಕೆ ರೂಢಿಸಿಕೊಂಡಿರುವುದು ಒಂದು 'ಸಾಹಿತ್ಯ ಸಾಹಸ'ವೇ ಸರಿ. ಇತರ ಪ್ರಕಾರದ ಬರಹಗಳ ಮೂಲಕ ಪರಿಚಿತರಾಗಿರುವ ಡಾ. ಮಂಜುನಾಥ ಎಂ. ಬಮ್ಮನಕಟ್ಟಿಯವರ ಶಾಯಿರಿಗಳ ಸಂಕಲನ 'ಕತ್ತಲು ಬೆಳಕು' ಈ ನಿಟ್ಟಿನಲ್ಲಿ ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ. ಇಲ್ಲಿ ನೂರಾರು ಶಾಯಿರಿಗಳಿವೆ. ಪ್ರೀತಿ ಪ್ರೇಮದ ವಿಷಯದ ಶಾಯಿರಿಗಳ ಜತೆಯಲ್ಲೇ, ಇತರ ವಿಷಯಗಳಲ್ಲೂ ಶಾಯಿರಿ ರಚಿಸಿರುವುದು ಇಲ್ಲಿ ವಿಶೇಷ ಎನಿಸುತ್ತದೆ. ನಾಲ್ಕಾರು ಸಾಲುಗಳಲ್ಲಿ, ಭಾವನಾತ್ಮಕವಾಗಿ ರೂಪುಗೊಳ್ಳುವ ಒಂದು ಶಾಯರಿಯು, ಎದೆಯನ್ನು ತಟ್ಟುವಲ್ಲಿ ಸಫಲವಾಗುವುದು ಗಮನ ಸೆಳೆಯುತ್ತದೆ. 'ನೀ ನನಗ ಕೊಟ್ಟಿ / ನಾ ನಿನಗ ಕೊಟ್ಟಿ / ಕೊಟ್ಟಿದ್ದು ತೊಗೊಂಡಿದ್ದು / ನನಗೂ ನಿನಗೂ ಗೊತ್ತು / ಬ್ಯಾರೆಯವರಿಗೆ ಏನು ಗೊತ್ತು' (ಪುಟ 8) 'ಅವನ ಕತ್ತಲು- ಬೆಳಕ ಮುಂದ / ನಮ್ಮ ಕತ್ತಲು ಬೆಳಕು ಯಾವ ಲೆಕ್ಕ / ಹಂಗಾಗಿ ಅವನು ಪಕ್ಕಾ / ನಾವೇನಿದ್ದರೂ ಕಚ್ಚಾ' (ಪುಟ 21) ಇಂತಹ ಪುಟ್ಟ ಪುಟ್ಟ ಶಾಯರಿಗಳನ್ನು ಓದುವುದೇ ಒಂದು ವಿಶಿಷ್ಟ ಅನುಭವ. ಇಲ್ಲಿ ಬಳಸಲಾಗಿರುವ ಉತ್ತರ ಕರ್ನಾಟಕದ ಭಾಷೆಯು ಶಾಯಿರಿಗೆ ಸೂಕ್ತವೆನಿಸುತ್ತದೆ.



ಕತ್ತಲು ಬೆಳಕು

ಲೇ: ಡಾ. ಮಂಜುನಾಥ ಎಂ. ಬಮ್ಮನ ಕಟ್ಟಿ
ಪ್ರ: ಧನ್ಯಾ ಪಬ್ಲಿಕೇಷನ್ಸ್, ಲಕ್ಷ್ಮೇಶ್ವರ-ಗದಗ
9148969201, ಬೆಲೆ ರು.80/-

ಬೀಚಿ ಸಾಹಿತ್ಯಾವಲೋಕನ

» ಪ್ರೊ. ಜಿ. ಎನ್. ಉಪಾಧ್ಯ. ಮುಂಬೈ

ಕನ್ನಡ ಹಾಸ್ಯ ಸಾಹಿತ್ಯ ನಿರ್ಮಾಪಕರಲ್ಲಿ ಬೀಚಿ ಅವರದು ದೊಡ್ಡ ಹೆಸರು. ಕನ್ನಡ ಹಾಸ್ಯ ಸಾಹಿತ್ಯದಲ್ಲಿ ಬೀಚಿ ಅವರ ಹೆಸರು ಅಜರಾಮರ. ಜೀವನವನ್ನು ಅನೇಕರು ನೋಡಿದ್ದಾರೆ. ಆದರೆ ಬೀಚಿ ನೋಡಿದ ಜೀವನವೇ ಬೇರೆ, ಅದನ್ನು ಅರ್ಥೈಸಿದ ರೀತಿಯೇ ಬೇರೆ. ಅದನ್ನು ಹೇಳುವ ರೀತಿಯೂ ಭಿನ್ನ. ಬೀಚಿ ಅವರ ಜೀವನಯಾನ, ಸಾಹಿತ್ಯ ಸಾಧನೆಯನ್ನು ಸಾಂಪ್ರತ ಕೃತಿಯಲ್ಲಿ ಆಪ್ತ ನೆಲೆಯಲ್ಲಿ ಕಟ್ಟಿಕೊಟ್ಟ ಶ್ರೇಯಸ್ಸು ಹಿರಿಯ ಸಾಹಿತಿ ಶಾ. ಮಂ. ಕೃಷ್ಣರಾಯ ಅವರಿಗೆ ಸಲ್ಲುತ್ತದೆ. ಶಾ. ಮಂ. ಅವರು ಬೀಚಿ ಅವರ ಒಡನಾಡಿಗಳಲ್ಲಿ ಒಬ್ಬರು. ಬೀಚಿ ಅವರ ಕುರಿತು ಸಾಕಷ್ಟು ಬರವಣಿಗೆಯನ್ನೂ ಮಾಡಿದವರು. ಬೀಚಿ ಅವರ ಸಾಹಿತ್ಯ ಸಾಧನೆಯ ಹಿನ್ನೆಲೆಯಲ್ಲಿ 'ತಿಂಮದರ್ಶನ' ಎಂಬ ಬೃಹತ್ ಗೌರವ ಗ್ರಂಥವನ್ನು ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಪ್ರಸ್ತುತ ಕೃತಿಯಲ್ಲಿ ಬೀಚಿ ಅವರ ಸಾಹಿತ್ಯದ ಅನನ್ಯತೆಯನ್ನು, ಅಲ್ಲಿನ ಬಹು ಆಯಾಮಗಳನ್ನು ವಸ್ತುನಿಷ್ಠವಾಗಿ ತೂಗಿ ನೋಡಿ ಹೇಳಿರುವುದು ವಿಶೇಷ.

ಬಳ್ಳಾರಿ ಭೀಮಸೇನರಾವ್ ರಾಯಸಂ (1912-1980) ಕನ್ನಡ ಸಾರಸ್ವತ ಪ್ರಪಂಚಕ್ಕೆ ಬೀಚಿ ಎಂದೇ ಚಿರ ಪರಿಚಿತರು. ತೆಲುಗು, ಇಂಗ್ಲಿಷ್ ಮಾಧ್ಯಮಗಳಲ್ಲಿ ಓದಿ ಕನ್ನಡದಲ್ಲಿ ಹಾಸ್ಯದ ಹೊನಲು ಹರಿಸಿದವರು. ಪೊಲೀಸ್ ಖಾತೆಯಲ್ಲಿ ಅಟೆಂಡರ್‌ರಾಗಿ ಸೇರಿ ಕಾಲಾನುಕ್ರಮದಲ್ಲಿ ಬಡತಿ ಹೊಂದುತ್ತ ಸಿ.ಐ.ಡಿ. ಸ್ಪೆಷಲ್ ಬ್ರಾಂಚಿನ ಸುಪರಿಂಟೆಂಡೆಂಡ್‌ರಾಗಿ ನಿವೃತ್ತರಾದರು. ಕನ್ನಡದಲ್ಲಿ ಅವರು ಅರವತ್ತೆರಡು ಗ್ರಂಥಗಳನ್ನು ಪ್ರಕಟಿಸಿದರು. ಇವುಗಳಲ್ಲಿ 33 ಕಾದಂಬರಿಗಳು, 21ಹಾಸ್ಯ ಪ್ರಬಂಧಗಳು, ಮೂರು ನಾಟಕ ಸಂಕಲನಗಳು, ಒಂದು ಪ್ರವಾಸ ಕಥನ, ಒಂದು ಕಾವ್ಯ, ಒಂದು ಅನರ್ಥ ಕೋಶ ಇನ್ನೊಂದು ಆತ್ಮ ಕಥನ (ನನ್ನ ಭಯಾಗ್ರಫಿ). ಬೀಚಿ ತಮ್ಮ ಕೃತಿಗಳಲ್ಲಿ ಸಮಾಜದ ನೋವು ನಲಿವು, ಸಾಚಾತನ-ಕಪಟ, ಅವಾಸ್ತವ-ವಾಸ್ತವಗಳನ್ನು ತೆರೆದಿಟ್ಟರು. ರಾಜಕಾರಣಿಯಿರಲಿ, ಸಾಧು ಸಂನ್ಯಾಸಿಗಳಿರಲಿ, ಪುರೋಹಿತರಿರಲಿ, ಪುರೋಹಿತಶಾಹಿಯ ಪೋಷಕರಿರಲಿ, ವಂಚಕರಿ ರಲಿ, ನಯವಂಚಕರಿರಲಿ ಯಾರಿದ್ದರೂ ಸರಿ, ಅವರ ಅಂಕುಡೊಂಕುಗಳನ್ನು ನಿರ್ಭಿಡೆಯಿಂದ ಬಿಚ್ಚಿಟ್ಟರು. ಅವರು ತಂದ ಪಾತ್ರಗಳು ನೂರಾರು. ಅವು ಒಂದಕ್ಕಿಂತ ಒಂದು ಭಿನ್ನವಾಗಿವೆ. ಅವುಗಳನ್ನು ಚಿತ್ರಿಸಿದ ರೀತಿ ವಿಶಿಷ್ಟವಾಗಿದೆ. ಅದಕ್ಕೆ ಬೆಂಬಲವಾಗಿ ನಿಂತಿದ್ದು ಬೀಚಿಯವರ ಸೂಕ್ಷ್ಮಗ್ರಹಣ ಮತ್ತು ಶೈಲಿಯ ಮೊನಚು ಎಂಬುದನ್ನು ಅವರ ಕೃತಿಗಳ ಹಿನ್ನೆಲೆಯಲ್ಲಿ ಇಲ್ಲಿ ಚರ್ಚೆ ಮಾಡಿರುವುದು ಯೋಗ್ಯ ಉಪಕ್ರಮ. ಕನ್ನಡ ವಿಮರ್ಶೆ ಬೀಚಿ ಅವರ ಸಾಹಿತ್ಯಕ್ಕೆ ನ್ಯಾಯ ಒದಗಿಸಿಲ್ಲ. ಈ ಕೊರತೆಯನ್ನು ಕೃಷ್ಣರಾಯರು ನೀಗಿ ಸುತ್ತ ಬಂದವರು. ಪ್ರಸಕ್ತ ಕೃತಿಯಲ್ಲಿ ಅದು ಎದ್ದು ಕಾಣುತ್ತದೆ.

ಬೀಚಿ ಅವರ ಶೈಲಿಯ ವೈಶಿಷ್ಟ್ಯ ಬೇರೆ. ಅಲ್ಲಿ ಕರ್ನಾಟಕದ ಆಡು ಭಾಷೆಯಿದೆ, ಗಾದೆಗಳಿವೆ, ಹೊಸ ಅರ್ಥದ ಗಾದೆಗಳಿವೆ, ಶಬ್ದಗಳ ಚೆಲ್ಲಾಟವಿದೆ, ಮುತ್ತಿನಂಥ ಮಾತುಗಳಿವೆ, ಅನುಭವದ ತೀವ್ರತೆಯಿದೆ. ಬೀಚಿ ಬರೆದಂತೆ ಯಾರೂ ಬರೆಯುವುದು ಸಾಧ್ಯವಿಲ್ಲ. ಅವರ ವಿಚಾರಗಳು, ದಾರಿ ಬೇರೆ. ಕನ್ನಡದಲ್ಲಿ ಖಚಿತವಾಗಿ ಗುರುತಿಸುವಂತಹ ಶೈಲಿ ಅವರದು ಎಂಬ ಖಚಿತ ನಿಲುವು ಇಲ್ಲಿ ಪ್ರಕಟವಾಗಿದೆ.

ಬೀಚಿಯ ಕಥೆಗಳು ಕಲ್ಪನಾ ಸಾಮ್ರಾಜ್ಯದಿಂದ ಎದ್ದುಬಂದವುಗಳಲ್ಲ. ನಮ್ಮ ನಿಮ್ಮೊಳಗೆ ಬದುಕಿ ಬಾಳಿದ ಸಾಮಾನ್ಯರು- ಅಸಾಮಾನ್ಯರು. ಅವರು ಬರೆವಣಿಗೆಯಲ್ಲಿ ಎಡಪಂಥೀಯರಂತೆ ಕಂಡರೂ ಅವರಲ್ಲಿ ಮಾನವೀಯತೆಯ ಸೆಳೆತವಿದೆ, ಸಮಾಜದಲ್ಲಿ ಬೇರು ಬಿಟ್ಟಿರುವ ಮೂಢನಂಬಿಕೆ, ಭ್ರಷ್ಟಾಚಾರ, ಅನಾಚಾರ, ಜಾತೀಯತೆ, ಪಕ್ಷಪಾತ ತೊಡೆದು ಹಾಕಬೇಕೆಂಬ ತುಡಿತವಿದೆ. ಅವರು ಬದುಕಿದ ಪರಿಸರದ ಆಸ್ತಿಕರ ಗುಂಪಿನಲ್ಲಿಯೇ ನಾಸ್ತಿಕರಾಗಿ ಬೆಳೆದವರು ಬೀಚಿ. ಕೇವಲ ಹಾಸ್ಯ ಸಾಹಿತಿಯಷ್ಟೇ ಅಲ್ಲ ಅವರೊಬ್ಬ ದಾರ್ಶನಿಕರೂ ಹೌದು ಎಂಬುದನ್ನು ಕೃಷ್ಣರಾಯರು ಈ ಕೃತಿಯಲ್ಲಿ ರುಜುವಾತು ಪಡಿಸಿದ್ದಾರೆ. ಸಾಹಿತ್ಯ ಅಕಾಡೆಮಿಯ ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆಯಲ್ಲಿ ಪ್ರಕಟಣೆ ಕಂಡದ್ದು ಮೆಚ್ಚತಕ್ಕ ಸಂಗತಿ.



ಬೀಚಿ

ಲೇಖಕರು: ಶಾ. ಮಂ.ಕೃಷ್ಣ ರಾಯ
ಸಾಹಿತ್ಯ ಅಕಾಡೆಮಿ, ನವದೆಹಲಿ.
ಬೆಲೆ ರು.100/-

ಪ್ರಸಿದ್ಧ ಗಾಯಕ ಗುರುರಾಜ ಹೊಸಕೋಟೆಯವರ ಬದುಕನ್ನು ಅಕ್ಷರಗಳಲ್ಲಿ ಹಿಡಿದಿಡುವ ಈ ಗ್ರಂಥವು, ಜನಪದ ಗಾಯಕ ನೊಬ್ಬನ ಬದುಕಿನ ನೋವನ್ನೂ ಸೆರೆಹಿಡಿದಿದೆ.

ಬೆಂಕಿಯಲ್ಲಿ ಅರಳಿದ ಗುರು

» ದ್ವಾರನಕುಂಟೆ ಪಾತಣ್ಣ

ನಾಡಿನಾದ್ಯಂತ ಎಲ್ಲ ರಂಗದಲ್ಲಿ ಎಲ್ಲ ಕ್ಷೇತ್ರದಲ್ಲಿ ಆ ಕ್ಷೇತ್ರದ ಉನ್ನತಿಗಾಗಿ ಶ್ರಮಿಸುವ ವ್ಯಕ್ತಿಗಳ ಸಾಧಾರಣ ಪ್ರತಿಭೆ ಉಳ್ಳವರ ಸಾಧನೆಯ ಸಂಖ್ಯೆಗೆ ಕಡಿಮೆ ಇಲ್ಲ. ಕೆಲವರಿಗೆ ಅಪಾರವಾದ ಅಭಿಮಾನಿಗಳ ಬಳಗವಿದೆ. ಆ ಅಭಿಮಾನಿ ಬಳಗ ತಮ್ಮ ತಮ್ಮಲ್ಲಿರುವ ಆದಕಾರಣ ಸಾಧನೆಯ ಪರಿಚಯಿಸುವ ಸಲುವಾಗಿ ಅವರಿಗೆ ಅಭಿನಂದನಾ ಗ್ರಂಥವನ್ನು ಸಂಚರಿಸಿ ಸಮರ್ಪಿಸುತ್ತಾರೆ. ಜಾಂಬವ ಎಂ. ಗಂಗಾಧರ್ ಅವರ ಸಂಪಾದಕತ್ವದಲ್ಲಿ ನಾಡಿನ ಹಿರಿಯ ಜನಪದ ಗಾಯಕ ಗುರುರಾಜ ಹೊಸಕೋಟೆ ಅವರಿಗೆ 78 ವಸಂತಗಳು ತುಂಬಿರುವ ಸಂದರ್ಭದಲ್ಲಿ 'ಗಾನಗಾರುಡಿಗ ಗುರುರಾಜ ಹೊಸಕೋಟೆ' ಅಭಿನಂದನಾ ಗ್ರಂಥವನ್ನು ತಂದಿದ್ದಾರೆ. ಗುರುರಾಜ ಹೊಸಕೋಟೆ ಅವರ ಸಾಧನೆ ಮತ್ತು ಹೋರಾಟದ ಬದುಕಿನ ಅನೇಕ ಮಜಲುಗಳನ್ನು ಪರಿಚಯಿಸುವ ಉತ್ತಮ ಕೆಲಸವನ್ನು ಮಾಡಿದ್ದಾರೆ.

ಗುರುರಾಜ ಹೊಸಕೋಟೆ ಅವರು ಉತ್ತರ ಕರ್ನಾಟಕದವರು. ತಂದೆಗೆ ಎಂಟನೇ ಮಗನಾಗಿ ಜನಿಸಿದವರು; ಇಡೀ ಕುಟುಂಬ ಬಡತನದಲ್ಲಿತ್ತು. ಅಂತಹ ಬಡತನದಿಂದ ಬಂದಿರುವ ಗುರುರಾಜ್ 'ಬೆಂಕಿಯಲ್ಲಿ ನೊಂದು ಬೆಂದು ಅರಳಿದ ಮುತ್ತು'. ಜಾನಪದ ಶೈಲಿಯ ಗಾಯನಕ್ಕೆ ತನ್ನದೇ ಆದ ಕೊಡುಗೆ ನೀಡಿದವರು ಗುರುರಾಜರು. ಪ್ರಶಸ್ತಿ ಪುರಸ್ಕಾರದ ಹಿಂದೆ ಹೋಗದೆ ತಮ್ಮಷ್ಟಕ್ಕೆ ತಾವೇ ಕಾಯಕ ನಿಷ್ಠೆ ಯನ್ನು ಮುಂದುವರಿಸಿದ ಗಾಯಕ. ಸಿದ್ಧಿಯೇ ಅವರ ಪರಮಗುರಿ. ಸಂಗೀತ ಮತ್ತು ಜಾನಪದ ಗಾಯನದ ಬೆನ್ನು ಹತ್ತಿ, ಪ್ರಸಿದ್ಧಿಗೆ ಬಂದವರು.

ಈ ಅಭಿನಂದನಾ ಗ್ರಂಥದಲ್ಲಿ ಸಮಾಜದ ವಿವಿಧ ಕ್ಷೇತ್ರದ 50 ಜನರು ಗುರುರಾಜರ ಕುರಿತು ಮನದಾಳದ ಮಾತುಗಳನ್ನು ಬರೆದಿದ್ದಾರೆ. ಪ್ರಮುಖವಾಗಿ ಬಿ.ಎ. ನಾರಾಯಣಗೌಡರು, ಕರವೇಯಲ್ಲಿ ಗುರುರಾಜ ಹೊಸಕೋಟೆ ಅವರನ್ನು ಸಾಂಸ್ಕೃತಿಕ ಘಟಕದ ಅಧ್ಯಕ್ಷರಾಗಿ ನೇಮಿಸಿದ್ದಾರೆ. 'ಅವರ ಎಷ್ಟೋ ಹಾಡುಗಳು ನಮ್ಮ ಚಳುವಳಿಗೆ ವೇಗವರ್ಧಕದಂತೆ ಕೆಲಸ ಮಾಡಿವೆ' ಎಂದಿದ್ದಾರೆ. ಕನ್ನಡ ಚಳುವಳಿಗೆ ಸ್ಫೂರ್ತಿ ನೀಡುವ ಹಲವು ಹಾಡುಗಳನ್ನು ಗುರುರಾಜರು ಕಟ್ಟಿದ್ದಾರೆ ಎಂದು ಹೇಳಿದ್ದಾರೆ.

ಗುರುರಾಜ ಹೊಸಕೋಟೆ ಅವರು ಸುಮಾರು 4,000 ಹಾಡುಗಳನ್ನು ಬರೆದು, ಹಾಡಿದ್ದಾರೆ. ಆದರೆ ಅವುಗಳನ್ನು ಪುಸ್ತಕ ತರುವ ಕೆಲಸ ಮಾಡಿಲ್ಲ. ಅವರು ಬರೆದ ಎಷ್ಟೋ ಹಾಡುಗಳಿಗೆ ತಮ್ಮ ಹೆಸರನ್ನೇ ಬಳಸಿಲ್ಲ. ಇವರು ಬರೆದ ಹಾಡುಗಳನ್ನು ಬರೆದವರು ಯಾರೆಂದು ಗೊತ್ತಾಗದೆ ಜನರು ಅವುಗಳನ್ನು ಹಾಡಿ, ಹಾಡಿ, ಬಾಯಿಂದ ಬಾಯಿಗೆ ಹರಡಿದವು ಎಂದು ಅವರೇ ಹೇಳಿದ್ದಾರೆ. ಬೇಕೆಂದೇ ಹಾಡುಗಳ ಕೃತಿಕಾರರು ಯಾರೆಂಬುದು ಗೊತ್ತಾಗದೆ ಅದು ಜನಪದ ವಾಗಲಿ ಎಂದು ಹೆಸರನ್ನು ಅವರು ನಮೂದಿಸಿಲ್ಲ.

ಹೊಸಕೋಟೆ ಅವರು ಹಾಡಿರುವ ಜನಪ್ರಿಯ ಹಾಡುಗಳಲ್ಲಿ ಕೆಲವು ಎಂದರೆ 1. ತಾಯಿ ಸತ್ತ ಮೇಲೆ ತವರಿಗೆ ಎಂದು ಹೋಗಬಾರದವ್ವ 2. ಕಲಿತ ಹುಡುಗಿ ಕುದುರಿ ನಡಿಗೆ ಹಿಡ್ಕೊಂಡು ನಡೆದಿತ್ತಾ 3. ದುಡ್ಡು ಕೊಟ್ಟರೆ ಬೇಕಾದ್ದು ಸಿಗುತ್ತೈತೆ. ಮೊದಲಾದವು. ಅವರು ಸಂಗ್ಯಾಬಾಳ್ಯ, ಕರಿಯ, ಜೋಗಿ, ತವರಿನ ತೊಟ್ಟಿಲು ಮೊದಲಾದ 50 ಚಲನಚಿತ್ರಗಳಲ್ಲಿ ಹಾಡಿದ್ದಾರೆ ಮತ್ತು ಸುಮಾರು 130 ಕ್ಕೂ ಅಧಿಕ ಚಲನಚಿತ್ರಗಳಲ್ಲಿ ನಟಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯವರಾದ ಅವರು, ಈಗ ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ಈ ವಯಸ್ಸಿನಲ್ಲೂ ಬದುಕಿನ ಬಂಡಿ ನಡೆಸಲು ಹಾಡುವುದನ್ನು ಮುಂದುವರಿಸಿದ್ದಾರೆ. ಇಂತಹ ಪ್ರಸಿದ್ಧ ಗಾಯಕನ ಬದುಕು ಹೀಗಾದರೆ ಹೇಗೆ ಎನ್ನುವ ಪ್ರಶ್ನೆ ಏಳುತ್ತದೆ. ಇಂತಹ ಸಾಧಕರ ಸಾಧನೆಯನ್ನು ಗುರುತಿಸುವ ಜವಾಬ್ದಾರಿ ಸಮಾಜಕ್ಕೆ, ಸರಕಾರಕ್ಕೆ ಮತ್ತು ಸಂಘ-ಸಂಸ್ಥೆಗಳಿಗೆ ಇದೆ. 'ಗಾನ ಗಾರುಡಿಗ' ಗ್ರಂಥ ಜನರ ಕಣ್ಣು ತೆರೆಸುವ ಗ್ರಂಥ. ಜನಪದ ಗಾಯಕನೊಬ್ಬ ಜೀವನ ಯಾನವನ್ನು ತಿಳಿಸಿಕೊಡುವ ಸಂಗ್ರಹ ಯೋಗ್ಯ ಗ್ರಂಥ.



ಗಾನ ಗಾರುಡಿಗ

ಸಂ: ಜಾಂಬವ ಎಂ. ಗಂಗಾಧರ್
ಪ್ರ: ಆದಿ ಜಾಂಬವ ಜಾಗೃತಿ ಬೆಂಗಳೂರು
9901750002, ಬೆಲೆ ರು.200/-

ವಿಶ್ವವಾಣಿ ಅಂಕಿತ ಟಾಪ್ ಟೆನ್



1 ಜುಗಾರಿ ಕ್ರಾಸ್

(ಚಲನಚಿತ್ರವಾಗುತ್ತಿರುವ ತೇಜಸ್ವಿಯವರ ಕಾದಂಬರಿ ಇದು. ಸಹ್ಯಾದ್ರಿಯ ಸಾಮಾಜಿಕ ಸ್ಥಿತ್ಯಂತರಗಳನ್ನು ತೋರಿಸುತ್ತದೆ)
ಲೇ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ
ಪ್ರ: ಪುಸ್ತಕ ಪ್ರಕಾಶನ, ಮೂಡಿಗೆರೆ
ಬೆಲೆ: ರೂ 246/-

2 ಅಲ್ಲಮ ಕಥನ

(ಇತಿಹಾಸದಲ್ಲಿ ಅಲ್ಲಮನ ಹೆಸರು ದೊಡ್ಡದು. ಅವರ ಆಧ್ಯಾತ್ಮಿಕ ಯಾನಕ್ಕೆ ಪುಸ್ತಕ ರೂಪ ಕೊಟ್ಟಿದ್ದಾರೆ ಮಲ್ಲೇಪುರಂ ಅವರು)
ಲೇ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 595/-



3 ನೆನಪು ನೀಲಾಂಜನ

(ಸ್ವಾತಂತ್ರ್ಯೋತ್ತರ ಭಾರತದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರು ಮಾಡಿದವರು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ನೆನಪುಗಳನ್ನು ಇಲ್ಲಿ ದಾಖಲಿಸಿದ್ದಾರೆ)
ನಿರೂಪಣೆ: ವೈದೇಹಿ
ಪ್ರ: ಅಕ್ಷರ ಪ್ರಕಾಶನ ಹೆಗ್ಗೋಡು
ಬೆಲೆ: ರೂ 225/-

4 ಇಂತಿ ನಿನ್ನ ಪ್ರೀತಿಯ ಮಾನಸ

(ಅಲ್ಪಾವಧಿಯಲ್ಲೇ ಜನಪ್ರಿಯತೆಗಳಿಸಿ ಮೂರನೆಯ ಮುದ್ರಣ ಕಾಣುತ್ತಿರುವ ಕಾದಂಬರಿ)
ಲೇ: ಈಶ್ವರ ಅ. ಮದರಕಲ್
ಪ್ರ: ಸಾಹಿತ್ಯಪ್ರಿಯ ಪ್ರಕಾಶನ, ಮದರಕಲ್
ಬೆಲೆ: ರೂ 200/-



5 ಘಟಸರ್ಪ

(ಖಾಸಗಿ ಸಂಸ್ಥೆಗಳಲ್ಲಿ ನಡೆಯುವ ಪಾಲಿಟಿಕ್ಸ್ ಹೇಗೆ ಪ್ರಾಮಾಣಿಕರಿಗೆ ಮುಳುವಾಗುತ್ತದೆ ಎಂಬುದನ್ನು ವಿವರಿಸುವ ಕಾದಂಬರಿ.)
ಲೇ: ಬಿ. ಜಿ. ರಾಮನಾಥ್
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು, ಬೆಲೆ: ರೂ 495/-



6 ಹೊನ್ನ ಸರಿಗೆ

(ಪ್ರಸಿದ್ಧ ವಿಮರ್ಶಕ ನರಹಳ್ಳಿಯವರ ವಿಮರ್ಶಾಲೇಖನಗಳು ಈಗ ಪುಸ್ತಕ ರೂಪ ತಾಳಿವೆ)
ಲೇ: ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರ: ಅಭಿನವ, ಬೆಂಗಳೂರು
ಬೆಲೆ: ರೂ 350/-

7 ಪ್ರತಿಮಾ ವಿಲಾಸ

(ಕಥೆಗಾರ ಕಂನಾಡಿಗಾ ಅವರ ಪ್ರತಿಮೆ-ಸಂಕೇತ-ರೂಪಕಗಳಲ್ಲೇ ವಿಹರಿಸುವ ವಿಭಿನ್ನ ಕಥೆಗಳು)
ಲೇ: ಕಂನಾಡಿಗಾ ನಾರಾಯಣ
ಸಪ್ನಬುಕ್ ಹೌಸ್, ಬೆಂಗಳೂರು
ಬೆಲೆ: ರೂ 225/-



8 ಸೆರಗಿನ ಕಿಡಿ

(ಮಹಾಭಾರತದಲ್ಲಿಮ 16 ಮಹಾರಾಣಿಯರ ಕಥೆ ಇಲ್ಲಿದೆ)
ಲೇ: ಡಾ। ರುಕ್ಮಿಣಿ ರಘುರಾಮ್
ಪ್ರ: ಕದಂಬ ಪ್ರಕಾಶನ, ಬೆಂಗಳೂರು
ಬೆಲೆ: ರೂ 450/-

9 ಸಾಗರದಲೆಗಳ ಮೇಲೆ

(ಹಡಗು ಪ್ರಯಾಣದ ತಾಂತ್ರಿಕ ವಿವರಗಳನ್ನು ಒಳಗೊಂಡ, ವಾಣಿಜ್ಯ ನೌಕೆಯ ನಾವಿಕನ ಅನುಭವಗಾಥೆ)
ಲೇ: ಜಿ.ಆರ್. ವಿದ್ಯಾರಣ್ಯ
ಪ್ರ: ಭಾರತೀ ಪ್ರಕಾಶನ, ಮೈಸೂರು
ಬೆಲೆ: ರೂ 400/-

10 ಕೊಂದವರುಳಿದರೇ...

(ವಿದ್ಯಾರ್ಥಿಗಳ ಪ್ರತಿಭಟನೆ, ಅದರ ಲಾಭ ಪಡೆಯುವ ವ್ಯವಸ್ಥೆ ಎಲ್ಲವನ್ನೂ ಒಳಗೊಂಡಿರುವ ಜನಪ್ರಿಯ ಕಾದಂಬರಿ)
ಲೇ: ಗುರುನಾಥ ಅಕ್ಕಣ್ಣ
ಪ್ರ: ವೀರಲೋಕ ಪ್ರಕಾಶನ, ಬೆಂಗಳೂರು
ಬೆಲೆ: ರೂ 325/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಕ್ಲಿಷ್ಟ ಸಂದರ್ಭಗಳಲ್ಲಿ ಎಂತಹ ನಿರ್ಧಾರ ತೆಗೆದುಕೊಳ್ಳಬೇಕು ಮತ್ತು ರೋಗಿಗಳ ಜೀವ ಉಳಿಸುವಲ್ಲಿ ಯಾವ ಕ್ರಮ ಉತ್ತಮ ಎಂದು ನಿಶ್ಚಯಿಸುವಾಗ, ವೈದ್ಯರಿಗೆ ದ್ವಂದ್ವಗಳು ಎದುರಾಗುವುದೂ ಇದೆ! ಜತೆಗೆ, ಸರಕಾರ ವಿಧಿಸಿದ ಕಾನೂನುಗಳನ್ನು ಸಹ ಪಾಲಿಸಬೇಕು!

ವೈದ್ಯರ ದ್ವಂದ್ವ

» ಡಾ. ಎನ್ ಭಾಸ್ಕರ ಆಚಾರ್ಯ

ಆ ವೈದ್ಯರಿಗೆ, (ಡಾ. ಎಸ್ ಎಂದಿಟ್ಟುಕೊಳ್ಳೋಣ) ಆ ದಿನ ಆಸ್ಪತ್ರೆಯಲ್ಲಿ ಅದೇಕೋ ಬಹಳ ಕಿರಿಕಿರಿಯೆನಿಸುತ್ತಿತ್ತು. ರಾತ್ರಿಯಿಂದ ಕಾರ್ಯನಿರ್ವಹಿಸುತ್ತಿದ್ದ ಅವರು ಎರಡು ಸಹಜ ಪ್ರಸವ ನಡೆಸಿ, ಸುಸ್ತಾಗಿರುವಾಗಲೇ, ಬೆಳಿಗ್ಗಿನ ಜಾವ ನಾಲ್ಕು ಗಂಟೆಗೆ ಸರಿಯಾಗಿ, ಇನ್ನೋರ್ವ ತುಂಬು ಗರ್ಭಿಣಿ ರೋಹಿಣಿ ಸಣ್ಣ ಹೊಟ್ಟೆನೋವು, ಕೆಂಪು ಮಿಶ್ರಿತ ನೋಳಿ ಸ್ರಾವವೆಂದು ಬಂದಳು. ಹಳ್ಳಿಗಾಡಿನಿಂದ ಬಂದ ಆಕೆಗೆ ರಾತ್ರಿ ಹನ್ನೆರಡು ಗಂಟೆಗೆ ಪ್ರಸವ ವೇದನೆ ಪ್ರಾರಂಭವಾಗಿತ್ತು. ವೈದ್ಯರು ಕೊಟ್ಟ ಪ್ರಸವ ದಿನಾಂಕ ಮೀರಿ ಮೂರ್ನಾಲ್ಕು ದಿನಗಳಾಗಿದ್ದವು. ನೋವು ಬಾರದಿದ್ದುದರಿಂದ ಸುಮ್ಮನಿದ್ದ ಆಕೆ, ಹಿಂದಿನ ರಾತ್ರಿ ನೋವು ಪ್ರಾರಂಭವಾಗುತ್ತಿದ್ದಂತೆ ಗಂಡನಿಗೆ ತಿಳಿಸಿ, ಆತ ತನ್ನ ಊರಿನಿಂದ ಕಾರು ಬಾಡಿಗೆಗೆ ಹಿಡಿದು, ಸರ್ಕಾರಿ ತಾಲೂಕು ಆಸ್ಪತ್ರೆಗೆ ಬರುವಾಗ ಬೆಳಗಿನ ಜಾವ ಗಂಟೆ ಐದಾಗಿತ್ತು. ಆಗಷ್ಟೆ ನಿದ್ದೆಗೆ ಜಾರಿದ್ದ ಡಾ. ಎಸ್, ಕೂಡಲೆ ಎದ್ದು ಬಂದು ಗರ್ಭಿಣಿಯನ್ನು ಪರೀಕ್ಷಿಸಿ ನೋಡಿದರು. ಗರ್ಭಿಣಿಯ ಸೊಂಟದ ಮೂಳೆದ್ವಾರ ಸಾಧಾರಣ ಮಟ್ಟಿಗೆ ವಿಶಾಲವಾಗಿದ್ದು, ಗರ್ಭದ್ವಾರ ಸಾಧಾರಣ ಒಂದು ಬೆರಳಿನಷ್ಟು ತೆರೆದುಕೊಂಡಿದ್ದು ಇನ್ನಷ್ಟೆ ಸಡಿಲವಾಗಿ ಮೆದುವಾಗಬೇಕಿತ್ತು. ಮಗುವಿನ ತಲೆ ಕೆಳಗಿದ್ದು, ತಲೆಯ ಕೆಳಗಡೆ ಹಳ್ನೀರು ತುಂಬಿಕೊಂಡ ಗರ್ಭಪೊರೆ ಕೈಗೆ ಸಿಗುತ್ತಿತ್ತು. ಆದರೆ ಮಗುವಿನ ಬೆನ್ನಿನ ಭಾಗ, ಬಲಬದಿಗೆ ಕಾಣಿಸಿಕೊಂಡು ಅದು ಪ್ರಸವ ವೇದನೆ ಹೆಚ್ಚಾಗುತ್ತಿದ್ದಂತೆ, ಇನ್ನಷ್ಟು ತಿರುಗಿ ಎಡಬದಿಗೆ ಬಂದರಷ್ಟೇ ಹೆರಿಗೆ ಸಸೂತ್ರವಾಗಿ ಜರುಗಬಹುದಿತ್ತು.

ಹೊಟ್ಟೆಯೊಳಗೆ ಮಗುವಿನ ಕೈಕಾಲುಗಳ ಚಲನೆ, ಹೃದಯ ಬಡಿತ ಸರಿಯಾದ ಮಿತಿಯೊಳಗೇ ಇತ್ತು. ಹದಿನೈದು ದಿನಗಳ ಹಿಂದೆ ಅದೇ ಆಸ್ಪತ್ರೆಯಲ್ಲಿ ಮಾಡಿದ ಹೊಟ್ಟೆಯ ಅಲ್ಟ್ರಾಸೌಂಡ್ ವರದಿ ಕೂಡಾ ಈತ ಕಂಡುಕೊಂಡ ಅಂಶಗಳನ್ನೇ ಪುಷ್ಟೀಕರಿಸುತ್ತಿತ್ತು. ಅದರ ಪ್ರಕಾರ ಮಗುವಿನ ತೂಕ ಸಾಧಾರಣ ಎರಡೂವರೆ ಕೆಜಿಯಷ್ಟಿದ್ದು, ಈ ನಂತರದ ಹತ್ತು ಹದಿನೈದು ದಿನಗಳಲ್ಲಿ ಐನೂರು ಗ್ರಾಂಗಳಷ್ಟಾದರೂ ಹೆಚ್ಚಾಗಿರಬೇಕೆಂದುಕೊಂಡನು ಡಾ. ಎಸ್. ಮಗು ಸಸೂತ್ರವಾಗಿ ಎಡಕ್ಕೆ ತಿರುಗಿ ಬಂದರೆ ಸರಿ. ಆದರೆ ಅದರ ತೂಕವೇ ಅದಕ್ಕೆ ಅಡ್ಡಿಯಾಗುವ ಸಂಭವವೇ ಬಹಳ ಹೆಚ್ಚು ಎಂದು ಅವರಿಗೆ ಅನಿಸಿತು. ಮೂಳೆಯ ದ್ವಾರ ಪರವಾಗಿಲ್ಲ, ಮಗುವಿನ ತಲೆ ಸಾಕಷ್ಟು ಕೆಳಗಿದೆ ಎಂದು ಅನಿಸಿದರೂ, ಅದ್ಯಾಕೋ ಪ್ರಸವ ವೇದನೆ ಹೆಚ್ಚಾಗುತ್ತಿದ್ದಂತೆ, ಮಗು ಅಡ್ಡ ತಿರುಗಿ ಸಹಜ ಪ್ರಸವ ಅಸಾಧ್ಯವಾಗಬಹುದು ಎಂದು ಆತನ ಒಳ ಮನಸ್ಸು ಹೇಳುತ್ತಿತ್ತು. ಈ ಪರಿಸ್ಥಿತಿಯಲ್ಲಿ ಕಾಯುವುದಲ್ಲದೆ ಬೇರೇನೂ ಉಪಾಯವಿಲ್ಲ ಎಂದು ತೀರ್ಮಾನಿಸಿ ಸಿಸ್ಟರ್‌ಗೆ ತಕ್ಕ ಸಲಹೆಗಳನ್ನು ಕೊಟ್ಟು, ಹೋಗಿ ಮಲಗಿದರು. ದೇಹ, ಮನಸ್ಸು ಎರಡೂ ದಣಿದಿದ್ದರೂ ಅವರಿಗೆ ನಿದ್ದೆ ಮಾತ್ರ ಹತ್ತಿರ ಸುಳಿಯಲಿಲ್ಲ.

ಅವರು ಕೆಲಸ ಮಾಡುತ್ತಿದ್ದ ಆಸ್ಪತ್ರೆ ತಾಲೂಕು ಆಸ್ಪತ್ರೆಯಾದ್ದರಿಂದ ಅವರು ಕೆಲಸಕ್ಕೆ ಸೇರಿದ ಮೊದಮೊದಲು ಅಂದರೆ ಸುಮಾರು ಹನ್ನೆರಡು ವರ್ಷಗಳಷ್ಟು ಹಿಂದೆ ಅಲ್ಲಿಗೆ ಬಡ ರೋಗಿಗಳೇ ಹೆಚ್ಚಾಗಿ ಬರುತ್ತಿದ್ದರು. ಅಂಥವರು ಗದ್ದೆ, ತೋಟಗಳಲ್ಲಿ ಮೈ ಬಗ್ಗಿಸಿ ದುಡಿಯುವುದನ್ನೂ ಬಿಡುತ್ತಿರಲಿಲ್ಲ. ಹಾಗಾಗಿ ಹೆಚ್ಚಿನ ಗರ್ಭಿಣಿಯರಿಗೆ ಸುಲಭ, ಸಹಜ ಪ್ರಸವವಾಗುತ್ತಿತ್ತು.

ಈ ಮಧ್ಯೆ ದೊಡ್ಡ ದಾನಿಗಳ್ಯಾರೋ ತಾಲೂಕು ಆಸ್ಪತ್ರೆಯಲ್ಲಿ ಆಗುತ್ತಿದ್ದ ಪ್ರಸವಗಳ ಸಂಖ್ಯೆಯನ್ನು ನೋಡಿ, ಅಲ್ಲಿ ಹೊಸತೊಂದು ವಾರ್ಡನ್ನು ಕಟ್ಟಿಸಿಕೊಟ್ಟರು. ಸ್ತ್ರೀರೋಗ ತಜ್ಞ ವೈದ್ಯರನ್ನೂ ಕೂಡಾ ಕಾಂಟ್ರ್ಯಾಕ್ಟ್ ಆಧಾರದಲ್ಲಿ ನೇಮಿಸಲಾಯ್ತು. ಅದರಿಂದಾಗಿ ಕ್ರಮೇಣ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ದಾಖಲಾಗುವವರ ಸಂಖ್ಯೆ ಹೆಚ್ಚಾಗುತ್ತ ಹೋಗಿ, ತಿಂಗಳೊಂದಲ್ಲಿ ಇನ್ನೂರರ ಗಡಿ ದಾಟತೊಡಗಿತ್ತು. ಹಾಗೆಯೇ ಮೇಲ್ವರ್ಗದ ಗರ್ಭಿಣಿಯರೂ ಅಧಿಕ ಸಂಖ್ಯೆಯಲ್ಲಿ ದಾಖಲಾಗುತ್ತಿದ್ದರು.

ಹೆಚ್ಚಿನವರು ವಿದ್ಯಾವಂತರೂ, ವಿವಿಧ ನೌಕರಿಗಳಲ್ಲಿ ದುಡಿಯುವವರೂ ಆಗಿದ್ದು, ಅವರ ಮದುವೆ ವಯಸ್ಸು ಕೂಡಾ ಸರಾಸರಿ ಮುವತ್ತು ವರ್ಷಗಳಷ್ಟು ಇತ್ತು ಎನ್ನಬಹುದು. ಅಲ್ಲದೇ ಸ್ಥಿತಿವಂತರೂ ಆಗಿದ್ದರಿಂದ ಅವರ ಗರ್ಭಿಣಿ ಆರೈಕೆಯಲ್ಲಿ ಕೊರತೆ ಇರದ ಹಾಗೆ ನೋಡಿಕೊಳ್ಳುತ್ತಿದ್ದರು. ಇದರಿಂದಾಗಿ ಅವರಿಗೆ ಜನಿಸುವ ಶಿಶುಗಳ ತೂಕ ಕೂಡಾ ಹೆಚ್ಚಳವಾಗಿರುತ್ತಿದ್ದು, ಮೂರುವರೆ ಕೆಜಿಯ ಮಗುವಿನ ಜನನ ಸಾಮಾನ್ಯವಾಗತೊಡಗಿತ್ತು. ಸಹಜವಾಗಿಯೇ ಆಸ್ಪತ್ರೆಯಲ್ಲಿ ಜರುಗುವ ಸಿಸೇರಿಯನ್ ಶಸ್ತ್ರಚಿಕಿತ್ಸೆಗಳ ಸಂಖ್ಯೆಯೂ ಏರುತ್ತಾ ಹೋಯಿತು. ಹೀಗೆ, ಸಾಧಾರಣ ಒಂದೆರಡು ವರ್ಷಗಳವರೆಗೆ ನಡೆಯುತ್ತಾ ಹೋಗಿ, ರಾಜ್ಯದಲ್ಲೇ ಹೆಚ್ಚಿನ ಶಿಶುಜನನವಾಗುವ ತಾಲೂಕು ಸರ್ಕಾರಿ ಆಸ್ಪತ್ರೆ ಎಂಬ ಹೆಗ್ಗಳಿಕೆ ಆ ಆಸ್ಪತ್ರೆಯದ್ದಾಯಿತು.

ಹೀಗಿರುವಾಗ ರಾಜ್ಯದೆಲ್ಲೆಡೆ, ಸಿಸೇರಿಯನ್ ಶಸ್ತ್ರಚಿಕಿತ್ಸೆಗಳ ಸಂಖ್ಯೆ ವಿಪರೀತ ಹೆಚ್ಚಳವಾಗುತ್ತಿದೆ ಎಂಬ ಗುಲ್ಲೆಬ್ಬತೊಡಗಿತು. ಅಂಕೆ ಸಂಕಿಗಳೂ ಅದನ್ನು ಪುಷ್ಟೀಕರಿಸುತ್ತಿದ್ದವು. ಸರ್ಕಾರಿ ಆಸ್ಪತ್ರೆಗಳಲ್ಲೂ ಆ ಸಂಖ್ಯೆ ಹೆಚ್ಚಾಗುತ್ತಿರುವುದು ಇಲಾಖೆಯ ಹಿರಿಯ ಅಧಿಕಾರಿಗಳ ನಿದ್ದೆಗೆಡಿಸತೊಡಗಿತು. ಹಾಗಾಗಿ ಎಲ್ಲಾ ತಜ್ಞವೈದ್ಯರನ್ನು ರಾಜಧಾನಿಗೆ ಕರೆಸಿ, ವಿಚಾರಮಂಥನ ಮಾಡಿ, ಆದಷ್ಟು ಸಹಜ ಪ್ರಸವಕ್ಕೆ ಒತ್ತುಕೊಡಬೇಕೆಂದೂ, ಅನಿವಾರ್ಯ ಪ್ರಸಂಗಗಲ್ಲಿ ಮಾತ್ರ ಶಸ್ತ್ರಚಿಕಿತ್ಸೆ ನಡೆಸಬೇಕೆಂದೂ ಸುತ್ತೋಲೆ ಕಳಿಸಲಾಯ್ತು.

ಡಾ. ಎಸ್. ಕೂಡಾ, ತಮ್ಮ ಆಸ್ಪತ್ರೆಯ ಪರವಾಗಿ ಆ ಮೀಟಿಂಗ್‌ನಲ್ಲಿ ಭಾಗವಹಿಸಿದ್ದರು. ರಾಜಧಾನಿಯಿಂದ ಬಂದ ಬಳಿಕ ಸಹೋದ್ಯೋಗಿಗಳೊಂದಿಗೆ ಮಾತನಾಡಿಕೊಂಡು, ಗರ್ಭಿಣಿಯರಲ್ಲಿ ಸಿಹಿಮೂತ್ರ, ಏರಿದ ರಕ್ತದೊತ್ತಡ ಅಥವಾ ಇನ್ನಿತರ ಕಾರಣಗಳಿಂದ ಶಸ್ತ್ರಚಿಕಿತ್ಸೆ ಅವಶ್ಯಕವೆಂದು ಅಂದಾಜಿಸಿದ, ತಿಂಗಳು ತುಂಬಿದ ಗರ್ಭಿಣಿಯರನ್ನು ಮೇಲಧಿಕಾರಿಗಳು ಕೊಟ್ಟಿದ್ದ ಸೂಚನೆಯಂತೆ ಜಿಲ್ಲಾಸ್ಪತ್ರೆಗೆ ರವಾನಿಸಿ ಕೈತೊಳೆದುಕೊಳ್ಳುತ್ತಿದ್ದರು.

ಆದರೂ ಸೂಕ್ತ ಕಾರಣಗಳಿಲ್ಲದೇ ಹಾಗೆ ಕಳುಹಿಸಲು ಅಸಾಧ್ಯವಾಗಿದ್ದರಿಂದ, ಕೆಲವೊಂದು ಶಸ್ತ್ರಚಿಕಿತ್ಸೆಗಳನ್ನು ಅಲ್ಲೇ ನಿಭಾಯಿಸಬೇಕಾಗುತ್ತಿತ್ತು. ಗರ್ಭದ್ವಾರ ಸಂಕುಚಿತವಾಗಿದ್ದಾಗ, ಮಗುವಿನ ಕಾಲು, ಸೊಂಟ ಇತ್ಯಾದಿ ಮುಂದೆ ಬಂದಾಗ ಅಥವಾ ಎರಡನೇ ಅಥವಾ ಮೂರನೆ ಭಾರಿಗೆ ಸಿಸೇರಿಯನ್ ಶಸ್ತ್ರಚಿಕಿತ್ಸೆ ಆಗಬೇಕಾದಾಗ– ಹೀಗೆ ಶಸ್ತ್ರಚಿಕಿತ್ಸೆಯನ್ನು ಅವಶ್ಯ ಮಾಡಲೇಬೇಕಾದ ಸಂದರ್ಭಗಳಲ್ಲಿ, ಡಾ. ಎಸ್. ಹಾಗೂ ಸಹೋದ್ಯೋಗಿಗಳು ಶಸ್ತ್ರಚಿಕಿತ್ಸೆ ಮಾಡುತ್ತಿದ್ದರು. ಆದರೆ ತೊಂದರೆಯಾಗುವುದೇ ಆ ದಿನ ಬೆಳಿಗ್ಗಿನ ಜಾವ ಬಂದಂತಹ ಕೇಸುಗಳಿಂದ. ಮೇಲ್ನೋಟಕ್ಕೆ ಎಲ್ಲಾ ಸರಿಯಿದ್ದು, ಅಲ್ಟ್ರಾಸೌಂಡ್ ವರದಿ ಕೂಡಾ ತೊಂದರೆಯಿಲ್ಲ ಎಂದು ಸೂಚಿಸುತ್ತಿರುವಾಗ, ಶಸ್ತ್ರಚಿಕಿತ್ಸೆ ಮಾಡಲು ಸರಿಯಾದ ಕಾರಣವಿರದಾಗ ವೈದ್ಯರ ಅನುಭವ ಏನೇ ಮುನ್ಸೂಚನೆ ಕೊಟ್ಟರೂ, ಸಹಜ ಪ್ರಸವಕ್ಕೆ ಕಾಯಬೇಕಾಗುತ್ತಿತ್ತು. ಕೆಲವೊಮ್ಮೆ ಏನೂ ತೊಂದರೆಯಾಗದೆ, ಮಗು ಸರಿಯಾದ ಮಾರ್ಗದಲ್ಲಿ ತಿರುಗಿ, ಹೆರಿಗೆ ಆಗುತ್ತಿದ್ದರೂ ಇನ್ನು ಕೆಲವೊಮ್ಮೆ ಮಗು ಕೊನೆಯ ಕ್ಷಣಗಳಲ್ಲಿ ಅಡ್ಡ ತಿರುಗಿ ಸಹಜ ಹೆರಿಗೆಯಾಗದೇ ಸಿಸೇರಿಯನ್ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತಿತ್ತು. ಗರ್ಭಕೋಶದೊಳಕ್ಕೆ ಮಗು ದೀರ್ಘಾವಧಿಯ ಹೆರಿಗೆ ಬೇನೆಗೆ ತುತ್ತಾಗಿಯೋ ಅಥವಾ ಯಾವುದೋ ಕಾರಣಕ್ಕೆ ಸುಸ್ತಾಗಿ, ಭೇದಿ ಮಾಡಿಕೊಂಡು, ಹೆರಿಗೆಯ ಸಮಯದಲ್ಲಿ ಮಲ ಸೇರಿದ ಹಳ್ನೀರಿನ ಅಂಶ ಮಗುವಿನ ಶ್ವಾಸಕೋಶಕ್ಕೆ ಹೋಗಿ ಮಗುವಿಗೆ ಉಸಿರಾಡಲು ಕಷ್ಟವಾಗಿ, ಜಿಲ್ಲಾಸ್ಪತ್ರೆಯ ನವಜಾತ ಶಿಶುಗಳ ಆರೈಕೆ ಕೇಂದ್ರಕ್ಕೆ ಕಳಿಸಬೇಕಾದ ಸಂದರ್ಭಗಳೂ ಬರುತ್ತಿದ್ದವು. ಈ ಕಾರಣಗಳನ್ನೆಲ್ಲಾ ಗರ್ಭಿಣಿ ಸ್ತ್ರೀಗೆ, ಆಕೆಯ ಹತ್ತಿರದ ಸಂಬಂಧಿಕರಿಗೆ ಅರ್ಥಮಾಡಿಸಿ ಹೇಳುವುದೂ ಬಹಳ ಕ್ಲಿಷ್ಟಕರವಾಗುತ್ತಿತ್ತು. ಅಷ್ಟು ಹೇಳಿಯೂ ಕೊನೆಯ ಕ್ಷಣದವರೆಗೂ ಶಸ್ತ್ರಚಿಕಿತ್ಸೆಗೆ ಒಪ್ಪದ ಪ್ರಸಂಗಗಳೂ ಇದ್ದವು.

ಆ ದಿನ ಬಂದ ಗರ್ಭಿಣಿಯ ಕಥೆಯೂ ಅದೇ ಆಗಿತ್ತು. ಬೆಳಿಗ್ಗಿನ ಜಾವಕ್ಕೆ ಬಂದ ಆಕೆ, ಆಕೆಯ ಗಂಡ, ತಾಯಿ, ಯಾರೊಬ್ಬರೂ ಆಪರೇಷನ್ ಮಾಡಲು ಸುತರಾಂ ಒಪ್ಪಲಿಲ್ಲ.

''ಏನೇ ಆಗಲಿ, ಈಗ ನನ್ನ ಕರ್ತವ್ಯದ ಸಮಯ ಮುಗಿಯುತ್ತ ಬಂತು. ಈಗ ಡ್ಯೂಟಿಗೆ ಬಂದ ಡಾ. ಕೃಷ್ಣಕಾಂತ್‌ರಿಗೆ ಒಪ್ಪಿಸಿ ಹೋಗುತ್ತೇನೆ'' ಎಂದುಕೊಂಡು ನಿರಾಳರಾದರು. ಸಾಯಂಕಾಲ ಎಂಟು ಗಂಟೆಗೆ ಪುನಃ ಕರ್ತವ್ಯಕ್ಕೆ ಹಾಜರಾದ ಅವರಿಗೆ, ಇನ್ನೂ ಪ್ರಸವ ವೇದನೆಯನ್ನು ಅನುಭವಿಸುತ್ತಿದ್ದ ಆ ಗರ್ಭಿಣಿಯನ್ನು ನೋಡಿ ಆಶ್ಚರ್ಯವಾಯಿತು. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮಾಡಿ ನೋಡಿಸುವಾ ಎಂದರೆ, ಸ್ಕ್ಯಾನಿಂಗ್ ತಜ್ಞರು ರಜೆಯಲ್ಲಿದ್ದರು. ಹೊರಗಡೆ ಕಳಿಸುವ ಎಂದುಕೊಂಡರೆ, ಅತ್ತೆ ಮತ್ತು ಪತ್ನಿಯನ್ನು ಆಸ್ಪತ್ರೆಯಲ್ಲಿ ಬಿಟ್ಟು, ಗಂಡ ಮನೆಗೆ ಹೋಗಿಬರುತ್ತೇನೆಂದು ಹೋಗಿದ್ದ. ಶಸ್ತ್ರಚಿಕಿತ್ಸೆ ಮಾಡಲು ಗರ್ಭಿಣಿ ಒಪ್ಪಿಗೆ ಕೊಟ್ಟಿರಲಿಲ್ಲ. ವೈದ್ಯರಿಬ್ಬರೂ ಪ್ರಸೂತಿ ಕೋಣೆಗೆ ಬರುತ್ತಿದ್ದಂತೆ, ಅಲ್ಲಿನ ಸಿಸ್ಟರ್ ''ಡಾಕ್ಟ್ರೆ ಈಗಷ್ಟೇ ಹಳ್ನೀರು ಒಡೆಯಿತು. ಮಗು ಹೊಟ್ಟೆಯಲ್ಲಿ ಮೆಕೋನಿಯಮ್ (ಮಲ) ವಿಸರ್ಜಿಸಿದಂತೆ ಕಾಣುತ್ತಿದೆ'' ಎಂದಳು. ''ಅಯ್ಯೋ, ಪುನಃ ನನ್ನ ಕುತ್ತಿಗೆಗೇ ಬಂತಲ್ಲ ಗೋಳು'' ಎಂದುಕೊಂಡ ಡಾ. ಎಸ್. ಪರೀಕ್ಷೆ ಮಾಡಿ ನೋಡಿದಾಗ, ಹಳ್ನೀರಿನಲ್ಲಿ ಮಗುವಿನ ಮಲ ಸೇರಿಕೊಂಡಿದ್ದು ಮನದಟ್ಟಾಯ್ತು. ಅಲ್ಲದೇ, ಅಡ್ಡ ತಿರುಗಿಕೊಂಡಿದ್ದೂ ಸಾಬೀತಾಯ್ತು. ಮಗುವಿನ ಹೃದಯ ಬಡಿತ ಸಾಮಾನ್ಯ ಮಿತಿಯೊಳಗಿದ್ದರೂ, ಸಣ್ಣ ನೋವಿಗೂ ಸ್ವಲ್ಪ ಹೆಚ್ಚಾಗಿ, ಮಗು ಸುಸ್ತಾಗಿರುವುದನ್ನು ಸೂಚಿಸುತ್ತಿತ್ತು.

ಗರ್ಭಿಣಿಯ ಕಡೆಯವರನ್ನು ಒಳಗೆ ಕರೆಸಿ, ಪರಿಸ್ಥಿತಿಯನ್ನು ತಿಳಿಸಿ ಹೇಳಿ, ''ಕೂಡಲೇ ಶಸ್ತ್ರಚಿಕಿತ್ಸೆ ಮಾಡಬೇಕು, ಇಲ್ಲದಿದ್ದರೆ ಮಗುವಿನ ಜೀವಕ್ಕೆ ಅಪಾಯದ ಸಂಭವ ಇದೆ'' ಎಂದು ಹೇಳಿದಾಗ ಗರ್ಭಿಣಿ ಅಳತೊಡಗಿದಳು. ಆಕೆಯ ತಾಯಿ ''ಅಯ್ಯೋ ನಾನೀಗ ಒಬ್ಬಳೇ ಇದ್ದೇನೆ. ಅಳಿಯನನ್ನೇ ಕೇಳಬೇಕು. ಆತ ಇನ್ನೊಂದು ಗಂಟೆಯಲ್ಲಿ ಬರುತ್ತೇನೆ ಎಂದು ಹೇಳಿದ್ದಾನೆ'' ಎಂದಳು. ಆಗ ಡಾ. ಎಸ್. ''ನೋಡಮ್ಮ, ಈಗಲೇ ಅಳಿಯನಿಗೆ ಫೋನ್ ಮಾಡಿ. 20 ಗಂಟೆಗಳಿಗೂ ಹೆಚ್ಚು ಕಾಲ ವೇದನೆ ಅನುಭವಿಸಿ ತಾಯಿ ಸೋತಿದ್ದಾಳೆ, ಮಗುವೂ ಸುಸ್ತಾಗಿ ಬೇಧಿ ಮಾಡಿಕೊಂಡಿದೆ, ಅದರ ಜೀವಕ್ಕೆ ಅಪಾಯವಿದೆ ಎಂದು ತಿಳಿಸಿ'' ಎಂದರು. ತಾಯಿ ಅಳಿಯನಿಗೆ ಕರೆ ಮಾಡಿ ಮಾತಾಡಿ ''ಡಾಕ್ಟ್ರೆ ನೀವೇ ಮಾತಾಡಿ'' ಎಂದಳು. ವೈದ್ಯರು ಪುನಃ ಎಲ್ಲ ವಿಷಯವನ್ನು ಗಂಡನಿಗೆ ತಿಳಿಸಿ ಹೇಳಿದರು. ಆ ಕಡೆಯಿಂದ ಗಂಡ ''ಆಯ್ತು ಡಾಕ್ಟ್ರೆ, ನಾನಿನ್ನು ಅರ್ಧ ಗಂಟೆಯಲ್ಲಿ ಬರ್ತೇನೆ. ಬಂದವನೇ ನಿಶ್ಚಯ ಮಾಡಿ ಹೇಳುತ್ತೇನೆ'' ಎಂದ.

ವೈದ್ಯರು ಶಸ್ತ್ರಚಿಕಿತ್ಸೆಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡರು. ಅಂತೂ ಅರ್ಧ ಗಂಟೆಯಲ್ಲಿ ಗರ್ಭಿಣಿಯ ಗಂಡ ಬಂದು, ಒಲ್ಲದ ಮನಸ್ಸಿನಿಂದಲೇ ಒಪ್ಪಿಗೆ ಕೊಟ್ಟ. ಆ ಕೂಡಲೇ ಗರ್ಭಿಣಿಯನ್ನು ಶಸ್ತ್ರಚಿಕಿತ್ಸಾ ಕೊಠಡಿಗೆ ಕೊಂಡ್ಯೊಯ್ದ ವೈದ್ಯರು ತ್ವರಿತವಾಗಿ ಮಗುವನ್ನು ಹೊರತೆಗೆದರು. ಆದರೂ ಕೂಡಾ, ಮಗು ಹಳ್ನೀರನ್ನು ಕುಡಿದು, ಮಗುವಿನ ಶ್ವಾಸಕೋಶಕ್ಕೂ ಮಲ ಬೆರೆತ ಹಳ್ನೀರು ಹೋಗಿ ಮಗು ಸರಿಯಾಗಿ ಕೂಗದೇ ಉಸಿರಾಡಲು ಕಷ್ಟಪಡತೊಡಗಿತು. ಮಗುವಿನಲ್ಲಿ ಆಮ್ಲಜನಕದ ಕೊರತೆ ಕಂಡುಬರುತ್ತಿದ್ದಂತೆ ಬೇಕಾದ ಚಿಕಿತ್ಸೆ ಹಾಗೂ ಮೂಗಿನ ಮೂಲಕ ನಿಧಾನವಾಗಿ ಆಮ್ಲಜನಕ ಕೊಟ್ಟಾಗ ಸ್ವಲ್ಪ ಸರಿಯಾದಂತೆ ತೋರಿದರೂ, ಮಗುವನ್ನು ಪರೀಕ್ಷಿಸಿದ ತಜ್ಞರು ''ಮಗುವಿಗೆ ವೆಂಟಿಲೇಟರ್ ಬೇಕಾಗಬಹುದು. ತಕ್ಷಣ ಜಿಲ್ಲಾಸ್ಪತ್ರೆಯ ನವಜಾತ ಶಿಶು ಕೇಂದ್ರಕ್ಕೆ ಕಳಿಸಿ'' ಎಂದರು.

ತಮ್ಮ ತಪ್ಪಿನ ಅರಿವಾದ ಗಂಡ ಬೇರೇನನ್ನೂ ಹೇಳದೆ ಆ ಕೂಡಲೇ ಅಂಬುಲೆನ್ಸ್‌ನಲ್ಲಿ ಮಗುವನ್ನು ಕೊಂಡೊಯ್ದ. ಅಲ್ಲಿ ಮಗುವಿನ ಕೃತಕ ಉಸಿರಾಟಕ್ಕಾಗಿ ವೆಂಟಿಲೇಟರ್ ಅಳವಡಿಸಿದರು. ಐದಾರು ದಿನಗಳ ಬಳಿಕ, ಮಗುವಿನ ಪರಿಸ್ಥಿತಿ ಉತ್ತಮವಾದ್ದರಿಂದ, ವೆಂಟಿಲೇಟರ್‌ನಿಂದ ತೆಗೆದು, ಎದೆಹಾಲಿಗಾಗಿ ತಾಯಿಯನ್ನು ಜಿಲ್ಲಾಸ್ಪತ್ರೆಗೆ ಕರೆಸಿಕೊಂಡರು. ಹದಿನೈದು ದಿನಗಳಿಗೂ ಹೆಚ್ಚು ಕಾಲ ಅಲ್ಲಿದ್ದು, ಮಗು ಹುಶಾರಾಗಿ, ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಆ ಮಗುವೇನೋ ಅದೃಷ್ಟಶಾಲಿಯಾಗಿದ್ದರಿಂದ, ಉಳಿದುಕೊಂಡಿತು.

ಯಾವುದೇ ಕಾಯಿಲೆಯಿದ್ದರೂ ಚಿಕಿತ್ಸಕ ವೈದ್ಯನಿಗೆ, ರೋಗಿಯನ್ನು ಪರೀಕ್ಷಿಸಿದಾಕ್ಷಣ, ಕೆಲವೊಮ್ಮೆ ಏನೋ ಒಂದು ಅನಿಸಿಕೆ ಉಂಟಾಗುತ್ತದೆ. ಈ ಕೇಸಿನಲ್ಲಿ ಆದುದೂ ಹಾಗೇನೆ. ಡಾ. ಎಸ್. ಮೊದಲ ಬಾರಿ ಪರೀಕ್ಷಿಸಿದಾಗಲೇ ಇದೇನೋ ಸರಳವಾದ ಪ್ರಸಂಗವಲ್ಲ, ಸಹಜ ಪ್ರಸವಕ್ಕೆ ಬಿಟ್ಟರೆ ಬಹುಶಃ ಮಗು ಅಡ್ಡ ತಿರುಗುವ ಸಂದರ್ಭ ಉಂಟಾಗಬಹುದು, ತಾಯಿಗೂ, ಮಗುವಿಗೂ ತೊಂದರೆಯಾಗಬಹುದು ಎಂಬ ಭಾವನೆ ಉಂಟಾಗಿತ್ತು. ಕೊನೆಗೆ ಅದು ನಿಜವೂ ಆಯಿತು. ಸರಿಯಾದ ಕಾರಣಗಳಿಲ್ಲದೆ ಸುಮ್ಮಸುಮ್ಮನೆ ಸಿಸೇರಿಯನ್ ಶಸ್ತ್ರಚಿಕಿತ್ಸೆ ಮಾಡಕೂಡದು ಎಂಬ ಮೇಲಾಧಿಕಾರಿಗಳು ಕೊಟ್ಟ ಕಟ್ಟುನಿಟ್ಟಿನ ಆದೇಶವೂ ಆತನನ್ನು ತನ್ನ ಅನಿಸಿಕೆಯಂತೆ ಮುಂದುವರೆಯಲು, ಹಿಂಜರಿಯುವಂತೆ ಮಾಡಿತ್ತು. ಕೊನೆಯ ಕ್ಷಣದವರೆಗೂ, ಸಂಬಂಧಿಕರು ಶಸ್ತ್ರಚಿಕಿತ್ಸೆಗೆ ಒಪ್ಪಿಗೆಯನ್ನು ಕೊಟ್ಟಿರಲಿಲ್ಲ. ಹೀಗಾಗಿ ಆ ಗರ್ಭಿಣಿ 20 ಗಂಟೆಗಳಿಗಿಂತಲೂ ಹೆಚ್ಚು ಕಾಲ ಹೆರಿಗೆ ನೋವಿನಿಂದ ನರಳಬೇಕಾಯಿತು.

ನವಜಾತ ಶಿಶು ಕೇಂದ್ರ ಸಾಧಾರಣ ಒಂದು ಗಂಟೆಯ ದೂರದಲ್ಲಿದ್ದರಿಂದ, ಸೂಕ್ತ ಚಿಕಿತ್ಸೆ ದೊರೆತು, ಮಗುವಿನ ಜೀವ ಉಳಿದದ್ದು ಅದೃಷ್ಟ ಎಂದೇ ಹೇಳಬೇಕು. ಕಾಯಿಲೆ ಒಂದಾದರೂ, ಪ್ರತಿಯೊಬ್ಬ ರೋಗಿಯಲ್ಲಿ ಕೂಡಾ ಚಿಕಿತ್ಸೆ ವಿಶಿಷ್ಟ, ವಿಭಿನ್ನವಾಗಿದ್ದು, ಅದು ಕೆಲವೊಮ್ಮೆ ರೋಗಿಗೆ ಹಾಗೂ ಚಿಕಿತ್ಸಕ ವೈದ್ಯನಿಗೆ ಭೀಕರ ರಣರಂಗವಾಗುವ ಸಾಧ್ಯತೆ, ಸಂಭಾವ್ಯತೆಯಂತೂ ಇದ್ದೇ ಇದೆ. ರೋಗಿಗಳ ಸಮಗ್ರ ಒಳಿತಿಗಾಗಿ ವಿಧಿಸ್ಪಟ್ಟ ಕೆಲವೊಂದು ಕಾನೂನುಗಳ ಕಟ್ಟುಪಾಡಿನಿಂದಾಗಿ, ಅಂಥಾ ಸಂಭಾವ್ಯತೆ ಇನ್ನೂ ಹೆಚ್ಚಾಗಬಹುದು.

» ಚಂದ್ರಶೇಖರ ಹೆಗಡೆ

ಬಾದಾಮಿಯಲ್ಲಿ ಪ್ರಕಟಗೊಂಡ ಶರ್ಮಿಷ್ಠೆ

ಶರ್ಮಿಷ್ಠೆ ಎಂಬ ಪೌರಾಣಿಕವಾದ ರೂಪಕವನ್ನು ಕಾಲನ ಕೈಚಳಕದಲ್ಲಿ ತುಡಿತ, ಸಂಕಟ, ನೋವು, ಅಪಮಾನಗಳ ಮೂಸೆಯ ಬೆಂಕಿಯಲ್ಲಿ ಕರಗಿಸಿ, ಪ್ರಬುದ್ಧವಾದ ಪರಂಜ್ಯೋತಿಯನ್ನಾಗಿ ಪರಿವರ್ತಿಸುವ ಕಥಾವಸ್ತು ಪ್ರಸ್ತುತ ನಾಟಕಕ್ಕೆ ಜೀವದ್ರವ್ಯ. ಇದೇ ಜನವರಿ 18 ಮತ್ತು 19 ರಂದು ಬಾದಾಮಿಯ ಬನಶಂಕರಿ ದೇವಿ ಜಾತ್ರೆಯಲ್ಲಿ ಬಿಎಸ್ ಆರ್ ನಾಟಕ ಕಂಪೆನಿಯ ರಂಗಸಜ್ಜಿಕೆಯ ಮೇಲೆ ಅನಾವರಣಗೊಂಡ ಉಮಾಶ್ರೀಯವರ ವಿಶಿಷ್ಟ ಅಭಿನಯದ ಈ ಪ್ರಯೋಗ ರಂಗಾಸಕ್ತರ ಗಮನ ಸೆಳೆಯಿತು.

ನಾಟಕ ಆರಂಭವಾಗುತ್ತಿದ್ದಂತೆ ಶರ್ಮಿಷ್ಠೆಯ ಒಡಲನ್ನು ಪ್ರವೇಶಿಸುವ ಉಮಾಶ್ರೀಯವರ ಕಲಾಚತುರತೆ ಕೌತುಕವನ್ನುಂಟು ಮಾಡುತ್ತದೆ. ಶರ್ಮಿಷ್ಠೆ ಎಂದರೆ ಯಾರು? ಇದ್ಯಾವ ಬಗೆಯ ಕಥೆಯೆಂದು ಬನಶಂಕರಿ ಜಾತ್ರೆಗೆ ಬಂದ ಯಾತ್ರಿಕರಲ್ಲಿ ಹುಟ್ಟಿದ ಸಂದೇಹ, ಕೌತುಕಗಳನ್ನು ಒಂದೂವರೆ ಗಂಟೆಯವರೆಗೆ ಹಿಡಿದಿಟ್ಟು ಶರ್ಮಿಷ್ಠೆಯ ವ್ಯಕ್ತಿತ್ವದ ವಿಭಿನ್ನವಾದ ಆಯಾಮಗಳನ್ನು ತೆರೆದಿಡುವಲ್ಲಿ ನಾಟಕ ಯಶಸ್ವಿಯಾಗುತ್ತದೆ.

ಜಾತ್ರೆಯಲ್ಲಿ ಪ್ರದರ್ಶನ: ಸಾಮಾಜಿಕರ ಹಾಸ್ಯ, ಹರಟೆ, ಕುಣಿತ–ಮಣಿತಗಳ ಮನರಂಜನೆಯ ನಿರೀಕ್ಷೆ ಹಾಗೂ ಅಪೇಕ್ಷೆಗಳೆರಡೂ ಮನದ ಹಿಮಗಿರಿಯ ಶೃಂಗವನ್ನೇರಿರುವ ಬಾದಾಮಿಯ ಬನಶಂಕರಿ ಜಾತ್ರೆಯ ಸಂದರ್ಭದಲ್ಲಿ ಶರ್ಮಿಷ್ಠೆಯಂತಹ ಏಕ ವ್ಯಕ್ತಿ ನಾಟಕ ಪ್ರದರ್ಶನವನ್ನೇರ್ಪಡಿಸುವುದು ಎಂದರೆ ದುಸ್ಸಾಹಸವೇ ಸರಿ. ಇಂತಹ ಸವಾಲನ್ನು ತಮ್ಮ ಮೈಮೇಲೆ ಎಳೆದುಕೊಂಡು ಒಂದೂವರೆ ಗಂಟೆಗಳ ಎರಡು ದಿನಗಳ ಪ್ರದರ್ಶನಗಳನ್ನೇರ್ಪಡಿಸಿ ಯಶಸ್ವಿಯಾದ ಕೀರ್ತಿ ರಂಗಕರ್ಮಿ, ಜನಪ್ರಿಯ ಕಲಾವಿದರಾದ ಜೇವರ್ಗಿ ರಾಜಣ್ಣ ಹಾಗೂ ಅವರ ಬಿ ಎಸ್ ಆರ್ ನಾಟಕ ಸಂಘ ಗುಬ್ಬಿ ಕಂಪನಿಗೆ ಸಲ್ಲುತ್ತದೆ. ಕಾರಣವಿದೆ– ಬನಶಂಕರಿ ಜಾತ್ರೆಯಲ್ಲಿ ಪ್ರತಿವರ್ಷ ಟೆಂಟ್ ಹಾಕುವ ವೃತ್ತಿಪರ ಸಾಮಾಜಿಕ ನಾಟಕ ಕಂಪನಿಗಳ ಸಂಖ್ಯೆ ಸಲೀಸಾಗಿ ಮೂವತ್ತನ್ನು ದಾಟುತ್ತದೆ ಎಂದರೆ ಕರುನಾಡಿನ ಉತ್ತರದ ಜನರ ಕಲಾಭಿಮಾನ, ಕಲಾಪ್ರೀತಿ, ಕಲಾರಾಧನೆ ಜಗತ್ತಿನ ಯಾವುದೇ ರಂಗಪರಂಪರೆಗೆ ಹೋಲಿಸಿದರೂ ಸರಿಸಾಟಿಯಿಲ್ಲದ್ದು. ದಂಡು ದಂಡಾಗಿ ಬಾದಾಮಿ ಬನಶಂಕರಿ ದೇವಿ ಜಾತ್ರೆಗೆ ಲಗ್ಗೆಯಿಡುವ ಈ ನಾಟಕ ಕಂಪನಿಗಳು ಕಲಾವಂತಿಕೆಯ ಜೊತೆ ಜೊತೆಗೆ ಮನಸೂರೆಗೊಳ್ಳಬಹುದಾದ ನೃತ್ಯ, ಗೀತ, ಸಂಭಾಷಣೆಗಳನ್ನು ಹೊತ್ತು ತಂದು,ನಾಟಕವನ್ನು ಆನಂದಿಸುವಂತೆ ಮಾಡುತ್ತವೆ. ಇಂತಹ ರಸಮಂಜರಿಯ ಪಾತ್ರವೈವಿಧ್ಯಗಳ ಮಧ್ಯೆ ಶರ್ಮಿಷ್ಠೆಯಂತಹ ಏಕ ವ್ಯಕ್ತಿ ನಾಟಕ ಪ್ರದರ್ಶನವನ್ನು ಆಯೋಜಿಸಿದ್ದು ಸಾಹಸವೇ ಸರಿ.

ನಾನು ನಾಟಕ ನೋಡಲು ಹೋಗಿದ್ದಾಗ, ಉಮಾಶ್ರೀಯವರ ನಾಟಕ ಎಂದಾಕ್ಷಣ ಟಿಕೆಟ್ ತೆಗೆದು ಥಿಯೇಟರ್ ಕೆಲವು ಮಹಿಳೆಯರು ಒಳಗೆ ಬಂದಿದ್ದಾರೆ. ಥಿಯೇಟರ್‌ನಲ್ಲಿ ಅಷ್ಟೊಂದು ಜನಸಂದಣಿಯಿಲ್ಲದ್ದನ್ನು ಕಂಡು ಸಂಶಯದಿಂದ ಇದು ಉಮಾಶ್ರೀಯವರ ಹಾಸ್ಯ ನಾಟಕ ತಾನೇ ಎಂದು ಯಾರನ್ನೋ ಕೇಳಿದ್ದಾರೆ. 'ಉಮಾಶ್ರೀಯವರ ನಾಟಕ ಹೌದು, ಆದರೆ ನೀವಂದು ಕೊಂಡ ಹಾಸ್ಯ ನಾಟಕವಲ್ಲ' ಎಂದು ಅಲ್ಲಿದ್ದವರೊಬ್ಬರು ಹೇಳಿದ ಕೂಡಲೇ ಜಗಳವಾಡಿ ಟಿಕೆಟ್ ಹಣ ಮರಳಿ ಪಡೆದುಕೊಂಡು ಅಲ್ಲಿಂದ ಹೊರಟು ಹೋದದ್ದನ್ನು ಕೇಳಿ ಚಕಿತನಾದೆ. ನಮ್ಮ ಗ್ರಾಮೀಣ ಮಹಿಳೆಯರು ರಮಣೀಯ ನಾಟ್ಯದ ರಾಗರಂಜನಿಗೊಲಿದ ಭ್ರಮೆಯಿಂದಹೊರಬರದೇ, ತಮ್ಮದೇ ಚರಿತ್ರೆಯ ಕಥನವೊಂದನ್ನು ನೋಡದೇ ತೆರಳಿದ್ದು ನನಗೂ ಆಘಾತವನ್ನುಂಟು ಮಾಡಿತು. ಇರಲಿ ಬಿಡಿ ಕಾಲನ ಗೆಜ್ಜೆಗಳ ನಾದಕ್ಕೆ ಮನಸೋಲದವರಿಲ್ಲ ಈ ಜಗದೊಳಗೆ.

ಇಳಿವಯಸ್ಸಿನಲ್ಲಿ ಅಭಿಯನ!: ಶರ್ಮಿಷ್ಠೆ ನಾಟಕ ಕುರಿತು ಮಾತನಾಡುವುದು ಬಹಳಕ್ಲಿಷ್ಟದೆ. ಬದುಕಿನ ಸಂಧ್ಯಾಕಾಲದ ಎಪ್ಪತ್ತರ ವಯಸ್ಸಿನಲ್ಲಿಯೂ ಉಮಾಶ್ರೀಯವರ ಚೈತನ್ಯಪೂರ್ಣ ಅಭಿನಯ ಮಂತ್ರಮುಗ್ಧಗೊಳಿಸಿತು. ಇಂತಹ ಪ್ರಯೋಗ ನಮ್ಮನ್ನು ತೊಂಭತ್ತು ನಿಮಿಷಗಳ ಕಾಲ ಹಿಡಿದಿಡಲು ಸಾಧ್ಯವೇ? ಉಮಾಶ್ರೀಯವರಿಂದ ಸಂಭವವೇ ? ಎಂಬಿತ್ಯಾದಿ ಸಂಶಯದ ಕುತೂಹಲದಿಂದಲೇ ಥಿಯೇಟರ್ ನೊಳಗೆ ಕಾಲಿಟ್ಟವನು ನಾನು. ಆದರೆ ಆಗಿದ್ದೇ ಬೇರೆ. ಈ ನಾಟಕಕ್ಕೆ ಉಮಾಶ್ರೀಯವರನ್ನು ಹೊರತುಪಡಿಸಿ ಬೇರೆ ಇನ್ನಾರೂ ನ್ಯಾಯವನ್ನೊದಗಿಸಲು ಸಾಧ್ಯವಿಲ್ಲ ಬಿಡಿ ಎಂದು ಉದ್ಗರಿಸಿ ಹೊರಬಂದಾಗ ಅನೇಕ ಚಿಂತನೆಗಳ ಸುರುಳಿ ಮನದಲ್ಲಿ ಬಿಚ್ಚಿಕೊಳ್ಳಲಾರಂಭಿಸಿತು. ಏಕ ವ್ಯಕ್ತಿ ನಾಟಕದಿಂದುಸಬಹುದಾದ ಏಕತಾನತೆಯೆಂಬ ಅಪಾಯದ ಸುಳಿವೂ ಸಿಗದಂತೆ ಶರ್ಮಿಷ್ಠೆಯಲ್ಲಿ ಭಾವೈಕ್ಯಗೊಂಡು ತಮ್ಮನ್ನೇ ಸಮರ್ಪಿಸಿಕೊಂಡು ಶರ್ಮಿಷ್ಠೆಯ ವ್ಯಕ್ತಿತ್ವದ ಅನನ್ಯ ಮುಖಗಳ ದರ್ಶನ ಮಾಡಿಸುವ ಉಮಾಶ್ರೀಯವರ ಭಾವಾಭಿವ್ಯಕ್ತಿಗೆ ಕುಳಿತಿದ್ದ ರಂಗಾಸಕ್ತರೆಲ್ಲರೂ ಕರತಾಡನದೊಂದಿಗೆ ತಲೆದೂಗಿದವರೇ.

ರಾಜಕುಮಾರಿಯಾಗಿದ್ದ ಶರ್ಮಿಷ್ಠೆ ಹಾಗೂ ರಾಕ್ಷಸರ ಗುರುವಾಗಿದ್ದ ಶುಕ್ರಾಚಾರ್ಯರ ಮಗಳಾದ ದೇವಯಾನಿಯ ಮಧ್ಯೆ ಸಂಭವಿಸಿದ ಕ್ಷುಲ್ಲಕ ಜಗಳ, ಇಬ್ಬರ ವೈಮನಸ್ಸಿಗೆ ಕಾರಣವಾಗಿ ಶರ್ಮಿಷ್ಠೆಯನ್ನು ದೇವಯಾನಿಯ ದಾಸಿಯನ್ನಾಗಿ ಮಾಡಿಕೊಳ್ಳುವಷ್ಟರ ಮಟ್ಟಿಗೆ ತಾರಕಕ್ಕೇರುತ್ತದೆ. ಮಹಾಭಾರತದ ಆದಿಪರ್ವದ ಯಯಾತಿಯ ಕಥೆಯಲ್ಲಿ ಬರುವ ಈ ಎಳೆಯೇ ಪ್ರಸ್ತುತ ಶರ್ಮಿಷ್ಠೆ ನಾಟಕದ ಜೀವದ್ರವ್ಯ. ಶರ್ಮಿಷ್ಠೆ ಹಾಗೂ ದೇವಯಾನಿಯರ ಮಧ್ಯದ ಕದನ ಕುತೂಹಲದ ಬಿಂದುವಿನಿಂದ ಹೊರಡುವ ನಾಟಕದ ತಾರಕಸ್ವರವು ವಿಭಿನ್ನ ತರಂಗಾಂತರದ ಅಲೆಗಳಾಗಿ ಯಯಾತಿ, ಪುರು, ಚಿತ್ರಲೇಖೆ ಶುಕ್ರಾಚಾರ್ಯರೆಂಬ ಪಾತ್ರಗಳಾಗಿ ಕವಲೊಡೆದು ಕೊನೆಗೆ ಅವೆಲ್ಲವೂ ತಮ್ಮ ಗಂತವ್ಯವೆಂಬಂತೆ ಶರ್ಮಿಷ್ಠೆಯಲ್ಲಿಯೇ ಸಂಗಮಗೊಳ್ಳುವುದು ವಿಸ್ಮಯವನ್ನುಂಟು ಮಾಡುತ್ತದೆ. ಒಮ್ಮೆ ದೇವಯಾನಿಯ ದಾಸಿಯಾಗಿ, ಮತ್ತೊಮ್ಮೆ ಗೆಳತಿಯಾಗಿ, ಮಗದೊಮ್ಮೆ ಯಯಾತಿಯ ಮನಸೆಳೆದ ಗುಪ್ತಗಾಮಿನಿಯಾಗಿ, ಇನ್ನೊಮ್ಮೆ ಪುರುವಿನ ತಾಯಿಯಾಗಿ, ಮತ್ತೊಮ್ಮೆ ಚಿತ್ರಲೇಖೆಯ ಅತ್ತೆಯಾಗಿ, ಕೊನೆಗೆ ಯಯಾತಿಯೇ ತಾನಾಗಿ, ಶರ್ಮಿಷ್ಠೆಯ ಗರ್ಭದೊಳಗಡಗಿದ್ದ ಬಹುಮುಖಿ ಚಿತ್ರ, ಚಿತ್ತಾರಗಳನ್ನು ರಂಗಪರದೆಯ ಮೇಲೆ ಕಲಾತ್ಮಕವಾಗಿ ಅರಳಿಸಿದ ಉಮಾಶ್ರೀಯವರ ಕಲಾಪ್ರತಿಭೆ ಇಂದು ನಿನ್ನೆಯದಲ್ಲ. ಆರೇಳು ದಶಕಗಳ ಕಾಲ ಪಳಗಿದ ಅಭಿನಯದ ಪುಳಕದಿಂದ ಕಲಾಸಕ್ತರ ಹೃದಯದಲ್ಲಿ ದಿವ್ಯಾನುಭೂತಿಯ ಕಸೂತಿಚಿತ್ರವನ್ನು ಬಿಡಿಸುವ ಉಮಾಶ್ರೀಯವರ ಕಲಾನೈಪುಣ್ಯತೆ ಶತಾವಧಾನದ್ದು. ಶರ್ಮಿಷ್ಠೆಯಿಂದ ದೇವಯಾನಿಗೆ ದೇವಯಾನಿಯಿಂದ ಯಯಾತಿಗೆ, ಯಯಾತಿಯಿಂದ ಪುರುವಿಗೆ, ಪುರುವಿನಿಂದ ಚಿತ್ರಲೇಖೆಯ ಪಾತ್ರದೊಳಗೆ ಕ್ಷಣಮಾತ್ರದಲ್ಲಿ ಪರಕಾಯ ಪ್ರವೇಶ ಮಾಡಿಬಿಡಬಲ್ಲ ಅವರ ಪ್ರತಿಭಾಕೌಶಲ್ಯವನ್ನು ಕಂಡ ಪ್ರೇಕ್ಷಕ ವರ್ಗ ಗರಬಡಿದವರಂತೆ ತಲ್ಲೀನರಾಗಿದ್ದರು.

ರಾಗಿ ಮತ್ತು ಭತ್ತದ ಗೆಳೆತನ!

» ರಾಜಶ್ರೀ ಟಿ.ರೈ ಪೆರ್ಲ

ರಾಗಿಯನ್ನು ತೀರಾ ಕಡಿಮೆ ಬೆಳೆಯುವ ನಮ್ಮ ರಾಜ್ಯದ ಕರಾವಳಿಯಲ್ಲಿ, ರಾಗಿಯ ಕುರಿತು ಕೆಲವು ಜನಪದ ಕಥೆಗಳಿವೆ ಎಂಬುದು ವಿಶೇಷ.

ತುಳು ಜನಪದದಲ್ಲಿ ಹಲವಾರು ಮೌಖಿಕ ಕಥನಗಳಿವೆ. ಬಾಳೆಮೀನು ಮುಗುಡು ಮೀನು, ಕಲ್ಲುಟ್ಟಿ, ಕಲ್ಕುಡ, ಬಾಲೆ ಜೇವು ಮಾಣಿಗ ಮುಂತಾದುವುಗಳ ಬೇರೆ ಬೇರೆ ಪಾಠಾಂತರಗಳ ಕುರಿತಾಗಿ ಈಗಾಗಲೇ ಹಲವಾರು ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ. ಇದೇ ಸಾಲಿಗೆ ಸೇರುವ ತುಳುವರ 'ರಾಗಿ ಅಕ್ಕಿ ಕಥೆ' (ರಾಗಿ ಬಾರ್ ಕಥೆ) ಕಥನವೂ ಒಂದು. ತುಳುನಾಡಿನಲ್ಲಿ ಬಹಳ ಹಿಂದಿನಿಂದಲೇ ಭತ್ತ ಕುಟ್ಟುವಾಗ, ನೇಜಿ ನೆಡುವಾಗ, ಬುಟ್ಟಿ,ಚಾಪೆ ಹೆಣೆಯುವಾಗ ಇತ್ಯಾದಿ ತಮ್ಮ ಕೆಲಸದ ಸಮಯದಲ್ಲಿ ಕಬಿತಗಳನ್ನು ಕಟ್ಟಿ ಹಾಡುತ್ತಿದ್ದರು ಎನ್ನುವುದು ಈಗಾಗಲೇ ಸಾಬೀತಾದ ವಿಚಾರ.

ತುಳುನಾಡಿನಲ್ಲಿ ಪ್ರಚಲಿತದಲ್ಲಿರುವ ರಾಗಿ ಅಕ್ಕಿಯ ಕುರಿತು ಜನಪದ ಕಥೆಯ ಬೇರೆ ಬೇರೆ ಅವತರಣಿಕೆಗಳು ಲಭ್ಯವಿವೆ. ಒಂದು ಪಠ್ಯದಲ್ಲಿ ಇದು ತುಳುನಾಡಿನಲ್ಲಿ ಬೆಳೆಯುತ್ತಿದ್ದ 'ಅತಿಕಾರೆ' ಎನ್ನುವ ಭತ್ತದ ತಳಿಯು ದೈವತ್ವಕ್ಕೆ ಏರಿದ ಕಥೆ ಆದರೆ ಇನ್ನೊಂದು ಪಠ್ಯದಲ್ಲಿ ಇದು ಭತ್ತ ರಾಗಿಗೆ ಬುದ್ಧಿ ಹೇಳುವ ಕಥೆ, ಹಾಗೆಯೇ ಮತ್ತೊಂದು ಅವತರಣಿಕೆಯಲ್ಲಿ ರಾಗಿ ಭತ್ತಕ್ಕೆ ಸಮಾಧಾನ ಹೇಳುವ ಕತೆ. ಹೀಗೆ ಬೇರೆ ಬೇರೆ ರೀತಿಯ ಕಥನಗಳು ಲಭ್ಯವಿವೆ. ರಾಮಧಾನ್ಯ ಚರಿತೆ ರಾಮಾಯಣದ ಜೊತೆ ತಳಕು ಹಾಕಿಕೊಂಡಿದ್ದರೆ ಇಲ್ಲಿ ಈ ರೀತಿಯ ಯಾವ ಉಲ್ಲೇಖಗಳೂ ಬರುವುದಿಲ್ಲ. ಭತ್ತದ ಕೃಷಿಯೇ ಪ್ರದಾನವಾಗಿರುವ ತುಳುನಾಡಿನಲ್ಲಿ ರಾಗಿಯ ಜೊತೆ ಜೋಡಿಕೊಂಡಿರುವ ಈ ಕಥೆಗಳು ನಿಜಕ್ಕೂ ಬಹಳ ಕುತೂಹಲಕಾರಿಯಾಗಿದೆ.

ಪಠ್ಯ ಒಂದು: ಒಂದು ಪಠ್ಯದಲ್ಲಿ ಅತಿಕಾರೆ ಭತ್ತದ ತಳಿ ಈಶ್ವರ ದೇವರ ಅನುಗ್ರಹ ಪಡೆದು ಭೂಮಿಗೆ ಬರುತ್ತದೆ. ಅಂದಿನ ವಿವಿಧ ಸಮುದಾಯ ವಿಭಾಗ ವ್ಯವಸ್ಥೆಯ ಮಂದಿಗಳ ಬಳಿಗೆ ಹೋಗಿ ಅವಮಾನ ಮತ್ತು ಬೇಸರಗೊಂಡು ಘಟ್ಟಕ್ಕೆ ತೆರಳುತ್ತದೆ. ಅಲ್ಲಿಯೂ ಅದಕ್ಕೆ ಸರಿಯಾದ ಮಾನ್ಯತೆ ದೊರೆಯುವುದಿಲ್ಲ. ಕೊನೆಗೆ ಕೈಲಾಸಕ್ಕೆ ಹಿಂತಿರುಗುವ ದಾರಿಯಲ್ಲಿ ರಾಗಿಯನ್ನು ಭೇಟಿಯಾಗುತ್ತದೆ. ರಾಗಿ ಅದನ್ನು ಸರಿಯಾದ ಮನೆಗೆ ಸೇರಿಸುವೆ ಎಂದು ಸಮಾಧಾನ ಮಾಡಿಸಿ ಬಂಟರ ಮನೆಗೆ ಸೇರಿಸಿತು ಎಂದು ಈ ಕಥೆ ನಿರೂಪಿಸುತ್ತಾ ಹೋಗುತ್ತದೆ. ಈ ಕಥೆಗೆ ಪೂರಕವಾಗಿ ಅತಿಕಾರೆ ಎನ್ನುವ ಭತ್ತದ ತಳಿ ತುಳುನಾಡಿನಲ್ಲಿ ಬಹಳ ಪಾವಿತ್ರ್ಯತೆಯನ್ನು ಹೊಂದಿರುವುದನ್ನು ಗಮನಿಸಬಹುದು. ಆದರೆ ಇದೇ ಭತ್ತದ ತಳಿ ಇತರ ಜನಾಂಗಗಳಿಗೂ(ಕಾನದ ಕಟದ) ಒಲಿದ ಕಥೆಗಳು ಪ್ರಚಲಿತದಲ್ಲಿ ಇವೆ.

ಪಠ್ಯ ಎರಡು

ಒಂದು ದಿನ ರಾಗಿ ಗದ್ದೆ ಬದುವಿನಲ್ಲಿ ಕುಳಿತಿರುವಾಗ ಭತ್ತ ಕಣ್ಣು, ಮೂಗು ಒರೆಸಿಕೊಂಡು ಕೋಪದಲ್ಲಿ ಸಂಕಟದಲ್ಲಿ ನಡೆದುಕೊಂಡು ಹೋಗುತ್ತಿತ್ತಂತೆ. ಇದನ್ನು ನೋಡಿದ ರಾಗಿ ಏನಾಯಿತು ಎಂದು ವಿಚಾರಿಸಿತು. ಆಗ ಭತ್ತ, ''ಈ ಮನುಷ್ಯರ ಸಹವಾಸವೇ ಬೇಡ, ಇವರು ನನ್ನನ್ನು ಬಡಿದು, ಗುದ್ದಿ ಸಿಪ್ಪೆ ಸುಳಿಯುತ್ತಾರೆ,ನಾನು ಎಲ್ಲಿಗಾದರೂ ಹೋಗುತ್ತೇನೆ'' ಎಂದಿತು . ಆಗ ರಾಗಿ, ''ಇಷ್ಟಕ್ಕೆ ಈ ರೀತಿ ಎದ್ದು ಹೋಗುವುದಾ! ನೀನು ಹಾಗೆ ಹೋಗುವುದಾದರೆ ನಿನಗಿಂತ ಮೊದಲು ನಾನು ಊರು ಬಿಡಬೇಕಿತ್ತು. ನಿನಗೆ ಅಷ್ಟೇ ಅಲ್ವಾ ಮಾಡುವುದು, ನನ್ನನ್ನು ಇವರು ಮೊದಲು ಬುಡ ಸಹಿತ ಕಿತ್ತು ನೆಲಕ್ಕೆ ಹೊಡೆಯುತ್ತಾರೆ. ನಂತರ ಕೊತ್ತಲಿಂಗೆ(ತೆಂಗಿನ ಮಡಲಿನ ಬುಡದ ಭಾಗ)ಯಲ್ಲಿ ಬಡಿಯುತ್ತಾರೆ. ಬೀಸುವ ಕಲ್ಲಿನಲ್ಲಿ ಬೀಸಿ ಪುಡಿ ಪುಡಿ ಮಾಡಿಡುತ್ತಾರೆ. ನನಗೆಷ್ಟು ನೋವಾಗ್ಬೇಕು.ಆದರೂ ನಾವೇ ಅವರ ಪ್ರಾಣ ಉಳಿಸುವವರು ಎನ್ನುವ ಕೃತಜ್ಞತೆ ಅವರಿಗಿದೆ. ಸುಮ್ಮನೆ ಬಾ'' ಎಂದು ಭತ್ತದ ಮೂಗಿನಲ್ಲಿ ಹಿಡಿದು ಎಳೆದುಕೊಂಡು ಬಂದಿತಂತೆ. ಹಾಗೆ ಭತ್ತದ ಮೂಗು ಉದ್ದ ಬಂತು ಎನ್ನುವಲ್ಲಿಗೆ ಈ ಕಥೆ ಮುಗಿಯುತ್ತದೆ. ಇಲ್ಲಿ ಜಗಳಕ್ಕಿಂತ ತಿಳಿ ಹೇಳುವ ಸ್ನೇಹ ಎದ್ದು ಕಾಣುತ್ತದೆ.

ಪಠ್ಯ ಮೂರು

ಈ ಕಥೆಯಲ್ಲಿ ರಾಗಿಯ ಪ್ರಸ್ತಾಪ ಬಾರದಿದ್ದರೂ ಭತ್ತ ಬಹಳ ಮುಂಗೋಪಿ ಎನ್ನುವ ವಿಚಾರವನ್ನು ಬಿಂಬಿಸಲಾಗಿದೆ. ಮೊದಲು ಭತ್ತದ ಬದಲು ಅಕ್ಕಿಯೇ ಬೆಳೆಯುತ್ತಿತ್ತು. ಒಂದು ದಿನ ಒಬ್ಬಳು ಅನ್ನ ಬೇಯಿಸಲು ಒಣ ಕಟ್ಟಿಗೆ ಸಿಗದೆ ಒದ್ದೆ ಕಟ್ಟಿಗೆ ಒಲೆಗೆ ಇಟ್ಟಳು. ಹೊಗೆ ತುಂಬಿ ಅವಳ ಕಣ್ಣು ಮೂಗಲ್ಲಿ ನೀರು ಸುರಿಯಿತು.

''ಈ ಅಕ್ಕಿಗೆ ಸಿಪ್ಪೆ (ಉಮಿ) ಆದರೂ ಇರುತ್ತಿದ್ದರೆ ಅದರಿಂದ ಕೆಂಡ ಮಾಡಿ ಅನ್ನ ಬೇಯಿಸುತ್ತಿದ್ದೆ, ಬತ್ತಲೆ ಹುಟ್ಟಿತು ಕರ್ಮದ್ದು..'' ಅಂದಳಂತೆ. ಅಕ್ಕಿಗೆ ಎಲ್ಲಿಲ್ಲದ ಸಿಟ್ಟು ಬಂದು ಆನಂತರ ಗಟ್ಟಿ ಸಿಪ್ಪೆ ಅಂಟಿಸಿಕೊಂಡೇ ಭತ್ತ ಆಗಿ ಹುಟ್ಟಿತು. ಅದರ ಸಿಪ್ಪೆಯನ್ನು ಒಲೆಗೆ ಹಾಕಬಹುದು.

ಇದೇ ಕಥೆಯ ಭಾಗ ಎನ್ನುವ ಹಾಗೆ ಭತ್ತ ದೊಡ್ಡ ದೊಡ್ಡ ಉಂಡೆಯ ಹಾಗೆ ಬೆಳೆದು ಅಂಗಳಕ್ಕೆ ಉರುಳಿಕೊಂಡು ಬರುತ್ತಿತ್ತಂತೆ. ಭತ್ತ ಒಣಗಿಸಲು ಅಂಗಳ ಸಿದ್ದ ಮಾಡಿಡದ ಒಬ್ಬಳು ಭತ್ತ ಉರುಳಿ ಅಂಗಳಕ್ಕೆ ಬಂದಾಗ ''ಅಬ್ಬಾ ನಿನ್ನ ಅವಸರವೇ ಎಂದು ಗದರಿಕೊಳ್ಳುತ್ತಾಳೆ' ಹಾಗೆ ಮುನಿಸಿನಲ್ಲಿ ಮುದುರಿ ಭತ್ತ ಸಣ್ಣಗಾಯಿತು. ಈಗ ಅದು ಬಲಿತರೂ ನಾವು ಕಟಾವು ಮಾಡಿ ಮನೆಗೆ ಮರ್ಯಾದೆ ಕೊಟ್ಟು ಕರೆದೊಯ್ಯದೆ ಬರುವುದಿಲ್ಲ

ಹಲವಾರು ಹಿರಿಯ ವಿದ್ವಾಂಸರು 'ರಾಮಧಾನ್ಯ ಚರಿತೆ'ಯನ್ನು ಬೇರೆ ಬೇರೆ ದೃಷ್ಟಿಕೋನದಿಂದ ನೋಡಿದ್ದಾರೆ. ಇಲ್ಲಿ ವರ್ಣ ಸಂಘರ್ಷ, ಬಡವ ಬಲ್ಲಿದ ಭೇದ , ಅಲ್ಲದೇ ಪ್ರತಿಯೊಂದು ವಸ್ತು ವ್ಯಕ್ತಿಗೆ ತನ್ನದೇ ಆದ ವೈಶಿಷ್ಟ್ಯ ಇದೆ ಎನ್ನುವ ಸಾರದ ನಿರೂಪಣೆ ಇದೆ ಎನ್ನುವ ಅಂಶವನ್ನು ಪ್ರತಿಪಾದಿಸಿದ್ದಾರೆ.

ಕನಕದಾಸರ 'ರಾಮಧಾನ್ಯ ಚರಿತೆ' ಪ್ರಸಿದ್ಧ ಕೃತಿ. ಇದು ಭಕ್ತಿ ಪರಂಪರೆಯಲ್ಲಿ ಹದಿನಾರನೇ ಶತಮಾನದಲ್ಲಿ ಮೂಡಿ ಬಂದ ಬಲು ದೊಡ್ಡ ಸಾಹಿತ್ಯ ಕೃತಿ ಕೊಡುಗೆ. ರಾಮಧಾನ್ಯ ಚರಿತೆಯ ಕುರಿತಾಗಿ ಬಹಳಷ್ಟು ಅಧ್ಯಯನಗಳು ನಡೆದಿವೆ. ಕನಕರ 'ರಾಮಧಾನ್ಯ ಚರಿತೆ' ತುಳುನಾಡಿನ ಅಂದಿನ ಜನಪದವನ್ನು ತಲುಪಿರುವುದಕ್ಕೆ ಕಷ್ಟ ಸಾಧ್ಯ. ಆದರೆ ಕನಕದಾಸರು ಉಡುಪಿ ಭಾಗಕ್ಕೆ ಬಂದಿದ್ದರು ಎನ್ನುವುದು ದಾಖಲಾಗಿದೆ; ಅವರು ಇಲ್ಲಿದ್ದಾಗ, ಇಲ್ಲಿನ ಜನಪದರ ರಾಗಿಯ ಕುರಿತಾದ ಈ ಜಾನಪದ ಕಥೆ ಅವರ ಅವಗಾಹನೆಗೆ ಬಂದು ಹೀಗೊಂದು ರಚನೆಗೆ ಪ್ರೇರಣೆಯಾಗಿರಬಹುದು ಎಂದು ತರ್ಕಿಸುವುದರಲ್ಲಿ ತಪ್ಪೇನಿಲ್ಲ. ಭಾರತದಲ್ಲಿ ರಾಗಿ ಮತ್ತು ಅಕ್ಕಿ ಬೆಳೆಯುವ ಪ್ರದೇಶಗಳ ಜನಪದರಲ್ಲಿ ಇದೇ ರೀತಿಯ ಕತೆಗಳಿವೆಯೇ ಎಂದು ಅನ್ವೇಷಣೆ ನಡೆಸಿದರೆ ಮತ್ತಷ್ಟು ಹೊಸ ಹೊಳಹುಗಳು ಹುಟ್ಟಿಕೊಳ್ಳಬಹುದು.

ವಯಸ್ಸಿನ ಅಂತರ ಅಧಿಕವಾಗಿದ್ದಾಗ ಮದುವೆಯಾಗಬಹುದೇ?

ಅರವಿಂದ, (ಇಮೇಲ್ ಮೂಲಕ)

- **ನನಗೆ ಐವತ್ತೆಂಟು ವರ್ಷ ವರ್ಷ ವಯಸ್ಸು. ನಾನು ಅವಿವಾಹಿತ. ನಾನು ಇಪ್ಪತ್ತಾರು ವರ್ಷ ವಯಸ್ಸಿನ ಹುಡುಗಿಯನ್ನು ಪ್ರೀತಿಸಲಾರಂಭಿಸಿದ್ದೇನೆ. ಅವಳಿಗೂ ನನ್ನ ಮೇಲೆ ಮನಸ್ಸಿದೆ. ಆದರೆ ಅವಳ ಅಪ್ಪನಿಗೆ ಐವತ್ತು ವರ್ಷ. ಹೀಗಿರುವಾಗ ನಮ್ಮ ಮದುವೆಗೆ ಅವರು ಒಪ್ಪಲಿಕ್ಕಿಲ್ಲ. 'ನನ್ನ ಅಪ್ಪನ ಮುಂದೆ ನಮ್ಮ ಪ್ರೀತಿ ಬಗ್ಗೆ ಹೇಳಲು ಧೈರ್ಯ ಸಾಕಾಗುತ್ತಿಲ್ಲ, ನೀವೇ ನಮ್ಮ ಮನೆಗೆ ಬಂದು ಹೇಳಿ' ಅಂತ ನನ್ನ ಹುಡುಗಿ ಹೇಳುತ್ತಾಳೆ. ನನಗೂ ಸಣ್ಣ ಅಳುಕು. ನಾನು ಈ ಸನ್ನಿವೇಶದಲ್ಲಿ ಹೇಗೆ ಮುಂದುವರಿಯಬೇಕು, ತಿಳಿಯುತ್ತಿಲ್ಲ.**

– ಅರವಿಂದ ಅವರೇ, ನಿಮ್ಮ ಪರಿಸ್ಥಿತಿ ಸಿನಿಮಾ ಕಥೆಯಂತೆ ಕಂಡರೂ, ವಾಸ್ತವದಲ್ಲಿ ಇದು ಅತ್ಯಂತ ಸಂಕೀರ್ಣವಾದ ಮತ್ತು ಸೂಕ್ಷ್ಮವಾದ ನಿರ್ಧಾರ. 58 ವರ್ಷದ ನಿಮಗೆ 26 ವರ್ಷದ ಯುವತಿಯ ಮೇಲೆ ಮನಸ್ಸಾಗಿರುವುದು ಮತ್ತು ಅವಳೂ ನಿಮ್ಮನ್ನು ಇಷ್ಟಪಡುತ್ತಿರುವುದು ನಿಮ್ಮ ವೈಯಕ್ತಿಕ ವಿಚಾರ. ಆದರೆ, ಇಲ್ಲಿ ಪ್ರಾಯೋಗಿಕ ಮತ್ತು ಸಾಮಾಜಿಕ ಸವಾಲುಗಳು ಬೆಟ್ಟದಷ್ಟಿವೆ.

ನೀವು ಮುಂದಡಿ ಇಡುವ ಮೊದಲು ಕೆಲವು ಅಂಶಗಳನ್ನು ಗಂಭೀರವಾಗಿ ಯೋಚಿಸಿ. ಮೊದಲನೆಯದು, ವಯಸ್ಸಿನ ಅಂತರ ಮತ್ತು ಭವಿಷ್ಯ. ನಿಮ್ಮಿಬ್ಬರ ನಡುವೆ 32 ವರ್ಷಗಳ ಅಂತರವಿದೆ. ಅವಳ ತಂದೆಗಿಂತಲೂ (50 ವರ್ಷ) ನೀವು ಎಂಟು ವರ್ಷ ದೊಡ್ಡವರು. ಮುಂದಿನ 10–15 ವರ್ಷಗಳಲ್ಲಿ ನಿಮಗೆ ವಯೋಸಹಜ ಆರೋಗ್ಯ ಸಮಸ್ಯೆಗಳು ಕಾಡಬಹುದು. ಆ ಸಮಯದಲ್ಲಿ 35–40 ವರ್ಷದ ಯುವತಿಯಾದ ಅವಳು ನಿಮ್ಮನ್ನು ನೋಡಿಕೊಳ್ಳುವ ಜವಾಬ್ದಾರಿ ಹೊರಬೇಕಾಗುತ್ತದೆ. ಇದಕ್ಕೆ ಅವಳು ಮಾನಸಿಕವಾಗಿ ಸಿದ್ಧಳಿದ್ದಾಳೆಯೇ? ನಿಮ್ಮ ಆಲೋಚನೆಗಳು ಮತ್ತು ಅವಳ ತಲೆಮಾರಿನ ಆಲೋಚನೆಗಳ ನಡುವೆ ಜನರೇಶನ್ ಗ್ಯಾಪ್ ಇರುತ್ತದೆ. ಇದು ದಾಂಪತ್ಯದಲ್ಲಿ ಕಿರಿಕಿರಿ ಉಂಟುಮಾಡಬಹುದು.

ಎರಡನೆಯದು, ತಂದೆಯ ಸ್ಥಾನದಲ್ಲಿ ನಿಂತು ಯೋಚಿಸಿ. ಯಾವುದೇ ತಂದೆ ತನ್ನ ಮಗಳ ಭವಿಷ್ಯ ಭದ್ರವಾಗಿರಲಿ ಎಂದು ಬಯಸುತ್ತಾನೆ. ತನ್ನ ಮಗಳಿಗಿಂತ 32 ವರ್ಷ ದೊಡ್ಡವರಾದ, ಅಂದರೆ ತನಗಿಂತಲೂ ವಯಸ್ಸಾದ ವ್ಯಕ್ತಿಗೆ ಮಗಳನ್ನು ಕೊಡಲು ಅವರು ಒಪ್ಪುವುದು ಅಸಾಧ್ಯದ ಮಾತು. ನೀವು ಅವರ ಮನೆಗೆ ಹೋಗಿ ಈ ವಿಷಯ ಹೇಳಿದಾಗ ಅವರು ತೀವ್ರವಾಗಿ ಪ್ರತಿಕ್ರಿಯಿಸುವ (ಕೋಪ ಅಥವಾ ಆಘಾತ) ಸಾಧ್ಯತೆ ಇದೆ. ಅದಕ್ಕೆ ನೀವು ಮಾನಸಿಕವಾಗಿ ಸಿದ್ಧರಿರಬೇಕು.

ಮೂರನೆಯದು, ನಿಮ್ಮ ಹುಡುಗಿಯ ನಿರ್ಧಾರದ ಸ್ಥಿರತೆ. 'ನೀವೇ ಬಂದು ಅಪ್ಪನಿಗೆ ಹೇಳಿ' ಎಂದು ಅವಳು ಹೇಳುತ್ತಿರುವುದು, ಅವಳಿಗೆ ಜವಾಬ್ದಾರಿಯಿಂದ ನುಣುಚಿಕೊಳ್ಳುವ ದಾರಿಯೋ ಅಥವಾ ನಿಮ್ಮ ಮೇಲಿರುವ ಅತಿಯಾದ ನಂಬಿಕೆಯೋ ಎಂಬುದನ್ನು ಪರೀಕ್ಷಿಸಿ. ಅವಳೇ ಧೈರ್ಯ ಮಾಡಿ ಮನೆಯಲ್ಲಿ ಹೇಳದಿದ್ದರೆ, ಹೊರಗಿನವರಾದ ನೀವು ಹೋಗಿ ಹೇಳುವುದು ಬೆಂಕಿಗೆ ತುಪ್ಪ ಸುರಿದಂತೆ ಆಗಬಹುದು.

ಹಾಗಾದರೆ ನೀವು ಹೇಗೆ ಮುಂದುವರಿಯಬೇಕು? ನೇರವಾಗಿ ಅವರ ಮನೆಗೆ ಹೋಗುವ ಮೊದಲು ಅವಳೊಂದಿಗೆ ದೀರ್ಘ ಚರ್ಚೆ ಮಾಡಿ. ಮದುವೆಯ ನಂತರದ ಸಾಮಾಜಿಕ ಅವಹೇಳನ, ಕುಟುಂಬದ ವಿರೋಧ ಮತ್ತು ನಿಮ್ಮ ವಯಸ್ಸಿನ ಮಿತಿಗಳ ಬಗ್ಗೆ ಅವಳಿಗೆ ಸ್ಪಷ್ಟವಾಗಿ ವಿವರಿಸಿ. ಅವಳು ಕೇವಲ ಆಕರ್ಷಣೆಯಿಂದ ಹೀಗೆ ಹೇಳುತ್ತಿದ್ದಾಳೆಯೋ ಅಥವಾ ನಿಜವಾದ ಪ್ರೀತಿಯೋ ಎಂಬುದು ತಿಳಿಯಲಿ. ಅವಳ ಕುಟುಂಬಕ್ಕೆ ಆಪ್ತರಾದ ಅಥವಾ ನಿಮಗೆ ಪರಿಚಿತರಾದ ವಿಶ್ವಾಸಾರ್ಹ ವ್ಯಕ್ತಿಗಳ ಮೂಲಕ ವಿಷಯ ತಲುಪಿಸುವುದು ಉತ್ತಮ. ನೀವೇ ನೇರವಾಗಿ ಹೋಗುವುದು ಸಂಘರ್ಷಕ್ಕೆ ನಾಂದಿಯಾಗಬಹುದು. ನೀವಿಬ್ಬರೂ ವಯಸ್ಕರಾಗಿರುವುದರಿಂದ ಮದುವೆಯಾಗಲು ಕಾನೂನುಬದ್ಧ ಅಡೆತಡೆಯಿಲ್ಲ. ಆದರೆ, ಸಮಾಜ ಮತ್ತು ಕುಟುಂಬದ ಬೆಂಬಲವಿಲ್ಲದೆ ಜೀವನ ನಡೆಸುವುದು ಸುಲಭವಲ್ಲ.

ಐವತ್ತೆಂಟನೇ ವಯಸ್ಸಿನಲ್ಲಿ ನೀವು ಈ ನಿರ್ಧಾರ ತೆಗೆದುಕೊಳ್ಳುವಾಗ ತುಂಬಾ ನಿಧಾನವಾಗಿ ಯೋಚಿಸಿ. ಜೀವನದ ಈ ಹಂತದಲ್ಲಿ ನೆಮ್ಮದಿ ಮುಖ್ಯ. ಈ ಸಂಬಂಧವು ಅವಳ ಜೀವನದ ಮೇಲೆ ಮತ್ತು ನಿಮ್ಮ ಗೌರವದ ಮೇಲೆ ಬೀರುವ ಪರಿಣಾಮಗಳನ್ನು ಅಳೆದು ತೂಗಿ ನೋಡಿ.

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ವಿ.ಪ್ರವೀಣ, (ಇಮೇಲ್ ಮೂಲಕ)

- **ಭಟ್ರೇ, ನನ್ನ ಮದುವೆಗೆ ಹತ್ತಕ್ಕಿಂತ ಜಾಸ್ತಿ ಜನರನ್ನು ಕರೆಯಬಾರದು ಎಂಬುದು ನನ್ನ ನಿಲುವು. ನನ್ನ ಹತ್ತಿರ ಹಣ ಇಲ್ಲ ಎಂದಲ್ಲ, ಆದರೆ ನನ್ನ ಮದುವೆ ಆಗುವ ಹುಡುಗಿ, 'ನೀನು ಹಣ ಕೊಡಬೇಡ. ನನ್ನ ಅಪ್ಪ ನನ್ನ ಮದುವೆಯನ್ನು ಅದ್ದೂರಿಯಾಗಿ ಮಾಡ್ತಾನೆ' ಅಂತಾಳೆ. ನನಗೆ ಅದು ಇಷ್ಟವಿಲ್ಲ. ಆದರೆ ನನ್ನ ಮಾತನ್ನು ಆಕೆ ಕೇಳುತ್ತಿಲ್ಲ. ನನಗೆ ಈ ಮದುವೆಯೇ ಬೇಡ ಎಂದು ಅನಿಸುತ್ತಿದೆ. ಏನು ಮಾಡಲಿ?**

– ಪ್ರವೀಣ ಅವರೇ, ನಿಮ್ಮ ಈ ಸಂದಿಗ್ಧತೆ ಅರ್ಥವಾಗುವಂಥದ್ದು. ಮದುವೆ ಎಂಬುದು ಕೇವಲ ಎರಡು ಮನಸುಗಳ ಮಿಲನ ಮಾತ್ರವಲ್ಲ, ಅದು ಎರಡು ಭಿನ್ನ ಜೀವನಶೈಲಿ ಮತ್ತು ಸಿದ್ಧಾಂತಗಳ ನಡುವಿನ ಹೊಂದಾಣಿಕೆಯೂ ಹೌದು. ಇಲ್ಲಿ ಹಣದ ಪ್ರಶ್ನೆಗಿಂತ ಹೆಚ್ಚಾಗಿ 'ನನ್ನ ಮದುವೆ ಹೇಗಿರಬೇಕು' ಎಂಬ ನಿಮ್ಮ ವೈಯಕ್ತಿಕ ಆದ್ಯತೆ ಮತ್ತು ನಿಮ್ಮ ಸಂಗಾತಿಯ ನಿರೀಕ್ಷೆಗಳ ನಡುವೆ ಸಂಘರ್ಷ ಏರ್ಪಟ್ಟಿದೆ.

ಮದುವೆಯೇ ಬೇಡ ಎಂಬ ನಿರ್ಧಾರಕ್ಕೆ ಬರುವ ಮೊದಲು ಕೆಲವು ಅಂಶಗಳನ್ನು ಶಾಂತವಾಗಿ ಯೋಚಿಸಿ. ನಿಮ್ಮ ನಿಲುವು ಸರಳತೆ ಮತ್ತು ವೈಚಾರಿಕತೆಯ ಮೇಲೆ ನಿಂತಿದೆ. ಆದರೆ ಆಕೆಯ ನಿಲುವು ಭಾವನಾತ್ಮಕ ಅಥವಾ ಸಾಮಾಜಿಕ ಗೌರವದ ಪ್ರಶ್ನೆಯಾಗಿರಬಹುದು. ಆಕೆಯ ತಂದೆಗೆ ಮಗಳ ಮದುವೆಯನ್ನು ಅದ್ದೂರಿಯಾಗಿ ಮಾಡುವುದು ಒಂದು ಜೀವಮಾನದ ಕನಸಾಗಿರಬಹುದು. ಇದು ಹಣದ ಪ್ರದರ್ಶನಕ್ಕಿಂತ ಹೆಚ್ಚಾಗಿ ಅವರಿಗೆ ಸಂಭ್ರಮದ ವಿಷಯವಾಗಿರುವ ಸಾಧ್ಯತೆ ಇರುತ್ತದೆ.

ಆಕೆಗೆ ನಿಮ್ಮ ನಿಲುವು ಕೇವಲ ಹಣ ಉಳಿಸುವ ಉದ್ದೇಶದ್ದು ಎಂದು ಅನಿಸಿರಬಹುದು. ನಿಮ್ಮ ಸರಳತೆಯ ಹಿಂದಿರುವ ನಿಜವಾದ ತತ್ವವನ್ನು ಆಕೆಗೆ ಅರ್ಥ ಮಾಡಿಸಲು ಪ್ರಯತ್ನಿಸಿ. ನನಗೆ ಅದ್ದೂರಿತನದಲ್ಲಿ ನಂಬಿಕೆ ಇಲ್ಲ, ಹತ್ತು ಜನರ ಸಮ್ಮುಖದಲ್ಲಿ ನಡೆಯುವ ವಿವಾಹಕ್ಕೆ ಹೆಚ್ಚು ಪವಿತ್ರತೆ ಇರುತ್ತದೆ ಎಂಬ ನಿಮ್ಮ ಭಾವನೆಯನ್ನು ಖಡಾಖಂಡಿತವಾಗಿ, ಆದರೆ ಪ್ರೀತಿಯಿಂದ ವಿವರಿಸಿ.

10 ಜನ ಎಂಬುದು ತೀರಾ ಕಡಿಮೆ ಎನಿಸಬಹುದು, ಹಾಗೆಯೇ ಸಾವಿರಾರು ಜನ ಎಂಬುದು ಅತಿಯೆನಿಸಬಹುದು. ಇಬ್ಬರಿಗೂ ಒಪ್ಪಿಗೆಯಾಗುವಂಥ ಒಂದು 'ಮಧ್ಯಮ ಮಾರ್ಗ' ಕಂಡುಕೊಳ್ಳಲು ಸಾಧ್ಯವೇ ನೋಡಿ. ಉದಾಹರಣೆಗೆ, ಕೇವಲ ಹತ್ತಿರದ ಸಂಬಂಧಿಕರು ಮತ್ತು ಸ್ನೇಹಿತರನ್ನು ಮಾತ್ರ ಒಳಗೊಂಡ (ಉದಾಹರಣೆಗೆ 50–100 ಜನ) 'ಡೆಸ್ಟಿನೇಶನ್ ವೆಡ್ಡಿಂಗ್' ಅಥವಾ ಸಣ್ಣ ಮಟ್ಟದ ಸಮಾರಂಭ. ಅದ್ದೂರಿ ಊಟ–ಉಪಚಾರಕ್ಕಿಂತ ಹೆಚ್ಚಾಗಿ ಯಾವುದಾದರೂ ಸಮಾಜಮುಖಿ ಕಾರ್ಯಕ್ಕೆ ಆ ಹಣವನ್ನು ವಿನಿಯೋಗಿಸುವ ಬಗ್ಗೆ ಚರ್ಚಿಸಿ.

ಈಗಲೇ ಆಕೆ ನಿಮ್ಮ ಮಾತನ್ನು ಕೇಳುತ್ತಿಲ್ಲ ಎಂಬುದು ನಿಮ್ಮ ಆತಂಕಕ್ಕೆ ಕಾರಣವಾಗಿರುವುದು ಸರಿ. ಮದುವೆಯ ನಂತರದ ಜೀವನದಲ್ಲಿ ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ (ಮನೆ ಕೊಳ್ಳುವುದು, ಮಕ್ಕಳ ಶಿಕ್ಷಣ ಇತ್ಯಾದಿ) ಇದೇ ರೀತಿಯ ಭಿನ್ನಾಭಿಪ್ರಾಯ ಬಂದರೆ ಏನು ಮಾಡುವುದು ಎಂಬ ಬಗ್ಗೆ ಆಕೆಯ ಜತೆ ಮುಕ್ತವಾಗಿ ಚರ್ಚಿಸಿ. ನಿಮ್ಮಿಬ್ಬರ ನಡುವಿನ ಹೊಂದಾಣಿಕೆ ಪರೀಕ್ಷಿಸಲು ಇದು ಒಂದು ಅವಕಾಶ.

ಹಾಗಾದರೆ ನೀವು ಈಗ ಏನು ಮಾಡಬಹುದು? ಮತ್ತೊಮ್ಮೆ ಮಾತನಾಡಿ. ಈ ಮದುವೆ ನನಗೆ ಬೇಡ ಎನ್ನುವ ಹಂತಕ್ಕೆ ನಾನು ಬಂದಿದ್ದೇನೆ ಎಂಬ ಗಂಭೀರತೆಯನ್ನು ಆಕೆಗೆ ಮನವರಿಕೆ ಮಾಡಿ. ನಿಮ್ಮ ನಿಲುವಿಗೆ ಆಕೆ ಸ್ವಲ್ಪವಾದರೂ ಬೆಲೆ ಕೊಡುತ್ತಾಳೆ ಎಂದು ನೋಡಿ. ಆಕೆಯ ತಂದೆಯ ಬಳಿಯೇ ನೇರವಾಗಿ ಮಾತನಾಡಿ. ನನಗೆ ಅದ್ದೂರಿತನ ಇಷ್ಟವಿಲ್ಲ, ಸರಳವಾಗಿ ಮಾಡೋಣ ಎಂದು ನಿಮ್ಮ ಆಶಯವನ್ನು ತಿಳಿಸಿ. ಆಕೆ ಈ ವಿಷಯವೊಂದನ್ನು ಬಿಟ್ಟರೆ ಉಳಿದಂತೆ ನಿಮಗೆ ಸೂಕ್ತ ಸಂಗಾತಿ ಎಂದು ಅನ್ನಿಸುತ್ತದೆಯೇ? ಮದುವೆ ಎಂಬ ಸುದೀರ್ಘ ಪಯಣದಲ್ಲಿ ಈ ಒಂದು ಸಮಾರಂಭದ ವಿವಾದ ಎಷ್ಟು ಮುಖ್ಯ ಎಂಬುದನ್ನು ತೂಗಿ ನೋಡಿ.

ಒಂದು ಸಣ್ಣ ಕಿವಿಮಾತು. ಮದುವೆ ಎಂಬುದು ಒಂದು ದಿನದ ಕಾರ್ಯಕ್ರಮ. ಆದರೆ ಸಂಸಾರ ಎಂಬುದು ನೂರು ವರ್ಷದ ಬದುಕು. ಒಂದು ದಿನದ ಕಾರ್ಯಕ್ರಮಕ್ಕಾಗಿ ಜೀವನದ ದೊಡ್ಡ ನಿರ್ಧಾರವನ್ನು ತೆಗೆದುಕೊಳ್ಳುವ ಮೊದಲು, ಆಕೆಯ ಸ್ವಭಾವ ಮತ್ತು ನಿಮ್ಮ ಮೇಲಿರುವ ಪ್ರೀತಿಯನ್ನು ಅಳೆದು ನೋಡಿ. ನಿಮ್ಮ ಮೌಲ್ಯಗಳಿಗೆ ಧಕ್ಕೆಯಾಗದಂತೆ ಈ ಸಮಸ್ಯೆ ಬಗೆಹರಿಯಲಿ ಎಂದು ಆಶಿಸುತ್ತೇನೆ.

ಜಾಹ್ನವಿ, (ಇಮೇಲ್ ಮೂಲಕ)

- **ಭಟ್ರೇ, ನಾನು ಕೆಲಸ ಮಾಡುವ ಆಫೀಸಿನಲ್ಲಿ ವಿಪರೀತ ರಾಜಕೀಯ. ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗೊಲ್ಲ. ಎಲ್ಲರೂ ಚಾಡಿ ಮಾತು ಆಡುವವರೇ. ಇಂಥ ವಾತಾವರಣದಲ್ಲಿ ದಿನವೂ ಕೆಲಸಕ್ಕೆ ಹೋಗಲು ಮನಸಾಗುತ್ತಿಲ್ಲ. ಒಮ್ಮೊಮ್ಮೆ ಬೇಸರವಾಗಿ, ಈ ಕೆಲಸವೇ ಸಾಕು ಅನಿಸಿಬಿಡುತ್ತದೆ. ಆದರೆ ಕೆಲಸ ಮಾಡಲೇಬೇಕಾದ ಅನಿವಾರ್ಯತೆ. ಇಂಥ ಸ್ಥಿತಿಯಲ್ಲಿ ನನ್ನ ಮನಸ್ಸನ್ನು ಹೇಗೆ ನಿಯಂತ್ರಿಸಿಕೊಳ್ಳಬೇಕು ದಯವಿಟ್ಟು ಹೇಳಿ.**

– ಜಾಹ್ನವಿ ಅವರೇ, ಇದು ಕೇವಲ ನಿಮ್ಮ ಒಬ್ಬರ ಸಮಸ್ಯೆಯಲ್ಲ, ಇಂದಿನ ಕಾರ್ಪೊರೇಟ್ ಮತ್ತು ವೃತ್ತಿಪರ ಜಗತ್ತಿನಲ್ಲಿ ಅನೇಕರು ಎದುರಿಸುತ್ತಿರುವ 'ಮಾನಸಿಕ ಕಿರುಕುಳ'. ವೃತ್ತಿಜೀವನದ ಉತ್ತುಂಗಕ್ಕೆ ಹೋಗಬೇಕಾದ ಸಮಯದಲ್ಲಿ ಇಂಥ ವಾತಾವರಣ ಸಿಕ್ಕಾಗ ಬೇಸರವಾಗುವುದು ಸಹಜ. ಆದರೆ ನೆನಪಿಡಿ, ನೀವು ಕೆಲಸಕ್ಕೆ ಹೋಗುತ್ತಿರುವುದು ನಿಮ್ಮ ಕುಟುಂಬಕ್ಕಾಗಿ ಮತ್ತು ನಿಮ್ಮ ಬೆಳವಣಿಗೆಗಾಗಿ ಹೊರತು, ಅಲ್ಲಿರುವವರ ಸ್ನೇಹ ಸಂಪಾದಿಸುವುದಕ್ಕಲ್ಲ.

ಇಂಥ ವಿಷಕಾರಿ ವಾತಾವರಣದಲ್ಲಿ ನಿಮ್ಮ ಮನಸ್ಸನ್ನು ಶಾಂತವಾಗಿರಿಸಿಕೊಳ್ಳಲುಕೆಲವು ಸೂತ್ರಗಳನ್ನು ಪಾಲಿಸಬಹುದು. ಮೊದಲನೆಯದು, 'ವೃತ್ತಿಪರ ಅಂತರ' ಕಾಯ್ದುಕೊಳ್ಳಿ. ಆಫೀಸಿನಲ್ಲಿ ಎಲ್ಲರ ಜತೆ ನಗುನಗುತ್ತಾ ಇರಿ, ಆದರೆ ಯಾರೊಂದಿಗೂ ಅತಿಯಾದ ಆತ್ಮೀಯತೆ ಬೇಡ. ಚಾಡಿ ಮಾತುಗಳಿಗೆ ಕಿವಿಗೊಡಬೇಡಿ. ಯಾರಾದರೂ ಇನ್ನೊಬ್ಬರ ಬಗ್ಗೆ ಚಾಡಿ ಹೇಳಲು ಬಂದರೆ, 'ಹೌದಾ? ನನಗೆ ಗೊತ್ತಿಲ್ಲ' ಎಂದು ಅಲ್ಲಿಂದ ಜಾರಿಬಿಡಿ. ನೀವು ಕೇಳಿಸಿಕೊಳ್ಳದಿದ್ದರೆ ಅವರು ನಿಮ್ಮ ಹತ್ತಿರ ಬರುವುದು ನಿಲ್ಲಿಸುತ್ತಾರೆ. ನಿಮ್ಮ ವೈಯಕ್ತಿಕ ವಿಷಯ ಹಂಚಿಕೊಳ್ಳಬೇಡಿ. ನಿಮ್ಮ ಮನೆಯ ವಿಷಯ ಅಥವಾ ನಿಮ್ಮ ಮುಂದಿನ ಪ್ಲಾನ್ ಬಗ್ಗೆ ಆಫೀಸಿನಲ್ಲಿ ಯಾರನ್ನೂ ಅತಿಯಾಗಿ ನಂಬಬೇಡಿ.

ಎರಡನೆಯದು, 'ಕೆಲಸವನ್ನಷ್ಟೇ ಪ್ರೀತಿಸಿ, ಕಂಪನಿಯನ್ನಲ್ಲ'. ಕೊಟ್ಟಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ಮುಗಿಸಿ. ನಿಮ್ಮ ಕೆಲಸದ ಮೇಲೆ ನಿಮಗೆ ಹಿಡಿತವಿದ್ದರೆ, ಯಾರೇ ರಾಜಕೀಯ ಮಾಡಿದರೂ ನಿಮ್ಮನ್ನು ಅಲುಗಾಡಿಸಲು ಸಾಧ್ಯವಿಲ್ಲ. ಸಂಜೆ ಆಫೀಸ್ ಬಿಟ್ಟು ಹೊರಬಂದ ಮೇಲೆ ಆಫೀಸ್ ವಿಷಯಗಳನ್ನು ಅಲ್ಲೇ ಬಿಟ್ಟುಬಿಡಿ. ಮನೆಗೆ ಬಂದ ಮೇಲೆ ಆಫೀಸ್ ಫೋನ್ ಅಥವಾ ಇಮೇಲ್ ಕಡೆಗೆ ಗಮನ ಕೊಡಬೇಡಿ.

ಮೂರನೆಯದು, 'ರಿಯಾಕ್ಟ್' ಮಾಡಬೇಡಿ, 'ರೆಸ್ಪಾಂಡ್' ಮಾಡಿ. ಯಾರಾದರೂ ನಿಮ್ಮ ಬಗ್ಗೆ ಕೆಟ್ಟದಾಗಿ ಮಾತನಾಡಿದರೆ ಅಥವಾ ನಿಮ್ಮನ್ನು ಕೆಣಕಿದರೆ ತಕ್ಷಣ ಸಿಟ್ಟಾಗಬೇಡಿ. ನೀವು ಸಿಟ್ಟಾದರೆ ಅವರ ರಾಜಕೀಯಕ್ಕೆ ಗೆಲುವು ಸಿಕ್ಕಂತೆ. ಮೌನವಾಗಿರುವುದು ಮತ್ತು ಕೆಲಸದ ಮೂಲಕ ಉತ್ತರ ನೀಡುವುದು ಅತ್ಯಂತ ದೊಡ್ಡ ಅಸ್ತ್ರ.

ನಾಲ್ಕನೆಯದು, ಕಚೇರಿಯ ಹೊರಗೆ ನಿಮ್ಮದೇ ಒಂದು ಪ್ರಪಂಚವಿರಲಿ. ಆಫೀಸ್ ರಾಜಕೀಯದಿಂದ ಮನಸ್ಸು ಕೆಟ್ಟಾಗ, ಅದನ್ನು ಸರಿಪಡಿಸಲು ಬೇರೆ ಹವ್ಯಾಸಗಳನ್ನು ಬೆಳೆಸಿಕೊಳ್ಳಿ. ಒಳ್ಳೆಯ ಪುಸ್ತಕ ಓದುವುದು, ಸಂಗೀತ ಕೇಳುವುದು ಅಥವಾ ನಡಿಗೆಯಂಥ ಚಟುವಟಿಕೆಗಳು ಮನಸ್ಸಿನ ಒತ್ತಡವನ್ನು ಕಡಿಮೆ ಮಾಡುತ್ತವೆ. ನಿಮ್ಮ ಕ್ಷೇತ್ರದ ಹೊರಗಿನ ಸ್ನೇಹಿತರ ಜತೆ ಸಮಯ ಕಳೆಯಿರಿ. ಇದರಿಂದ ಆಫೀಸ್ ಎಂಬುದು ಜೀವನದ ಒಂದು ಸಣ್ಣ ಭಾಗವಷ್ಟೇ, ಅದೇ ಪೂರ್ಣ ಜೀವನವಲ್ಲ ಎಂಬ ಅರಿವು ನಿಮಗಾಗುತ್ತದೆ.

ಐದನೆಯದು, ದೀರ್ಘಕಾಲದ ಪ್ಲಾನ್ ಮಾಡಿ. ಈಗಿನ ಪರಿಸ್ಥಿತಿಯಲ್ಲಿ ಕೆಲಸ ಅನಿವಾರ್ಯ ಇರಬಹುದು. ಆದರೆ, ಮಾನಸಿಕ ನೆಮ್ಮದಿ ಇಲ್ಲದ ಕಡೆ ಹೆಚ್ಚು ದಿನ ಇರಲು ಸಾಧ್ಯವಿಲ್ಲ. ನಿಮ್ಮ ಕೌಶಲಗಳನ್ನು ಹೆಚ್ಚಿಸಿಕೊಳ್ಳಿ. ಇನ್ನೊಂದು ಉತ್ತಮ ಅವಕಾಶ ಸಿಕ್ಕ ತಕ್ಷಣ ಬದಲಾಯಿಸಲು ಸಿದ್ಧರಾಗಿ. 'ಇದು ಕೇವಲ ತಾತ್ಕಾಲಿಕ ಘಟ್ಟ' ಎಂದು ದಿನವೂ ನಿಮ್ಮ ಮನಸ್ಸಿಗೆ ನೀವೇ ಹೇಳಿಕೊಳ್ಳಿ.

ಒಂದು ಕಿವಿಮಾತು. ಕೆಸರಿನಲ್ಲಿ ಇದ್ದರೂ ಕಮಲ ಹೇಗೆ ಅಂಟಿಕೊಳ್ಳುವುದಿಲ್ಲವೋ, ಹಾಗೆಯೇ ನೀವು ಆಫೀಸ್ ರಾಜಕೀಯದ ಮಧ್ಯೆ ಇದ್ದರೂ ಅದಕ್ಕೆ ಬಲಿಯಾಗದೇ ನಿಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳಿ.

ಶ್ರೀಶ ಹೆಗಡೆ, (ಇಮೇಲ್ ಮೂಲಕ)

- **ಸಂಪಾದಕರೇ, ನನಗೆ ಮೂವತ್ತೈದು ವರ್ಷ. ನನ್ನ ಕೂದಲೆಲ್ಲ ಬಿಳಿಯಾಗಿದೆ. ಕಪ್ಪು ಬಣ್ಣ ಹಚ್ಚಿದರೆ ಮುಖ ಊದಿಕೊಳ್ಳುತ್ತದೆ. ಬಣ್ಣ ಹಚ್ಚದಿದ್ದರೆ ವಯಸ್ಸಾದವರ ಹಾಗೆ ಕಾಣುತ್ತೇನೆ. ಏನು ಮಾಡಲಿ?**

– ಶ್ರೀಶ ಅವರೇ, ನಿಮ್ಮ ಸಮಸ್ಯೆ ನಿಜಕ್ಕೂ ಕಿರಿಕಿರಿ ಉಂಟುಮಾಡುವಂಥದ್ದು, ಅದರಲ್ಲೂ 35ನೇ ವಯಸ್ಸಿನಲ್ಲಿ ಹೀಗಾದಾಗ ಬೇಸರವಾಗುವುದು ಸಹಜ. ಹೇರ್ ಡೈ ಹಚ್ಚಿದಾಗ ಮುಖ ಊದಿಕೊಳ್ಳುತ್ತದೆ ಎಂದರೆ, ನಿಮಗೆ ಅದರಲ್ಲಿರುವ ಪಿಪಿಡಿ ಎಂಬ ರಾಸಾಯನಿಕದಿಂದ ಅಲರ್ಜಿ ಆಗುತ್ತಿದೆ ಎಂದರ್ಥ. ಇದನ್ನು ನಿರ್ಲಕ್ಷಿಸಬೇಡಿ, ಏಕೆಂದರೆ ಇದು ಗಂಭೀರವಾದ ಚರ್ಮದ ಸಮಸ್ಯೆಗೆ ಕಾರಣವಾಗಬಹುದು.

ನಿಮ್ಮ ಸಮಸ್ಯೆಗೆ ಕೆಲವು ಸುರಕ್ಷಿತ ಪರ್ಯಾಯ ಮಾರ್ಗಗಳನ್ನು ಸೂಚಿಸಬಹುದು. ಮಾರುಕಟ್ಟೆಯಲ್ಲಿ ಸಿಗುವ ಇನ್‌ಸ್ಟಂಟ್ ಡೈಗಳ ಬದಲಿಗೆ ಸಾಂಪ್ರದಾಯಿಕ ವಿಧಾನವನ್ನು ಅನುಸರಿಸಿ. ಶುದ್ಧ ಮೆಹಂದಿ ಪುಡಿಯನ್ನು ಹಚ್ಚಿ 2 ಗಂಟೆ ಬಿಟ್ಟು ತೊಳೆಯಿರಿ. ಆಗ ಕೂದಲು ಕೆಂಪು/ಕಿತ್ತಳೆ ಬಣ್ಣಕ್ಕೆ ತಿರುಗುತ್ತದೆ. ಮರುದಿನ 'ಇಂಡಿಗೋ' ಪುಡಿಯನ್ನು ಕಲಸಿ ಹಚ್ಚಿ ಒಂದು ಗಂಟೆ ಬಿಟ್ಟು ತೊಳೆಯಿರಿ. ಇದು ಕೆಂಪು ಕೂದಲನ್ನು ನೈಸರ್ಗಿಕವಾಗಿ ಕಡು ಕಪ್ಪು ಬಣ್ಣಕ್ಕೆ ತಿರುಗಿಸುತ್ತದೆ. ಇದರಲ್ಲಿ ಯಾವುದೇ ಕೆಮಿಕಲ್ ಇರುವುದಿಲ್ಲ.

ಮಾರುಕಟ್ಟೆಯಲ್ಲಿ ಈಗ 'ಪಿಪಿಡಿ ಫ್ರಿ' ಮತ್ತು 'ಅಮೋನಿಯಾ ಫ್ರೀ' ಬಣ್ಣಗಳು ಲಭ್ಯವಿವೆ. ಆದರೂ, ಇವುಗಳನ್ನು ಬಳಸುವ ಮುನ್ನ ಕಿವಿ ಹಿಂಭಾಗದ ಚರ್ಮದ ಮೇಲೆ 'ಪ್ಯಾಚ್ ಟೆಸ್ಟ್' ಮಾಡುವುದು ಕಡ್ಡಾಯ. 24 ಗಂಟೆಗಳ ಕಾಲ ಯಾವುದೇ ಊತ ಅಥವಾ ತುರಿಕೆ ಬರದಿದ್ದರೆ ಮಾತ್ರ ಪೂರ್ಣವಾಗಿ ಬಳಸಿ. ಸದ್ಯಕ್ಕೆ ನೀವು ಎಲ್ಲಾದರೂ ಹೊರಗಡೆ ಹೋಗುವಾಗ ತಕ್ಷಣಕ್ಕೆ ಬಿಳಿ ಕೂದಲು ಕಾಣಬಾರದು ಎಂದರೆ, Hair Mascara ಅಥವಾ Root Touch-up ಸ್ಟಿಕ್‌ಗಳನ್ನು ಬಳಸಬಹುದು. ಇವುಗಳನ್ನು ಶಾಂಪೂ ಹಾಕಿದಾಗ ಬಣ್ಣ ಹೋಗುತ್ತದೆ ಮತ್ತು ಚರ್ಮಕ್ಕೆ ಯಾವುದೇ ಹಾನಿ ಮಾಡುವುದಿಲ್ಲ.

35 ವರ್ಷಕ್ಕೆ ಕೂದಲು ಬಿಳಿಯಾಗುತ್ತಿದ್ದರೆ ಅದು ಪೋಷಕಾಂಶಗಳ ಕೊರತೆಯೂ ಇರಬಹುದು. ವಿಟಮಿನ್ ಬಿ12 ಮತ್ತು ಬಯೋಟಿನ್ ಕೊರತೆಯಿಂದ ಕೂದಲು ಬೇಗ ಬಿಳಿಯಾಗುತ್ತದೆ. ಪ್ರತಿದಿನ ಬೆಳಗ್ಗೆ ಎದ್ದ ತಕ್ಷಣ ಒಂದೆರಡು ಹಸಿ ಕರಿಬೇವು ಅಥವಾ ನೆಲ್ಲಿಕಾಯಿ ಸೇವಿಸುವುದು ಕೂದಲಿನ ಆರೋಗ್ಯಕ್ಕೆ ಉತ್ತಮ.

ಕೆಮಿಕಲ್ ಡೈ ಹಚ್ಚಿದಾಗ ಮುಖ ಊದಿಕೊಳ್ಳುವುದು ಅಪಾಯಕಾರಿ ಲಕ್ಷಣ. ದಯವಿಟ್ಟು ಒಮ್ಮೆ ಚರ್ಮರೋಗ ತಜ್ಞರನ್ನು ಭೇಟಿ ಮಾಡಿ. ಅವರು ನಿಮಗೆ ಒಪ್ಪುವ ಮೆಡಿಕೇಟೆಡ್ ಹೇರ್ ಕಲರ್ ಅಥವಾ ಅಲರ್ಜಿ ವಿರೋಧಿ ಪರಿಹಾರಗಳನ್ನು ಸೂಚಿಸುತ್ತಾರೆ.

ಸಿ.ಎಚ್.ಗೌಡರ, (ಇಮೇಲ್ ಮೂಲಕ)

- **ಭಟ್ರೇ, ನಾನು ನನ್ನ ಪತ್ನಿ ಮತ್ತು ಎಂಟು ವರ್ಷದ ಹೆಣ್ಣು ಮಗಳೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ನಾನು ಕೆಲಸಕ್ಕೆ ಹೋಗುತ್ತಿಲ್ಲ. ನನ್ನ ಹೆಂಡತಿಗೆ ಒಳ್ಳೆಯ ಉದ್ಯೋಗವಿದೆ. ಆರಂಭದಲ್ಲಿ, ನೀವು ಕೆಲಸಕ್ಕೆ ಹೋಗಬೇಡಿ, ಮನೆಯನ್ನು ಸಂಭಾಳಿಸಿ ಎಂದು ಅವಳೇ ಹೇಳಿದ್ದು. ಇತ್ತೀಚೆಗೆ ಮಾತು ಮಾತಿಗೆ ನನ್ನನ್ನು ಹಂಗಿಸಿ ಮಾತಾಡುತ್ತಾಳೆ. ನಾನೂ ಕೆಲಸಕ್ಕೆ ಹೋಗುತ್ತೇನೆ ಅಂದ್ರೆ, ಮನೆ ಕೆಲಸ ಯಾರು ಮಾಡ್ತಾರೆ ಎಂದು ರೇಗುತ್ತಾಳೆ. ನನಗೆ ಈ ಹಂಗಿನ ಜೀವನವೇ ಸಾಕು ಎನಿಸಿಬಿಟ್ಟಿದೆ. ನನಗೆ ನಿಮ್ಮ ಸಲಹೆ ಬೇಕು.**

– ಗೌಡರ ಅವರೇ, ನಿಮ್ಮ ಪರಿಸ್ಥಿತಿ ನಿಜಕ್ಕೂ ಸೂಕ್ಷ್ಮವಾದುದು. ಹೆಂಡತಿಯೇ 'ಕೆಲಸಕ್ಕೆ ಹೋಗಬೇಡಿ' ಎಂದು ಹೇಳಿ, ಈಗ ಅದೇ ವಿಷಯಕ್ಕೆ ಹಂಗಿಸಿ ಮಾತನಾಡುವುದು ಮನಸ್ಸಿಗೆ ಎಷ್ಟು ನೋವು ಕೊಡುತ್ತದೆ ಎಂಬುದು ಅರ್ಥವಾಗುತ್ತದೆ. ಇದು ಕೇವಲ ಹಣದ ವಿಷಯವಲ್ಲ, ಇದು ನಿಮ್ಮ ಸ್ವಾಭಿಮಾನದ ಪ್ರಶ್ನೆ. ಇಂಥ ಸಂದರ್ಭದಲ್ಲಿ ಭಾವನಾತ್ಮಕವಾಗಿ ಕುಸಿಯುವ ಬದಲು, ಪ್ರಾಯೋಗಿಕವಾಗಿ ಕೆಲ ಕ್ರಮಗಳನ್ನು ತೆಗೆದುಕೊಳ್ಳಬಹುದು. ಮೊದಲನೆಯದು, ಮುಕ್ತವಾಗಿ ಸಂವಹನ ನಡೆಸಿ. ಹೆಂಡತಿಯ ಮನಸ್ಸಿನಲ್ಲಿ ಏನಿದೆ ಎಂಬುದು ನಿಮಗೆ ಸ್ಪಷ್ಟವಾಗಬೇಕು. ಒಂದು ದಿನ ಶಾಂತವಾಗಿ ಕೂತು ಅವಳೊಡನೆ ಮಾತನಾಡಿ. 'ಆರಂಭದಲ್ಲಿ ನೀನೇ ಮನೆಯನ್ನು ಸಂಭಾಳಿಸಲು ಹೇಳಿದ್ದೆ, ಈಗ ನಿನ್ನ ಮಾತುಗಳು ನನಗೆ ನೋವು ಕೊಡುತ್ತಿವೆ. ನಿನಗೆ ಹಣದ ಒತ್ತಡವಾಗುತ್ತಿದೆಯೇ ಅಥವಾ ನಾನು ಕೆಲಸಕ್ಕೆ ಹೋಗದಿರುವುದು ಮುಜುಗರ ತರುತ್ತಿದೆಯೇ?' ಎಂದು ನೇರವಾಗಿ ಕೇಳಿ. ಹಂಗಿಸಿ ಮಾತನಾಡುವುದರಿಂದ ಸಂಸಾರದಲ್ಲಿ ಬಿರುಕು ಮೂಡುತ್ತದೆ ಎಂಬ ಅರಿವು ಅವರಿಗೆ ಇರಲಿ.

ಎರಡನೆಯದು, 'ಮನೆ ಕೆಲಸ' ಎಂಬುದು ಕೀಳಲ್ಲ. ನೀವು ಮನೆಯನ್ನು ಸಂಭಾಳಿಸುತ್ತಿದ್ದೀರಿ ಎಂದರೆ, ನೀವು ಸುಮ್ಮನೆ ಕುಳಿತಿಲ್ಲ ಎಂದರ್ಥ. ಮನೆ ಕೆಲಸ, ಮಗಳ ಜವಾಬ್ದಾರಿ ಇವೆಲ್ಲವೂ ಬೆಲೆ ಕಟ್ಟಲಾಗದ ಶ್ರಮ. ಇದನ್ನು ಹೋಮ್ ಮೇಕರ್ ಉದ್ಯೋಗ ಎಂದೇ ಪರಿಗಣಿಸಿ. ನೀವು ಈ ಕೆಲಸ ಮಾಡದಿದ್ದರೆ, ಅವರು ನೆಮ್ಮದಿಯಿಂದ ಆಫೀಸ್‌ಗೆ ಹೋಗಲು ಸಾಧ್ಯವಿರಲಿಲ್ಲ ಎಂಬುದನ್ನು ಅವರಿಗೆ ಸೌಮ್ಯವಾಗಿ ಮನವರಿಕೆ ಮಾಡಿಕೊಡಿ.

ಮೂರನೆಯದು, ನಿಮ್ಮದೇ ಆದ ಆದಾಯದ ಮೂಲ ಕಂಡುಕೊಳ್ಳಿ. ಹಂಗಿನ ಮಾತುಗಳಿಗೆ ಮದ್ದೆಂದರೆ ಸ್ವಾವಲಂಬನೆ. ನೀವು ಪೂರ್ಣಾವಧಿ ಕೆಲಸಕ್ಕೆ ಹೋಗಲು ಸಾಧ್ಯವಾಗದಿದ್ದರೆ, ನಿಮ್ಮ ಶಿಕ್ಷಣ ಅಥವಾ ಕೌಶಲಕ್ಕೆ ತಕ್ಕಂತೆ ಮನೆಯಿಂದಲೇ ಮಾಡಬಹುದಾದ ಕೆಲಸಗಳನ್ನು ಹುಡುಕಿ. ಮಗಳು ಶಾಲೆಗೆ ಹೋದ ಸಮಯದಲ್ಲಿ ದಿನದ 4–5 ಗಂಟೆ ಕೆಲಸ ಮಾಡಬಹುದಾದ ಅವಕಾಶಗಳನ್ನು ನೋಡಿ. ನಿಮಗೆ ಯಾವುದರಲ್ಲಿ ಆಸಕ್ತಿ ಇದೆಯೋ (ಬರವಣಿಗೆ, ಅಡುಗೆ, ಟ್ಯೂಷನ್ ಅಥವಾ ಸಣ್ಣ ವ್ಯಾಪಾರ) ಅದನ್ನು ಸಣ್ಣ ಮಟ್ಟದಲ್ಲಿ ಆರಂಭಿಸಿ. ನಿಮ್ಮ ಕೈಯಲ್ಲಿ ನಾಲ್ಕು ಕಾಸು ಓಡಾಡತೊಡಗಿದರೆ ಹಂಗಿಸುವ ಮಾತುಗಳು ತಾವಾಗಿಯೇ ಕಡಿಮೆಯಾಗುತ್ತವೆ.

ನಾಲ್ಕನೆಯದು, ಮನೆ ಕೆಲಸದ ಹಂಚಿಕೆ. 'ನಾನು ಕೆಲಸಕ್ಕೆ ಹೋದರೆ ಮನೆ ಕೆಲಸ ಯಾರು ಮಾಡುತ್ತಾರೆ?' ಎಂಬ ಅವರ ಪ್ರಶ್ನೆಗೆ ಉತ್ತರ ಕಂಡುಕೊಳ್ಳಿ. ಒಬ್ಬ ಅಡುಗೆಯವರನ್ನು ಅಥವಾ ಮನೆ ಕೆಲಸದವರನ್ನು ನೇಮಿಸಿಕೊಳ್ಳುವ ಬಗ್ಗೆ ಚರ್ಚಿಸಿ. ಇದರಿಂದ ಇಬ್ಬರಿಗೂ ಹೊರಗಿನ ಕೆಲಸದ ಮೇಲೆ ಗಮನ ಹರಿಸಲು ಸಾಧ್ಯವಾಗುತ್ತದೆ.

ಐದನೆಯದು, ಮಗಳ ಭವಿಷ್ಯದ ದೃಷ್ಟಿಯಿಂದ ಯೋಚಿಸಿ. ಎಂಟು ವರ್ಷದ ಹೆಣ್ಣು ಮಗಳ ಮುಂದೆ ತಂದೆ–ತಾಯಿಯ ನಡುವೆ ಇಂಥ ಮಾತಿನ ಚಕಮಕಿ ನಡೆಯುವುದು ಅವಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ಅವಳಿಗಾಗಿ ನೀವು ಧೈರ್ಯವಾಗಿ ನಿರ್ಧಾರ ತೆಗೆದುಕೊಳ್ಳಬೇಕಿದೆ. ಸಂಬಂಧದಲ್ಲಿ ಗೌರವವಿಲ್ಲದಿದ್ದರೆ ಪ್ರೀತಿಗೆ ಅರ್ಥವಿರುವುದಿಲ್ಲ. ನೀವು ಕೆಲಸಕ್ಕೆ ಹೋಗುವುದು ಕೇವಲ ಹಣಕ್ಕಾಗಿ ಅಲ್ಲ, ನಿಮ್ಮ ಮಾನಸಿಕ ನೆಮ್ಮದಿ ಮತ್ತು ಸ್ವಾಭಿಮಾನಕ್ಕಾಗಿ ಎಂಬುದು ನಿಮ್ಮ ಪತ್ನಿಗೆ ತಿಳಿಯಲಿ.

ಕೃಷಿಕರಿಗಾಗಿ ರೈತಪೀಠ ಪ್ರಶಸ್ತಿ!

▶▶ ಮೊದಲ ಪುಟದಿಂದ

ಕೃಷಿ ಮಾಡಬಯಸುವವರಿಗೆ ಸರಕಾರವೇ ನೂರಾರು ಎಕರೆ ಜಾಗವನ್ನು ಲೀಸಿಗೆ ಕೊಡುವ ವ್ಯವಸ್ಥೆ ಇದೆ. ಸಾವಿರಾರು ಎಕ್ರೆ ಕೃಷಿ ಭೂಮಿಯ ನಡುವೆ ಅವರಿಗೆ ಬೇಕಾದ ಲಭ್ಯ ಉಪಕರಣಗಳು ಬಾಡಿಗೆಗೆ ಸಿಗುವ ವ್ಯವಸ್ಥೆ ಇದೆ. ಉಳುಮೆಗೆ, ಕೊಯ್ಲಿಗೆ, ಸಂಸ್ಕರಣೆಗೆ ಅಗ್ಗದಲ್ಲಿ ಯಂತ್ರಗಳು ಸಿಗುತ್ತವೆ. ಯಾಂತ್ರಿಕ ಆವಿಷ್ಕಾರಗಳು ಕೃಷಿಗೆ ಪೂರಕವಾಗಿ ಅಲ್ಲಿ ಆಗುತ್ತಲೇ ಇದೆ. ಕೃಷಿ ಸಾಮಗ್ರಿಗಳನ್ನು ಉತ್ಪಾದಿಸುವ ಮಾರುವ ಉದ್ಯಮಕ್ಕೆ ಬೆಂಬಲವಿದೆ.

ಇಲ್ಲಿ ಕೀಳರಿಮೆಯಲ್ಲಿ ಬದುಕು!

''ಆದರೆ, ನಮ್ಮ ದೇಶದಲ್ಲಿ ಸಾಮಾನ್ಯ ರೈತನೊಬ್ಬನು ಅತ್ಯಂತ ಕೀಳರಿಮೆಯ ಬದುಕನ್ನು ಬದುಕುತ್ತಿದ್ದಾನೆ. ವಿದೇಶಿ ರೈತರು ಬೇಂಜ್ ಕಾರ್‌ನಲ್ಲಿ ಓಡಾಡುತ್ತಾರೆ. ಆದರೆ ಈ ದೇಶದಲ್ಲಿ ರೈತರಿಗೆ, ಅವರ ಮಕ್ಕಳಿಗೆ ಗೌರವವಿಲ್ಲ. ನಮ್ಮಲ್ಲಿ ಕೃಷಿಯಲ್ಲಿ ಕನಿಷ್ಠ ಲಾಭ. ಯಾಂತ್ರಿಕರಣ ಇನ್ನೂ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗಿಲ್ಲ. ಮಣ್ಣಿನಲ್ಲಿ ಏಗುವವರೆಲ್ಲ ತಮ್ಮ ಮಕ್ಕಳನ್ನು 'ಸುಖ ದುಡ್ಡಿನಲ್ಲಿದೆ' ಎಂಬ ಭ್ರಮೆಯಿಂದ ನಗರದ ಕಡೆ ಕಳಿಸುತ್ತಿದ್ದಾರೆ. ಎಲ್ಲೂ ಸಲ್ಲದವನು ಮಾತ್ರ ಕೃಷಿಗೆ ಸಲ್ಲುತ್ತಾನೆ ಎನ್ನುವ ಸ್ಥಿತಿ ಇಲ್ಲಿದೆ. ಹೀಗೆ ಕೆಳಸ್ತರದಲ್ಲಿರುವ ರೈತನಿಗೆ ಪರಮ ಗೌರವ, ಲೋಕ ಪ್ರೀತಿ ಪ್ರಾಪ್ತವಾಗಬೇಕೆನ್ನುವ ಸದುದ್ದೇಶದಿಂದ ನಾನು ರೈತ ಪೀಠ ಪ್ರಶಸ್ತಿಯನ್ನು ಸ್ಥಾಪಿಸಿದ್ದೇನೆ'' ಎನ್ನುತ್ತಾರೆ ರಾಮಕೃಷ್ಣ ಆಚಾರ್.

ನಾನು ಅವರೊಂದಿಗೆ ಅವರ ಮುನಿಯಾಲಿನ ಗೋಧಾಮದಲ್ಲಿ ಕೂತು ಮಾತನಾಡುತ್ತಿದ್ದೆ. ನನ್ನ ಕಣ್ಣಂಚಿನಲ್ಲಿ ಒಬ್ಬ ರೈತನ ಮೂರ್ತಿ ನಿಂತಿತ್ತು, ಒಂದಲ್ಲ, ಆ ತೋಟದ ಒಳಗಡೆ ಅಂತಹ ನೂರಾರು ಶಿಲ್ಪಗಳು ಹಸಿರು ಗಿಡ ಮರಗಳ ನಡುವೆ ಅಲ್ಲಲ್ಲಿ ಗೋಚರಿಸುತ್ತವೆ. ಅವೆಲ್ಲವೂ ಕೂಡ ನಮ್ಮ ಪುರಾತನ ಕೃಷಿ ಸಂಸ್ಕೃತಿಯ ಕಥೆ ಹೇಳುತ್ತವೆ. ರಾಮಕೃಷ್ಣ ಆಚಾರ್ ಹಸಿರು ಹಚ್ಚಿದ ಸುಮಾರು 27 ಎಕರೆ ವ್ಯಾಪ್ತಿಯ ಆ ಆವರಣವು ನಿಜಾರ್ಥದಲ್ಲಿ ಕೃಷಿಯನ್ನು ನಿರಾಕರಿಸುವ, ಎಲ್ಲಾ ಸುಖ ನಗರದಲ್ಲಿದೆ ಎಂಬ ಬಣ್ಣಮೋಹಿ ಮನಸ್ಸುಗಳಿಗೆ ನೆಲ ಪ್ರೀತಿ ಕಲಿಸುವ ಹಸಿರು ಪತ್ಯದ ಪುಟಗಳಾಗಿವೆ.

ನಾಟಿ ಹಸುಗಳು

ಸಂಜೀವಿನಿ ಗೋಧಾಮದೊಳಗೆ ಪುಂಗನೂರು ಸೇರಿ ಹಲವು ತಳಿಯ ನಾಟಿ ಹಸುಗಳು, ಕುರಿ ಸಾಕಣೆ, ಕೋಳಿ ಸಾಕಣೆ, ಮೀನು ಸಾಕಣೆ, ಜೇನು, ಕುದುರೆ, ದೇಶವಿದೇಶದ ಹಕ್ಕಿಗಳು, ನೆಲದ ಕೃಷಿಯಾಗಿ ರಂಬೂಟಾನ್, ಮ್ಯಾಂಗೋಸ್ಟೀನ್, ಪಪ್ಪಾಯಿ, ಅಡಿಕೆ, ತೆಂಗು, ಕಾಳುಮೆಣಸು, ಹಲಸು, ಮಾವು ಇವೆ; ದೊಡ್ಡ ಪ್ರಮಾಣದ ಕೃಷಿ ವಿಸ್ತರಣೆ ಇಲ್ಲಿ ಗೋಚರವಾಗುತ್ತದೆ.

ನಾಗರಿಕ ಜಗತ್ತಿನಿಂದ ದೂರದಲ್ಲಿ, ಒಂದಷ್ಟು ವಿಷರಹಿತ ಜಾಗದಲ್ಲಿ ತಾನು ದಿನದ ಅಮೂಲ್ಯ ಸಮಯ ಬದುಕಬೇಕು ಮತ್ತು ನಿವೃತ್ತಿಯ ನಂತರ ತನಗೊಂದು ಹಸಿರು ಆಶ್ರಮ ಬೇಕು ಅನ್ನುವ ಪರಿಕಲ್ಪನೆಯಲ್ಲಿ ಈ ತೋಟವನ್ನು ಅವರು ನಿರ್ಮಿಸಿದ್ದಾರೆ. ಈ ಭೂಮಿ ಇರುವುದು ಮುಂದೆ ಇಲ್ಲಿ ಹುಟ್ಟಬೇಕಾಗಿರುವ ಮಕ್ಕಳಿಗೆ ಅನ್ನುವ ದೂರದೃಷ್ಟಿ, ಹಸಿರು ಕಾಳಜಿ ಅವರಲ್ಲಿದೆ. ಈ ಕಾರಣಕ್ಕಾಗಿಯೇ ಕೃಷಿ ಮತ್ತು ಕೃಷಿಯ ಆವರಣ ಕೇವಲ ದುಡ್ಡು ಉದುರಿಸುವ ಗಿಡಮರಗಳನ್ನಷ್ಟೇ ಅಲ್ಲ, ಪರಿಸರವನ್ನು ಸುಸ್ಥಿರವಾಗಿ ಉಳಿಸಿಕೊಂಡು ಮುಂದಿನ ತಲೆಮಾರಿಗೆ ಇರುವ ಸ್ಥಿತಿಯಲ್ಲಿ ಹಸ್ತಾಂತರಿಸುವ ಬದ್ಧತೆ ನಮ್ಮಲ್ಲಿದೆ ಎನ್ನುತ್ತಾರೆ ಅವರು.

ಪರಿಸರಕ್ಕೆ ಹೆಚ್ಚು ಪ್ರಾಧಾನ್ಯ

ಅವರು ನೆಟ್ಟು ಕಟ್ಟಿದ ಗೋಧಾಮ ಆವರಣವನ್ನು ಒಮ್ಮೆ ಸುತ್ತು ಬಂದರೆ ಸಾಕು, ಅಲ್ಲಿ ವಾಣಿಜ್ಯಾತ್ಮಕ ಉದ್ದೇಶವಲ್ಲದೆ ಪರಿಸರಕ್ಕೆ ಲಾಭದಾಯಕವಾದ ಅನೇಕ ಗಿಡಮರಗಳನ್ನು ಕಾಣಬಹುದು. ತೋಟದ ಒಂದು ಅಂಚಿನಲ್ಲಿ ಪರಿಸರವನ್ನು ಸಮತೋಲನ ಮಾಡುವ, ಪ್ರಾಣಿ ಪಕ್ಷಿ ಸಕಲ ಜೀವಜಂತುಗಳಿಗೆ ವಾಸಸ್ಥಾನವಾಗಿ ನಿಬಿಡ ಕಾಡು, ಶುದ್ಧ ಗಾಳಿ, ಹಣ್ಣುಗಳು, ನೆಲಕ್ಷೇಮದ ಅನೇಕ ಸೂಕ್ಷ್ಮಗಳನ್ನು ಕಾಣಬಹುದು. ಎಲ್ಲೆಲ್ಲೋ ಸಿಗುವ ಅಪರೂಪದ ಆಯುರ್ವೇದ, ಹೂವು, ವಿದೇಶಿ ಹಣ್ಣುಗಳೂ ಸೇರಿ ಬಹುಬಗೆಯ ಗಿಡಗಳನ್ನು ಇಲ್ಲಿ ನೆಡಲಾಗಿದೆ. ಕೃಷಿ ಆವರಣದ ಮಧ್ಯೆ, ಇರುವ ನಾಗಬನ, ಜಪಾನಿನ ಮಿಯಾವಾಕಿ ತರ ಅನೇಕ ಕಾಡು ಗಿಡಗಳು ಒಂದೇ ಕಡೆ ಒತ್ತೊತ್ತಾಗಿ ಬೆಳೆದ ಒಂದು ಹಸಿರು ತುಕಡಿ, ಪರಿಸರ ಸಂರಕ್ಷಣೆ, ಔಷಧಿಯ ಗುಣವುಳ್ಳ ಅಲ್ಲಿಯ ಪ್ರತಿಯೊಂದು ಗಿಡ ಮರ ಬಳ್ಳಿಗಳಿಗೂ ಹೆಸರಿನ ಚೀಟಿ ಅಂಟಿಸಿ ಹೊಸ ತಲೆಮಾರಿಗೆ ಅವುಗಳ ಮಹತ್ವವನ್ನು ಪರಿಚಯಿಸಲಾಗಿದೆ.

ನಾಗಬನದಲ್ಲಿ ಧ್ಯಾನ

ಸಾಮಾನ್ಯವಾಗಿ ನಮ್ಮ ಕರಾವಳಿಯ ನಾಗಬನಗಳು ಇಟ್ಟಿಗೆ ಗಾರೆಯ ಶೃಂಗಾರದಿಂದ 'ನಾಗಭವನ'ಗಳಾಗಿ ಕಾಣಿಸುವುದೇ ಹೆಚ್ಚು. ಅಲ್ಲಿದ್ದ ಸಹಜ ಹುತ್ತ ಗಿಡ ಮರಗಳನ್ನು ಜೆಸಿಬಿಯಲ್ಲಿ ಮಟ್ಟಸ ಮಾಡಿ ಗ್ರಾನೈಟ್ ಹಾಕಿ ಸುತ್ತ ಗೋಡೆ ಏರಿಸಿ ಗೇಟ್ ಕೂರಿಸಿ ಬೀಗ ಹಾಕಿ ನಾಗದೇವರನ್ನು ನಿಬರ್ಂಧಿಸುವ ಕಾಂಕ್ರೀಟ್ ಸಂಸ್ಕೃತಿಯನ್ನು ಕರಾವಳಿಯ ಅನೇಕ ಕಡೆ ನಾವು ನೋಡುತ್ತೇವೆ. ಆದರೆ ರಾಮಕೃಷ್ಣರು ಭೂಮಿಯ ಸ್ವರೂಪ ಬದಲಾಯಿಸದೆ ಗಿಡಮರಗಳನ್ನು ಹಾಗೆಯೇ ಉಳಿಸಿಕೊಂಡು ಅಲ್ಲೊಂದು ಬಾವಿಯನ್ನು ಕಟ್ಟಿ, ಒಟ್ಟು ಪರಿಸರವನ್ನು ಧ್ಯಾನಪೂರಕ ಆಶ್ರಮದ ರೀತಿ ನಿರ್ಮಿಸಿದ್ದಾರೆ. ಅದರ ಒಳಗಡೆ ಇರುವ ಕಲ್ಲು ಬೆಂಚುಗಳಲ್ಲಿ ಗಂಟೆಗಟ್ಟಲೆ ಕೂತು ಏಕಾಂತ ಹಸಿರಿನ ಸುಖವನ್ನು ಅನುಭವಿಸುವುದಕ್ಕೆ ಅವಕಾಶವಿದೆ. ಉಳಿದವರು ಕೂಡ ಮುಂದೆ ತಮ್ಮ ತಮ್ಮ ಜಮೀನಲ್ಲಿರುವ ನಾಗಬನವನ್ನು ಹೇಗೆ ನಿರ್ಮಿಸಬಹುದು ಎಂಬುದಕ್ಕೆ ಇದೊಂದು ಸ್ಪಷ್ಟ ಮಾದರಿಯಾಗಿದೆ. ಒಟ್ಟಾರೆಯಾಗಿ ಇಡೀ ತೋಟವೇ ಗೋವು ಆಧರಿತ, ಪ್ರಕೃತಿ ಆಧರಿತ, ನಾಳೆಯ ನೆಮ್ಮದಿಗೆ ಇರುವ ಒಂದು ಆಶ್ರಮದ ಹಾಗೆ ಗೋಚರಿಸುತ್ತದೆ

ಆಚಾರ್ ಹೇಳುತ್ತಾರೆ : 40– 50 ವರ್ಷಗಳ ಹಿಂದೆ 20 –30 ಡಿಗ್ರಿಯಷ್ಟು ಇದ್ದ ಉಷ್ಣಾಂಶ ಇವತ್ತು 40 ಡಿಗ್ರಿಯಷ್ಟು ಏರುತ್ತಿದೆ. ದುಡ್ಡಿದ್ದವರು ಹವಾನಿಯಂತ್ರಿತ ವ್ಯವಸ್ಥೆಯಲ್ಲಿ ಉಷ್ಣಾಂಶವನ್ನು ನಿಯಂತ್ರಿಸಿಕೊಂಡು ಸುಖವಾಗಿದ್ದೇವೆ. ಆದರೆ ಈ ನೆಲದ ಮನುಷ್ಯರನ್ನೂ ಸೇರಿಸಿ ಜೀವಜಗತ್ತಿನ ಅಸಂಖ್ಯಾತ ಪ್ರಾಣಿ ಪಕ್ಷಿಗಳು ಕೀಟ ಪ್ರಭೇದಗಳು ಭೂಮಿಯ ಮೇಲಿನ ಮನುಷ್ಯ ಸೃಷ್ಟಿಸಿದ ಈ ಶಾಖದ ಆವರಣದ ಬಲಿಪಶುಗಳಾಗುತ್ತಿವೆ. ಇದಕ್ಕೆ ವಿಜ್ಞಾನ ಬೇರೆ ಬೇರೆ ಕಾರಣಗಳನ್ನು ಹೇಳಬಹುದು, ಆದರೆ ಮೂಲ ಕಾರಣ ಪರಿಸರ ನಾಶವೇ ಹೊರತು ಬೇರೇನೂ ಅಲ್ಲ. ಇತ್ತೀಚೆಗೆ ಮಳೆ ಹಂಚಿಕೆ ಸರಿ ಇಲ್ಲ, ಈಗ ಇರುವುದಕ್ಕಿಂತಲೂ ಉಷ್ಣಾಂಶ ಇನ್ನೂ ಏರುತ್ತಾ ಹೋದರೆ ಪ್ರಕೃತಿಗೆ ಬೆಂಕಿ ಬೀಳುವ ಸಾಧ್ಯತೆಯೂ ಇದೆ. ಇವೆಲ್ಲವನ್ನು ಮುಂದಿನ ತಲೆಮಾರಿಗೆ ಮನದಟ್ಟು ಮಾಡಬೇಕು. ನಮ್ಮ ಶಿಕ್ಷಣದ ಆದ್ಯತೆಯಾಗಬೇಕು, ಪಠ್ಯಗಳು ಒಳಗೊಂಡಿರಬೇಕು, ಬದುಕುವ ಪರಿಸರದಲ್ಲಿ ಅಂತಹ ಮಾದರಿಗಳು ಕಣ್ಣಿಗೆ ಕಾಣಿಸುತ್ತಿರಬೇಕು.

ರಾಮಕೃಷ್ಣ ಅವರ ಇಂಥ ನಿಸರ್ಗ ಜೀವಂತಿಕೆಯ ಪರಿಕಲ್ಪನೆ ಚಿಗುರುವುದೇ ರೈತಪೀಠದಲ್ಲಿ; ಅವರ ತೋಟದ ಹಿಂಭಾಗದಲ್ಲಿ ಅಥವಾ ಕೊನೆಯ ಬಿಂದುವಿನಲ್ಲಿ ಅವರು ಈಗಾಗಲೇ ಒಂದು ಸ್ಥಿರ ರೈತಪೀಠವನ್ನು ಸ್ಥಾಪಿಸಿದ್ದಾರೆ. ನೂರಾರು ವರ್ಷ ಉಳಿಯುವ ಸುಸ್ಥಿರತೆ ಅದಕ್ಕಿದೆ. ಇದ್ದು ಇದ್ದು ಅವರ ಪ್ರಕಾರ 'ಈ ಭೂಮಿಯ ಮೇಲೆ ರೈತನೇ ಶ್ರೇಷ್ಠ' ಅನ್ನುವ ಯೋಚನೆಯ ರೂಪಕ. ಅವರು ಹೇಳುತ್ತಾರೆ: ನಮ್ಮ ದೇಶದ ರೈತರು ಕೂಡ ಇತ್ತೀಚಿಗೆ ದುಡ್ಡಿನ ಬೆಳೆಗ ಬೆನ್ನಿಗೆ ಬಿದ್ದಿದ್ದಾರೆ. ಅಡಿಕೆ ಕಾಫಿ ರಬ್ಬರ್ ಮುಂತಾದ ಗಿಡ ಮರಗಳನ್ನಷ್ಟೇ ಬೆಳೆಸುತ್ತಿದ್ದಾರೆ. ನಮಗೆ ಈಗ ಬೇಕಾಗಿರುವುದು ಸಮಗ್ರ ಕೃಷಿ. ಬರೀ ಭೂಮಿಯ ಮೇಲೆ ಒಂದನ್ನಷ್ಟೇ ನೆಟ್ಟುಬಿಡುವುದಲ್ಲ, ಅವುಗಳ ಒಳಗಡೆ ಎಲ್ಲೆಲ್ಲಿ ಎಡೆಗಳಿವೆಯೋ ಅಲ್ಲೆಲ್ಲ ಬೇರೆ ಬೇರೆ ಕೃಷಿಗಳನ್ನು ಅಂತರ್ ಬೆಳೆಯಾಗಿ ಜೋಡಿಸಿಕೊಳ್ಳಬೇಕು.

ಜೇನು, ಗೋವು, ಕುರಿ, ಕೋಳಿ, ಮೀನು, ಪ್ರಾಣಿ, ಪಕ್ಷಿ ಇವೆಲ್ಲವೂ ಇದ್ದಾಗ ಅದೊಂದು ಸಮಗ್ರ ಕೃಷಿಯಾಗುತ್ತದೆ ಮತ್ತು ಇವುಗಳ ನಡುವೆ ಒಂದಕ್ಕೊಂದು ಪೂರಕ ಸಂಬಂಧವೂ ಇದೆ. ಜೇನು ಪರಾಗಸ್ಪರ್ಶಕ್ಕೆ ಸಹಕರಿಸಿದರೆ, ಹಸು ಕೋಳಿ ಕುರಿಗಳೆಲ್ಲ ಕೊಡುವ ಗೊಬ್ಬರ ಕೃಷಿಗೆ ಅತ್ಯುತ್ತಮ ಒಳಸುರಿಯಾಗಿ ಪೂರಕವಾಗುತ್ತವೆ. ಒಂದಷ್ಟು ಪಕ್ಷಿಗಳಿದ್ದಾಗ ಅವುಗಳ ನಿತ್ಯ ನಿರಂತರ ಕಲರವ ನೀವು ಬದುಕುವ ಆಶ್ರಮಕ್ಕೆ ಒಂದು ಸಜೀವ ಸೌಂದರ್ಯವನ್ನು ಕೊಡುತ್ತದೆ. ರೈತರಾದ ನಾವು ಸಾಮಾನ್ಯವಾಗಿ ದುಡ್ಡು ಕೊಡುವ ವಾಣಿಜ್ಯ ಉತ್ಪನ್ನಗಳನ್ನಷ್ಟೇ ಲೆಕ್ಕ ತೆಗೆದುಕೊಳ್ಳುತ್ತೇವೆ. ಅಷ್ಟೇ ಆದಾಯ ಉಳಿದ ಎಡೆಬೆಳೆಯಿಂದಲೂ ಬರುತ್ತವೆ ಅನ್ನುವ ಜಾಣೆ ರೈತರಿಗೆ ಇರಬೇಕು.

ಆಚಾರ್ಯರ ತೋಟದ ಒಳಗಡೆ ಸಾವಿರಕ್ಕಿಂತ ಹೆಚ್ಚು ಬಹುಬಗೆಯ ರಂಬುಟಾನ್ ಗಿಡಗಳಿವೆ. 500 ಮ್ಯಾಂಗೋಸ್ಟೀನ್, ಲವಂಗ, ಕಾಳುಮೆಣಸು, ಅಡಿಕೆ, ಮಾವು, ಹಲಸು, ಹೀಗೆ ಆದಾಯ ತರುವ ಬೇರೆ ಬೇರೆ ಗಿಡಗಳೂ ಇವೆ. ನನಗೆ ಬಹಳ ಇಷ್ಟವಾದದ್ದು ಅವರು ತರಕಾರಿ ಬೆಳೆಗೆ ಶಾಶ್ವತವಾಗಿ ಜೋಡಿಸಿದ ಕಬ್ಬಿಣದ ಚಪ್ಪರಗಳು ಮತ್ತು ಸುತ್ತ ಕಲ್ಲು ಕಟ್ಟಿದ ಶಾಶ್ವತ ತರಕಾರಿ ಪಾತಿಗಳು, ಪ್ರತಿ ವರ್ಷ ಪ್ರತಿ ಸಲ ಇವುಗಳನ್ನು ಬದಲಾಯಿಸುವ ಅಗತ್ಯ ಇಲ್ಲ. ಒಮ್ಮೆ ತರಕಾರಿ ಮುಗಿದ ಮೇಲೆ ಮತ್ತೆ ಹಳೆಯ ಬಳ್ಳಿ ತೆಗೆದು ಭೂಮಿಯನ್ನು ಕೆದಕಿ ಅಲ್ಲೇ ಹೊಸ ಬೀಜ ಹಾಕಿದರೆ ಮುಗಿಯಿತು. ಅದು ಅದರಷ್ಟಕ್ಕೆ ಮೊಳೆಯುತ್ತದೆ. ಅದೇ ಕಬ್ಬಿಣದ ಕೃತಕ ಚಪ್ಪರಕ್ಕೆ ಹಬ್ಬುತ್ತದೆ, ಕಾಯಿ ಕಟ್ಟುತ್ತವೆ. ಆಚಾರ್ಯರು ಯಾವತ್ತೂ ಹೊರಗಡೆಯಿಂದ ತರಕಾರಿ ತರುವುದಿಲ್ಲ. ಅವರೇ ಬೆಳೆಯುವ ಸಹಜ ತರಕಾರಿಗಳನ್ನು ಯಥೇಚ್ಛವಾಗಿ ಬಳಸುತ್ತಾರೆ.

ದೀರ್ಘಕಾಲಿಕ ಬೆಳೆಗಳು

ಅವರು ನೆಟ್ಟಿರುವ ಮ್ಯಾಂಗೋಸ್ಟೀನ್, ಅಡಿಕೆ, ಮಾವು, ಹಲಸು ಮುಂತಾದ ದೀರ್ಘಕಾಲಿಕ ಬೆಳೆಗಳು ಈಗ ಐದಾರು ವರ್ಷ ಪೂರೈಸಿವೆ. ಇನ್ನು ಸ್ವಲ್ಪ ಬೆಳೆದಾಗ ಅದರ ಅಡಿಯಲ್ಲಿ ಅವರು ಅಂತರ್ ಬೆಳೆಯಾಗಿ ಕಾಫಿ ಎಲಕ್ಕಿ ಮುಂತಾದ ಗಿಡಗಳನ್ನು ನೆಡಲು ಸಜ್ಜಾಗಿದ್ದಾರೆ. ಪ್ರಕೃತಿಯಲ್ಲಿ ಕೆಲವು ಬೆಳೆಗಳಿಗೆ ಕಡಿಮೆ ಉಷ್ಣಾಂಶ ಬೇಕು. ಕೆಲವುಗಳಿಗೆ ಬಿಸಿಲು ಜಾಸ್ತಿ ಬೇಕು, ಎತ್ತರದ ಮರ ಗಿಡಗಳು ಬಿಸಿಲು ನುಂಗಿ ಉಷ್ಣಾಂಶತೆಯನ್ನು ಕಡಿಮೆ ಮಾಡಿ ಕೊಡೆ ಹಿಡಿದಾಗ ಅದರಡಿಯ ತಂಪು ಆವರಣದಲ್ಲಿ ಸಹಜವಾಗಿ ಬೆಳೆಯಬಹುದಾದ ಬೆಳೆ ಬೆಳೆಸುವುದು ರೈತನ ಜಾಣ್ಮೆಜಾಣ್ಮೆ. ಅಂತರಬೆಳೆಯಲ್ಲೂ ಕೂಡ ಹೆಚ್ಚು ಲಾಭ ಮಾಡಬಹುದು ಎನ್ನುತ್ತಾರೆ ಆಚಾರ್ಯರು.

ಕೃಷಿ ವಿಚಾರದಲ್ಲಿ ಪುಸ್ತಕ ಲೇಖನ ಬರಹಗಳಿಗಿಂತ ಒಂದು ತೋಟವೇ ಪ್ರತ್ಯಕ್ಷ ಪಾಠ ವಾಗುವುದು ಬಹಳ ಮುಖ್ಯ. 'ನನ್ನ ತೋಟದ ಒಳಗಡೆ ಬರುವ ಮಗು ಮುಂದೆ ತಾನು ಕೃಷಿಕನಾಗಬೇಕು ಎಂಬ ಆಲೋಚನೆಯಿಂದಲೇ ಇಲ್ಲಿಂದ ನಿರ್ಗಮಿಸಬೇಕು' ಎನ್ನುತ್ತಾರೆ ರಾಮಕೃಷ್ಣ ಆಚಾರ್ಯ ಅವರು, ಕೃಷಿಯನ್ನು ಬೇರೆಯವರಿಂದ ಕೇಳುವುದಕ್ಕೂ ಓದುವುದಕ್ಕೂ ಪ್ರತ್ಯಕ್ಷವಾಗಿ ನೋಡುವುದಕ್ಕೂ ವ್ಯತ್ಯಾಸವಿದೆ.

'ಭವಿಷ್ಯದಲ್ಲಿ ನಮ್ಮ ಹೊಸ ತಲೆಮಾರಿಗೆ ಸುಖ ಇರುವುದು ಕೃಷಿಯಲ್ಲಿ ಹಳ್ಳಿಯಲ್ಲಿ ಮಾತ್ರ' ಎಂಬುವುದನ್ನು ಅವರು ತನ್ನ ಪ್ರಪಂಚ ಪರ್ಯಟನೆಯ, ಕೃಷಿ ವೀಕ್ಷಣೆಯ ಆಧಾರದಲ್ಲಿ ಕಂಡುಕೊಂಡಿದ್ದಾರೆ. ನನ್ನ ತೋಟಕ್ಕೆ ಮಕ್ಕಳು ಹೆಚ್ಚಾಗಿ ಬರಬೇಕು. ಅವರಿಗೆ ಅದು ಬರೀ ಹಸಿರು ಪ್ರವಾಸವಲ್ಲ; ಮಕ್ಕಳು ನೆಲದ ಸೂಕ್ಷ್ಮತೆಗಳನ್ನು ಬಹುಬೇಗ ಗಮನಿಸುತ್ತಾರೆ. ನಮ್ಮ ಯುವಕರು ಇವತ್ತು ಅಮೆರಿಕ ದುಬೈ ಡೆಲ್ಲಿ ಬಾಂಬೆ ಮುಂತಾದ ಕಡೆ ಮಾತ್ರ ಜೀವನ ಎಂದು ಭಾವಿಸಿದಂತಿದೆ. ಹಾಗಲ್ಲ ನಮ್ಮ ಪರಂಪರೆಯ, ಹಿರಿಯರ ಜೀವನದಲ್ಲಿ ಇದ್ದಷ್ಟು ಸುಖ ಈಗ ಇಲ್ಲ ಎಂಬ ಮರುಯೋಚನೆ ಹೊಸ ತಲೆಮಾರಿನಲ್ಲಿ ಬರಬೇಕು.

'ನಿಮಗೆ ಗೊತ್ತಿರಬೇಕು, ಮೊನ್ನೆ ಮೊನ್ನೆಯವರೆಗೆ ನಮ್ಮ ದೇಶದ ಆಸ್ಪತ್ರೆಗಳಿಗೆ ಮಕ್ಕಳು ಹಿರಿಯರನ್ನು ಕೈಹಿಡಿದು ಕರೆದುಕೊಂಡು ಬರುತ್ತಿದ್ದರು. ಆದರೆ ಈಗ ಅಪ್ಪಂದಿರು ಅಜ್ಜಂದಿರು ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಕೈಹಿಡಿದು ವೈದ್ಯರ ಹತ್ತಿರ ಕರೆ ತರುವುದನ್ನು ನಾವು ನೋಡುತ್ತಿದ್ದೇವೆ. ಚಿಕ್ಕ ಚಿಕ್ಕ ಮಕ್ಕಳಿಗೆ ಬಿಪಿ ಶುಗರ್ ಆರಂಭಗೊಂಡಿದೆ. ಇವೆಲ್ಲವನ್ನು ಗಮನಿಸುವಾಗ ಒಂದು ಭಯಾನಕ ಭವಿಷ್ಯ ಹತ್ತಿರದಲ್ಲಿ ಇದೆ ಅನಿಸುತ್ತದೆ. ನಮ್ಮ ಲಿವಿಂಗ್ ಸ್ಟೈಲ್ ಬದಲಾಗಬೇಕಾದ ತುರ್ತು ಮುಂದಿದೆ. ಈ ಕಾರಣಕ್ಕಾಗಿ ನಮ್ಮ ಪ್ರಾಚೀನರ ನಿಸರ್ಗ ಸಹಜ ಬದುಕನ್ನು ಮತ್ತೆ ಬದುಕಬೇಕಾದ ಮತ್ತೆ ಅದಕ್ಕೆ ಬೇಕಾದ ಮಾದರಿಯನ್ನು ಉಳಿಸಿಕೊಂಡು ಎಳೆಯ ತಲೆಮಾರಿಗೆ ತೋರಿಸಬೇಕಾದ ಒಂದು ವ್ಯವಸ್ಥೆಯನ್ನು ನಾನಿಲ್ಲಿ ಮಾಡಿದ್ದೇನೆ' ಎನ್ನುವ ರಾಮಕೃಷ್ಣ ಆಚಾರ್ ಸಂಜೀವಿನಿ ಗೋಧಾಮ ಮತ್ತು ಅವರು ಹುಟ್ಟು ಹಾಕಿದ 'ರೈತಪೀಠ' ಪ್ರಶಸ್ತಿಗಾಗಿ ಅಭಿನಂದನೆಗಳು.